ಭಾನುವಾರ, ಮಾರ್ಚ್ 8, 2026 ₹ 7.00
www.prajavani.net
prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಫೈನಲ್‌ಗೆ ಲಕ್ಷ್ಯಸೇನ್



ಭಾರತದ ಲಕ್ಷ್ಯ ಸೇನ್ ಅವರು ಶನಿವಾರ ಕೆನಡಾದ ವಿಕ್ಟರ್ ಲಾಯ್ ಅವರನ್ನು ಮಣಿಸಿ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದರು

‘ಸಂಚಾರ ನಿಯಮ ಪಾಲಿಸಿ’



ಬೆಂಗಳೂರಿನಲ್ಲಿ ನಡೆದ ‘ಸೇಫ್‌-ಎ-ಥಾನ್’ ಕಾರ್ಯಕ್ರಮದಲ್ಲಿ ಕಲಾವಿದರು ಸಂಚಾರ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಿದರು


ಕಾಂಗ್ರೆಸ್ ಪಕ್ಷದ
ನಿಷ್ಠೆಯ ನಾಯಕ
ಉಪಮುಖ್ಯಮಂತ್ರಿಗಳಾದ
ಶ್ರೀ ಡಿ.ಕೆ. ಶಿವಕುಮಾರ್ ರವರು
ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ
ದಿನಾಂಕ 10.03.2026ಕ್ಕೆ
6 ಸಾರ್ಥಕ ವಸಂತಗಳನ್ನು
ಯಶಸ್ವಿಯಾಗಿ ಪೂರೈಸುತ್ತಿರುವ
ನಮ್ಮೆಲ್ಲರ ಪ್ರೀತಿಯ ನಾಯಕರಿಗೆ
ಅಭಿನಂದನೆಗಳು
ಅಭಿನಂದಿಸುವವರು :-
ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳು
ವರುಷ 6 ದಾಖಲೆಗಳು ನೂರಾರು

ಭಾನುವಾರ, ಮಾರ್ಚ್ 8, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 67 | ಪುಟ 26
www.prajavani.net prajavani.net prajavani
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಂತರರಾಷ್ಟ್ರೀಯ ಮಹಿಳಾದಿನದ ಶುಭಾಶಯಗಳು

ಅವಕಾಶ ಕೊಟ್ಟರೆ ಮತ್ತೆರಡು ಬಜೆಟ್ ಮಂಡಿಸುವೆ 8

ಸವಾಲು ಮೆಟ್ಟಿ ಉದ್ಯಮ ಕಟ್ಟಿ

ಅಡೆತಡೆಗಳ ಮೀರಿ ಉದ್ಯಮ ಕಟ್ಟಿದ ಗಟ್ಟಿಗಿತ್ತಿಯರು

● ಮಂಜುಶ್ರೀ ಎಂ. ಕಡಕೋಳ

ಒಳನೋಟ

ಬೆಂಗಳೂರು: ಸ್ವಾವಲಂಬಿಯಾಗಿ ಬದುಕಬೇಕೆನ್ನುವ ಛಲವನ್ನಿಟ್ಟುಕೊಂಡು ಆ ಮಹಿಳೆ ಎರಡು ದಶಕಗಳ ಹಿಂದೆ ಉದ್ಯಮಕ್ಕೆ ಕಾಲಿಟ್ಟಾಗ ಅವರ ಆಹಾರೋತ್ಪನ್ನಗಳು ಬೇಡಿಕೆಯಿಲ್ಲದೇ ವಾಪಸ್ ಬಂದಿದ್ದೇ ಹೆಚ್ಚು. ಆದರೆ, 'ಅವೇಕ್'ನಿಂದ ಕಲಿತಿದ್ದ ಪಾಠ ಮತ್ತೆ ಯತ್ನಿಸುವಂತೆ ಪ್ರೇರೇಪಿಸಿತ್ತು. ಮುಂದೊಂದು ದಿನ ಅದೇ ಉದ್ಯಮ ಸುಮಾರು ಇನ್ನೂರು ಕೋಟಿ ರೂಪಾಯಿ ವಹಿವಾಟಿಗೆ ಮುನ್ನುಡಿ ಬರೆಯಿತು.

– ಇದು ತಮ್ಮ ನಲವತ್ತು ವರ್ಷ ವಯಸ್ಸಿನ ಬಳಿಕ ಆಹಾರೋದ್ಯಮ ಆರಂಭಿಸಿದ ಇಂದಿರಾ ಚನ್ನೇಗೌಡ ಅವರ ಯಶೋಗಾಥೆ. ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರೂ ಯಶಸ್ಸು ಸಾಧಿಸಬಲ್ಲರು ಎಂಬ ಮಾತನ್ನು ಇಂದಿರಾ ಅವರಂತೆ ರಾಜ್ಯದಲ್ಲಿ ಉಮಾ ರೆಡ್ಡಿ, ಹೇಮಾಮಾಲಿನಿ, ಭುವನೇಶ್ವರಿ, ಆಶಾ, ದಾಕ್ಷಾಯಣಿ... ಹೀಗೆ ನೂರಾರು ಮಹಿಳಾ ಉದ್ಯಮಿಗಳು ಸಾಧಿಸಿದ್ದಾರೆ. ಎರಡು–ಮೂರು ದಶಕದ ಉದ್ಯಮದ ಇತಿಹಾಸದ ಪುಟಗಳನ್ನು ತೆರೆದರೆ ವಿವಿಧ ಕ್ಷೇತ್ರಗಳ ಮಹಿಳಾ ಉದ್ಯಮಿಗಳ ಯಶಸ್ವಿ ಕಥನಗಳು ಗೋಚರಿಸುತ್ತವೆ.

ಅಂತರರಾಷ್ಟ್ರೀಯ ಮಹಿಳಾ ದಿನ– 2026

ಮಹಿಳಾ ಉದ್ಯಮಿಗಳು ಬೆಂಗಳೂರು ಸೇರಿದಂತೆ ರಾಜ್ಯದ ನಗರ, ಪಟ್ಟಣಗಳಷ್ಟೇ ಅಲ್ಲ ಗ್ರಾಮೀಣ ಪ್ರದೇಶಗಳಲ್ಲೂ ತಮ್ಮ ಅಸ್ಮಿತೆ ರೂಪಿಸಿಕೊಂಡಿದ್ದಾರೆ. ಗಂಡ–ಮನೆ–ಮಕ್ಕಳನ್ನು ನೋಡಿಕೊಂಡರೆ ಸಾಕು, ಗಂಡನ ಆದಾಯದಿಂದಲೇ ಬದುಕು ಸಾಗಿಸಬಹುದು ಎಂಬ ಪರಿಧಿಯಿಂದ ಹೊರಬಂದು ತಮ್ಮ ಅಸ್ತಿತ್ವ ಕಂಡುಕೊಂಡಿದ್ದಾರೆ. ಉನ್ನತ ಶಿಕ್ಷಣ, ವ್ಯಾಪಾರಿ ಹಿನ್ನೆಲೆ ಇಲ್ಲದಿದ್ದರೂ ಕೇಂದ್ರ, ರಾಜ್ಯ ಸರ್ಕಾರಗಳ ನೆರವು, 'ಅವೇಕ್', ಎಫ್‌ಕೆಸಿಸಿಐ, ಉಬುಂಟುನಂಥ ಹಲವು ಸಂಸ್ಥೆಗಳ ಸೂಕ್ತ ಮಾರ್ಗದರ್ಶನವು ಮಹಿಳಾ ಉದ್ಯಮಿಗಳ ಬೆನ್ನಿಗೆ ಬೆಂಬಲವಾಗಿವೆ.

ಈ ಬಾರಿಯ ಮಹಿಳಾ ದಿನದ ಘೋಷವಾಕ್ಯ 'ಗೀವ್ ಟು ಗೇನ್'ಗೆ ತಕ್ಕಂತೆ ಮಹಿಳೆಗೆ ಬೆಂಬಲ ನೀಡಿದರೆ ಆಕೆ ಕುಟುಂಬಕ್ಕಷ್ಟೇ ಅಲ್ಲ, ಸಮಾಜಕ್ಕೂ ಕೊಡುಗೆ ನೀಡಬಲ್ಲಳು ಎಂಬುದನ್ನು ಈ ಮಹಿಳಾ ಉದ್ಯಮಿಗಳು ಸಾಧಿಸಿದ್ದಾರೆ. ವಿಶ್ವ ಮಹಿಳಾ ದಿನಾಚರಣೆಯ ಹಿನ್ನೆಲೆಯಲ್ಲಿ ಅಂತಹ ಮಹಿಳಾ ಉದ್ಯಮಿಗಳ ಪೈಕಿ ಕೆಲವರನ್ನು ಮಾತನಾಡಿಸಿದಾಗ, 'ಮಹಿಳೆಗೆ ತಾನು ಇಂಥದ್ದನ್ನು ಮಾಡಲೇಬೇಕೆಂಬ ಇಚ್ಛಾಶಕ್ತಿ ಇದ್ದಲ್ಲಿ ಆಕೆಗೆ ಯಶಸ್ಸು ಅಸಾಧ್ಯವೇನಲ್ಲ. ಮಲ್ಟಿ ಟಾಸ್ಕಿಂಗ್ ಅನ್ನೋದು ನಮ್ಮ ವಂಶವಾಹಿನಿಯಲ್ಲೇ ಇರುವುದರಿಂದ ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರು ಯಶಸ್ವಿಯಾಗಬಲ್ಲರು. ಯಾವುದೇ ಹಿನ್ನೆಲೆ ಇಲ್ಲದವರೂ ಯಶಸ್ವಿ ಉದ್ಯಮಿಗಳಾಗಬಲ್ಲರು' ಎಂಬುದಕ್ಕೆ ನಾನೇ ಉದಾಹರಣೆ ಎನ್ನುತ್ತಾರೆ ರಾಜ್ಯದ ಕೈಗಾರಿಕೆಗಳ ಪ್ರಾತಿನಿಧಿಕ ಸಂಸ್ಥೆಯಾದ ಎಫ್‌ಕೆಸಿಸಿಐನ ಪ್ರಥಮ ಮಹಿಳಾ ಅಧ್ಯಕ್ಷರಾದ ಉಮಾ ರೆಡ್ಡಿ.

'ಕಾರ್ಪೊರೇಟ್ ಮಟ್ಟದ ಮಾತುಕತೆಗಳ ಸಂದರ್ಭದಲ್ಲಿ ಉದ್ಯಮ ನಡೆಸುವುದು ಮಹಿಳೆಯರ ಪಾಲಿಗೆ ಸವಾಲಿನ ಕೆಲಸವೇ. ಉದ್ಯಮ ಮುನ್ನಡೆಸಲು ಯಾವುದೇ ರಾಜಿ ಇಲ್ಲದ ದೃಢನಿಶ್ಚಯ ಮುಖ್ಯ. ಯಾವುದೇ ಯೋಜನೆಯನ್ನು ಯಶಸ್ವಿಯಾಗಿ ನಿಭಾಯಿಸಿ ತೋರಿಸಿದರಷ್ಟೇ ನಾವು ಗ್ರಾಹಕರ ವಿಶ್ವಾಸಗಳಿಸಲು ಸಾಧ್ಯ. ಉದ್ದಿಮೆ ಮಾಡಲು ನಮಗೆ ಮಹಿಳೆಯೆಂದು ಯಾರೂ ಸಹಾನುಭೂತಿ ತೋರುವುದಿಲ್ಲ. ಹೀಗಾಗಿ ಯಾವುದೇ ಸವಾಲಿಗಾದರೂ ನಮ್ಮ ಕೆಲಸವೇ ಉತ್ತರ' ಎನ್ನುತ್ತಾರೆ ಹಲವು ಪ್ರಖ್ಯಾತ ಯಂತ್ರೋಪಕರಣ ಸಂಸ್ಥೆಗಳ ಪಾಲುದಾರ ಸಂಸ್ಥೆಯಾಗಿರುವ 'ಇನ್ಸೈಟ್ ಕ್ಯಾಮ್ ಸೆಂಟರ್' ಸ್ಥಾಪಕಿ ಹೇಮಾಮಾಲಿನಿ.

▶4

ಮನೆ ಬಳಕೆ ಎಲ್‌ಪಿಜಿ ₹60 ತುಟ್ಟಿ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ನಡೆದಿರುವ ಸಂಘರ್ಷದ ಪರಿಣಾಮ ಮನೆ ಬಳಕೆಯ ಅಡುಗೆ ಅನಿಲದ (ಎಲ್‌ಪಿಜಿ) ಬೆಲೆ ಪ್ರತಿ ಸಿಲಿಂಡರ್‌ಗೆ ₹60ರಷ್ಟು ಹೆಚ್ಚಾಗಿದೆ. 14.2 ಕೆ.ಜಿ ತೂಕದ ಸಬ್ಸಿಡಿ ರಹಿತ ಸಿಲಿಂಡರ್ ಬೆಲೆಯು ₹853ರಿಂದ ₹913ಕ್ಕೆ ಏರಿಕೆಯಾಗಿದೆ. ಪರಿಷ್ಕೃತ ದರವು ಶನಿವಾರದಿಂದಲೇ ಜಾರಿಯಾಗಿದೆ.

'ಯುದ್ಧದ ಪರಿಣಾಮದಿಂದ ಉಂಟಾಗಿರುವ ಇಂಧನ ಕೊರತೆ ಮತ್ತು ನಷ್ಟವನ್ನು ಭರಿಸಲು ಸಾಕಷ್ಟು ಆರ್ಥಿಕ ಶಕ್ತಿಯನ್ನು ತೈಲ ಕಂಪನಿಗಳು ಹೊಂದಿವೆ. ಹಾಗಾಗಿ, ಸದ್ಯಕ್ಕೆ ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಪರಿಷ್ಕರಣೆ ಇಲ್ಲ' ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

▶10

ಮುಖ್ಯಾಂಶಗಳು

- ಪೆಟ್ರೋಲ್ ಡೀಸೆಲ್ ದರ ಏರಿಕೆ ಸದ್ಯಕ್ಕಿಲ್ಲ
- ವಾಣಿಜ್ಯ ಸಿಲಿಂಡರ್ ಬೆಲೆ ₹114 ಏರಿಕೆ


'80 ಪೈಸೆಯಷ್ಟೇ ಹೆಚ್ಚುವರಿ ಹೊರೆ'

ನಾಲ್ಕು ಜನರಿರುವ ಕುಟುಂಬವೊಂದು ವಾರ್ಷಿಕವಾಗಿ 4 ರಿಂದ 5 ಎಲ್‌ಪಿಜಿ ಸಿಲಿಂಡರ್ ಬಳಸಿದರೆ, ಆ ಕುಟುಂಬಕ್ಕೆ ಪ್ರತಿದಿನ 80 ಪೈಸೆಯಷ್ಟು ಅಥವಾ ಒಬ್ಬ ವ್ಯಕ್ತಿಗೆ 20 ಪೈಸೆಯಷ್ಟು ಮಾತ್ರ ಹೊರೆ ಬೀಳುತ್ತದೆ ಎಂದು ಕೇಂದ್ರದ ಅಧಿಕಾರಿಯೊಬ್ಬರು ಹೇಳಿದರು.

ಅಂತರರಾಷ್ಟ್ರೀಯ ಮಾರುಕಟ್ಟೆಯ ಇಂಧನ ದರಕ್ಕೆ ಹೋಲಿಸಿದರೆ ಈಗ ಮಾಡಿರುವ ಹೆಚ್ಚಳವು ಕಡಿಮೆ ಇದೆ. 14.2 ಕೆ.ಜಿ ತೂಕದ ಸಬ್ಸಿಡಿ ರಹಿತ ಸಿಲಿಂಡರ್‌ಗೆ ₹1,050ರವರೆಗೆ ದರ ಹೆಚ್ಚಿಸಿದರೆ ಈ ನಷ್ಟವನ್ನು ಸರಿದೂಗಿಸಿಕೊಳ್ಳಬಹುದು. ನೇಪಾಳದಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆ ₹1,207, ಶ್ರೀಲಂಕಾದಲ್ಲಿ ₹1,241 ಹಾಗೂ ಪಾಕಿಸ್ತಾನದಲ್ಲಿ ₹1,046 ಇದ್ದು, ಭಾರತದಲ್ಲಿ ಈ ದೇಶಗಳಿಗಿಂತಲೂ ಕಡಿಮೆ ದರ ಇದೆ ಎಂದರು.

ಟಿ20 ವಿಶ್ವಕಪ್ ಫೈನಲ್ ಇಂದು

ಪ್ರಜಾವಾಣಿ ವಾರ್ತೆ



ಸೂರ್ಯ ಕುಮಾರ್ | ಮಿಚೆಲ್ ಸ್ಯಾಂಟನರ್

ಅಹಮದಾಬಾದ್: ಹಾಲಿ ಚಾಂಪಿಯನ್ ಭಾರತ ತಂಡವು ಭಾನುವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಟೂರ್ನಿಯ ಇತಿಹಾಸದಲ್ಲಿಯೇ ಯಾವುದೇ ತಂಡ ಸತತ ಎರಡು ಬಾರಿ ವಿಶ್ವಕಪ್ ಗೆದ್ದಿಲ್ಲ. ಜೊತೆಗೆ ತವರಿನ ಅಂಗಳದಲ್ಲಿ ಚಾಂಪಿಯನ್ ಆಗಿಲ್ಲ. ಈ ಎರಡೂ ದಾಖಲೆಗಳನ್ನು ಬರೆಯುವ ಅವಕಾಶ ಈಗ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡಕ್ಕೆ ಇದೆ. ಆದ್ದರಿಂದ ಈ ಫೈನಲ್ ತೀವ್ರ ಕುತೂಹಲ ಕೆರಳಿಸಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್

ಕ್ಷಮೆಯಾಚಿಸಿದ ಇರಾನ್

ಟೆಹರಾನ್ (ಎಪಿ/ ಎಎಫ್‌ಪಿ): ಇಸ್ರೇಲ್ ಮತ್ತು ಅಮೆರಿಕದೊಂದಿಗಿನ ಸಂಘರ್ಷದಲ್ಲಿ, ನೆರೆಯ ಕೊಲ್ಲಿ ರಾಷ್ಟ್ರಗಳ ಮೇಲೆ ನಡೆಸಿದ ದಾಳಿಗೆ ಇರಾನ್ ಕ್ಷಮೆಯಾಚಿಸಿದೆ.

'ಇನ್ನು ಮುಂದೆ ಕೊಲ್ಲಿ ರಾಷ್ಟ್ರಗಳ ಮೇಲೆ ಅಪ್ರಚೋದಿತ ದಾಳಿ ನಡೆಸುವುದಿಲ್ಲ. ಅಮೆರಿಕವು ಈ ರಾಷ್ಟ್ರಗಳನ್ನು ಇರಾನ್ ವಿರುದ್ಧದ ದಾಳಿಗೆ ನೆಲೆಯಾಗಿ ಬಳಸಿಕೊಂಡರೆ ಮಾತ್ರ ನಾವು ಪ್ರತಿದಾಳಿ ನಡೆಸುತ್ತೇವೆ' ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಹೇಳಿದ್ದಾರೆ.

ಶರಣಾಗತಿಯ ಪ್ರಶ್ನೆಯೇ ಇಲ್ಲ: 'ಇರಾನ್ ಎಂದಿಗೂ ಶರಣಾಗುವುದಿಲ್ಲ. ಇರಾನ್‌ನ ಜನರು ಶರಣಾಗುತ್ತಾರೆ ಎಂಬ ಕನಸನ್ನು ಅಮೆರಿಕನ್ನರು ತಮ್ಮ ಸಮಾಧಿಯೊಳಕ್ಕೆ ಕೊಂಡೊಯ್ಯಬೇಕು' ಎಂದು ಪೆಜೆಶ್ಕಿಯಾನ್ ಹೇಳಿದ್ದಾರೆ.



ಪೆಜೆಶ್ಕಿಯಾನ್ & ಟ್ರಂಪ್

'ಶರಣಾಗದಿದ್ದರೆ ಸರ್ವನಾಶ'

ವಾಷಿಂಗ್ಟನ್: 'ಶರಣಾಗದಿದ್ದರೆ ಇರಾನ್ ಮೇಲಿನ ಸೇನಾ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸುತ್ತೇವೆ. ಇದರ ಪರಿಣಾಮ ಘೋರವಾಗಿರುತ್ತದೆ. ಇರಾನ್‌ನ ಹೊಸ ನೆಲೆಗಳನ್ನು ಕೇಂದ್ರೀಕರಿಸಿ ದಾಳಿ ನಡೆಯಲಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಗುಡುಗಿದ್ದಾರೆ.

'ಇರಾನ್ ಇನ್ನು ಮುಂದೆ ಪಶ್ಚಿಮ ಏಷ್ಯಾದ ಹಿಂಸಕನಾಗಿ ಮುಂದುವರಿಯಲು ಅಮೆರಿಕ ಅವಕಾಶ ನೀಡುವುದಿಲ್ಲ. ಬೇಷರತ್ತಾಗಿ ಶರಣಾಗದಿದ್ದರೆ ಇರಾನ್‌ನ ಸರ್ವನಾಶ ಖಚಿತ' ಎಂದು ಹೇಳಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬಂಡವಾಳ ವೆಚ್ಚ: ಏರು ಹಾದಿ

ಬೆಂಗಳೂರು: ಮುಂದಿನ ಐದು ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರದ ಬಂಡವಾಳ ವೆಚ್ಚವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ.

ರಾಜ್ಯದ ಬಂಡವಾಳ ವೆಚ್ಚವು ಪ್ರತಿ ಆರ್ಥಿಕ ವರ್ಷದಲ್ಲೂ ಏರಿಕೆಯಾಗಲಿದೆ ಎನ್ನುತ್ತದೆ 2026–2030ರ ಮಧ್ಯಮಾವಧಿ ವಿತ್ತೀಯ ಮುನ್ನಂದಾಜು. 2029–30ನೇ ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ ರಾಜ್ಯದ ಬಂಡವಾಳ ವೆಚ್ಚ ₹1.12 ಲಕ್ಷ ಕೋಟಿಯಷ್ಟಾಗಲಿದೆ. ಈ ಅವಧಿಯಲ್ಲಿ ರಾಜ್ಯ ಸರ್ಕಾರವು ₹4.32 ಲಕ್ಷ ಕೋಟಿಯನ್ನು ಬಂಡವಾಳ ವೆಚ್ಚಕ್ಕೆ ವಿನಿಯೋಗಿಸಲಿದೆ.

ವಿವರ ▶7

ಸೂರ್ಯೋದಯ: 6:32 ಸೂರ್ಯಾಸ್ತ : 6:29 ಚಂದ್ರೋದಯ: ರಾ. 9:45 ಚಂದ್ರಾಸ್ತ: ಬೆ. 8:50 | ಶನಿವಾರದ ಉಷ್ಣಾಂಶ : ಗರಿಷ್ಠ 34° ಕನಿಷ್ಠ 20°

ಭಾನುವಾರ ● ಮಾರ್ಚ್ 8, 2026

ಭಾನುವಾರದ ಉಷ್ಣಾಂಶ 34° ಗರಿಷ್ಠ 20° ಕನಿಷ್ಠ | ಸೋಮವಾರ 34° : 19° | ಮಂಗಳವಾರ 34° : 19° | ಬುಧವಾರ 34° : 19°

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ

ಒಳಮೀಸಲಾತಿ ಇಲ್ಲದ ನೇಮಕಾತಿ ವಿರುದ್ಧ ಪ್ರತಿಭಟನೆ: ಎನ್.ಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಯನ್ನು ಅನ್ವಯ ಮಾಡದೆ 56,432 ಹುದ್ದೆಗಳ ನೇಮಕಾತಿಗೆ ಮುಂದಾಗಿರುವ ರಾಜ್ಯ ಸರ್ಕಾರದ ನಡೆಯ ವಿರುದ್ಧ ಇದೇ 16ರಂದು ಪ್ರತಿಭಟನೆ ನಡೆಸುತ್ತೇವೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷ ಎನ್.ಮೂರ್ತಿ ಹೇಳಿದರು.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಳಮೀಸಲಾತಿಗಾಗಿ ಒತ್ತಾಯಿಸಿ ಮಾದಿಗ ಮತ್ತು ಮಾದಿಗ ಸಂಬಂಧಿ ಜಾತಿ ಸಮುದಾಯಗಳು 35 ವರ್ಷಗಳಿಂದ ಹೋರಾಟ ನಡೆಸುತ್ತಿವೆ. ಸುಪ್ರೀಂ ಕೋರ್ಟ್ ತೀರ್ಪಿನ ಆಧಾರದಲ್ಲಿ ರಾಜ್ಯ ಸರ್ಕಾರವು ಸಮೀಕ್ಷೆ ನಡೆಸಿ, ಒಳ ಮೀಸಲಾತಿಯನ್ನು ನಿಗದಿ ಪಡಿಸಿದೆ. ಆದರೆ ಒಳ ಮೀಸಲಾತಿಯ ವಿರೋಧಿಗಳ ಒತ್ತಡದ ಕಾರಣಕ್ಕೆ ಅದು ಅನುಷ್ಠಾನಕ್ಕೆ ಬಂದಿಲ್ಲ' ಎಂದರು.

'ಈ ಮಧ್ಯೆ ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಗೆ ಮಣಿದ ರಾಜ್ಯ ಸರ್ಕಾರವು ಹಳೆಯ ಮೀಸಲಾತಿ ಪದ್ಧತಿಯ ಆಧಾರದಲ್ಲಿ 56,432 ಹುದ್ದೆಗಳ ನೇಮಕಾತಿಗೆ ಕ್ರಮ ತೆಗೆದುಕೊಂಡಿದೆ. ಪರಿಣಾಮವಾಗಿ ಪರಿಶಿಷ್ಟ ಜಾತಿಗಳಲ್ಲೇ ಅಂಚಿನಲ್ಲಿರುವ ಸಮುದಾಯಗಳು ಒಳಮೀಸಲಾತಿಯಿಂದ ವಂಚಿತವಾಗುತ್ತಿವೆ. ಇದನ್ನು ವಿರೋಧಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಆರ್‌ಪಿಐ (ಬಿ) ಜಂಟಿಯಾಗಿ ಮಾರ್ಚ್ 16ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಿವೆ' ಎಂದು ಮಾಹಿತಿ ನೀಡಿದರು.

ಶಾಲಾ–ಕಾಲೇಜುಗಳಲ್ಲಿ ಡ್ರಗ್ಸ್ ಹಾವಳಿ ನಿಯಂತ್ರಿಸಿ: ಶಶಿಧರ್ ಎಸ್. ಕೋಸಂಬೆ

ಬೆಂಗಳೂರು: ಬೆಂಗಳೂರು ನಗರದ ವಿವಿಧ ಶಾಲಾ–ಕಾಲೇಜು ಹಾಗೂ ವಸತಿನಿಲಯಗಳಲ್ಲಿ ಡ್ರಗ್ಸ್ ವ್ಯಸನಿಗಳ ಸಂಖ್ಯೆ ಹೆಚ್ಚಳಗೊಂಡಿದ್ದು, ಇದನ್ನು ನಿಯಂತ್ರಿಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಎಸ್. ಕೋಸಂಬೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆದಿರುವ ಅವರು, 'ಬೆಂಗಳೂರಿನ ವಿಜಯನಗರದ ಪಶ್ಚಿಮ ಉಪ ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳು ಹಾಗೂ ವಸತಿನಿಲಯಗಳಲ್ಲಿ ವಾಸವಾಗಿರುವ ವಿದ್ಯಾರ್ಥಿಗಳು ಡ್ರಗ್ಸ್ ವ್ಯಸನಿಗಳಾಗುತ್ತಿದ್ದಾರೆ. ಶಾಲಾ–ಕಾಲೇಜು ಹಾಗೂ ವಸತಿನಿಲಯಗಳನ್ನು ಪರಿಶೀಲಿಸಿದಾಗ ಕೆಲ ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡಿರುವುದು ಪತ್ತೆಯಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಡ್ರಗ್ಸ್ ಹಾವಳಿ ಹೆಚ್ಚಾಗಿದ್ದು, ಇದನ್ನು ನಿಯಂತ್ರಿಸಬೇಕು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಪೊಲೀಸ್ ಇಲಾಖೆಯು ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ಶಾಲಾ–ಕಾಲೇಜುಗಳು ಹಾಗೂ ವಸತಿನಿಲಯಗಳಲ್ಲಿ ಹಂತ–ಹಂತವಾಗಿ ತಪಾಸಣೆ ನಡೆಸಬೇಕು. ಶಾಲಾ–ಕಾಲೇಜಿನ ಆವರಣದ ಹತ್ತಿರ ಯಾವುದೇ ರೀತಿಯ ಮಾದಕ ಪದಾರ್ಥಗಳ ಮಾರಾಟಕ್ಕೆ ಅವಕಾಶ ನೀಡಬಾರದು' ಎಂದು ತಿಳಿಸಿದ್ದಾರೆ.

'ಶಾಂತವಾಗಿದ್ದರೆ ವಾಹನ ಚಾಲನೆ ಸುಗಮ'

'ಸೇಫ್ ಎ ಥಾನ್' ನಡಿಗೆ, ಓಟ, ಸೈಕಲ್ ಜಾಥಾ, ಬೈಕ್ ಜಾಥಾ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನಸ್ಸು ಶಾಂತವಾಗಿದ್ದರೆ ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದ ಇರಲು ಸಾಧ್ಯ. ಮನಸ್ಸು ಶಾಂತವಾಗಿರಬೇಕಿದ್ದರೆ ದೈಹಿಕ ಚಟುವಟಿಕೆಗಳ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಸಾರಿಗೆ ಇಲಾಖೆಯು ಬೆಂಗಳೂರು ಸಂಚಾರ ಪೊಲೀಸ್ ಸಹಯೋಗದೊಂದಿಗೆ ಶನಿವಾರ ಆಯೋಜಿಸಿದ್ದ 'ನಮ್ಮ ರಸ್ತೆ ನಮ್ಮ ಸುರಕ್ಷತೆ' 5ಕೆ 'ಸೇಫ್ ಎ ಥಾನ್' ನಡಿಗೆ, ಓಟ, ಸೈಕಲ್ ಜಾಥಾ, ಬೈಕ್ ಜಾಥಾ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಅಪಘಾತಗಳು ಆದಾಗ ಬೇರೆಯವರನ್ನು ದೂಷಿಸುವುದು, ರಸ್ತೆ ಸುರಕ್ಷತೆಯ ಬಗ್ಗೆ ಬೇರೆಯವರು ಎಚ್ಚರಿಕೆ ವಹಿಸಬೇಕು ಎಂದು ಬಯಸುವುದು ಸರಿಯಲ್ಲ. ನಾವೂ ಎಚ್ಚರ ವಹಿಸಬೇಕು' ಎಂದು ಹೇಳಿದರು.



ಸೇಫ್–ಎ–ಥಾನ್‌ನಲ್ಲಿ ಪ್ರೀತಿಯ ಸಂಕೇತ ತೋರಿದ ಮಹಿಳೆ

ಸಾರಿಗೆ ಆಯುಕ್ತ ಎ.ಎಂ. ಯೋಗೀಶ್ ಮಾತನಾಡಿ, 'ರಸ್ತೆ ಸುರಕ್ಷತೆಯು ಕೇವಲ ನಿಯಮ ಪಾಲನೆಗೆ ಸೀಮಿತವಲ್ಲ. ಪ್ರತಿಯೊಬ್ಬ ನಾಗರಿಕನ ಅಮೂಲ್ಯ ಜೀವವನ್ನು ಉಳಿಸುವ ಮಹತ್ತರ ಜವಾಬ್ದಾರಿ. ರಸ್ತೆಯಲ್ಲಿ ಸಂಚರಿಸುವಾಗ ನಾವು ತೋರುವ ಎಚ್ಚರಿಕೆ ಮತ್ತು ಸಂಯಮವು ನಮ್ಮ ಕುಟುಂಬದ ಭವಿಷ್ಯದ ಜೊತೆಗೆ ಇತರರ ಪ್ರಾಣವನ್ನೂ ರಕ್ಷಿಸುತ್ತದೆ' ಎಂದರು.



ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ 'ಸೇಫ್–ಎ–ಥಾನ್'ನಲ್ಲಿ ನೂರಾರು ಜನರು ಭಾಗವಹಿಸಿದ್ದರು ಚಿತ್ರಗಳು: ಪ್ರಶಾಂತ್ ಎಚ್.ಜಿ.

ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್ ಮಾತನಾಡಿ, 'ನಮ್ಮ ಜೀವದ ಜೊತೆಗೆ ಇತರರ ಜೀವವೂ ಬಹಳ ಮುಖ್ಯ ಎಂಬುದನ್ನು ಪ್ರತಿಯೊಬ್ಬ ವಾಹನ ಸವಾರರು ಅರಿತುಕೊಳ್ಳಬೇಕು. ತುರ್ತು ಅಥವಾ ಶೋಕಿಗಾಗಿ ವಾಹನವನ್ನು ಅತಿ ವೇಗದಲ್ಲಿ ಚಲಾಯಿಸುವುದರಿಂದಲೇ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ' ಎಂದು ತಿಳಿಸಿದರು.

ಮಾಜಿ ಕ್ರಿಕೆಟಿಗ ಸುನೀಲ್ ಜೋಶಿ ಮಾತನಾಡಿ, 'ಬೈಕ್ ಓಡಿಸುವಾಗ, ಕಾರು ಚಲಾಯಿಸುವಾಗ ಜನರು ಮೊಬೈಲ್ ಬಳಸುತ್ತಿರುವುದನ್ನು ಗಮನಿಸಿದ್ದೇನೆ. ಇದು ವಾಹನ ಚಲಾಯಿಸುವವರು ಮತ್ತು ಬೇರೆಯವರ ಜೀವಕ್ಕೂ ಅಪಾಯ ಉಂಟು ಮಾಡುತ್ತದೆ. ತುರ್ತು ಅಗತ್ಯವಿದ್ದರೆ ವಾಹನವನ್ನು ಸುರಕ್ಷಿತವಾಗಿ ಪಕ್ಕಕ್ಕೆ ನಿಲ್ಲಿಸಿ ಮಾತನಾಡಿ' ಎಂದು ಸಲಹೆ ನೀಡಿದರು.

13,000 ಜನ 'ಸೇಫ್ ಎ ಥಾನ್' ನಲ್ಲಿ ಭಾಗವಹಿಸಿದ್ದರು. ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ. ಪ್ರಸಾದ್, ಯುವಜನ ಮತ್ತು ಕ್ರೀಡಾ ಇಲಾಖೆ ಆಯುಕ್ತ ಚೇತನ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ, ಕಾವೇರಿ ಆಸ್ಪತ್ರೆ ಚೇರ್ಮನ್ ವಿಜಯ ಭಾಸ್ಕರನ್ ಉಪಸ್ಥಿತರಿದ್ದರು.

ಇಂದು ಮಹಿಳಾ ದಿನಾಚರಣೆ

ರಾಜರಾಜೇಶ್ವರಿ ನಗರ: ಜೆಡಿಎಸ್ ಮಹಿಳಾ ಘಟಕದಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಮಾರ್ಚ್ 8ರಂದು ಬೆಳಿಗ್ಗೆ 11ಕ್ಕೆ ಮಾಗಡಿ ರಸ್ತೆಯ ಸುಮನಹಳ್ಳಿ ಬಳಿಯ ಬಾಬು ಜಗಜೀವನ್ ರಾಮ್ ಭವನದಲ್ಲಿ ನಡೆಯಲಿದೆ ಎಂದು ಜೆಡಿಎಸ್ ಅಧ್ಯಕ್ಷ ಲಗ್ಗೆರೆ ಚಂದ್ರಶೇಖರ್ ತಿಳಿಸಿದರು.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವರಾದ ಎಚ್.ಡಿ. ರೇವಣ್ಣ ಲೀಲಾದೇವಿ ಆರ್.ಪ್ರಸಾದ್, ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ, ಶಾಸಕರಾದ ಶಾರದಾ ಪೂರ‍್ಯಾ ನಾಯಕ್, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿರಾಮೇಗೌಡ, ಜೆಡಿಎಸ್ ಪಶ್ಚಿಮ ಜಿಲ್ಲಾ ಅಧ್ಯಕ್ಷ ಟಿ. ತಿಮ್ಮೆಗೌಡ, ಆರ್.ಆರ್.ನಗರಕ್ಷೇತ್ರದ ಅಧ್ಯಕ್ಷೆ ಲತಾ, ಅಧ್ಯಕ್ಷ ಸಿ.ಆರ್.ಮೂರ್ತಿ ಭಾಗವಹಿಸುವರು. ಮಹಿಳೆಯರಿಂದ ಜನಪದ ನೃತ್ಯ, ಹಾಡುಗಾರಿಕೆ, ಕೋಲಾಟ ನಡೆಯಲಿದೆ ಎಂದರು.

ಮಾತೃ ಕಪ್: ಸೆಮಿಫೈನಲ್‌ಗೆ ಬೀಗಲ್ಸ್, ಮೌಂಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀಗಲ್ಸ್ ಬಿ.ಸಿ, ಮೌಂಟ್ಸ್ ಬಿ.ಸಿ ಹಾಗೂ ಡಿವೈಇಎಸ್ ಮೈಸೂರು ತಂಡಗಳು ಎಸ್.ಎಂ.ಎನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಮಾತೃ ಕಪ್ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಸೆಮಿಫೈನಲ್ ಪ್ರವೇಶಿಸಿದವು.

ಕಂಠೀರವ ಒಳಾಂಗಣ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಬೀಗಲ್ಸ್ ಬಿ.ಸಿ ತಂಡವು 68–66ರಿಂದ ಜೆಎಸ್‌ಸಿ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. ಡಿವೈಇಎಸ್ ಮೈಸೂರು ತಂಡವು 49–28ರಿಂದ ಯಂಗ್ ಓರಿಯನ್ಸ್ ತಂಡವನ್ನು ಮಣಿಸಿದರೆ, ಮೌಂಟ್ಸ್ ಬಿ.ಸಿ ತಂಡವು 61–42ರಿಂದ ಎಚ್‌ಬಿಆರ್ ಬಿ.ಸಿ ವಿರುದ್ಧ ಸುಲಭ ಜಯ ಸಾಧಿಸಿತು.

'ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಕ್ಯೂ–ಆರ್ ಕೋಡ್ ಒಳಗೊಂಡ ಗುರುತಿನ ಚೀಟಿಯನ್ನು ಮಾರ್ಚ್ ಅಂತ್ಯದೊಳಗೆ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ಸೂಚನೆ ನೀಡಿದರು.



ಎಂ. ಮಹೇಶ್ವರ ರಾವ್

ಜಿಬಿಎ ವ್ಯಾಪ್ತಿಯಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಶನಿವಾರ ನಡೆದ ವರ್ಚುವಲ್ ಸಭೆಯಲ್ಲಿ ಅವರು ಮಾತನಾಡಿದರು.

ಮತದಾರರ ಗುರುತಿನ ಚೀಟಿ ಮಾದರಿಯಲ್ಲಿ ಅವಶ್ಯಕ ಮಾಹಿತಿಯನ್ನು ಮುದ್ರಿಸಿ ಗುರುತಿನ ಚೀಟಿ ನೀಡಬೇಕು. ಉಳಿದ ಸಂಪೂರ್ಣ ಮಾಹಿತಿ ಕ್ಯೂ–ಆರ್ ಕೋಡ್‌ನಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಗುರುತಿನ ಚೀಟಿಯಲ್ಲಿ ಯಾವುದೇ ದೋಷಗಳಿರದಂತೆ ನೋಡಿಕೊಳ್ಳಬೇಕು. ಎಲ್ಲ 5 ನಗರ ಪಾಲಿಕೆಗಳಲ್ಲಿ ಒಂದೇ ಮಾದರಿಯ ಗುರುತಿನ ಚೀಟಿಯನ್ನು ಮುದ್ರಿಸಬೇಕು ಎಂದು ಸೂಚಿಸಿದರು.

ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ಮಾತನಾಡಿ, 'ಜಿಬಿಎ ವ್ಯಾಪ್ತಿಯಲ್ಲಿ 27,585 ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ. ತಂತ್ರಾಂಶದಲ್ಲಿ ಎಲ್ಲ ಬೀದಿ ಬದಿ ವ್ಯಾಪಾರಿಗಳ ಸಂಪೂರ್ಣ ಮಾಹಿತಿ ಲಭ್ಯವಿದೆ. ಶೀಘ್ರದಲ್ಲೇ ಹೊಸ ಗುರುತಿನ ಚೀಟಿಗಳನ್ನು ವಿತರಿಸಲಾಗುವುದು' ಎಂದು ಮಾಹಿತಿ ನೀಡಿದರು.

ಕಲ್ಯಾಣ ಕಾರ್ಯಕ್ರಮಗಳಡಿ ಎಲೆಕ್ಟ್ರಿಕ್ ತರಕಾರಿ ಗಾಡಿ, ಎಲೆಕ್ಟ್ರಿಕ್ ಹಣ್ಣಿನ ಗಾಡಿ, ಎಲೆಕ್ಟ್ರಿಕ್ ಐಸ್ ಕ್ರೀಮ್ ಗಾಡಿ, ಎಲೆಕ್ಟ್ರಿಕ್ ಫಾಸ್ಟ್ ಫುಡ್ ಗಾಡಿ, ತ್ರಿಚಕ್ರ ವಾಹನ ಸೇರಿದಂತೆ ಒಟ್ಟು 3,236 ವಾಹನಗಳನ್ನು ಸಬ್ಸಿಡಿ ಮೂಲಕ ನೀಡಲಾಗುವುದು. ಈ ಸಂಬಂಧ ಎಲೆಕ್ಟ್ರಿಕ್ ವಾಹನಗಳ ಪ್ರಾತ್ಯಕ್ಷಿಕೆಯನ್ನು ಕೇಂದ್ರ ಕಚೇರಿಯಲ್ಲಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಒಂಟಿ ಮನೆಗಳಿಗೆ ಅನುದಾನ ಒದಗಿಸಿ: ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳಲ್ಲಿ ಒಂಟಿ ಮನೆ ಯೋಜನೆಗೆ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಬೇಕು. ಆಯ್ಕೆಯಾದ ಎಲ್ಲರಿಗೂ ತಿಂಗಳ ಕೊನೆಯೊಳಗೆ ಕಾರ್ಯಾದೇಶ ನೀಡಿ ಕೆಲಸ ಪ್ರಾರಂಭಿಸಲು ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಶೇಷ ಆಯುಕ್ತ ಕೆ. ಹರೀಶ್ ಕುಮಾರ್, ಹೆಚ್ಚುವರಿ ಆಯುಕ್ತರಾದ ಲತಾ, ದಿಗ್ವಿಜಯ್ ಬೋಡ್ಕೆ, ನವೀನ್ ಕುಮಾರ್ ರಾಜು, ಅಧಿಕಾರಿಗಳು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಸಂತ ಜ್ಞಾನೇಶ್ವರ ಮಹಾರಾಜರ ಜನ್ಮೋತ್ಸವ, ಸಂತ ತುಕಾರಾಮ ಮಹಾರಾಜರ ಸದೇಹ ವೈಕುಂಠ ಗಮನದ ಮಹೋತ್ಸವ ಜ್ಞಾನೇಶ್ವರಿ ಪಾರಾಯಣ: ಆಯೋಜನೆ ಮತ್ತು ಸ್ಥಳ: ವಿಠೋಬಾ (ಪಾಂಡುರಂಗ) ದೇವಸ್ಥಾನ, ಬಸೆಟ್ಟಿಪೇಟೆ, ಬೆಳಿಗ್ಗೆ 6.30ರಿಂದ

ಉದ್ಯಾನದಲ್ಲಿ ಉದಯರಾಗ: ಹಿಂದೂಸ್ತಾನಿ ಸಂಗೀತ ಗಾಯನ: ತಿಮ್ಮಣ್ಣ ಭೀಮರಾಯ, ಅಭಿನಯ ಎಂ. ರಾಮಚಂದ್ರ, ದೀಪ್ತಿ ಸುಧೀಂದ್ರ, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 7ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಚೈತನ್ಯಾ ಕೆ.ಬಿ., ಅತಿಥಿಗಳು: ಟಿ.ಎ. ಶರವಣ, ಪುಸ್ತಕಂ ರಮಾ, ವೀಣಾ ಮೂರ್ತಿ ವಿಜಯ್, ಉಷಾ ಬಸಪ್ಪ, ಮಂಜುನಾಥ್ ಜಿ.ಎಸ್., ಚಂದ್ರಶೇಖರ್ ಜಿ.ಎಸ್., ಆಯೋಜನೆ: ಲಲಿತಕಲಾ ನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9

ಪುರಂಥ: ಸಾನ್ನಿಧ್ಯ: ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಅತಿಥಿಗಳು: ಹಿಮಾಲಯನ್ ಸಿದ್ಧ ಅಕ್ಷರ್, ಪ್ರತಾಪರಾವ್ ಗಣಪತರಾವ್ ಜಾಧವ್, ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಎಂ.ಎ. ಸಲೀಂ, ಸೀಮಾಂತ್ ಕುಮಾರ್ ಸಿಂಗ್, ಆಯೋಜನೆ ಮತ್ತು ಸ್ಥಳ: ಅಕ್ಷರ್ ಯೋಗ ಕೇಂದ್ರ, ಸ್ಥಳ: ಬೆಳಿಗ್ಗೆ 9



ಸಿದ್ಧಲಿಂಗ ಸ್ವಾಮೀಜಿ

ನಂದಿಬಸವೇಶ್ವರ ಸ್ವಾಮಿಯ ನೂತನ ದೇವಸ್ಥಾನ ಉದ್ಘಾಟನೆ: ಬಿ.ವೈ. ವಿಜಯೇಂದ್ರ, ಎಸ್.ಟಿ. ಸೋಮಶೇಖರ್ ಆಯೋಜನೆ ಮತ್ತು ಸ್ಥಳ: ನಂದಿಬಸವೇಶ್ವರ ಸ್ವಾಮಿಯ ದೇವಸ್ಥಾನ, ಎಲೆಕೋಡಿಗೇಹಳ್ಳಿ, ಮಾಗಡಿ ರಸ್ತೆಯ ನೈಸ್ ರೋಡ್ ಸಮೀಪ, ಬೆಳಿಗ್ಗೆ 9

ಹಿರಿಯರ ಉತ್ಸವ: ಉದ್ಘಾಟನೆ: ಆರ್. ಗುರುರಾಜನ್, ಅತಿಥಿಗಳು: ಡಿ.ಆರ್. ಅಶೋಕ್, ಎಸ್. ಪ್ರೇಮ್‌ಕುಮಾರ್ ರಾಜ, ಅಧ್ಯಕ್ಷತೆ: ರಾಧಾ ಎಸ್. ಮೂರ್ತಿ, ಆಯೋಜನೆ: ನೈಟಿಂಗಲ್ಸ್ ಮೆಡಿಕಲ್ ಟ್ರಸ್ಟ್, ಸ್ಥಳ: ಹಡ್ಸನ್ ಮೆಮೋರಿಯಲ್ ಕಮ್ಯುನಿಟಿ ಸೆಂಟರ್, ಬೆಳಿಗ್ಗೆ 10ರಿಂದ

ಪ್ರಶಸ್ತಿ ಪ್ರದಾನ, ಕವಿಗೋಷ್ಠಿ, ಗೀತ ಗಾಯನ: ವಿನೋದಾ, ಅಧ್ಯಕ್ಷತೆ: ವಿ. ಮಲ್ಲಿಕಾರ್ಜುನಯ್ಯ, ಉಪಸ್ಥಿತಿ: ಪಿ.ಡಿ. ಗೀತಾ, ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಪ್ರಶಸ್ತಿ ಸ್ವೀಕರಿಸುವವರು: ಬಿ.ಎಂ. ಕೋಮಲಾ, ಸುನಂದಾ ಪ್ರಭುದೇವ್, ಆಯೋಜನೆ: ಸಮ್ಮಿಲನ, ಸ್ಥಳ: ಕೇನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30


ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಸಂಪನ್ಮೂಲ ವ್ಯಕ್ತಿಗಳು: ರೀನಾ ಸುವರ್ಣ, ವಿದ್ಯಾ ರಾಕೇಶ್, ರೇಖಾ ಗೋಪಾಲ್, ಪ್ರಸಾದ್ ಕುಮಾರ್, ಆಯೋಜನೆ: ಯುವವಾಹಿನಿ, ಸ್ಥಳ: ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ವಿಧಾನಸೌಧದ ಸಮೀಪ, ಬೆಳಿಗ್ಗೆ 10



ರೀನಾ ಸುವರ್ಣ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿಶೇಷ ಸಂಚಿಕೆ ಬಿಡುಗಡೆ, ವಿಚಾರಗೋಷ್ಠಿ: ಉದ್ಘಾಟನೆ: ಮಾ. ಭೈರವಿ, ವಿಶೇಷ ಸಂಚಿಕೆ ಬಿಡುಗಡೆ: ಎಚ್. ಶಶಿಧರ್ ಶೆಟ್ಟಿ, ಅಭಿನಂದನೆ ಸ್ವೀಕರಿಸುವವರು: ಎಸ್.ಜಿ. ಸುಶೀಲಮ್ಮ, ಆಯೋಜನೆ: ಸ್ತ್ರೀ ಜಾಗೃತಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಗಿರಿಧರ ರಾವ್ ಹವಲ್ದಾರ್ ಅವರ 'ಕೊರಚರು', 'ನೀವೂ ನಾಣ್ಯ ಸಂಗ್ರಾಹಕರಾಗಿ', 'ನಾಡು ನುಡಿ ಸಾಧಕರು', 'ಚಿವ್ ಚಿವ್ ಗುಬ್ಬಚ್ಚಿ' ಪುಸ್ತಕಗಳ ಬಿಡುಗಡೆ: ಟಿ.ಆರ್. ಚಂದ್ರಶೇಖರ್, ಎಸ್.ಜಿ. ಸಿದ್ಧರಾಮಯ್ಯ, ಟಿ.ಎಸ್. ನಾಗರಾಜ ಶೆಟ್ಟಿ, ಪಿ.ಕೆ. ಕೇಶವಮೂರ್ತಿ, ಅತಿಥಿಗಳು: ಅಗ್ರಹಾರ ಕೃಷ್ಣಮೂರ್ತಿ, ಆರ್. ಪೂರ್ಣಿಮಾ, ಬಸವರಾಜ ಸಬರದ, ಪಿ. ಸುಬ್ರಹ್ಮಣ್ಯ ಶೆಟ್ಟಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11



ಎಸ್.ಜಿ. ಸಿದ್ಧರಾಮಯ್ಯ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಭಾಷಣಕಾರರು: ಅನುಪಮಾ ಪ್ರಸಾದ್, ರೆಮಾ ಪಿಶಾರೊಡಿ, ಎಂ. ಕಾರ್ತಿಯಾಯಿನಿ, ಶ್ರೀಲಕ್ಷ್ಮೀ ಶರತ್, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿಯ ಸಭಾಂಗಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4

ದೀಪಧರಣಿ ನೃತ್ಯ: ದಿವ್ಯ ಗೋಸ್ವಾಮಿ, ರಮ್ಯಾ ಸೂರಜ್, ವೈ.ಕೆ. ಸಂಧ್ಯಾಶರ್ಮ, ರಶ್ಮಿ ಅಗರ್ವಾಲ್, ಆಯೋಜನೆ: ನಿರಂತರ, ಸ್ಥಳ: ನೃತ್ಯದರ್ಪಣ್ ಅಕಾಡೆಮಿ, ಜೆ.ಪಿ.ನಗರ, ಸಂಜೆ 4

'ಸಾಮಾನ್ಯ ಮನಸ್ಸಿನಾಚೆಗೆ ಉಪನಿಷತ್ತಿನ ದೃಷ್ಟಿಕೋನ' ಉಪನ್ಯಾಸ: ಶ್ರೀ ಎಂ, ಆಯೋಜನೆ: ದಿ ಸತ್ಸಂಗ್ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.30

‘ಸೀರೆ ಬದಲು ಗೌರವಧನ ಹೆಚ್ಚಿಸಿ’

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್‌ನಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗೌರವಧನ ಹೆಚ್ಚಿಸದೇ ಬಜೆಟ್‌ನಲ್ಲಿ ಕೇವಲ ಸೀರೆ ನೀಡುವ ಪ್ರಸ್ತಾವ ಮಾಡಿರುವುದನ್ನು ವಿರೋಧಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಸದಸ್ಯರು, ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಗೌರವಧನವನ್ನು ಹೆಚ್ಚಿಸದೇ ಇರುವುದು ಕಾರ್ಯಕರ್ತೆಯರಿಗೆ ನಿರಾಶೆ ಮೂಡಿಸಿದೆ ಎಂದು ಪ್ರತಿಭಟನಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕೂ ಮುನ್ನ ಹೊರತಂದಿದ್ದ ಪ್ರಣಾಳಿಕೆಯಲ್ಲಿ ಆರನೇ ಗ್ಯಾರಂಟಿಯಾಗಿ ಅಂಗನವಾಡಿ, ಬಿಸಿಯೂಟ ಹಾಗೂ ಆಶಾ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸುವ ಪ್ರಸ್ತಾವ ಮಾಡಲಾಗಿತ್ತು. ಪ್ರಿಯಾಂಕಾ ಗಾಂಧಿ ಅವರ ಸಮ್ಮುಖದಲ್ಲಿ ಆರನೇ ಗ್ಯಾರಂಟಿ ಘೋಷಣೆ ಮಾಡಲಾಗಿತ್ತು. ಮುಂದಿನ ಮೇ ತಿಂಗಳಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷ ಆಗಲಿದೆ. ಆದರೂ, ಆರನೇ ಗ್ಯಾರಂಟಿ ಅನುಷ್ಠಾನಕ್ಕೆ ತಂದಿಲ್ಲ ಎಂದು ಆಪಾದಿಸಿದರು. ಸೀರೆ ವಿತರಣೆಯ ಬದಲಿಗೆ ಗೌರವಧನವನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿದರು.



ಎಐಟಿಯುಸಿ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

295 ಮಂದಿಗೆ ದಂಡ, 40 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಉತ್ತರ ಉಪ ವಿಭಾಗದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗಿದ್ದು, 295 ಮಂದಿಗೆ ದಂಡ ವಿಧಿಸಲಾಗಿದೆ. ಜತೆಗೆ, 40 ಪ್ರಕರಣ ದಾಖಲು ಮಾಡಲಾಗಿದೆ.

13 ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಹಾಗೂ ಶನಿವಾರ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆ ವೇಳೆ ನಿಷೇಧಿತ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿರುವುದು ಹಾಗೂ ಅಂಗಡಿಗಳ ಪ್ರವೇಶ ದ್ವಾರದಲ್ಲಿ ಸಿಗರೇಟ್, ಬೀಡಿಗಳ ಜಾಹೀರಾತುಗಳನ್ನು ಕಾನೂನು ಬಾಹಿರವಾಗಿ ಪ್ರಕಟಣೆ ಮಾಡಿರುವುದು ಕಂಡುಬಂತು. ಕೋಟ್ಪಾ ಕಾಯ್ದೆ (ಸಿಗರೇಟ್ ಮತ್ತಿತರ ತಂಬಾಕು ಉತ್ಪನ್ನಗಳ ಕಾಯ್ದೆ) ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲು ಮಾಡಲಾಯಿತು ಎಂದು ಪೊಲೀಸರು ಹೇಳಿದರು.

ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ಅವರ ನೇತೃತ್ವದಲ್ಲಿ 13 ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ನಾಯಿ ವಾಕಿಂಗ್: ಹೊಡೆದಾಟ

ಅಪಾರ್ಟ್‌ಮೆಂಟ್ ಆವರಣದಲ್ಲಿ ಗಲಾಟೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಿಯನ್ನು ವಾಕಿಂಗ್‌ಗೆ ಕರೆದೊಯ್ದ ವಿಚಾರಕ್ಕೆ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಬ್ರಿಗೇಡ್ ಯುಟೋಪಿಯಾದ ಈಸ್ಟ್ ಆ್ಯಂಪಿಥಿಯೇಟರ್‌ನಲ್ಲಿ ಪರಸ್ಪರ ಹೊಡೆದಾಟ ನಡೆದಿದ್ದು ಪ್ರಕರಣವು ಠಾಣೆಯ ಮೆಟ್ಟಿಲೇರಿದೆ.

ಅಪಾರ್ಟ್‌ಮೆಂಟ್‌ನ ನಿವಾಸಿ ತರುಣ್ ಅರೋರ ಅವರು ನೀಡಿದ ದೂರಿನ ಮೇರೆಗೆ ಓಂ ಪ್ರಕಾಶ್ ಬಾಜಪೈ, ಅನಿಲ್ ಕುಮಾರ್ ಸಿಂಹ ಮತ್ತಿತರರ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಓಂ ಪ್ರಕಾಶ್ ಬಾಜಪೈ ಅವರ ಪತ್ನಿ ಶಶಿ ನೀಡಿದ ದೂರಿನ ಮೇಲೆ ಅದೇ ಠಾಣೆಯಲ್ಲಿ ತರುಣ್ ಅರೋರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಎರಡೂ ಕಡೆಯವರ ದೂರು–ಪ್ರತಿದೂರು ಪಡೆದುಕೊಂಡು ಎಫ್‌ಐಆರ್ ದಾಖಲು ಮಾಡಲಾಗಿದೆ. ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ತರುಣ್ ಅರೋರ ದೂರಿನಲ್ಲಿ ಏನಿದೆ?: ಮಾರ್ಚ್ 3ರ ಬೆಳಿಗ್ಗೆ 7.45ರ ಸುಮಾರಿಗೆ ಬ್ರಿಗೇಡ್ ಯುಟೋಪಿಯಾದ ಈಸ್ಟ್ ಆ್ಯಂಪಿಥಿಯೇಟರ್ ಸ್ಥಳದಲ್ಲಿ ನಾಯಿಯನ್ನು ಕರೆದುಕೊಂಡು ಹೋಗುತ್ತಿದೆ. ಅದೇ ಸ್ಥಳದಲ್ಲಿ ಕೆಲವು ಹಿರಿಯ ನಾಗರಿಕರು ಇದ್ದರು. ಅವರನ್ನು ಗಮನಿಸದೇ ಮುಂದಕ್ಕೆ ಹೋಗಿದ್ದೆ. ನನ್ನನ್ನು ತಡೆದು, ಈ ಪ್ರದೇಶದಲ್ಲಿ ನಾಯಿಯನ್ನು ಕರೆದುಕೊಂಡು ಬರಬಾರದು ಎಂದು ಹೇಳಿದ್ದರು. ಆಗ ಇದು ಸಾಮಾನ್ಯ ಪ್ರದೇಶವಾಗಿದ್ದು, ಯಾರಿಗೂ ಅಡ್ಡಿಯಾಗುವುದಿಲ್ಲ ಎಂದು ಪ್ರತಿಕ್ರಿಯಿಸಿದ್ದೆ. ಆಗ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ನಿಂದನೆ ತೀವ್ರಗೊಂಡ ಮೇಲೆ ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದೆ. ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಲು ಮುಂದಾದ ವೇಳೆ ಓಂ ಪ್ರಕಾಶ್ ಬಾಜಪೈ ಅವರು ಮೊಬೈಲ್ ಕಸಿದುಕೊಂಡರು. ಅದಾದ ಮೇಲೆ ಆರು ಮಂದಿ ಬಂದು ಹಲ್ಲೆ ನಡೆಸಿದ್ದರು’ ಎಂದು ತರುಣ್ ಅರೋರ ದೂರು ನೀಡಿದ್ದಾರೆ. ಇದಕ್ಕೆ ಶಶಿ ಅವರು ಪ್ರತಿ ದೂರು ನೀಡಿದ್ದಾರೆ.

ಜೀವ ಬೆದರಿಕೆ: ‘ಅಪಾರ್ಟ್‌ಮೆಂಟ್ ಆವರಣದ ಈಸ್ಟ್ ಆ್ಯಂಪಿಥಿಯೇಟರ್ ಪ್ರದೇಶದಲ್ಲಿ ಅಸೋಸಿಯೇಷನ್ ವತಿಯಿಂದ ನಿಗದಿಪಡಿಸಿರುವ ಸ್ಥಳದಲ್ಲಿ ಯೋಗ ಹಾಗೂ ವ್ಯಾಯಾಮ ಮಾಡುತ್ತಿದ್ದೆವು. ತರುಣ್ ಅರೋರ ಅವರು ಯೋಗ ಮಾಡುತ್ತಿದ್ದ ಸ್ಥಳಕ್ಕೆ ನಾಯಿ ಕರೆದುಕೊಂಡು ಬಂದಿದ್ದರು. ನಾವು ಕುಳಿತುಕೊಳ್ಳುವ ಸ್ಥಳವನ್ನು ನಾಯಿ ಅಶುದ್ಧಗೊಳಿಸಿತ್ತು. ಸಾಕುನಾಯಿಗಳನ್ನು ವಾಕಿಂಗ್‌ಗೆ ಕರೆದೊಯ್ಯಲು ಪ್ರತ್ಯೇಕ ವ್ಯವಸ್ಥೆಯಿದ್ದರೂ ಉದ್ದೇಶಪೂರ್ವಕವಾಗಿ ಅದೇ ಸ್ಥಳಕ್ಕೆ ಬರುತ್ತಿದ್ದರು. ಹಲವು ಬಾರಿ ವಿನಂತಿ ಮಾಡಿಕೊಂಡರೂ ನಮ್ಮ ಮಾತಿಗೆ ಬೆಲೆ ನೀಡಿರಲಿಲ್ಲ. ಫೋಟೊ ತೆಗೆದುಕೊಳ್ಳಬೇಡಿ ಎಂದು ತಡೆಯಲು ಯತ್ನಿಸಿದಾಗ ಅವರ ಮೊಬೈಲ್ ಕೆಳಕ್ಕೆ ಬಿತ್ತು. ಇದರಿಂದ ಕೋಪಗೊಂಡ ತರುಣ್ ಅರೋರ ಅವರು ಓಂ ಪ್ರಕಾಶ್ ಬಾಜಪೈ ಅವರ ಮೇಲೆ ಹಲ್ಲೆ ನಡೆಸಲು ಯತ್ನಿಸಿದ್ದರು’ ಎಂದು ಶಶಿ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಅದೇ ಸ್ಥಳದಲ್ಲಿದ್ದ ಇತರೆ ನಾಗರಿಕರ ಮೇಲೂ ತರುಣ್ ಹಲ್ಲೆ ನಡೆಸಿದ್ದಾರೆ. ಜತೆಗೆ ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ರಜತ್ ವಿರುದ್ಧ ಮತ್ತೊಂದು ಎಫ್‌ಐಆರ್

ಬೆಂಗಳೂರು: ರಿಯಾಲಿಟಿ ಶೋ ಮಾಜಿ ಸ್ಪರ್ಧಿ ‘ಡಾಗ್’ ಸತೀಶ್ ಅವರಿಗೆ ಕೊಲೆ ಬೆದರಿಕೆ ಹಾಕಿದ್ದ ಆರೋಪದ ಮೇಲೆ ಅದೇ ರಿಯಾಲಿಟಿ ಶೋನ ಮಾಜಿ ಸ್ಪರ್ಧಿ ರಜತ್ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ. ಡಾಗ್ ಸತೀಶ್ ಅವರು ನೀಡಿದ ದೂರಿನ ಮೇಲೆ ಚಾಮರಾಜಪೇಟೆ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಾಗಿದೆ. ಬಿಎನ್‌ಎಸ್ ಸೆಕ್ಷನ್ 351 ಹಾಗೂ 352ರ ಅಡಿ ರಜತ್ ಮತ್ತು ಧನರಾಜ್ ಅವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಸವಾಲು ಮೆಟ್ಟಿ ಉದ್ಯಮ ಕಟ್ಟಿ...



ಚಿತ್ರ: ಕಣಕಾಲಮಠ

ಒಂದನೇ ಪುಟದಿಂದ..

'ದಿನದ ಮೂರು ಪಾಳಿಯಲ್ಲಿಯೂ ಕೆಲಸ ಮಾಡುವಂಥ ಸಾಮರ್ಥ್ಯದ ಜತೆಗೆ ಅದಕ್ಕೆ ಪೂರಕವಾದಂತಹ ವಾತಾವರಣವನ್ನು ಸೃಷ್ಟಿಸಿಕೊಳ್ಳಬೇಕು. ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮಹಿಳೆಯರು ಗಟ್ಟಿಯಾಗಿದ್ದರೆ ಯಾವ ಕ್ಷೇತ್ರದಲ್ಲಿ ಬೇಕಿದ್ದರೂ ಭವಿಷ್ಯ ರೂಪಿಸಿ-ಕೊಳ್ಳಬಹುದು' ಎನ್ನುತ್ತಾರೆ ಅವರು.

'ಯಾವುದೇ ಉದ್ಯಮ ಆರಂಭಿಸುವ ಮುನ್ನ ತರಬೇತಿ ಬೇಕು. ಅದು ಉದ್ಯಮದ ಎಲ್ಲ ಆಯಾಮಗಳನ್ನು ಅರ್ಥೈಸಿಕೊಳ್ಳಲು ಸಹಕಾರಿ. ಲಾಭ–ನಷ್ಟ ಎನ್ನುವುದಕ್ಕಿಂತ ಸತತ ಪ್ರಯತ್ನ, ಶ್ರಮ ಮತ್ತು ತನ್ನ ಉತ್ಪನ್ನದ ಮೇಲಿನ ನಂಬಿಕೆ, ಸಮಯಕ್ಕೆ ತಕ್ಕಂತೆ ಉತ್ಪನ್ನಗಳ ಮಾರ್ಪಾಡು ಮಾಡುವುದು ಯಶಸ್ಸನ್ನು ತಂದುಕೊಡುತ್ತದೆ' ಎನ್ನುತ್ತಾರೆ ಆಶಾ ಕೆಮಿಕಲ್ಸ್‌ನ ಮಾಲೀಕರಾದ ಆಶಾ ಎನ್.ಆರ್.

ಉದ್ಯಮದಲ್ಲಿ ನಿರಂತರ ಯಶಸ್ಸು ಸಾಧಿಸಲು ಕೌಟುಂಬಿಕ, ಸಾಮಾಜಿಕ ಬೆಂಬಲ ಅತ್ಯಗತ್ಯ ಎನ್ನುವ ಮಹಿಳಾ ಉದ್ಯಮಿಗಳು, ಪುರುಷರನ್ನು ಒಪ್ಪಿಕೊಂಡಂತೆ ಮಹಿಳೆಯರನ್ನೂ ಒಪ್ಪಿಕೊಳ್ಳಬೇಕಿದೆ. ಯಾವುದೇ ಕ್ಷೇತ್ರದಲ್ಲಿ ಪುರುಷ ಒಮ್ಮೆ ತನ್ನ ಸಾಮರ್ಥ್ಯ ಸಾಬೀತುಪಡಿ-ಸಿದರೆ ಸಮಾಜ ಆತನನ್ನು ಸುಲಭವಾಗಿ ಒಪ್ಪಿಕೊಳ್ಳುತ್ತದೆ. ಆದರೆ, ಮಹಿಳೆ ನಿರಂತರವಾಗಿ ತನ್ನ ಸಾಮರ್ಥ್ಯ ಸಾಬೀತು-ಪಡಿಸಬೇಕಾದ ಅನಿವಾರ್ಯತೆ ಎಲ್ಲಾ ಕ್ಷೇತ್ರದಲ್ಲಿದೆ.

ಉದ್ಯಮಿಗಳ ಮೂಲಸೌಕರ್ಯಕ್ಕೆ ಬಂದಾಗ ಜಮೀನು, ಬಂಡವಾಳ, ವಿದ್ಯುತ್, ಬೇಡಿಕೆ ಇತ್ಯಾದಿಗಳ ಬಗ್ಗೆಯಷ್ಟೇ ಯೋಚಿಸುವ ವ್ಯವಸ್ಥೆ, ಮಹಿಳಾ ಉದ್ಯಮಿಗಳು ನಿಭಾಯಿಸಬೇಕಾದ ಸಾಮಾಜಿಕ ಜವಾಬ್ದಾರಿ– ಕುಟುಂಬ ವ್ಯವಸ್ಥೆಗೆ ಪೂರಕವಾದ ಸೌಕರ್ಯ ಕಲ್ಪಿಸುವ ಬಗ್ಗೆಯೂ ಯೋಚಿಸಬೇಕಿದೆ. ಹಾಗಿದ್ದರೆ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಉದ್ಯಮ ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸಬಲ್ಲರು ಅನ್ನುವುದು ಮಹಿಳಾ ಉದ್ಯಮಿಗಳ ಒಕ್ಕೊರಲ ಅಭಿಮತ.

ಸವಾಲುಗಳ ನಡುವೆಯೂ ಸದ್ದಿಲ್ಲದೇ ಉದ್ಯಮ ಕಟ್ಟಿ 'ಯಶಸ್ವಿನಿ'ಯರಾದ ಸ್ಫೂರ್ತಿದಾಯಕ ಕಥನಗಳು ಇಲ್ಲಿವೆ.

ಗಟ್ಟಿಯಾಗಿದ್ದರೆ ಮಾತ್ರ ಭವಿಷ್ಯ



ಇಂಡಸ್ಟ್ರಿಯಲ್ ಆಟೊಮೇಷನ್ ಕ್ಷೇತ್ರದಲ್ಲಿ 25 ವರ್ಷಗಳಿಂದ ಯಶಸ್ವಿ ಉದ್ಯಮಿಯಾಗಿ, ಔದ್ಯಮಿಕ ಕಾರ್ಯತಂತ್ರ ಸಲಹೆಗಾರರಾಗಿ ಹಾಗೂ ಪ್ರತಿಷ್ಠಿತ ಸಂಸ್ಥೆ ಇನ್‌ಸೈಟ್ ಕ್ಯಾಮ್ ಸೆಂಟರ್‌ನ ಸಂಸ್ಥಾಪಕರಾಗಿ ಗುರುತಿಸಿಕೊಂಡವರು ಹೇಮಾಮಾಲಿನಿ ಕೆ.ಆರ್.

ಕಂಪ್ಯೂಟರ್ ಏಡೆಡ್ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್‌ನಲ್ಲಿ (ಕ್ಯಾಡ್ ಕ್ಯಾಮ್ –ಸಿಎಡಿ ಸಿಎಎಂ) ನಿಪುಣತೆ ಸಾಧಿಸಿರುವ ಇವರು, ಇನ್‌ಸೈಟ್ ಕ್ಯಾಮ್ ಸೆಂಟರ್‌ನ ಮೂಲಕ ಆಟೊಮೊಟೀವ್, ಎಲೆಕ್ಟ್ರಿಕಲ್ ಆ್ಯಂಡ್ ಎಲೆ-ಕ್ಟ್ರಾನಿಕ್ಸ್ ಹಾಗೂ ಮೆಡಿಕಲ್ ಎಕ್ವಿಪ್‌ಮೆಂಟ್–ಪವರ್ ಟೂಲ್ ಕ್ಷೇತ್ರಗಳಿಗೆ ಅಗತ್ಯವಿರುವ ಬಿಡಿಭಾಗಗಳ ಉತ್ಪಾದನೆ ಮತ್ತು ಪೂರೈಕೆ ಮಾಡುವ ಯಶಸ್ವಿ ಉದ್ಯಮವನ್ನು ನಿರ್ವಹಿಸುತ್ತಿದ್ದಾರೆ. ಬಾಷ್, ಎಬಿಬಿ, ಜಿಇ, ಟೊಯೊಟಾ, ಮಾರುತಿ, ಫೀಟ್, ಟಿವಿಎಸ್, ಎನ್‌ಫೀಲ್ಡ್ ಸೇರಿದಂತೆ ಹಲವು ಪ್ರಖ್ಯಾತ ಸಂಸ್ಥೆಗಳ ಪಾಲುದಾರ ಸಂಸ್ಥೆಯಾಗಿ 'ಇನ್ಸೈಟ್ ಕ್ಯಾಮ್ ಸೆಂಟರ್' ಕಾರ್ಯ-ನಿರ್ವಹಿಸುತ್ತಿದ್ದು, ಪ್ರತಿಷ್ಠಿತ ವಿಪ್ರೊ ಸಂಸ್ಥೆಯೊಂದಿಗೂ ಕಾರ್ಯನಿರ್ವಹಿಸಿದ ಖ್ಯಾತಿಗೆ ಪಾತ್ರವಾಗಿದೆ.

ಹೇಮಾಮಾಲಿನಿ ಅವರು ಸಂಸ್ಥೆ ಆರಂಭಿಸಿದ್ದು ಗೆಳತಿ ರಾಧಿಕಾ ಜತೆಗೂಡಿ. ಸಂಸ್ಥೆಯಲ್ಲಿರುವ 150 ಉದ್ಯೋಗಿಗಳ ಪೈಕಿ ಅರ್ಧದಷ್ಟು ಮಹಿಳಾ ಉದ್ಯೋಗಿಗಳಿರುವುದು ವಿಶೇಷ. ಅಷ್ಟೇ ಅಲ್ಲ, ಇಂಟರ್ನಿಗಳಲ್ಲೂ ಹೆಣ್ಣುಮಕ್ಕಳಿಗೇ ಹೆಚ್ಚು ಅವಕಾಶ.

'ಉದ್ಯಮದ ಆಳ ಅಗಲ ಅರಿತು ಕಾಲಿಡುವುದು ಮುಖ್ಯ, ಆತುರದಲ್ಲಿ ನಿರ್ಧಾರ ತೆಗೆದುಕೊಂಡು ಉದ್ಯಮ ಸ್ಥಾಪಿಸುವ ಧಾವಂತಕ್ಕೆ ಬೀಳಬೇಡಿ. ಈ ಕ್ಷೇತ್ರದಲ್ಲಿ ನಾನೆಷ್ಟು ಬೆಳೆಯಬಹುದು? ಸ್ಪರ್ಧೆ ಎಷ್ಟಿದೆ? ಎಷ್ಟು ವೆಚ್ಚ, ಬೆಲೆ ನಿಗದಿಪಡಿಸಿದರೆ ಲಾಭ ಸಾಧ್ಯ? ಉದ್ಯೋಗಿಗಳಿಂದ ಕೆಲಸ ತೆಗೆಯುವುದು ಹೇಗೆ? ಗ್ರಾಹಕರ ನಿರೀಕ್ಷೆ ಏನು? ಅತ್ಯುತ್ತಮ ಗುಣಮಟ್ಟದಲ್ಲಿ ಉತ್ಪಾದನೆ ಸಾಧ್ಯವೇ? ಅದಕ್ಕೆ ಪೂರಕವಾಗಿ ಯಾವೆಲ್ಲಾ ತಯಾರಿ ಮಾಡಿಕೊಳ್ಳಬೇಕು? ಹಣದ ಮೂಲ ಯಾವುದು ಎಂಬುದೂ ಸೇರಿದಂತೆ ಪ್ರತಿಯೊಂದು ವಿಚಾರವನ್ನೂ ತಿಳಿದ ಬಳಿಕವಷ್ಟೇ ಉದ್ಯಮ ಸ್ಥಾಪಿಸಿ. ಮುಂದಿನ ಐದು ವರ್ಷದಲ್ಲಿ ಈ ಉದ್ಯಮದ ಭವಿಷ್ಯವನ್ನು ಹೇಗೆ ರೂಪಿಸಬಲ್ಲೆ ಎಂಬ ಅರಿವು ಇರಲೇಬೇಕು' ಅನ್ನುವುದು ಹೇಮಾಮಾಲಿನಿ ಅವರ ಅಭಿಮತ.

ಸ್ವಾವಲಂಬನೆ ಕಲಿಸಿದ ಕಸೂತಿ ಕಲೆ



ಬಾಗಲಕೋಟೆಯ ಹಳೆಪೇಟೆಯ ದಾಕ್ಷಾಯಣಿ ಲೋಕಾಪುರ ಓದಿದ್ದು ಪಿಯುಸಿ. ಅವರೂ ಮದುವೆ, ಮನೆ, ಸಂಸಾರ ಎಂದು ಜೀವನ ಸಾಗಿಸುತ್ತಿ-ದ್ದರು. ಸ್ವಾವಲಂಬಿ ಆಗುವ ಇಚ್ಛೆ ಸದಾ ಜಾಗೃತವಾಗಿತ್ತು. ಹೀಗಿರುವಾಗಲೇ ಒಮ್ಮೆ 1997ರಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು 'ಅವೇಕ್' ಸಹಯೋಗದಲ್ಲಿ ಆಯೋಜಿಸಿದ್ದ ಕಸೂತಿ ತರಬೇತಿಯಲ್ಲಿ ಪಾಲ್ಗೊಂಡಿದ್ದರು. ಈ 21 ದಿನಗಳ ತರಬೇತಿಯು ದಾಕ್ಷಾಯಣಿ ಅವರ ಜೀವನದ ದಿಕ್ಕನ್ನೇ ಬದಲಾಯಿಸಿತು.

ತರಬೇತಿಯಲ್ಲಿ ಪಾಲ್ಗೊಂಡಿದ್ದ ಮೂರ್ನಾಲ್ಕು ಮಹಿಳೆಯರು ಸೇರಿ ಮೊದಲಿಗೆ ಲಂಗ, ಪೆಟಿಕೋಟು, ನೈಟಿ ಹೊಲಿದು ಮಾರಾಟ ಮಾಡಲು ಆರಂಭಿಸಿದರು. ಮೊದಮೊದಲು 'ಇದೇನು ಹೊಲಿತೀರವ್ವಾ' ಎಂಬ ಮೂದಲಿಕೆ ಕೇಳಿಬಂತು. ತಪ್ಪುಗಳನ್ನು ತಿದ್ದಿಕೊಂಡ ದಾಕ್ಷಾಯಣಿ ಮತ್ತು ಅವರ ತಂಡವು ಕಾಯಕವನ್ನು ಮುಂದುವರಿಸಿತು. ಹೆಚ್ಚೆಚ್ಚು ಆರ್ಡರ್ ಬರಲು ಶುರುವಾಯಿತು, ಹೊಸ ಉದ್ಯೋಗ ಕೈಹಿಡಿಯಿತು.

ಇಳಕಲ್ ಸೀರೆಗಳ ಪ್ರದರ್ಶನದಲ್ಲಿ ಭಾಗಿಯಾಗುವ ಅವಕಾಶ ಬಂದಾಗ ಅದರಲ್ಲಿ ಪಾಲ್ಗೊಳ್ಳಲು ಮಗ್ಗದವರು ಆಸಕ್ತಿ ತೋರಲಿಲ್ಲ. ಆಗ ಸ್ವತಃ ದಾಕ್ಷಾಯಣಿ ಅವರೇ ಮಗ್ಗದವರಿಂದ ನೇರವಾಗಿ ಸೀರೆ ಖರೀದಿಸಿ ಚಿತ್ರಕಲಾ ಪರಿಷತ್ ಬೆಂಗಳೂರಿನಲ್ಲಿ ಆಯೋಜಿಸಿದ್ದ ಪ್ರದರ್ಶನದಲ್ಲಿ ಪಾಲ್ಗೊಂಡರು. ಇದು ಉದ್ಯಮ ಕಟ್ಟುವ ಅವರ ಇಂಗಿತಕ್ಕೆ ದಿಕ್ಸೂಚಿಯಾಯಿತು. ನಂತರ 'ಸಖಿ ಸಾರಿ ಕ್ರಿಯೇಷನ್ಸ್' ಆರಂಭಿಸಿ ಸೀರೆಗಳ ಮಾರಾಟ ಆರಂಭಿಸಿದರು. ಮಹಿಳೆಯರಿಗೆ ಹೊಲಿಗೆ ಸೇರಿದಂತೆ ವಿವಿಧ ಕೌಶಲಗಳ ತರಬೇತಿ ನೀಡುವ ಉದ್ದೇಶದಿಂದ ಸುರಕ್ಷಿತ ಮಹಿಳಾ ಅಭಿವೃದ್ಧಿ ಸಂಘ ಸ್ಥಾಪಿಸಿ, ನೆರೆಹೊರೆಯ ಮಹಿಳೆಯರಿಗೂ ಹೊಲಿಗೆ, ಕಸೂತಿ ತರಬೇತಿ ನೀಡಿದರು. ಕುಗ್ರಾಮಗಳ ಮಹಿಳೆಯರಿಗೆ ಉದ್ಯೋಗವನ್ನೂ ನೀಡಿದರು. ಸಂಘವು ಈವರೆಗೆ 3,000ಕ್ಕೂ ಹೆಚ್ಚು ಮಹಿಳೆಯರಿಗೆ ತರಬೇತಿ ನೀಡಿದೆ. ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಹೊಲಿಗೆ ಯಂತ್ರಗಳನ್ನು ಕೊಡಿಸುವ ಕೆಲಸವನ್ನೂ ಮಾಡುತ್ತಿದೆ. ಉದ್ಯಮವು ಕೊರೊನಾ ಸಂದರ್ಭದಲ್ಲಿ ಅಲ್ಪ ಹಿನ್ನಡೆ ಅನುಭವಿಸಿತು. ಅನಂತರ ಮತ್ತೆ ಅಲ್ಪಮಟ್ಟಿಗೆ ಚೇತರಿಸಿಕೊಂಡಿತು. ದಾಕ್ಷಾಯಣಿ ಅವರು ದೇಶ–ವಿದೇಶಗಳ ವಿವಿಧ ಪ್ರದರ್ಶನಗಳಲ್ಲಿ ಮಳಿಗೆ ತೆರೆದು ಯಶಸ್ವಿಯಾಗಿದ್ದಾರೆ.

ಹೊಲಿಗೆಯಿಂದ ಗೆಲುವಿನೆಡೆಗೆ...



ಏನಾದರೂ ಸಾಧನೆ ಮಾಡಬೇಕು, ಮಗಳನ್ನು ಚೆನ್ನಾಗಿ ಓದಿಸಬೇಕು, ಆರ್ಥಿಕವಾಗಿ ಗಟ್ಟಿಯಾಗಿ ನಿಲ್ಲಬೇಕೆಂಬ ಹಟದಿಂದ ಸೀರೆ ಉದ್ಯಮದಿಂದ ನಂತರ ಬ್ಯಾಗ್ ಉದ್ಯಮ ಆರಂಭಿಸಿದವರು ಧಾರವಾಡದ ರತಿ ಶ್ರೀನಿವಾಸ್.

ರತಿ ಕ್ರಿಯೇಷನ್ಸ್ ಹೆಸರಿನಡಿ 1984ರಲ್ಲಿ ಸೀರೆ ವ್ಯಾಪಾರದ ಪುಟ್ಟ ಉದ್ಯಮ ಆರಂಭಿಸಿ, ನಂತರ ಕ್ವಿಲ್ಟ್ ಬ್ಯಾಗ್ ತಯಾರಿಕೆಗೆ ಅಡಿಯಿಟ್ಟ ರೀತಿ ಇವರು, ವಾರ್ಷಿಕ ಸುಮಾರು ಒಂದು ಕೋಟಿ ರೂಪಾಯಿ ವ್ಯವಹಾರ ನಡೆಸುತ್ತಿದ್ದಾರೆ.

ಆರಂಭದಲ್ಲಿ ಮುಂಬೈನಿಂದ ಬ್ಯಾಗ್‌ಗಳನ್ನು ತರಿಸಿ ಮಾರಾಟ ಮಾಡುತ್ತಿದ್ದ ಅವರಲ್ಲಿ, ನಂತರ ಬ್ಯಾಗ್‌ಗಳಿಗಿರುವ ಬೇಡಿಕೆ ಕಂಡು ನಾನೇ ಯಾಕೆ ಈ ರೀತಿಯ ಉದ್ಯಮ ಆರಂಭಿಸಬಾರದು ಎನ್ನುವ ಛಲ ಹುಟ್ಟಿತು. ಅಲ್ಲದೆ ಸೀರೆ ಕೊಳ್ಳಲು ಬಂದವರಿಗೂ ಬ್ಯಾಗ್‌ಗಳನ್ನು ನೀಡಬೇಕಿತ್ತು. ಇವೆಲ್ಲವನ್ನೂ ಯೋಚಿಸಿ ರತಿ ಕ್ರಿಯೇಶನ್ಸ್‌ನಡಿಯೇ ಬ್ಯಾಗ್ ತಯಾರಿಕೆ ಆರಂಭಿಸಿದರು. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ₹ 50 ಸಾವಿರ ಸಾಲ ಪಡೆದು ಉದ್ಯಮವನ್ನು ಕಟ್ಟಿದರು.

ಗ್ರಾಹಕರು ಅವರ ಮನೆಗೆ ಬಂದು ಇದೇ ರೀತಿಯ ವಿನ್ಯಾಸದ ಬ್ಯಾಗ್‌ಗಳು ಬೇಕು ಎಂದು ಹೇಳಿ ಹೊಲಿಸಿಕೊಂಡು ಹೋಗುತ್ತಾರೆ. ಅವರಿರುವುದು ಧಾರವಾಡದಲ್ಲಿ, ಆದರೆ ಬ್ಯಾಗ್‌ಗಳು ತಯಾರಾಗುವುದು ಕಲಬುರಗಿಯಲ್ಲಿ. ಬ್ಯಾಗ್‌ಗಳ ಮಾರಾಟ ಋತುಮಾನಕ್ಕೆ ತಕ್ಕಂತೆ ಇರುತ್ತದೆ.

'ಮೇಳಗಳಲ್ಲಿ ಮಳಿಗೆಗಳನ್ನು ಹಾಕುವ ಮೂಲಕ ಜನರನ್ನು ತಲುಪುವ ಪ್ರಯತ್ನ ಮಾಡುತ್ತೇವೆ. 'ವೇದ' ಎನ್ನುವ ಸಂಘ ರೂಪಿಸಿದ್ದೇವೆ. ಇದರಡಿ ಅನೇಕ ಮಹಿಳೆಯರು ಉದ್ಯಮ ಆರಂಭಿಸಿ ಆರ್ಥಿಕವಾಗಿ ಸಬಲರಾಗಿದ್ದಾರೆ. ಇದಲ್ಲದೆ ಧಾರವಾಡದಲ್ಲಿ 'ಕ್ಲೌಡ್ ಕಿಚನ್' ಕೂಡ ಆರಂಭಿಸಲಾಗಿದ್ದು, ಊಟ, ತಿಂಡಿಯನ್ನೂ ಮನೆಮನೆಗೆ ತಲುಪಿಸುತ್ತೇವೆ' ಎಂದು ಮುಗುಳ್ನಕ್ಕರು ರತಿ.

ವಯಸ್ಸು ಮಾನದಂಡವಲ್ಲ



'ಮೊದಲಿನಿಂದಲೂ ಏನಾದರೂ ಮಾಡಬೇಕು ಎನ್ನುವ ತುಡಿತ ಇತ್ತು. ಸಂಸಾರದ ಜವಾಬ್ದಾರಿಗಳ ನಡುವೆ ಇದು ಸಾಧ್ಯವಾಗಿರಲಿಲ್ಲ. ಮಕ್ಕಳು ದೊಡ್ಡವರಾದ ಮೇಲೆ ಈ ಬಗ್ಗೆ ಕೈಗೊಂಡ ಗಟ್ಟಿ ನಿರ್ಧಾರ ನನ್ನನ್ನು ಈ ಹಂತಕ್ಕೆ ಬೆಳೆಸಿದೆ' ಇದು 40ನೇ ವಯಸ್ಸಿನ ಬಳಿಕ ಇಂದಿರಾ ಫುಡ್ಸ್ ಎನ್ನುವ ಉದ್ಯಮ ಕಟ್ಟಿ ಯಶಸ್ವಿ ಉದ್ಯಮಿಯಾಗಿ ಬೆಳೆದ ಇಂದಿರಾ ಚನ್ನೇಗೌಡ ಅವರ ಮಾತು.

ಬಿ.ಎಸ್ಸಿ ಪದವೀಧರೆಯಾಗಿದ್ದ ಇಂದಿರಾ ಅವರಿಗೆ ಉದ್ಯಮದ ಬಗ್ಗೆ ಅರಿವಿರಲಿಲ್ಲ. ಆದರೆ ಆಸಕ್ತಿ ಇತ್ತು. ಅದಕ್ಕಾಗಿ ಅವರು 'ಅವೇಕ್' ಸಂಸ್ಥೆಯಿಂದ ತರಬೇತಿ ಪಡೆದರು. ಅಜ್ಜಿ ಮಾಡುತ್ತಿದ್ದ ರಾಗಿ ಹುರಿಹಿಟ್ಟು ತಯಾರಿಕೆಯನ್ನೇ ಉದ್ಯಮವಾಗಿ ಪ್ರಾರಂಭಿಸಿದರು. ಒಂದು ಉತ್ಪಾದನೆಗೆ ಮಾತ್ರ ಸೀಮಿತವಾಗದೇ ನಂತರ ಉಪ್ಪಿನಕಾಯಿ, ಜಾಮೂನ್ ಉತ್ಪಾದ-ನೆಯನ್ನೂ ಆರಂಭಿಸಿದರು. ವರ್ಷದ ಬಳಿಕ ಉದ್ಯಮವನ್ನು ಸಮರ್ಥವಾಗಿ ಮುನ್ನಡೆಸಬಲ್ಲೆ ಎಂಬ ವಿಶ್ವಾಸ ಮೂಡಿದಾಗ ಉತ್ಪನ್ನಗಳನ್ನು 'ಅವೇಕ್' ಸಿಬ್ಬಂದಿಗಷ್ಟೇ ಅಲ್ಲ, ಅಂಗಡಿಗಳಿಗೂ ಕೊಡಲಾರಂಭಿಸಿದರು.

ಬೇಡಿಕೆ ಇಲ್ಲದ ಕಾರಣಕ್ಕೆ ಮಾನಸಿಕವಾಗಿ ಕುಗ್ಗಿದ್ದ ಇಂದಿರಾ ಅವರು 'ಜನತಾ ಬಜಾರ್' ಮೊರೆ ಹೋದರು. ಅಲ್ಲಿ ಇಂದಿರಾ ಅವರ ಉತ್ಪನ್ನಗಳು ಜನರ ಕಣ್ಣಿಗೆ ಬಿತ್ತು. ನಿಧಾನವಾಗಿ ಮಾರಾಟ ಹೆಚ್ಚಾಗಿ ಸ್ವಂತ ಘಟಕದತ್ತ ಚಿತ್ತ ಹರಿಸಿದರು. ಆರಂಭದಲ್ಲಿ ಕಾರು ಶೆಡ್‌ನಲ್ಲೇ ಘಟಕ ಆರಂಭಿಸಿದರು. ಬಳಿಕ ಪತಿ ದೊಡ್ಡ ಮಟ್ಟದ ಘಟಕ ನಿರ್ಮಾಣಕ್ಕೆ ಸಹಕಾರ ನೀಡಿದರು.

ರಾಗಿಹುರಿಹಿಟ್ಟಿನ ಜತೆಗೆ ರಾಗಿ ದೋಸೆ ಹಿಟ್ಟು, ರಾಗಿ ರೆಡಿ ಮಿಕ್ಸ್ ಉತ್ಪನ್ನಗಳನ್ನು ಮಾಡಲು ಆರಂಭಿಸಿದರು. ಕೇಟರಿಂಗ್ ಸಂಸ್ಥೆಗಳಿಂದ ಉಪ್ಪಿನಕಾಯಿಗೆ ಬೇಡಿಕೆ ಹೆಚ್ಚಾಯಿತು. ಎರಡು ಮೂರು ವರ್ಷಗಳ ಬಳಿಕ ದೊಡ್ಡಮಗ ಅವರ ಉದ್ಯಮದಲ್ಲಿ ಜೊತೆಯಾದ. ಅಲ್ಲಿಂದ ಯಶಸ್ಸಿನ ಯಾನ ಆರಂಭವಾಯಿತು. ಚಿಕ್ಕಮಗನೂ ಜೊತೆಗೂಡಿ ಇನ್ನೊಂದು ಘಟಕವನ್ನು ಆರಂಭಿಸಿ ಮಾರುಕಟ್ಟೆಯನ್ನು ಮತ್ತಷ್ಟು ವಿಸ್ತರಿಸಿದ. 1993ರಲ್ಲಿ ಸಣ್ಣದಾಗಿ ಕಂಡ ಕನಸು 30 ವರ್ಷಗಳಲ್ಲಿ ಹೆಮ್ಮರವಾಗಿ ಬೆಳೆದಿದೆ. ಇಂದಿರಾ ಫುಡ್ಸ್ ಮೂಲಕ ಪ್ರಸ್ತುತ ವರ್ಷಕ್ಕೆ ಸುಮಾರು 45 ಕೋಟಿ ರೂಪಾಯಿ ವಹಿವಾಟು ನಡೆಸುತ್ತಿದ್ದಾರೆ. 5 ಎಕರೆ ವಿಸ್ತೀರ್ಣದಲ್ಲಿ ದೊಡ್ಡ ಘಟಕ ಸ್ಥಾಪಿಸಿದ್ದಾರೆ. 400ಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿದ್ದಾರೆ. ನಾಲ್ವರು ಪಾಲುದಾರರನ್ನು ಹೊಂದಿದ್ದಾರೆ. ಅಮೆರಿಕ, ಬ್ರಿಟನ್, ಇಟಲಿ, ಆಸ್ಟ್ರೇಲಿಯಾ ಮತ್ತು ಪಶ್ಚಿಮ ಏಷ್ಯಾದ ರಾಷ್ಟ್ರಗಳಿಗೆ ತಮ್ಮ ಉತ್ಪನ್ನಗಳನ್ನು ರಫ್ತು ಮಾಡುತ್ತಿದ್ದಾರೆ.

ಪೂರಕ ಮಾಹಿತಿ ಮತ್ತು ಸಂದರ್ಶನ: **ಪವಿತ್ರಾ ಭಟ್, ವಿದ್ಯಾ ಹಂಚಿನಮನಿ, ಕೀರ್ತಿಕುಮಾರಿ, ಸಿಂಧು ಕೆ.ಟಿ., ಅಶ್ವಿನಿ ಸಿ.**

ಕೈಗಾರಿಕಾ ಪಾರ್ಕ್‌ನಲ್ಲಿ ಮಹಿಳಾ ಮೀಸಲಾತಿ ನೀಡಿ



ಈ ಹಿಂದೆ ಮಹಿಳಾ ಉದ್ಯಮಿಗಳ ಸಂಖ್ಯೆ ಶೇ 10–12ರಷ್ಟಿತ್ತು. ಈಗ ಆ ಪ್ರಮಾಣ ಶೇ 23ರಷ್ಟು ಆಗಿದೆ. ಆದರೆ, ಅಸಂಘಟಿತ ವಲಯದ ಮಹಿಳಾ ಉದ್ಯಮಿಗಳನ್ನೂ ಒಳಗೊಂಡಲ್ಲಿ ಈ ಪ್ರಮಾಣ ಇನ್ನೂ ಹೆಚ್ಚುತ್ತದೆ. ಟೈರ್–2,3 ನಗರಗಳಲ್ಲೂ ಮಹಿಳಾ ಉದ್ಯಮಿಗಳ ಸಂಖ್ಯೆ ಹೆಚ್ಚುತ್ತಿರುವುದು ಒಳ್ಳೆಯ ಬೆಳವಣಿಗೆ. ಎಫ್‌ಕೆಸಿಸಿಐನಲ್ಲಿ ಈಗಿನ ಸದಸ್ಯರ ಪೈಕಿ ಶೇ 15ರಷ್ಟು ಮಂದಿ ಮಹಿಳೆಯರು ಇದ್ದಾರೆ.

ರಾಜ್ಯದ ಹೊಸ ಕೈಗಾರಿಕಾ ಪಾರ್ಕ್‌ಗಳಲ್ಲಿ ಶೇ 30ರಷ್ಟು ಸ್ಥಳಾವಕಾಶವನ್ನು ಮಹಿಳಾ ಉದ್ಯಮಿಗಳಿಗೆ ಮೀಸಲಿರಿಸಬೇಕು. ಮಹಿಳಾ ಉದ್ಯಮಗಳಿಗೆ ಸೇವಾ ವಲಯದಲ್ಲಿ ರಿಯಾಯಿತಿ ದರಕ್ಕೆ ಸಾಲ ಕೊಡುವ ವ್ಯವಸ್ಥೆಯನ್ನು ತಯಾರಿಕಾ ವಲಯದ ಮಹಿಳಾ ಉದ್ಯಮಿಗಳಿಗೂ ಸರ್ಕಾರ ವಿಸ್ತರಿಸಬೇಕು.

ಉಮಾರೆಡ್ಡಿ, ಅಧ್ಯಕ್ಷೆ, ಎಫ್‌ಕೆಸಿಸಿಐ

ಸ್ವಾವಲಂಬನೆಗೆ 'ಅವೇಕ್'



'ಅವೇಕ್'ನಿಂದಲೇ ರಾಜ್ಯದಲ್ಲಿ ನೂರಾರು ಮಹಿಳೆಯರು ಸ್ವಾವಲಂಬನೆಯ ಬದುಕು ಸಾಗಿಸುತ್ತಿದ್ದಾರೆ. 'ಅವೇಕ್'ನಲ್ಲಿ ಐದರಿಂದ ಹತ್ತು ಕೆಜಿಯಷ್ಟು ಆಹಾರೋತ್ಪನ್ನಗಳನ್ನು ತಯಾರಿಸಲು ಅವಕಾಶವಿದೆ. ರಾಜ್ಯದಲ್ಲಿ ಅಂದಾಜು ಶೇ 25ರಷ್ಟು ಮಹಿಳಾ ಉದ್ಯಮಿ-ಗಳಿದ್ದಾರೆ. ಜಿಎಸ್‌ಟಿ ಮತ್ತಿತರ ಕಾರಣಕ್ಕೆ ನೋಂದಣಿಯಾಗದ ಮಹಿಳಾ ಉದ್ಯಮಿಗಳು ಅನೇಕರಿದ್ದಾರೆ. ಅವರನ್ನೂ ಸೇರಿಸಿದರೆ ಈ ಪ್ರಮಾಣ ಹೆಚ್ಚುತ್ತದೆ. ಉದ್ಯಮದಲ್ಲಿ ಸುಸ್ಥಿರತೆ ಕಾಪಾಡಿಕೊಳ್ಳಲು ಕೌಶಲದ ಜತೆಗೆ ತಾಳ್ಮೆಯೂ ಅಗತ್ಯ. ಕಷ್ಟಪಡಲೂ ರೆಡಿ ಇರಬೇಕು.

ಭುವನೇಶ್ವರಿ, ಅಧ್ಯಕ್ಷೆ 'ಅವೇಕ್'

ಸಬಲೀಕರಣವೇ ಉದ್ದೇಶ



ಮಹಿಳೆಯರ ಸಬಲೀಕರಣವೇ ನಮ್ಮ ಸರ್ಕಾರದ ಪ್ರಮುಖ ಉದ್ದೇಶ. ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ಇನ್ನೂ ಹೆಚ್ಚಾಗಬೇಕು. ಹಾಗೆಯೇ ಮಹಿಳಾ ಉದ್ಯೋಗಿಗಳು ಹೆಚ್ಚಿರುವ ಸಂಸ್ಥೆ, ಉದ್ಯಮಗಳಿಗೆ ಹೆಚ್ಚುವರಿಯಾಗಿ ವಿಶೇಷ ರಿಯಾ-ಯಿತಿಗಳನ್ನೂ ಘೋಷಿಸಲಾಗಿದೆ.

ಎಂ.ಬಿ. ಪಾಟೀಲ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

'ಆಶಾ'ದಾಯಕ ಕಥೆ



ಸ್ವಾವಲಂಬಿಯಾಗಬೇಕು ಎಂಬ ಆಸೆಯೊಂದಿಗೆ ಚಿಕ್ಕ ವಯಸ್ಸಿನಲ್ಲೇ ಉದ್ಯಮ ಕ್ಷೇತ್ರಕ್ಕೆ ಕಾಲಿಟ್ಟ ಆಶಾ ಎನ್.ಆರ್. ಅವರು, ಇಂದು ಗೃಹೋಪಯೋಗಿ ನೈರ್ಮಲ್ಯ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟದಲ್ಲಿ ಕರ್ನಾಟಕದ ಸ್ವದೇಶಿ ಕಂಪನಿಗಳಲ್ಲಿ ಮುಂಚೂಣಿ-ಯಲ್ಲಿರುವ 'ಆಶಾ ಕೆಮಿಕಲ್ಸ್'ನ ಮಾಲೀಕರಾಗಿದ್ದಾರೆ.

ಮಲೆನಾಡಿನವರಾದ ಆಶಾ ಅವರು ಹುಟ್ಟಿ ಬೆಳೆದಿದ್ದೆಲ್ಲಾ ಬೆಂಗಳೂರಿನಲ್ಲೇ, ವಿಜ್ಞಾನ ಪದವೀಧರೆಯಾದ ಅವರು ನಾಲ್ಕೈದು ವರ್ಷ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡಿದರು. ನಂತರ, ತಾನೇ ಒಂದು ಸಂಸ್ಥೆ ಮಾಡಬೇಕು ಎಂಬ ಬಯಕೆಯಿಂದ 'ಆಶಾ ಕೆಮಿಕಲ್ಸ್' ಆರಂಭಿಸಿದರು. ಸಂಸ್ಥೆಯ ಆರಂಭ ಸುಲಭದ ದಾರಿಯಾಗಿರಲಿಲ್ಲ ಅನೇಕ ಸವಾಲುಗಳು ಎದುರಾದವು. ಮೊದಲು ಹಣಕಾಸಿನ ಸಮಸ್ಯೆ. ಮಹಿಳೆ ಎಂಬ ಕಾರಣಕ್ಕೆ ಸಾಲ ಸಿಗದೆ, ಬಳಿಕ ತಂದೆಯವರ ಖಾತರಿ ಮೇರೆಗೆ ಸಾಲ ಪಡೆದು, ಕಪ್ಪು ಫಿನಾಯಿಲ್ ಉತ್ಪಾದಿಸುವುದರೊಂದಿಗೆ ಉದ್ಯಮ ಆರಂಭಿಸಿದರು. ನಂತರದ ವರ್ಷಗಳಲ್ಲಿ ಫ್ಲೋರೋಮಾ ಮತ್ತು ಹೋಮಿ ಸೇರಿದಂತೆ ಮೂರರಿಂದ ನಾಲ್ಕು ಬ್ರಾಂಡ್‌ಗಳ ಮೂಲಕ ಉದ್ಯಮವನ್ನು ವಿಸ್ತರಿಸಿದರು. ಈ ಬ್ರಾಂಡ್‌ಗಳ ಪೈಕಿ ಫ್ಲೋರೋಮಾ ದಕ್ಷಿಣ ಭಾರತದ ರಿಟೇಲ್ ಮಾರುಕಟ್ಟೆಯಲ್ಲಿ ಮನೆಮಾತಾಗಿರುವ ಜನಪ್ರಿಯ ಹೆಸರಾಗಿದೆ. ಹೋಮಿ ಬ್ರಾಂಡ್ ಕೂಡ ರಾಸಾಯನಿಕ ಮುಕ್ತ ಗೃಹನೈರ್ಮಲ್ಯ ವಸ್ತುಗಳ ಉತ್ಪಾದನೆಯಲ್ಲಿ ಮುಂಚೂಣಿಯಲಿದೆ. ಸುಮಾರು 35ಕ್ಕೂ ಹೆಚ್ಚು ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತದೆ.

30 ವರ್ಷಗಳ ಹಿಂದೆ ಆಶಾ ಅವರ ದೃಢಸಂಕಲ್ಪ ಮತ್ತು ಆತ್ಮವಿಶ್ವಾಸದ ನಡೆಯು, ಅವರನ್ನು ಮಾದರಿ ಉದ್ಯಮಿಯನ್ನಾಗಿಸಿದೆ. ಅಲ್ಲದೆ ಅವರು ಇಂದು ಸುಮಾರು 60ರಿಂದ 70 ಜನರಿಗೆ ಉದ್ಯೋಗವನ್ನು ನೀಡಿದ್ದಾರೆ. ಗುಣಮಟ್ಟದ ಉತ್ಪನ್ನಗಳ ತಯಾರಿಕೆ, ಉತ್ತಮ ಪ್ಯಾಕೇಜಿಂಗ್, ಕೈಗೆಟುಕುವ ದರ ಮತ್ತು ಕಾಲಕ್ಕೆ ತಕ್ಕಂತೆ ಉತ್ಪನ್ನಗಳ ಅಭಿವೃದ್ಧಿಯಿಂದ ಮಾರುಕಟ್ಟೆಯಲ್ಲಿ ಪ್ರಬಲವಾಗಿ ನಿಲ್ಲಲು ಸಾಧ್ಯವಾಯಿತು ಎಂಬುದು ಆಶಾ ಅವರ ಅಭಿಪ್ರಾಯ. 'ಅವೇಕ್' ನಿಕಟಪೂರ್ವ ಅಧ್ಯಕ್ಷೆಯಾಗಿರುವ ಆಶಾ, 25 ವರ್ಷಗಳಿಂದ ಮಹಿಳಾ ಉದ್ಯಮಿಗಳಿಗೆ ತರಬೇತಿ, ಸಲಹೆ ನೀಡುತ್ತಿದ್ದಾರೆ.

ಮಹಿಳಾ ಉದ್ಯಮಿಗಳಿಗೆ ಸಹಕಾರ ಏನೇನು?

- ಪ್ರಧಾನಮಂತ್ರಿ 'ಮುದ್ರಾ' ಯೋಜನೆಯಡಿ ಮಹಿಳೆಯರಿಗೆ ₹ **20** ಲಕ್ಷದ ತನಕ ಸಾಲ
- ಕರ್ನಾಟಕ ಸರ್ಕಾರದ 'ಉದ್ಯೋಗಿನಿ' ಯೋಜನೆ ಮೂಲಕ ಗರಿಷ್ಠ ₹ **3** ಲಕ್ಷ ಮೊತ್ತದ ಸಹಾಯಧನ
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಸಣ್ಣ, ಮಧ್ಯಮ ಕೈಗಾರಿಕೆಗಳು, ಅಸ್ಪತ್ರೆ, ವೈದ್ಯಕೀಯ ಆರೈಕೆ, ಪ್ರವಾಸೋದ್ಯಮ ಹಾಗೂ ಸೇವಾ ವಲಯದ ಘಟಕಗಳಲ್ಲಿ ಹೆಚ್ಚಿನ ಅವಕಾಶ ಹಾಗೂ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಬಡ್ಡಿ ಸಹಾಯಧನ ಯೋಜನೆಯಡಿ ₹ **50** ಲಕ್ಷದಿಂದ ₹ **5** ಕೋಟಿವರೆಗೆ ಸೌಲಭ್ಯ
- ಕೆಐಡಿಬಿಯಲ್ಲಿ ನೀಡಲಾಗುವ ನಿವೇಶನಗಳಲ್ಲಿ ಮಹಿಳೆಯರಿಗೆ ಶೇ **5**ರಷ್ಟು ಮೀಸಲಾತಿ ಇದೆ. ಭೂಮಿ ನೀಡಿದ ಬಳಿಕ ಪ್ರಾರಂಭಿಕ ಹಂತದಲ್ಲಿ ಶೇ **10**ರಷ್ಟು ಹಣ ಪಾವತಿಸಿ, ಉಳಿದ ಶೇ 90ರಷ್ಟು ಹಣ ಪಾವತಿಗೆ ಮಹಿಳೆಯರಿಗೆ ಆರು ತಿಂಗಳ ಸಮಯ ನೀಡಲಾಗುತ್ತದೆ.
- ಕೈಗಾರಿಕಾ ನೀತಿಯ ಅನುಗುಣವಾಗಿ ಮಹಿಳಾ ಉದ್ಯೋಗಿಗಳ ಸಂಖ್ಯೆಯ ಆಧಾರದ ಮೇಲೆ ಉದ್ಯಮಗಳಿಗೆ ಶೇ **7.5**ರ ತನಕ ಪ್ರೋತ್ಸಾಹಧನ ನೀಡಲಾಗುತ್ತದೆ.
- ಉದ್ಯಮ ನಡೆಸಬಯಸುವ ಮಹಿಳೆಯರಿಗೆ 'ಅವೇಕ್'ನಿಂದ ತರಬೇತಿ ನೀಡಲಾಗುತ್ತದೆ. ಮೊಬೈಲ್ ಸಂಖ್ಯೆ: **99012 40555**

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 08-03-2001

- **ಉಗ್ರಾಣ ಕೊರತೆ: ಮೆಕ್ಕೆಜೋಳ ಖರೀದಿಗೆ ತಡೆ**

ಬೆಂಗಳೂರು, ಮಾರ್ಚ್ 7– ಶೇಖರಿಸಿಡಲು ಉಗ್ರಾಣಗಳೂ ಸೇರಿದಂತೆ ಸೂಕ್ತವಾದ ಕಟ್ಟಡಗಳ ಕೊರತೆ ಇರುವ ಕಡೆ ಮೆಕ್ಕೆಜೋಳ ಖರೀದಿ ಹಾಗೂ ಸಂಗ್ರಹಣೆಯನ್ನು ಅನಿವಾರ್ಯವಾಗಿ ನಿಲ್ಲಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ರಾಜ್ಯ ಸಚಿವ ಡಿ.ಬಿ ಇನಾಂದರ್ ಅವರು ವಿಧಾನ ಸಭೆಯಲ್ಲಿ ಇಂದು ಹೇಳಿದರು. ಉಗ್ರಾಣಗಳು ಭರ್ತಿಯಾಗಿರುವ ಕಡೆ ಈಗಾಗಲೇ ಬಯಲಿನಲ್ಲೇ ಟಾರ್ಪಾಲಿನ್ ಹಾಕಿ ಮೆಕ್ಕೆಜೋಳವನ್ನು ಸಂಗ್ರಹಿಸಿಡಲು ಸಾಧ್ಯವಿಲ್ಲವೆಂದು ಭಾರತ ಆಹಾರ ನಿಗಮ ತಿಳಿಸಿರುವುದರಿಂದಲೂ ಖರೀದಿಯನ್ನು ನಿಲ್ಲಿಸಬೇಕಾಗಿರುವುದು ಅನಿವಾರ್ಯವಾಗಿದೆ ಎಂದರು.

75 ವರ್ಷಗಳ ಹಿಂದೆ

ಗುರುವಾರ, 08-03-1951

- **ಭಾರತ–ಪಾಕಿಸ್ತಾನ್ ನಡುವೆ ವಸ್ತು ವಿನಿಮಯ**

ನವದೆಹಲಿ, ಮಾ.6– ಈಚಿನ ಭಾರತ–ಪಾಕಿಸ್ತಾನ ವಾಣಿಜ್ಯ ಒಪ್ಪಂದದ ಪ್ರಕಾರ, ಭಾರತಕ್ಕೆ ಪಾಕಿಸ್ತಾನ ಕಚ್ಚಾ ಸೆಣಬು ಮತ್ತು ಪಾಕಿಸ್ತಾನಕ್ಕೆ ಭಾರತದ ಕಲ್ಲಿದ್ದಲು ಸರಬರಾಜುಗಳ ಪಟ್ಟಿಯ ಬಗ್ಗೆ 'ಸಂಪೂರ್ಣ ಒಪ್ಪಂದ'ಕ್ಕೆ ಬರಲಾಗಿದೆ ಎಂದು ವರದಿಯಾಗಿದೆ.

ಈ ವಿಷಯವನ್ನು ಕುರಿತು, ಕಳೆದ ಮೂರು ದಿನಗಳಲ್ಲಿ ವಾಣಿಜ್ಯ ಸಚಿವ ಶಾಖೆಯ ಶೀ ಎಸ್.ಎ.ವೆಂಕಟರಾಮನ್ ಮತ್ತು ಪಾಕಿಸ್ತಾನ್ ಸೆಣಬು ಬೋರ್ಡಿನ ಅಧ್ಯಕ್ಷ ಫರೂಕಿಯವರ ನಡುವೆ ಮಾತುಕತೆಗಳಾದವು. 'ಮಾತುಕತೆಗಳು ಸೌಹಾರ್ದಯುತವಾಗಿ ನಡೆಯಿತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

08 ಮಾರ್ಚ್ 2026 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಪಂಚಮಿ ಗಂ. 21-12 ನಕ್ಷತ್ರ: ಸ್ವಾತಿ ಗಂ. 13-32 ಯೋಗ: ಧ್ರುವ ಗಂ. 7-04 ಕರಣ: ಕೌಲವ ಗಂ 8-11 ಕುಂಭ ಮಾಸದ 24 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 2 ನೇ ಪಾದ. ರಾಹುಕಾಲ : ಸಾಯಂಕಾಲ 04-30 - 06-00 ,ಸೂರ್ಯೋದಯ : 06-46 ಸೂರ್ಯಾಸ್ತ : 06-37,ಮುಸ್ಲಿಂ ದಿನಾಂಕ : 18 ರಂಜಾನ್ ,ಅದೃಷ್ಟ ಸಂಖ್ಯೆ : 5, 11

ಮೇಷ: ಇಂದಿನ ಯೋಜನೆಗಳಿಗೆ ಮನೆಯವರಿಂದ ವಿರೋಧಭಾವ ವ್ಯಕ್ತವಾಗಬಹುದು. ಶತ್ರುಗಳು ಕಾರ್ಯವೈಖರಿಯಿಂದ ಚಕಿತಗೊಂಡು ಸನಿಹಕ್ಕೂ ಬರಲಾರರು. ವಾಹನ ಖರೀದಿಯನ್ನು ಮುಂದೂಡಿ.

ವೃಷಭ: ನ್ಯಾಯಾಲಯಕ್ಕೆ ಸಂಬಂಧಿಸಿದ ಕೆಲಸದಲ್ಲಿ ತಯಾರಿಯನ್ನು ಮಾಡಲು ಸೂಕ್ತ ದಿನ. ಜವಾಬ್ದಾರಿಯ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿದ ತೃಪ್ತಿ ಬರಲಿದೆ. ಪಾಲುದಾರಿಕೆಯಲ್ಲಿ ಅಭಿಪ್ರಾಯ ಭೇದ ಉಂಟಾಗಬಹುದು.

ಮಿಥುನ: ತಪ್ಪುಗಳಿಗೆ ಪಶ್ಚಾತಾಪ ಪಡುತ್ತಿದ್ದರೂ ತಪ್ಪುಗಳು ಪುನರಾವರ್ತನೆ ಯಾಗುತ್ತಿವೆ. ವಿದೇಶ ಯಾತ್ರಿಗಳಿಗೆ ಪ್ರಯಾಣದಲ್ಲಿ ಸುಖ, ನಿರ್ಭಯದ ವಾತಾವರಣ ಉಂಟಾಗಲಿದೆ.

ಕರ್ಕಾಟಕ: ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳು ಹೆಚ್ಚಾಗಲಿವೆ. ವ್ಯವಹಾರಕ್ಕೆ ಆತಂಕದ ಪರಿಸರ ಬರಬಹುದು. ಜೀವನದಲ್ಲಿ ಅಧಿಕ ಶ್ರಮದಿಂದ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿ.

ಸಿಂಹ: ಬರಹಗಾರರಿಗೆ ಕೀರ್ತಿ ಅರಸಿ ಬರುವುದು. ಬದುಕಿನಲ್ಲಿ ಸ್ಥಿರತೆಯ ಅಭಾವ ಕಾಣಲಿದೆ. ಯಾವುದೇ ರೀತಿಯ ಖರೀದಿಯಲ್ಲಿ ಎಚ್ಚರವಿರಲಿ, ಮೋಸ ಹೋಗುವ ಸಂಭವವಿದೆ. ರೇಷ್ಮೆ ಬೆಳಗಾರರಿಗೆ ಲಾಭ ಆಗುತ್ತದೆ.

ಕನ್ಯಾ: ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳು ವುದರಿಂದ ಯಶಸ್ವಿಯಾಗುವಿರಿ. ಋಣಬಾಧೆಯಿಂದ ಮುಕ್ತರಾಗಬಹುದು. ಎಂಜಿನಿಯರಿಂಗ್ ವ್ಯಾಸಂಗ ಮಾಡುವವರಿಗೆ ಉತ್ತೇಜನ ದೊರೆಯುವುದು.

ತುಲಾ : ಸ್ನೇಹಿತರಲ್ಲಿ ಮುಕ್ತವಾಗಿ ಮಾತನಾಡುವುದರಿಂದ ಮಾನಸಿಕ ಸಮಾಧಾನ ದೊರೆತು ಅನುಕೂಲ ವಾತಾವರಣದ ಅನುಭವ ದೊರಕಲಿದೆ. ಉತ್ತಮ ದೈವಾನುಗ್ರಹದಿಂದ ಕೆಲಸಗಳೆಲ್ಲವೂ ನಿರಾಳವಾಗಿ ನೆರವೇರುವುದು.

ವೃಶ್ಚಿಕ: ಉದ್ಯೋಗ ದೊರೆಯುವ ಸುಳಿವಿನ ಕಾರಣದಿಂದ ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆಲ್ಲಾ ದೂರಾಗಲಿವೆ. ವಿವೇಕಯುಕ್ತ ನಡವಳಿಕೆ ಪ್ರಯೋಜನ ನೀಡುತ್ತದೆ.

ಧನು: ತಾಂತ್ರಿಕ ಕ್ಷೇತ್ರದಲ್ಲಿ ಸಲಹೆ ಸೂಚನೆಗಳಿಗೆ ಅಧಿಕಾರಿ ವರ್ಗದವರಲ್ಲಿ ಮನ್ನಣೆ ಸಿಗಲಿದೆ. ವಿದ್ಯಾರ್ಥಿಗಳಿಗೆ ಆಲಸ್ಯದ ಪರ್ವತ ಎದುರಾಗುವುದರಿಂದ ವಿದ್ಯಾರ್ಜನೆಯಲ್ಲಿ ಸ್ವಲ್ಪ ಹಿನ್ನಡೆ.

ಮಕರ: ಕುಟುಂಬದ ಸರ್ವತೋಮುಖ ಬೆಳವಣಿಗೆಗೆ ಪಾತ್ರ ಬಹಳ ಮುಖ್ಯ ಎಂಬುದು ಕುಟುಂಬ ವರ್ಗಕ್ಕೆ ಮನದಟ್ಟಾಗುವುದು. ಪಕ್ಷದ ಧುರೀಣರ ಮಾತಿನಂತೆ ನಡೆಯುವುದರಿಂದ ಅನುಕೂಲ ಕಾಣುವಿರಿ.

ಕುಂಭ: ನಿಮ್ಮ ಹಾವಭಾವ, ಸ್ನೇಹಪರವಾದ ಸ್ವಭಾವವು ಇತರರ ಪ್ರಭಾವ ಬೀರಲಿದೆ. ನೆರೆಹೊರೆಯವರು ಸರಳತೆಯನ್ನು ದುರುಪಯೋಗ ಪಡಿಸಿಕೊಂಡಾರು ಗಮನವಿರಲಿ.

ಮೀನ: ಅಧಿಕಾರಿ ವರ್ಗದವರಲ್ಲಿ ಅವಶ್ಯಕತೆಗಿಂತ ಜಾಸ್ತಿ ಮಾತನಾಡುವುದು ಸಮಸ್ಯೆ ಕರೆದಂತಾಗುವುದು. ಬಂಧು ಮಿತ್ರರೊಡನೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಂತಾಗಲಿದೆ. ದ್ವೇಷ ಮನೋಭಾವಗಳು ಸರಿಯಾಗಲಿವೆ.

ಪದಬಂಧ 6337


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಂಗೈ ರೇಖೆಗಳನ್ನು ನೋಡಿ ಭವಿಷ್ಯ ಹೇಳುವುದು (6)
4.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
5.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
7.ಕತ್ತರಿಸುವ ಸಾಧನವಿದು (3)
10.ತಿರುವು ಮುರುವಾಗಿ ಕಾಣುತ್ತಿರುವ ಪಚನಾಂಗ (3)
11.ಅಳತೆಗೆ ಮೀರಿದ ಸ್ಥಿತಿ (4)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಪ್ರೇಮಿಗಳ ಹುಸಿ ಜಗಳ (6)

ಮೇಲಿಂದ ಕೆಳಕ್ಕೆ

1.ಭಾರವಲ್ಲದ್ದು ಇದು (3)
2.ಕೆರಳಿದವನ ಮೆಟ್ಟು (2)
3.ದೇವಾಲಯದ ಸಭಾಮಂಟಪ (4)
6.ಹೀನವಾದ ಜೀವನ(4)
7.ತಿರುಗಿಸಿ ನೋಡಿದರೂ ಇದು ಚಿನ್ನ(3)
8.ಕನ್ನಡಿಗನಿಗೆ ಸಿಕ್ಕಿರುವ ರಿಬೇಟ್!(4)
9.ಕಾರು ಇಟ್ಟುಕೊಡವನ ಆಡಳಿತ (4)
12.ಜಗಳಕ್ಕೊಂದು ಪರ್ಯಾಯ ಪದ(3)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)



6336ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಿಟುಕಲಾಡಿ 4.ಸಂಪ್ರತಿ 5.ಕಾರಕ 6.ಟಪಾಲು 8.ಆಸ್ಥಾನ 10.ಗಡಿಗೆ 11.ಗೊರಸು 15.ಭರಣಿ 16.ಗುಮ್ಮಟ 17.ಗಗನಚುಂಬಿ

ಮೇಲಿಂದ ಕೆಳಕ್ಕೆ: 1.ಮಿಡಿತ 2.ಕರತಾಡನ 3.ಡಿಕಾವು 4.ಸಂಕಟ 7.ಪಾಖಂಡಿ 9.ಸ್ಥಾವರ 10.ಗಜಗಮನ 12.ಸುಭಟ 13.ಗಾಣಿಗ 14.ಗುಲಾಬಿ

ಸುಡೊಕು 6721

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			4		2		7	6
3		6				2		5
	2			5			8	
8		5						1
			5		3			
7		2		6		5		4
				2		8		7
2		7					6	
6			7		9	4		

6720 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೆರಗಿನಲ್ಲಿ ಮುಳುಗಿದ ವಿದ್ಯಾರ್ಥಿಗಳು

ಐಐಎಸ್‌ಸಿ ಮುಕ್ತದಿನ: ಸಂಶೋಧನೆ, ಪ್ರಾತ್ಯಕ್ಷಿಕೆಗಳನ್ನು ಕೌತುಕದಿಂದ ವೀಕ್ಷಿಸಿದ ಭವಿಷ್ಯದ ವಿಜ್ಞಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಶನಿವಾರ ಭವಿಷ್ಯದ ವಿಜ್ಞಾನಿಗಳು ಸಂಭ್ರಮಿಸಿದರು. ವಿವಿಧ ವಿಭಾಗಗಳಿಗೆ ಭೇಟಿ ನೀಡಿ, ಪ್ರದರ್ಶನಗಳನ್ನು ಕೌತುಕದಿಂದ ವೀಕ್ಷಿಸಿ, ಸಂಶೋಧನಗಳಿಗೆ ಬೆರಗಾಗಿ ಖುಷಿಪಟ್ಟರು.

ವಿದ್ಯಾರ್ಥಿ ಸಮುದಾಯ ಮತ್ತು ಸಾರ್ವಜನಿಕರಿಗೆ ತನ್ನ ಚಟುವಟಿಕೆಗಳನ್ನು ತಿಳಿಸಲು ಐಐಎಸ್‌ಸಿ ಮುಕ್ತ ದಿನ (ಓಪನ್ ಡೇ) ಅವಕಾಶ ನೀಡಿದ್ದು ಸಂಭ್ರಮಕ್ಕೆ ಕಾರಣವಾಯಿತು.

ಜೈವಿಕ ವಿಜ್ಞಾನ, ರಸಾಯನ ವಿಜ್ಞಾನ, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ, ಮೆಕ್ಯಾನಿಕಲ್, ಭೌತ ವಿಜ್ಞಾನ, ಗಣಿತ ವಿಭಾಗಗಳ ಪ್ರದರ್ಶನಗಳು, ವಿವಿಧ ಸಂಶೋಧನಗಳು ಮಕ್ಕಳನ್ನು ಸೆಳೆದವು.

ಐಐಎಸ್‌ಸಿ ಕ್ಯಾಂಪಸ್ ತುಂಬಾ ಓಡಾಡಿದ ವಿದ್ಯಾರ್ಥಿಗಳು ಹೂತೋಟದಲ್ಲಿ ಅಲೆದಾಡಿ ಸೆಲ್ಫಿ, ಫೋಟೊ ತೆಗೆದುಕೊಂಡು ಸಂಭ್ರಮಪಟ್ಟರು.

ತಜ್ಞರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳು ನಡೆದವು. ವಿಜ್ಞಾನಿಗಳನ್ನು ಭೇಟಿಯಾದ ವಿದ್ಯಾರ್ಥಿಗಳು ವಿವಿಧ ಪ್ರಶ್ನೆಗಳನ್ನು ಕೇಳಿ ತಮ್ಮ ಗೊಂದಲವನ್ನು ಪರಿಹರಿಸಿಕೊಂಡರು. ಪ್ರಾಯೋಗಿಕ ಪ್ರದರ್ಶನಗಳನ್ನು ವೀಕ್ಷಿಸಿದ್ದಲ್ಲದೇ ಪ್ರಯೋಗ ಮಾಡಿ ನೋಡಿದರು. ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ವೈಜ್ಞಾನಿಕ ಪ್ರಶ್ನೆಗಳಿಗೆ ಉತ್ತರಿಸಿದರು.

ಮಕ್ಕಳ ವಲಯ ಎಂದು ಪ್ರತ್ಯೇಕ ವಿಭಾಗವನ್ನು ಮಾಡಲಾಗಿತ್ತು. ಅಲ್ಲಿ ನಾಲ್ಕನೇ ತರಗತಿಯಿಂದ ಪಿಯುಸಿ ವರೆಗಿನ ವಿದ್ಯಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಪೋಷಕರು, ಶಿಕ್ಷಕರಿಗೆ ಇಲ್ಲಿ ಪ್ರವೇಶ ಇರಲಿಲ್ಲ. ಮಕ್ಕಳಿಗೆ ಸ್ಥಳದಲ್ಲಿಯೇ ಉಚಿತ ಪ್ರವೇಶ ಕೂಪನ್ ವಿತರಿಸಲಾಯಿತು. ಮಕ್ಕಳನ್ನು ಸೆಳೆಯುವ ಪ್ರದರ್ಶನಗಳು ಆ ವಲಯದಲ್ಲಿದ್ದವು.

ಏರೋಸ್ಪೇಸ್ ಮಾದರಿಗಳು, ರಾಸಾಯನಿಕ ಪ್ರಯೋಗಗಳು, ಎ.ಐ ತಂತ್ರಜ್ಞಾನಗಳು, ರೊಬೊಟಿಕ್ ಪ್ರಯೋಗಗಳು, ವಿಜ್ಞಾನ ಪ್ರಾತ್ಯಕ್ಷಿಕೆಗಳು ಗಮನ ಸೆಳೆದವು.

ವಿವಿಧ ಶಾಲಾ ಕಾಲೇಜುಗಳಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮುಕ್ತ ದಿನದಲ್ಲಿ ಭಾಗವಹಿಸಿದ್ದರು. ಐಐಎಸ್‌ಸಿ ಸುತ್ತಮುತ್ತ ವಾಹನ ದಟ್ಟಣೆ ಉಂಟಾಗದಂತೆ ತಡೆಯಲು ಕ್ಯಾಂಪಸ್ ಬಳಿಗೆ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು. ವಾಹನ ತೀರ ಅಗತ್ಯ ಇರುವವರಿಗೆ ಇ-ರಿಕ್ಷಾ ಟ್ರಾನ್ಸ್ ವಾಹನಗಳ ವ್ಯವಸ್ಥೆ ಮಾಡಲಾಗಿತ್ತು.





ಮುಕ್ತ ದಿನದ ಅಂಗವಾಗಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಶನಿವಾರ ಹಮ್ಮಿಕೊಂಡಿದ್ದ ವಸ್ತುಪ್ರದರ್ಶನದಲ್ಲಿ ಭಾರಿ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು (ಎಡಚಿತ್ರ). ವಸ್ತುಪ್ರದರ್ಶನದ ವಿವಿಧ ಮಾದರಿಗಳನ್ನು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಕುತೂಹಲದಿಂದ ವೀಕ್ಷಿಸಿದರು ಚಿತ್ರಗಳು: ಪ್ರಶಾಂತ್ ಎಚ್.ಜಿ.

ನಿರ್ಗಮನ ಪಥಸಂಚಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಯುಪಡೆ ತಾಂತ್ರಿಕ ಕಾಲೇಜು ಆವರಣದಲ್ಲಿ ಶನಿವಾರ ಏರೊನಾಟಿಕಲ್ ಎಂಜಿನಿಯರಿಂಗ್ ಕೋರ್ಸ್ ಪೂರ್ಣಗೊಳಿಸಿದ ಅಧಿಕಾರಿಗಳ ನಿರ್ಗಮನ ಪಥಸಂಚಲನ ನಡೆಯಿತು.

ಗಣ್ಯರು, ವಾಯುಪಡೆಯ ಅಧಿಕಾರಿಗಳು, ಯೋಧರು, ಪೋಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದೇಶದ ಒಂಬತ್ತು ಅಧಿಕಾರಿಗಳೂ ಸೇರಿದಂತೆ ಒಟ್ಟು 108 ಎಂಜಿನಿಯರಿಂಗ್ ಅಧಿಕಾರಿಗಳು ಕಾಲೇಜಿನಿಂದ ಪದವಿ ಪಡೆದಿದ್ದಾರೆ. 62 ವಾರ ತರಬೇತಿ ಪಡೆದಿದ್ದ ಎಲ್ಲರೂ ನಿರ್ಗಮನ ಪಥಸಂಚಲನದಲ್ಲಿ ಪಾಲ್ಗೊಂಡಿದ್ದರು.

ಏರ್ ಮಾರ್ಷಲ್ ಸಂಜೀವ್ ಘುರಾಟಿಯಾ ಮಾತನಾಡಿ, 'ಯುದ್ಧದಂತಹ ಸಂದರ್ಭಗಳಲ್ಲಿ ಭಾರತೀಯ ವಾಯುಪಡೆಯ ಎಂಜಿನಿಯರಿಂಗ್ ಅಧಿಕಾರಿಗಳು ವಿಮಾನಗಳು ಮತ್ತು ಇತರೆ ಶಸ್ತ್ರಾಸ್ತ್ರಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ತಂತ್ರಜ್ಞಾನ ನಿರಂತರವಾಗಿ ಬದಲಾವಣೆ ಆಗುತ್ತಿದೆ. ಯುವ ಅಧಿಕಾರಿಗಳು, ತಮ್ಮ ಜ್ಞಾನ ಮತ್ತು ಕೌಶಲ ಹೆಚ್ಚಿಸಿಕೊಳ್ಳಬೇಕು. ವೃತ್ತಿಪರತೆ ಪ್ರದರ್ಶಿಸಬೇಕು' ಎಂದು ಹೇಳಿದರು.

ತರಬೇತಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಅಧಿಕಾರಿಗಳಿಗೆ ಟ್ರೋಫಿ ಮತ್ತು ಪದಕಗಳನ್ನು ಪ್ರದಾನ ಮಾಡಲಾಯಿತು.



ವಾಯುಪಡೆ ತಾಂತ್ರಿಕ ಕಾಲೇಜು ಆವರಣದಲ್ಲಿ ಶನಿವಾರ ಏರೊನಾಟಿಕಲ್ ಎಂಜಿನಿಯರಿಂಗ್ ಕೋರ್ಸ್ ಪೂರ್ಣಗೊಳಿಸಿದವರ ನಿರ್ಗಮನ ಪಥಸಂಚಲನ ನಡೆಯಿತು

ಬಿಡಿಎ ಅರಣ್ಯಾಧಿಕಾರಿ ದಾಳೇಶ್ ಮನೆ ಮೇಲೆ ಲೋಕಾಯುಕ್ತ ದಾಳಿ

₹3.08 ಕೋಟಿ ಅಕ್ರಮ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಲಯ ಅರಣ್ಯಾಧಿಕಾರಿ ದಾಳೇಶ್ ಎ.ಎಲ್. ಅವರ ಮನೆಯ ಮೇಲೆ ಶನಿವಾರ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ₹3.08 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಸಂಬಂಧ ಬಂದಿದ್ದ ದೂರಿನ ಆಧಾರದಲ್ಲಿ ಬೆಂಗಳೂರು ನಗರ-1 ವಿಭಾಗದ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಳೇಶ್ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಅದರಂತೆ ಲೋಕಾಯುಕ್ತ ಪೊಲೀಸರು ಮತ್ತು ಅಧಿಕಾರಿಗಳು, ದಾಳೇಶ್ ಮತ್ತು ಅವರ ಆಪ್ತರಿಗೆ ಸೇರಿದ ನಾಲ್ಕು ಸ್ಥಳಗಳಲ್ಲಿ ದಾಳಿ ನಡೆಸಿದ್ದರು.

ದಾಳೇಶ್ ಮತ್ತು ಅವರ ಆಪ್ತರ ಹೆಸರಿನಲ್ಲಿ ₹2.70 ಕೋಟಿ ಮೌಲ್ಯದ 3 ನಿವೇಶನ, 2 ವಾಸದ ಮನೆ, 1 ವಾಣಿಜ್ಯ ಸಂಕೀರ್ಣ ಮತ್ತು 17 ಎಕರೆ 20 ಗುಂಟೆ ಕೃಷಿ ಜಮೀನು ಇರುವುದು ಪತ್ತೆಯಾಗಿದೆ. ₹13 ಲಕ್ಷ ಮೌಲ್ಯದ ಚಿನ್ನಾಭರಣ, ₹34.50 ಲಕ್ಷ ಮೌಲ್ಯದ ವಾಹನಗಳು ಪತ್ತೆಯಾಗಿವೆ. ಶೋಧ ಕಾರ್ಯ ಮುಂದುವರೆದಿದೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಮಾಹಿತಿ ಹಕ್ಕು: ಬಿಡಿಎ ಅಧಿಕಾರಿಗಳಿಗೆ ₹1.25 ಲಕ್ಷ ದಂಡ

ಮಾಹಿತಿ ಹಕ್ಕು ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಉಪಕಾರ್ಯದರ್ಶಿ-1 ಉಮೇಶ್ ಅವರಿಗೆ ರಾಜ್ಯ ಮಾಹಿತಿ ಆಯೋಗ ₹1 ಲಕ್ಷ ದಂಡ ವಿಧಿಸಿದೆ.

ಎಲ್ಲ ಸಾರ್ವಜನಿಕ ಪ್ರಾಧಿಕಾರಗಳೂ ಕಾರ್ಯನಿರ್ವಹಣೆ ಮತ್ತು ಇತರ ದಾಖಲೆ ಪತ್ರಗಳನ್ನು ತಮ್ಮ ಜಾಲತಾಣದಲ್ಲಿ ಪ್ರದರ್ಶಿಸಬೇಕು ಎಂದು ಮಾಹಿತಿ ಹಕ್ಕು ಕಾಯ್ದೆ ಹೇಳುತ್ತದೆ. ಬಿಡಿಎಯ ಉಪಕಾರ್ಯದರ್ಶಿ-1 ಉಮೇಶ್ ಅವರು ಈ ಕಾರ್ಯದ ಹೊಣೆಗಾರರಾಗಿದ್ದು, ಅವರು ಜಾಲತಾಣದಲ್ಲಿ ಮಾಹಿತಿ ಅಪ್‌ಡೇಟ್ ಮಾಡಿಸದೇ ಇರುವುದರ ಬಗ್ಗೆ ಆಯೋಗಕ್ಕೆ ನಾಲ್ಕು ದೂರುಗಳು ಸಲ್ಲಿಕೆಯಾಗಿದ್ದವು.

ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ್ದ ಆಯೋಗವು, ಉಮೇಶ್ ಅವರಿಗೆ ಪ್ರತಿ ಪ್ರಕರಣದಲ್ಲಿ ತಲಾ ₹25,000ದಂತೆ ಒಟ್ಟು ₹1 ಲಕ್ಷ ದಂಡ ವಿಧಿಸಿದೆ.

ಸಾರ್ವಜನಿಕರೊಬ್ಬರು ಮಾಹಿತಿ ಹಕ್ಕು ಕಾಯ್ದೆ ಅಡಿ ಕೋರಿದ್ದ ಮಾಹಿತಿಯನ್ನು ನೀಡದೇ ಇರುವ ಕಾರಣಕ್ಕೆ ಬಿಡಿಎ ಕಾರ್ಯದರ್ಶಿ ಸಿ.ಎಲ್. ಶಿವಕುಮಾರ್ ಅವರಿಗೆ ಆಯೋಗವು ₹25,000 ದಂಡ ವಿಧಿಸಿದೆ. ದಂಡ ಪಾವತಿಸಬೇಕು ಮತ್ತು ಮಾಹಿತಿಯನ್ನು ಕೂಡಲೇ ಒದಗಿಸಬೇಕು. ಇಲ್ಲದಿದ್ದಲ್ಲಿ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿಯೂ ಎಚ್ಚರಿಕೆ ನೀಡಿದೆ.

ತೆರಿಗೆ ಪಾವತಿಸದ ಆಸ್ತಿ ಹರಾಜು

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸದ 6 ಸ್ವತ್ತುಗಳ ಪೈಕಿ 2 ಆಸ್ತಿಗಳನ್ನು ಹರಾಜು ಮಾಡಲಾಗಿದೆ. ಸ್ವತ್ತುಗಳ ಹರಾಜಿನ ಮೂಲಕ ಬಾಕಿ ಇರುವ ಆಸ್ತಿ ತೆರಿಗೆ ವಸೂಲಾತಿಗೆ ಕಠಿಣ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ವಲಯದ ಜಂಟಿ ಆಯುಕ್ತೆ ಸುಧಾ ತಿಳಿಸಿದರು.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2025ರ ಅಡಿಯಲ್ಲಿ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲ ತರಹದ ಸ್ವತ್ತುಗಳ ಮಾಲೀಕರು ಅಥವಾ ಅಧಿಭೋಗದಾರರು ಪ್ರತಿವರ್ಷ ಆಸ್ತಿತೆರಿಗೆ ಪಾವತಿಸುವುದು ಕಡ್ಡಾಯ. ಒಂದಕ್ಕಿಂತಲೂ ಹೆಚ್ಚಿನ ಸಾಲಿನ ಆಸ್ತಿ ತೆರಿಗೆ ಪಾವತಿಸದೇ ಇರುವ ಪ್ರಕರಣಗಳಲ್ಲಿ ಆಸ್ತಿ ತೆರಿಗೆ ವಸೂಲಿ ಮಾಡುವ ಕಾರ್ಯವಿಧಾನವನ್ನು ಆಸ್ತಿ ತೆರಿಗೆ ನಿರ್ಧರಣೆ, ವಸೂಲಾತಿ ಮತ್ತು ನಿರ್ವಹಣೆ ನಿಯಮಗಳು 2024ರ ಅಡಿಯಲ್ಲಿ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಹಾಗೂ ನಿಯಮಗಳಲ್ಲಿ ತಿಳಿಸಿರುವಂತೆ ಆಸ್ತಿ ತೆರಿಗೆ ಸುಸ್ಥಿದಾರರಿಗೆ ಕಾರಣ ಕೇಳಿ ಪತ್ರ, ಆಸ್ತಿ ತೆರಿಗೆ ಬೇಡಿಕೆ ಪತ್ರ ಜಾರಿ ಮಾಡಲಾಗಿದ್ದು, ಸಾಕಷ್ಟು ಕಾಲಾವಕಾಶ ವನ್ನು ನೀಡಿದ್ದರೂ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುತ್ತಾರೆ. ಅಂತಹ ಪ್ರಕರಣಗಳ ಮಾಲೀಕರಿಗೆ ಮೊಬೈಲ್ ಸಂದೇಶಗಳ ಮೂಲಕ ಆಸ್ತಿ ತೆರಿಗೆಯನ್ನು ಪಾವತಿಸುವಂತೆ ಹಲವು ಬಾರಿ ತಿಳಿಸಲಾಗಿದೆ ಎಂದರು.

ಕೆ. ಆರ್. ಪುರ ವ್ಯಾಪ್ತಿಯಲ್ಲಿ ನಡೆದ ಹರಾಜು ಪ್ರಕ್ರಿಯೆ ವೇಳೆ ಕಂದಾಯ ಅಧಿಕಾರಿ ಬಸವರಾಜು ಮಗಿ, ಸಹಾಯಕ ಕಂದಾಯ ಅಧಿಕಾರಿ ಹಾಗೂ ಕಂದಾಯ ವಿಭಾಗದ ಅಧಿಕಾರಿ ಸಿಬ್ಬಂದಿ ಉಪಸ್ಥಿತರಿದ್ದರು.

ಹೋಟೆಲ್‌ಗಳಲ್ಲಿ ತಿಂಡಿ–ತಿನಿಸುಗಳ ಬೆಲೆ ಹೆಚ್ಚಳ?

ಬೆಂಗಳೂರು: ವಾಣಿಜ್ಯ ಬಳಕೆಯ ಅಡುಗೆ ಅನಿಲದ ಸಿಲಿಂಡರ್ ದರ ಹೆಚ್ಚಾಗಿರುವುದರಿಂದ ಹೋಟೆಲ್‌ಗಳಲ್ಲಿ ತಿಂಡಿ– ತಿನಿಸುಗಳ ದರವೂ ಹೆಚ್ಚಾಗುವ ಸಾಧ್ಯತೆ ಇದೆ. ದರ ಹೆಚ್ಚಳದ ಬಗ್ಗೆ ಮುಂದಿನ ವಾರ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ತಿಳಿಸಿದೆ.

'ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿ, ದರ ಹೆಚ್ಚಳವಾಗಿದೆ. ಅಡುಗೆ ಅನಿಲ ಸಂಗ್ರಹ ಇದ್ದರೂ, ಕೇಂದ್ರ ಸರ್ಕಾರ ದಿಢೀರನೇ ದರ ಹೆಚ್ಚಿಸಿರುವುದು ಸರಿಯಲ್ಲ. ಮಾರ್ಚ್ 1ರಂದು ವಾಣಿಜ್ಯ ಬಳಕೆ ಅಡುಗೆ ಅನಿಲದ ದರವನ್ನು ₹30, ಮಾರ್ಚ್ 7ರಂದು ₹115 ಹೆಚ್ಚಿಸಲಾಗಿದೆ. ಅಲ್ಲದೆ ಹಿಂದೆ ಸಬ್ಸಿಡಿಯಾಗಿ ನೀಡುತ್ತಿದ್ದ ₹150 ಸ್ಥಗಿತಗೊಳಿಸಿರುವುದರಿಂದ ಒಟ್ಟಾರೆ ₹295 ದರ ಹೆಚ್ಚಳವಾಗಿದೆ' ಎಂದು ಸಂಘದ ಗೌರವ ಅಧ್ಯಕ್ಷ ಪಿ.ಸಿ.ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ (ಬಿಎಸ್‌ಡಬ್ಲ್ಯು) ಕೂಡ ಒಂದು ಕೆ.ಜಿ ತ್ಯಾಜ್ಯಕ್ಕೆ ₹12 ನೀಡುವಂತೆ ಆದೇಶ ಹೊರಡಿಸಿದೆ. ಇದರ ಜೊತೆಗೆ ಒಂದು ಯೂನಿಟ್ ವಿದ್ಯುತ್‌ಗೆ ₹1 ಹೆಚ್ಚಿಸಲಾಗಿದೆ. ಅಡುಗೆ ಎಣ್ಣೆಯ ದರವೂ ಶೇ 15ರಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಇದು ಹೋಟೆಲ್ ಉದ್ಯಮಕ್ಕೆ ಹೊಡೆತ ನೀಡಲಿದೆ. ಆದ್ದರಿಂದ ತಿಂಡಿ-ತಿನಿಸುಗಳ ಬೆಲೆ ಏರಿಸುವುದು ಅನಿವಾರ್ಯವಾಗಲಿದೆ. ವಾಣಿಜ್ಯ ಬಳಕೆ ಅಡುಗೆ ಅನಿಲದ ದರವನ್ನು ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಹಾಗೂ ತ್ಯಾಜ್ಯ ಸಂಗ್ರಹ ಶುಲ್ಕ ಹಾಗೂ ವಿದ್ಯುತ್ ದರ ಇಳಿಕೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗುವುದು' ಎಂದು ಮಾಹಿತಿ ನೀಡಿದರು.

ಘಟಿಕೋತ್ಸವ: ಪ್ರಮಾಣ ಪತ್ರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯವು ಏ.9ರಂದು ಬೆಳಿಗ್ಗೆ 11.30ಕ್ಕೆ ತನ್ನ ಸಭಾಂಗಣದಲ್ಲಿ ಎರಡನೇ ಘಟಿಕೋತ್ಸವ ಹಮ್ಮಿಕೊಂಡಿದೆ.

2023-24 ಮತ್ತು 2024-25ನೇ ಸಾಲಿಗೆ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತದೆ. ಅರ್ಹ ಅಭ್ಯರ್ಥಿಗಳು ಪ್ರಮಾಣ ಪತ್ರಕ್ಕೆ ಇದೇ 14ರೊಳಗೆ ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ವಿ.ವಿ ಪರೀಕ್ಷಾ ನಿಯಂತ್ರಕ ಮೊಹಮ್ಮದ್ ಸಮೀರ್ ಕೆ. ತಿಳಿಸಿದ್ದಾರೆ.

'ಅಲ್ಪಸಂಖ್ಯಾತರ ಹೆಸರು ತೆಗೆಯಲು ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ನೇತೃತ್ವದ ಕೇಂದ್ರದ ಸರ್ಕಾರ ಮತ ಪರಿಷ್ಕರಣೆಯ ಹೆಸರಿನಲ್ಲಿ ಕೇವಲ ಅಲ್ಪಸಂಖ್ಯಾತರ ಹೆಸರುಗಳನ್ನು ಮತ ಪಟ್ಟಿಯಿಂದ ತೆಗೆದು ಹಾಕುತ್ತಿದೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಹೇಳಿದರು.

ಯುಗಾದಿ ಮತ್ತು ರಂಜಾನ್ ಹಬ್ಬದ ಅಂಗವಾಗಿ ಗಂಗಾನಗರ ಮತ್ತು ಚಾಮುಂಡಿ ನಗರದಲ್ಲಿ ಸಾರ್ವಜನಿಕರಿಗೆ ಉಚಿತ ರೇಷನ್ ಕಿಟ್ ವಿತರಿಸಿ ಮಾತನಾಡಿದ ಅವರು, 'ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳಿಗೆ ನಡೆಯುವ ಚುನಾವಣೆಯಲ್ಲಿ ಮತ ಕಳವು ಮಾಡುತ್ತಾರೆ ಎಂಬ ಆತಂಕ ಯಾರಿಗೂ ಬೇಡ. ಎಲ್ಲರೂ ಕಡ್ಡಾಯವಾಗಿ ಚುನಾವಣೆಯಲ್ಲಿ ಪಾಲ್ಗೊಂಡು ಮತ ಚಲಾವಣೆ ಮಾಡಬೇಕು' ಎಂದು ತಿಳಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ ದಾಖಲೆಯ 17ನೇ ಬಜೆಟ್ ಮಂಡಿಸಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸುವುದರ ಜೊತೆಗೆ ದೀನದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ. ಬೆಂಗಳೂರು ನಗರದ ಸರ್ವತೋಮುಖ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹7 ಸಾವಿರ ಕೋಟಿ ಅನುದಾನವನ್ನು ಮೀಸಲಿಡಲಾಗಿದೆ' ಎಂದು ಹೇಳಿದರು.



ಸಮಾರಂಭದಲ್ಲಿ ಬೈರತಿ ಸುರೇಶ್ ಅವರು ಸಾರ್ವಜನಿಕರಿಗೆ ರೇಷನ್ ಕಿಟ್ ವಿತರಿಸಿದರು

ಕಾರು ಅಪಘಾತ: ದಂಪತಿ ಸಾವು

ಕೂಡ್ಲಿಗಿ: ತಾಲ್ಲೂಕಿನ ಅಡವಿ ಸೂರವ್ವನಹಳ್ಳಿ ಕ್ರಾಸ್ ಬಳಿ ಶನಿವಾರ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಕಾರು ಪಲ್ಟಿಯಾಗಿ, ಕಾರಿನಲ್ಲಿದ್ದ ವೃದ್ಧ ದಂಪತಿ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ.

ಬೆಂಗಳೂರಿನ ಪಾಟೀಲ ನಾರಾಯಣಸ್ವಾಮಿ ಲೇಔಟ್‌ನ ಸುಬ್ಬಣ್ಣ ಪಾಳ್ಯ ಬಡಾವಣೆಯ ನಿವಾಸಿಗಳಾದ ರತ್ನ ಬಾಯಿ (65) ಹಾಗೂ ಅವರ ಪತಿ ಶ್ರೀನಿವಾಸ್(70) ಮೃತರು. ಕವಿತಬಾಯಿ ಮತ್ತು ಅವರ ಪತಿ, ಕಾರು ಚಾಲಕ ರೂಪೇಶ್ ಗಾಯಗೊಂಡಿದ್ದಾರೆ. ವೃದ್ಧ ದಂಪತಿ ಅಂಜನಾದ್ರಿ ಬೆಟ್ಟಕ್ಕೆ ಹೊರಟಿದ್ದ ವೇಳೆ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಬಾಲಕಿಯರ ವಸತಿನಿಲಯ

'ವಿದ್ಯಾರ್ಥಿನಿಯರಿಗೆ ಸುರಕ್ಷತೆಯೇ ಇಲ್ಲ'

• ಬೈಲಮೂರ್ತಿ.ಜಿ

ಹೆಸರಘಟ್ಟ: 'ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬೆಂಗಳೂರು ನಗರ ಜಿಲ್ಲೆ ದಾಸನಪುರ ಹೋಬಳಿಯ ಗೋಪಾಲಪುರ ಗ್ರಾಮದ ಹೊರವಲಯದಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಬಾಲಕಿಯರಿಗಾಗಿ ಈಚೆಗೆ ಸುಸಜ್ಜಿತವಾದ ವಸತಿನಿಲಯದ ಸೌಕರ್ಯ ಕಲ್ಪಿಸಲಾಗಿದೆ. ಆದರೆ, ವಸತಿನಿಲಯಕ್ಕೆ ಹೋಗಿ ಬರಲು ವಿದ್ಯಾರ್ಥಿನಿಯರಿಗೆ ಸುರಕ್ಷತೆ ಇಲ್ಲ' ಎಂದು ಪೋಷಕರು ಆತಂಕ ವ್ಯಕ್ತಪಡಿಸಿದ್ದಾರೆ.

'ವಸತಿನಿಲಯವು ಗ್ರಾಮದಿಂದ ಸುಮಾರು ಒಂದೂವರೆ ಕಿ.ಮೀ ದೂರದಲ್ಲಿದ್ದು ಬಸ್‌ಗಾಗಿ ವಿದ್ಯಾರ್ಥಿನಿಯರು ನಿತ್ಯ ನಡೆದುಕೊಂಡೇ ಹೋಗಬೇಕು. ಹಿಂತಿರುಗುವಾಗ ಕತ್ತಲು ಕವಿದಿರುತ್ತದೆ. ದಾರಿಯಲ್ಲಿ ಬೀದಿ ದೀಪದ ಸೌಲಭ್ಯವೂ ಇಲ್ಲ. ರಸ್ತೆಯ ಇಕ್ಕೆಲಗಳಲ್ಲಿ ಗಿಡ-ಗಂಟಿಗಳು ಬೆಳೆದಿದ್ದು ಹಾವು, ಚೇಳುಗಳು ಇದ್ದರೂ ಕಾಣಿಸುವುದಿಲ್ಲ. ವಿದ್ಯಾರ್ಥಿನಿಯರು ಜೀವವನ್ನು ಕೈಯಲ್ಲಿ ಹಿಡಿದು, ಮೊಬೈಲ್ ಟಾರ್ಚ್ ಬೆಳಕು ಆಶ್ರಯಿಸಿ ವಸತಿ ನಿಲಯ ಸೇರಬೇಕಾದ ಪರಿಸ್ಥಿತಿ ಇದೆ' ಎಂದು ಪೋಷಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'ರಸ್ತೆಯ ಇಕ್ಕೆಲಗಳಲ್ಲಿ ಬೆಳೆದಿರುವ ಗಿಡ ಗಂಟಿಗಳನ್ನು ತೆರವು ಮಾಡಲು ಗ್ರಾಮ ಪಂಚಾಯಿತಿ ಮುಂದಾಗಿಲ್ಲ. ಅಲ್ಲದೇ ಬೀದಿ ದೀಪದ ವ್ಯವಸ್ಥೆ ಕಲ್ಪಿಸಲು ಗಮನ ಹರಿಸಿಲ್ಲ. ವಸತಿ ನಿಲಯಕ್ಕೆ ವಿದ್ಯಾರ್ಥಿನಿಯರು ಸುರಕ್ಷಿತವಾಗಿ ಹೋಗಿ ಬರಲು ಬೇಕಾದ ಸೌಲಭ್ಯಗಳ ಜೊತೆಗೆ ಬಸ್ ವ್ಯವಸ್ಥೆಯನ್ನು ವಸತಿ ನಿಲಯದವರೆಗೆ ವಿಸ್ತರಿಸಲು ಸಮಾಜ ಕಲ್ಯಾಣ ಇಲಾಖೆ ಕ್ರಮ ತೆಗೆದುಕೊಳ್ಳಬೇಕು' ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಇಲಾಖೆಯ ಸಹಾಯಕ ನಿರ್ದೇಶಕ ಸುರೇಶ್ ಅವರನ್ನು ಸಂಪರ್ಕಿಸಲಾಯಿತು. ಆದರೆ, ಮಾಹಿತಿ ಕೊಡಲು ಅವರು ನಿರಾಕರಿಸಿದರು.



ರಸ್ತೆಯ ಎರಡೂ ಕಡೆ ಬೆಳೆದಿರುವ ಗಿಡಗಳು

> ಮುಖ್ಯ ರಸ್ತೆಯಿಂದ ವಸತಿನಿಲಯದವರೆಗೆ ಬೀದಿ ದೀಪಗಳನ್ನು ಅಳವಡಿಸಲು ₹2.5 ಲಕ್ಷ ಅನುದಾನ ಕಾಯ್ದಿರಿಸಿದ್ದು ಜರೂರಾಗಿ ಕಾಮಗಾರಿ ಪ್ರಾರಂಭ ಮಾಡಲಾಗುವುದು
> **ಎಂ.ಆರ್. ಸಿದ್ದಪ್ಪ,** ಪಿಡಿಒ, ಗೋಪಾಲಪುರ ಗ್ರಾ. ಪಂ.

> ರಸ್ತೆಯ ಬದಿಯಲ್ಲಿ ಇರುವ ಗಿಡಗಂಟಿಗಳನ್ನು ಸ್ವಚ್ಛ ಮಾಡಿ ವಿದ್ಯುತ್ ಕಂಬಗಳಿಗೆ ಸೋಲಾರ್ ದೀಪ ಅಳವಡಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು
> **ಯತೀಶ್ ಆರ್.** ಜಿಲ್ಲಾ ಪಂಚಾಯಿತಿ ಸಿಇಒ

‘ತ್ಯಾಜ್ಯ ಶ್ರಮಿಕರ ಕಲ್ಯಾಣ ಮಸೂದೆ ಅಂಗೀಕರಿಸಿ’



ತ್ಯಾಜ್ಯ ಶ್ರಮಿಕರ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಇಂದುಮತಿ ಹಾಗೂ ರುತ್ ಮನೋರಮ ಅವರು ಮೀನಾ ಪಾಟೀಲ ಅವರಿಗೆ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತ್ಯಾಜ್ಯ ನಿರ್ವಹಣೆ ಮತ್ತು ಮರುಬಳಕೆಯಲ್ಲಿ ತ್ಯಾಜ್ಯ ಶ್ರಮಿಕರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರಿಗೆ ಕಾರ್ಮಿಕರ ಮಾನ್ಯತೆ ನೀಡಲು ‘ಕರ್ನಾಟಕ ತ್ಯಾಜ್ಯ ಶ್ರಮಿಕರ ಕಲ್ಯಾಣ ಮಸೂದೆ-2024’ ಅನ್ನು ಅಂಗೀಕರಿಸಬೇಕು’ ಎಂದು ತ್ಯಾಜ್ಯ ಶ್ರಮಿಕರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ತ್ಯಾಜ್ಯ ಆಯುವವರ ಅಂತರರಾಷ್ಟ್ರೀಯ ದಿನದ ಪ್ರಯುಕ್ತ ತ್ಯಾಜ್ಯ ಶ್ರಮಿಕ ಸಂಘ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಬಗ್ಗೆ ಕಾರ್ಮಿಕ ಇಲಾಖೆಯ ಸಹಾಯಕ ಆಯುಕ್ತೆ ಮೀನಾ ಪಾಟೀಲ ಅವರಿಗೆ ಮನವಿ ಸಲ್ಲಿಸಲಾಯಿತು. ಸರ್ಕಾರೇತರ ಸಂಸ್ಥೆಗಳಾದ ಹಸಿರು ದಳದ ಸಹ ಸಂಸ್ಥಾಪಕಿ ನಳಿನಿ ಶೇಖರ್, ವಿಮೆನ್ಸ್ ವಾಯ್ಸ್‌ನ ಪ್ರಧಾನ ಕಾರ್ಯದರ್ಶಿ ರುತ್ ಮನೋರಮ, ತ್ಯಾಜ್ಯ ಶ್ರಮಿಕ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಇಂದುಮತಿ ಉಪಸ್ಥಿತರಿದ್ದರು.

ಸಂಘದ ಪರವಾಗಿ ಶಾಲಿನಿ ಅವರು ಬೇಡಿಕೆಗಳನ್ನು ಮಂಡಿಸಿದರು. ‘ರಾಜ್ಯದಲ್ಲಿ 4 ಲಕ್ಷಕ್ಕೂ ಅಧಿಕ ತ್ಯಾಜ್ಯ ಶ್ರಮಿಕರು ಅನೌಪಚಾರಿಕವಾಗಿ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿದ್ದಾರೆ. ತ್ಯಾಜ್ಯ ಸಂಗ್ರಹಿಸುವ ಮೂಲಕ ಸಾರ್ವಜನಿಕ ಆರೋಗ್ಯ, ಪರಿಸರ ಸಂರಕ್ಷಣೆ ಮತ್ತು ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಇವರಲ್ಲಿ ವಿವಿಧ ವರ್ಗಗಳಿದ್ದು, ಕಾಗದ, ಪ್ಲಾಸ್ಟಿಕ್‌ನಂತಹ ವಸ್ತುಗಳನ್ನು ಆಯುವವರ ಜತೆಗೆ, ತ್ಯಾಜ್ಯ ವಿಂಗಡಿಸುವವರು, ಕೂದಲು ಸಂಗ್ರಹಣೆ ಮಾಡುವವರು, ಒಣ ತ್ಯಾಜ್ಯ ಸಂಗ್ರಹ ಕೇಂದ್ರದ ನಿರ್ವಾಹಕರು ಸೇರುತ್ತಾರೆ’ ಎಂದು ಹೇಳಿದರು.

‘ತ್ಯಾಜ್ಯ ಶ್ರಮಿಕರ ಸಂಘಗಳು, ಕಾನೂನು ಹಾಗೂ ಕಾರ್ಮಿಕ ಕಲ್ಯಾಣ ಕ್ಷೇತ್ರದ ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ಕರ್ನಾಟಕ ತ್ಯಾಜ್ಯ ಶ್ರಮಿಕರ ಕಲ್ಯಾಣ ಮಸೂದೆ ರೂಪಿಸಲಾಗಿದೆ. ಇದು ತ್ಯಾಜ್ಯ ಶ್ರಮಿಕರಿಗೆ ಅಧಿಕೃತ ಗುರುತು ನೀಡಲು, ರಕ್ಷಣೆ ಒದಗಿಸಲು ಮತ್ತು ಅವರ ಕಲ್ಯಾಣವನ್ನು ಖಚಿತಪಡಿಸಲು ಹಕ್ಕು ಆಧಾರಿತ ಚೌಕಟ್ಟನ್ನು ಒದಗಿಸಲಿದೆ. ಆದ್ದರಿಂದ ಕಾರ್ಮಿಕ ಇಲಾಖೆ ಈ ಮಸೂದೆಯನ್ನು ಜಾರಿಗೆ ತರಲು ನೆರವಾಗಬೇಕು’ ಎಂದು ಆಗ್ರಹಿಸಿದರು.

‘ಎಲ್ಲ ತ್ಯಾಜ್ಯ ಶ್ರಮಿಕರನ್ನು ಇಲಾಖೆಯಡಿ ನೋಂದಾಯಿಸಿಕೊಂಡು, ವೃತ್ತಿ ಗುರುತಿನ ಚೀಟಿ ನೀಡಬೇಕು. ವೈದ್ಯಕೀಯ ಸೇವೆ ಸೇರಿ ವಿವಿಧ ಸೌಲಭ್ಯ ಒದಗಿಸಬೇಕು’ ಎಂದರು.

ಮೀನಾ ಪಾಟೀಲ, ‘ರಾಜ್ಯದಲ್ಲಿ ಈಗಾಗಲೇ 12 ಸಾವಿರಕ್ಕೂ ಅಧಿಕ ತ್ಯಾಜ್ಯ ಶ್ರಮಿಕರು ನೋಂದಣಿಯಾಗಿದ್ದಾರೆ. ಬೆಂಗಳೂರು ಹೊರತುಪಡಿಸಿ ಉಳಿದೆಡೆ ಗುರುತಿನ ಚೀಟಿ ಹಂಚಿಕೆ ಮಾಡಲಾಗಿದೆ. ಈ ವರ್ಗದವರಿಗೆ ಅಪಘಾತ ಪರಿಹಾರ ಸೌಲಭ್ಯ ಒದಗಿಸಿದ್ದು, ಮೃತರ ಕುಟುಂಬಕ್ಕೆ ₹ 1 ಲಕ್ಷ ಪರಿಹಾರ ನೀಡಲಾಗುತ್ತಿದೆ. ಗಾಯಗೊಂಡು ಹಾಸಿಗೆ ಹಿಡಿದವರಿಗೂ ಇಷ್ಟೇ ಪರಿಹಾರ ಸಿಗಲಿದೆ’ ಎಂದರು.

ಮುಂದುವರೆದಿದೆ...

ಸಾಲದ ಬಡ್ಡಿಯೇ ₹3.08 ಲಕ್ಷ ಕೋಟಿ

ಬಂಡವಾಳ ವೆಚ್ಚ, ದೀರ್ಘಕಾಲೀನ ಯೋಜನೆಗಳಿಗೆ ಹೆಚ್ಚುತ್ತಿದೆ ಸಾಲದ ಪ್ರಮಾಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದಲ್ಲಿ ಆಡಳಿತ ನಡೆಸಿದ ಸರ್ಕಾರಗಳು ಇದುವರೆಗೂ ಮಾಡಿರುವ ಸಾಲಕ್ಕೆ ಮುಂದಿನ ಐದು ವರ್ಷಗಳಲ್ಲಿ ಕಟ್ಟಬೇಕಿರುವ ಬಡ್ಡಿಯ ಮೊತ್ತ ಬರೋಬ್ಬರಿ ₹3.08 ಲಕ್ಷ ಕೋಟಿ.

ಆರ್ಥಿಕ ಇಲಾಖೆ ಸಿದ್ಧಪಡಿಸಿರುವ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಈ ಕುರಿತು ಮಾಹಿತಿ ಇದೆ. 2025–26ನೇ ಹಣಕಾಸು ವರ್ಷದಿಂದ ಆರಂಭಗೊಂಡು 2029–30ರವರೆಗೂ ಸಾಲಗಳ ಮೇಲೆ ದೊಡ್ಡ ಮೊತ್ತದ ಬಡ್ಡಿಯನ್ನು ಪಾವತಿಸಬೇಕಿದೆ.

ರಾಜ್ಯದ ಆದಾಯಕ್ಕಿಂತ ವೆಚ್ಚವು ಅಧಿಕವಾದಾಗ ರಾಜ್ಯದ ಬಂಡವಾಳ ಯೋಜನೆಗಳಿಗೆ ಕೊರತೆಯಾಗುವ ಮೊತ್ತವನ್ನು ಅಧಿಕಾರದಲ್ಲಿರುವ ಸರ್ಕಾರಗಳು ಸಾಲದ ಮೂಲಕ ನೀಗಿಸುತ್ತಾ ಬಂದಿವೆ. ಮುಕ್ತ ಮಾರುಕಟ್ಟೆ, ಹಣಕಾಸು ಸಂಸ್ಥೆಗಳು ಮತ್ತು ಇತರ ಮೂಲಗಳಿಂದ ಸಂಗ್ರಹಿಸುವ ಸಾಲವನ್ನು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಬಂಡವಾಳ ಯೋಜನೆಗಳಿಗೆ ವಿನಿಯೋಗಿಸಿವೆ. ರಾಜ್ಯದ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸಲು, ಸಾರ್ವಜನಿಕ ಸೇವೆಗಳ ಗುಣಮಟ್ಟವನ್ನು ಸುಧಾರಿಸಲು, ದೀರ್ಘ ಕಾಲೀನ ಆರ್ಥಿಕ ಪ್ರಯೋಜನೆಗಳನ್ನು ಸಾಧಿಸಲು ಸಾಲದ ಮೊತ್ತವನ್ನು ಬಳಕೆ ಮಾಡುತ್ತಾ ಬಂದಿವೆ. ಬಂಡವಾಳ ಹೂಡಿಕೆಗಳಿಗೆ ಅನುಗುಣವಾಗಿ ಸಾಲದ ಪ್ರಮಾಣವೂ ಏರುತ್ತಲೇ ಸಾಗಿದೆ. 2023–24ನೇ ಆರ್ಥಿಕ ವರ್ಷದಲ್ಲಿ ₹90,280 ಕೋಟಿ ಸಾಲವನ್ನು ರಾಜ್ಯ ಸರ್ಕಾರ ಪಡೆದಿತ್ತು. 2026–27ರ ಸಾಲಿನಲ್ಲಿ ಸಾಲ ಪಡೆಯುವ ಪ್ರಮಾಣವನ್ನು ₹1.32 ಲಕ್ಷ ಕೋಟಿ ಎಂದು ಬಜೆಟ್‌ನಲ್ಲಿ ಅಂದಾಜಿಸಲಾಗಿದೆ. ಈ ತಿಂಗಳ ಅಂತ್ಯಕ್ಕೆ ರಾಜ್ಯದ ಒಟ್ಟು ಹೊಣೆಗಾರಿಕೆ ಮೊತ್ತ ₹7.64 ಲಕ್ಷ ಕೋಟಿ ತಲುಪಲಿದೆ. 2026ರ ಮಾರ್ಚ್ ಅಂತ್ಯಕ್ಕೆ ಒಟ್ಟು ಸಾಲದ ಮೊತ್ತ ₹8.24 ಲಕ್ಷ ಕೋಟಿ ಆಗಲಿದೆ ಎಂದು ಬಜೆಟ್ ಅಂದಾಜಿಸಿದೆ. ಹೀಗೆಯೇ ಸಾಲದ ಪ್ರಮಾಣ ಮುಂದುವರಿದರೆ 2029–30ರ ವೇಳೆ ಒಟ್ಟು ಹೊಣೆಗಾರಿಕೆಯ ಮೊತ್ತ ಅಂದಾಜು ₹10.24 ಲಕ್ಷ ಕೋಟಿ ತಲುಪಲಿದೆ ಎಂದು ಮಧ್ಯಮಾವಧಿ ವಿತ್ತೀಯ ಯೋಜನೆ ಅಂದಾಜಿಸಿದೆ.

ಪಾವತಿಸುವ ಬಡ್ಡಿ (₹ಕೋಟಿಗಳಲ್ಲಿ)

2025-26	45,600
2026-27	53,332
2027-28	60,798
2028-29	69,310
2029-30	79,013

ಪಡೆದ ಸಾಲದ ಮೊತ್ತ (₹ಕೋಟಿ)

2023-24	90,280
2024-25	1,03,342
2024-25	1,16,000
2026-27	1,32,000

ಮರುಪಾವತಿ ಅವಧಿ	ಶೇಕಡವಾರು
5 ವರ್ಷದ ಒಳಗೆ	32.7
5-10 ವರ್ಷ	37.4
10-15 ವರ್ಷ	24.6
15 ವರ್ಷ ಮೇಲ್ಪಟ್ಟು	5.3

ಆಧಾರ: ವಿಧಾನಸಭೆಯಲ್ಲಿ ಮಂಡಿಸಲಾದ ಮಧ್ಯಮಾವಧಿ ವಿತ್ತೀಯ ಯೋಜನೆ 2026-300 ಮಾಹಿತಿ

ಅಸಲು ಪಾವತಿ ಶೇ 33.4 ಹೆಚ್ಚಳ

ಬಡ್ಡಿಯ ಜತೆಗೆ ಸಾಲದ ಅಸಲನ್ನು ಕಂತಿನ ಪ್ರಕಾರ ಪಾವತಿಸುವ ಗುರುತರ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರಗಳು ನಿಭಾಯಿಸಬೇಕಿದೆ. ಈ ಕಂತುಗಳು ಹೊಣೆಗಾರಿಕೆಯನ್ನು ಪ್ರತಿ ವರ್ಷ ಏರಿಕೆಯಾಗುತ್ತಲೇ ಇವೆ. 2025–26ನೇ ಸಾಲಿನಲ್ಲಿ ಸಾಲ ಮರುಪಾವತಿ ಮೊತ್ತ ₹26,474 ಕೋಟಿ ಇತ್ತು. 2026–27ನೇ ಸಾಲಿನಲ್ಲಿ ₹35,316 ಕೋಟಿಗೆ ತಲುಪಲಿದೆ. ಅದು ಈ ಸಾಲಿನ ಪಾವತಿಗೆ ಹೋಲಿಸಿದರೆ ಶೇ 33.4ರಷ್ಟು ಹೆಚ್ಚಳವಾಗಲಿದೆ ಎಂದು ಮಧ್ಯಮಾವಧಿ ವಿತ್ತೀಯ ಯೋಜನೆ ಉಲ್ಲೇಖಿಸಿದೆ.

ರಾಜ್ಯ ಸರ್ಕಾರ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಪ್ರಮಾಣದಲ್ಲಿ (ಜಿಎಸ್‌ಡಿಪಿ) ಸುಸ್ಥಿರತೆ ಕಾಯ್ದುಕೊಂಡು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಹಣಕಾಸು ಆಯೋಗಗಳ ಶಿಫಾರಸು ಮಾಡಿದ ಶಿಫಾರಸುಗಳು, ಸಾಲ ಸುಸ್ಥಿರತೆಯ ಚೌಕಟ್ಟುಗಳ ಒಳಗೆ ಸಾಲ ಮಾಡುತ್ತಾ ಬಂದಿದ್ದರೂ ಅಲ್ಲ ಹಾಗೂ ಮಧ್ಯಮಾವಧಿ ಸಾಲದ ಹೆಚ್ಚಳ, ದೀರ್ಘಾವಧಿ ಸಾಲದ ಪ್ರಮಾಣ ಕಡಿಮೆ ಮಾಡುತ್ತಿರುವುದು ಪ್ರತಿ ವರ್ಷದ ಬಜೆಟ್ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದೂ ಹೇಳಿದೆ.

2029–30ಕ್ಕೆ ₹1.12 ಲಕ್ಷ ಕೋಟಿ ಆಗುವ ಸಾಧ್ಯತೆ

ಬಂಡವಾಳ ವೆಚ್ಚ: ಏರು ಹಾದಿ

• ಜಯಸಿಂಹ ಆರ್.

ಬೆಂಗಳೂರು: ಮುಂದಿನ ಐದು ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರದ ಬಂಡವಾಳ ವೆಚ್ಚವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ.

ರಾಜ್ಯದ ಬಂಡವಾಳ ವೆಚ್ಚವು ಪ್ರತಿ ಆರ್ಥಿಕ ವರ್ಷದಲ್ಲೂ ಏರಿಕೆಯಾಗಲಿದೆ ಎನ್ನುತ್ತದೆ 2026–2030ರ ಮಧ್ಯಮಾವಧಿ ವಿತ್ತೀಯ ಮುನ್ನಂದಾಜು.

2029–30ನೇ ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ ರಾಜ್ಯದ ಬಂಡವಾಳ ವೆಚ್ಚ ₹1.12 ಲಕ್ಷ ಕೋಟಿಯಷ್ಟಾಗಲಿದೆ. ಈ ಅವಧಿಯಲ್ಲಿ ರಾಜ್ಯ ಸರ್ಕಾರವು ₹4.32 ಲಕ್ಷ ಕೋಟಿಯನ್ನು ಬಂಡವಾಳ ವೆಚ್ಚಕ್ಕೆ ವಿನಿಯೋಗಿಸಲಿದೆ.


ರಾಜ್ಯದ ಆರ್ಥಿಕ ಬೆಳವಣಿಗೆಯ ವೇಗ ಹೆಚ್ಚಿಸುವಂತಹ ಮೂಲಸೌಕರ್ಯ ಅಭಿವೃದ್ಧಿ, ಸರ್ಕಾರಕ್ಕೆ ಆದಾಯ ತರುವ ಆಸ್ತಿ ಸೃಜನೆಗಾಗಿ ಮಾಡುವ ವೆಚ್ಚವೇ ಬಂಡವಾಳ ವೆಚ್ಚ. ರಾಜ್ಯದ ಬಂಡವಾಳ ವೆಚ್ಚದ ಮೊತ್ತ ಮತ್ತು ಪ್ರಮಾಣ ಹೆಚ್ಚಿದಂತೆಲ್ಲಾ, ಆರ್ಥಿಕತೆಯ ಬೆಳವಣಿಗೆಯ ವೇಗ ಹೆಚ್ಚುತ್ತದೆ. ರಾಜ್ಯ ಸರ್ಕಾರವು ಬಂಡವಾಳ ವೆಚ್ಚಕ್ಕೆ ಆದ್ಯತೆ ನೀಡಿದೆ ಎಂಬುದನ್ನು ಮುನ್ನಂದಾಜಿನಲ್ಲಿನ ದತ್ತಾಂಶಗಳು ಸೂಚಿಸುತ್ತವೆ.

2025–26ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ಬಂಡವಾಳ ವೆಚ್ಚವು ₹65,982 ಕೋಟಿಯಷ್ಟು ಇದ್ದು, 2026–27ನೇ ಸಾಲಿನಲ್ಲಿ ₹74,682 ಕೋಟಿಗೆ ಏರಿಕೆಯಾಗಿದೆ. ರಾಜ್ಯದ ಹಣಕಾಸು ಸ್ಥಿತಿಯು ಇದೇ ಬೆಳವಣಿಗೆ ಮಟ್ಟವನ್ನು ಕಾಯ್ದುಕೊಂಡರೆ 2029–30ನೇ ಸಾಲಿನಲ್ಲಿ ಬಂಡವಾಳ ವೆಚ್ಚವು ₹1.12 ಲಕ್ಷ ಕೋಟಿಗೆ ತಲುಪಲಿದೆ.


'ಬಂಡವಾಳ ವೆಚ್ಚವು ರಾಜ್ಯದ ಅಭಿವೃದ್ಧಿಯ ಪ್ರಮುಖ ಸೂಚಕವಾಗಿದೆ. ಬಂಡವಾಳ ವೆಚ್ಚವು ರಾಜ್ಯದ ಒಟ್ಟು ಉತ್ಪನ್ನದ (ಜಿಎಸ್‌ಡಿಪಿ) ಶೇ 2ಕ್ಕಿಂತ ಹೆಚ್ಚು ಇರಬೇಕು. ಈ ಅವಧಿಯ ಐದೂ ವರ್ಷಗಳಲ್ಲಿ ರಾಜ್ಯವು, ಜಿಎಸ್‌ಡಿಪಿಯ ಶೇ 2ರಷ್ಟಕ್ಕಿಂತ ಹೆಚ್ಚಿನ ಬಂಡವಾಳ ವೆಚ್ಚ ಪ್ರಮಾಣವನ್ನು ಕಾಯ್ದುಕೊಂಡಿದೆ ಎಂದು ಬದಿದೆ' ಎಂಬ ವಿವರ ಮುನ್ನಂದಾಜಿನಲ್ಲಿದೆ.

2025–26ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ಜಿಎಸ್‌ಡಿಪಿಯ ಶೇ 2.13ರಷ್ಟು ಇದ್ದ ಬಂಡವಾಳ ವೆಚ್ಚ ಪ್ರಮಾಣವು, 2026–27ರ ಬಜೆಟ್ ಅಂದಾಜಿನಲ್ಲಿ ಶೇ 2.26ಕ್ಕೆ ಏರಿಕೆಯಾಗಿದೆ. 2029–30ನೇ ಸಾಲಿನ ವೇಳೆಗೆ ಬಂಡವಾಳ ವೆಚ್ಚ ಪ್ರಮಾಣವು ಜಿಎಸ್‌ಡಿಪಿಯ ಶೇ 2.62ಕ್ಕೆ ಏರಿಕೆಯಾಗಲಿದೆ. ಒಟ್ಟಾರೆಯಾಗಿ ರಾಜ್ಯದ ಆರ್ಥಿಕತೆಯು ಉತ್ತಮ ಬೆಳವಣಿಗೆ ದರವನ್ನು ಕಾಯ್ದುಕೊಂಡಿದೆ ಮತ್ತು ಕಾಯ್ದುಕೊಳ್ಳಲಿದೆ ಎಂಬುದನ್ನು ಈ ಅಂಶಗಳು ಹೇಳುತ್ತವೆ.

₹1.12 ಲಕ್ಷ ಕೋಟಿಯತ್ತ...




ಜಿಎಸ್‌ಡಿಪಿಯಲ್ಲಿ ಬಂಡವಾಳ ವೆಚ್ಚದ ಪ್ರಮಾಣ



ಶಶಿಧರ ಹಾಲಾಡಿಗೆ ‘ಅತ್ಯುತ್ತಮ ಕಾದಂಬರಿ ಪ್ರಶಸ್ತಿ’

ಬೆಂಗಳೂರು: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ನೀಡುವ 2025ನೇ ಸಾಲಿನ ‘ಅತ್ಯುತ್ತಮ ಕಾದಂಬರಿ ಪ್ರಶಸ್ತಿ’ಗೆ ಲೇಖಕ ಶಶಿಧರ ಹಾಲಾಡಿ ಅವರ ‘ನದಿ ದಾಟಿ ಬಂದವರು’ ಕಾದಂಬರಿ ಆಯ್ಕೆಯಾಗಿದೆ.

ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ. ವಿಮರ್ಶಕಿ ಎಂ.ಎಸ್. ಆಶಾದೇವಿ ಮತ್ತು ಕಾದಂಬರಿಕಾರ್ತಿ ಎನ್. ಸಂಧ್ಯಾರಾಣಿ ಅವರು ಈ ಆಯ್ಕೆ ಮಾಡಿದ್ದಾರೆ. ಸ್ಪರ್ಧೆಗೆ 52 ಕಾದಂಬರಿಗಳು ಬಂದಿದ್ದವು. ಅವುಗಳಲ್ಲಿ ‘ನದಿ ದಾಟಿ ಬಂದವರು’ ಕಾದಂಬರಿ ಪ್ರಶಸ್ತಿಗೆ ಆಯ್ಕೆ ಆಗಿದೆ.



ದ್ವಾರನಕುಂಟೆ ಪಾತಣ್ಣ ಅವರ 76ನೇ ಜನ್ಮದಿನವಾದ ಇದೇ 14ರಂದು ಸಂಜೆ 5 ಗಂಟೆಗೆ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ತಿಳಿಸಿದ್ದಾರೆ.

‘ದೇಶದ್ರೋಹದ ಪ್ರಕರಣ ದಾಖಲಿಸಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ ಹತ್ಯೆಗೀಡಾದ ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಖಮೇನಿ ಅವರ ಬ್ಯಾನರ್, ಪೋಸ್ಟರ್‌ಗಳನ್ನು ಪೊಲೀಸರು ತೆಗೆದುಹಾಕಬೇಕು. ಅವುಗಳನ್ನು ಅಳವಡಿಸಿದವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು’ ಎಂದು ಶ್ರೀರಾಮ ಸೇನಾ ಮುಖ್ಯಸ್ಥ ಪ್ರಮೋದ ಮುತಾಲಿಕ ಆಗ್ರಹಿಸಿದರು.

‘ಖಮೇನಿ ಹಿಂದೂ ಮತ್ತು ಭಾರತ ವಿರೋಧಿ ನಾಯಕರಾಗಿದ್ದರು. ಅವರ ಹತ್ಯೆ ಖಂಡಿಸಿ ಪ್ರತಿಭಟಿಸುವುದು ಮತ್ತು ಬ್ಯಾನರ್‌ಗಳನ್ನು ಅಳವಡಿಸುವುದು ಸರಿಯಲ್ಲ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಕಲೇಸಂ: ಸಾಹಿತ್ಯ ಕೃತಿಗಳಿಗೆ ಪ್ರಶಸ್ತಿ ಪ್ರಕಟ

ಬೆಂಗಳೂರು:ಕರ್ನಾಟಕಲೇಖಕಿಯರ ಸಂಘವು (ಕಲೇಸಂ) 2025ನೇ ಸಾಲಿನ ವಿವಿಧ ವಾರ್ಷಿಕದತ್ತಿ ಪ್ರಶಸ್ತಿಗಳನ್ನುಘೋಷಿಸಿದೆ.

ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಶನಿವಾರ ಪ್ರಕಟಿಸಿದ್ದಾರೆ. ‘ಶ್ರೀಮತಿ ಕೆ.ಟಿ. ಬನಶಂಕರಮ್ಮ ಪ್ರಶಸ್ತಿ’ಗೆ (ಶಿಕ್ಷಕಿ ಹಾಗೂ ಲೇಖಕಿ) ದಾವಣಗೆರೆಯ ಬಿ.ಟಿ. ಗೀತಾ ಮಂಜು, ‘ಶ್ರೀಮತಿ ಶ್ರೀಲೇಖಾ’ ಪ್ರಶಸ್ತಿಗೆ (ಅನುವಾದ) ಭೂಮಿಕಾ ಆರ್. ಅವರ ‘ಜೊರಾಮಿ’ ಕೃತಿ, ‘ಶ್ರೀಮತಿ ಭಾಗ್ಯ ನಂಜಪ್ಪ’ ಪ್ರಶಸ್ತಿಗೆ (ವಿಜ್ಞಾನ ಸಾಹಿತ್ಯ) ಸುಕನ್ಯಾ ಸೂನಗಹಳ್ಳಿ ಅವರ ‘ಕಬ್ಬಿನ ಸಿಹಿ ವರ್ಧಿಸಿದ ಅಮ್ಮ- ಡಾ. ಜಾನಕಿ ಅಮ್ಮಾಳ್’ ಕೃತಿ, ‘ಶ್ರೀಮತಿ ಜಿ.ವಿ. ನಿರ್ಮಲ’ ಪ್ರಶಸ್ತಿಗೆ (ಅನುವಾದ ಸಾಹಿತ್ಯ) ವೀಣಾ ಮುರುಳೀಧರ್ ಅವರ ‘ಚನ್ನೆ ಮಣೆಯ ಜಗತ್ತು’ ಕೃತಿ ಆಯ್ಕೆಯಾಗಿದೆ.

‘ಶ್ರೀಮತಿ ಉಷಾ ಪಿ. ರೈ’ ಪ್ರಶಸ್ತಿಗೆ (ಕಾವ್ಯ) ಪ್ರಜ್ಞಾ ಮತ್ತಿಹಳ್ಳಿ ಅವರ ‘ಬೆಳದಿಂಗಳ ಸೋನೆಮಳೆ’ ಕೃತಿ, ‘ಶ್ರೀಮತಿ ನಾಗರತ್ನ ಚಂದ್ರಶೇಖರ್’ ಪ್ರಶಸ್ತಿಗೆ (ಲಲಿತ ಪ್ರಬಂಧ) ಸುಚಿತ್ರಾ ಹೆಗಡೆ ಅವರ ‘ಮಿಂಚುಹುಳದ ದಾರಿ’ ಕೃತಿ, ‘ಡಾ.ಬಿ.ಸಿ. ಶೈಲಾ ನಾಗರಾಜ್ ಕಾವ್ಯ ಪ್ರಶಸ್ತಿ’ಗೆ ಮಮತಾ ಅರಸೀಕೆರೆ ಅವರ ‘ಗಾಯಗಳಿಗೆ ವಿದಾಯ ಹೇಳಬೇಕು’ ಕೃತಿ, ‘ಶ್ರೀಮತಿ ಸಂಕಮ್ಮ ಸಂಕಣ್ಣನವರ್ ಕಾವ್ಯ ಪ್ರಶಸ್ತಿ’ಗೆ ಅನಿತಾ ಪಿ. ತಾಕೊಡೆ ಅವರ ‘ಮೇಣಕ್ಕಂಟಿದ ಬತ್ತಿ’ ಕೃತಿ ಭಾಜನವಾಗಿದೆ.

‘ಶ್ರೀಜಯ ಕಲಕೋಟಿ ಪ್ರಶಸ್ತಿ’ಗೆ (ವಚನ ಸಾಹಿತ್ಯ) ಇಂದಿರಾ ಮೋಟೆ ಬೆನ್ನೂರ ಅವರ ‘ಬಸವಣ್ಣ ಬರುವಾಗ ಬಿಸಿಲು ಬೆಳದಿಂಗಳು’ ಕೃತಿ, ‘ಶ್ರೀಮತಿ ಸುಶೀಲಾ ಸೋಮಶೇಖರ್’ ಪ್ರಶಸ್ತಿಗೆ (ವಚನ ಸಾಹಿತ್ಯ) ದಾಕ್ಷಾಯಣಿ ಜಯ ದೇವಪ್ಪ ಅವರ ‘ದಾಕ್ಷಾಯಣಿ ವಚನಗಳು’ ಕೃತಿ, ‘ಶ್ರೀಮತಿ ಲಕ್ಷ್ಮಿದೇವಮ್ಮ ಕಥಾ ಪ್ರಶಸ್ತಿ’ಗೆ (ಮಲ್ಲಿಕಾ ಬಸವರಾಜು)ಕುಸುಮಾ ಆಯರಹಳ್ಳಿ ಅವರ ‘ಕಪಿಲೆ ಕಂಡ ಕತೆಗಳು’ ಕೃತಿ, ‘ಶ್ರೀಮತಿ ನಿರುಪಮಾ’ ಪ್ರಶಸ್ತಿಗೆ (ಕತೆಗಳು) ಡಿಜಿಟಲ್ ಮಾಧ್ಯಮ ವಿಭಾಗ ದಲ್ಲಿ ಭವ್ಯ ಅಶೋಕ್ ಸಂಪಗಾರ ಅವರ ‘ಗುಡ್ಡದ ತಿರುವು’, ಮುದ್ರಣ ಮಾಧ್ಯಮ ವಿಭಾಗದಲ್ಲಿ ದೀಪಿಕಾ ಚಾಟೆ ಅವರ ‘ಚಿಗುರಿದ ಆತ್ಮವಿಶ್ವಾಸ’ ಕೃತಿ ಆಯ್ಕೆಯಾಗಿದೆ.

‘ಶ್ರೀಮತಿ ಪ್ರೇಮಾ ಭಟ್ ಮತ್ತು ಎ.ಎಸ್. ಭಟ್’ ಲೇಖಕಿ ಹಾಗೂ ಪ್ರಕಾಶಕಿ ಪ್ರಶಸ್ತಿಗೆ ಆರ್. ಪೂರ್ಣಿಮಾ ಆಯ್ಕೆಯಾಗಿದ್ದಾರೆ. ‘ಶ್ರೀಮತಿ ತ್ರಿವೇಣಿ ದತ್ತಿ ನಿಧಿ’ ವಿಭಾಗದಲ್ಲಿ (ಕಥಾ ಸಂಕಲನ) ವಿಜಯಶ್ರೀ ಹಾಲಾಡಿ ಅವರ ‘ಉಮ್ಮಲ್ತಿ ಗುಡಿಯ ಸಾಕ್ಷಿ’ ಪ್ರಥಮ, ಎಡೆಯೂರು ಪಲ್ಲವಿ ಅವರ ‘ಕುಂಡದ ಬೇರು’ ದ್ವಿತೀಯ ಹಾಗೂ ಪೂರ್ಣಿಮಾ ಭಟ್ಟ ಅವರ ‘ಕತೆ ಜಾರಿಯಲ್ಲಿರಲಿ’ ಕಥಾ ಸಂಕಲನ ತೃತೀಯ ಸ್ಥಾನ ಪಡೆದಿದೆ.

‘ಶ್ರೀಮತಿ ಕಾಕೋಳು ಸರೋಜಮ್ಮ’ ಪ್ರಶಸ್ತಿಗೆ (ಕಾದಂಬರಿ) ಪೌಜಿಯಾ ಸಲೀಂ ಅವರ ‘ಹರ್ಷರಾಗ’ ಕೃತಿ, ‘ಶ್ರೀಮತಿ ಕಮಲಾ ರಾಮಸ್ವಾಮಿ’ ಪ್ರಶಸ್ತಿಗೆ (ಪ್ರವಾಸ ಸಾಹಿತ್ಯ) ಡಿ. ಮಂಗಳಾ ಪ್ರಿಯದರ್ಶಿನಿ ಅವರ ‘ನಾ ಕಂಡ ಉಗಾಂಡ’ ಕೃತಿ, ‘ಶ್ರೀಮತಿ ನುಗ್ಗೆಹಳ್ಳಿ ಪಂಕಜ’ ಪ್ರಶಸ್ತಿಗೆ (ಹಾಸ್ಯ ಕೃತಿ) ‘ನಳಿನಿ ಟಿ. ಭೀಮಪ್ಪ ಅವರ ‘ನಾಕೊಂದ್ಲ ನಾಕು’ ಕೃತಿ, ‘ಶ್ರೀಮತಿ ಗುಣಸಾಗರಿ ನಾಗರಾಜ್’ ಪ್ರಶಸ್ತಿಗೆ (ಮಕ್ಕಳ ಸಾಹಿತ್ಯ) ಮೀನಾ ಮೈಸೂರು ಅವರ ‘ಸೂರ್ಯನ ಸೆರೆ’ ಕೃತಿ ಆಯ್ಕೆಯಾಗಿದೆ.

‘ಶ್ರೀಮತಿ ಇಂದಿರಾ ವಾಣಿರಾವ್’ ಪ್ರಶಸ್ತಿಗೆ (ನಾಟಕ) ವಿನುತಾ ಹಂಚಿನ ಮನಿ ಅವರ ‘ಅಪರಾಜಿತೆಯರು’ ಕೃತಿ, ‘ತ್ರಿವೇಣಿ ಸಾಹಿತ್ಯ ಪುರಸ್ಕಾರ’ಕ್ಕೆ (ಕಾದಂಬರಿ ಪ್ರಕಾರ-ಸುಧಾ ಮೂರ್ತಿ ಪ್ರಾಯೋಜಿತ) ಜ.ನಾ. ತೇಜಶ್ರೀ ಅವರ ‘ಜೀವರತಿ’ ಕೃತಿ, ‘ಶ್ರೀಮತಿ ಜಯಮ್ಮ ಕರಿಯಣ್ಣ’ ಪ್ರಶಸ್ತಿಗೆ (ಸಂಶೋಧನೆ) ಲಕ್ಷ್ಮಿದೇವಿ ಶಾಸ್ತ್ರಿ ಅವರ ‘ರಾಯಚೂರು ಕೋಟೆಗೆ ನರಬಲಿ’ ಕೃತಿ ಭಾಜನವಾಗಿದೆ.

ಬೆಂಗಳೂರಿನ ಕನ್ನಡ ಭವನದಲ್ಲಿರುವ ನಯನ ಸಭಾಂಗಣದಲ್ಲಿ ಏಪ್ರಿಲ್ 9 ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

‘ರಾಜಲಕ್ಷ್ಮೀ ಬರಗೂರು ಪ್ರಶಸ್ತಿ’ಗೆ ಪುಷ್ಪ, ರತ್ನಮ್ಮ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡೋಜ ಡಾ. ಬರಗೂರು ಪ್ರತಿಷ್ಠಾನ ನೀಡುವ ‘ಶ್ರೀಮತಿ ರಾಜಲಕ್ಷ್ಮೀ ಬರಗೂರು ಪ್ರಶಸ್ತಿ’ಗೆ ಲೇಖಕಿ ಎಚ್.ಎಲ್. ಪುಷ್ಪ ಹಾಗೂ ಆದಿವಾಸಿ ಸಮುದಾಯದ ಸಾಧಕಿ ಎಸ್. ರತ್ನಮ್ಮ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಪತ್ನಿ ದಿವಂಗತ ರಾಜಲಕ್ಷ್ಮಿ ಬರಗೂರು ಅವರ ಹೆಸರಿನಲ್ಲಿ ಪ್ರತಿಷ್ಠಾನವು ಪ್ರತಿ ವರ್ಷ ಇಬ್ಬರು ಮಹಿಳಾ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡುತ್ತಿದೆ. ಪುಷ್ಪ ಅವರು ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷರಾಗಿದ್ದಾರೆ.

ಸೋಲಿಗ ಸಮುದಾಯದ ರತ್ನಮ್ಮ ಅವರು, ಆ ಸಮುದಾಯದಲ್ಲಿ ಗೌರವ ಡಾಕ್ಟರೇಟ್ ಪಡೆದ ಮೊದಲಿಗರಾಗಿ ದ್ದಾರೆ.



ಎಚ್.ಎಲ್. ಪುಷ್ಪ



ಎಸ್. ರತ್ನಮ್ಮ

ಇದೇ 12ರಂದು ಸಂಜೆ 5 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣ ದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಮೈಸೂರು ವಿ.ವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಲೋಲಾಕ್ಷಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಬೆಂಗಳೂರು ನಗರ ವಿ.ವಿಯ ಕುಲಪತಿ ಬಿ. ರಮೇಶ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿ ದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಎ.ವಿ. ತಿಳಿಸಿದ್ದಾರೆ.

ಈ ಸಾರಿಯ ಬಜೆಟ್‌ನಲ್ಲಿ ಜಿಬಿಎ ವ್ಯಾಪ್ತಿಯ ಐದೂ ಪಾಲಿಕೆಗಳಿಗೆ ನೇರ ಅನುದಾನ ನೀಡದ್ದು ಸರಿಯೇ?

● ತಪ್ಪು ● ಸರಿ ● ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ		ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
					ಉ–ದ	ಪೂ–ಪ			
142	ಶಾಂತವೇರಿ ಗೋಪಾಲಗೌಡ	120	ಮೂಲೆ	ದ:12.00ಪೂ:9.00	12.00	18.00	216.00	59180.00	127.83
143	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	280	ಮೂಲೆ	ದ:9.00 ಪ:12.00	13.00	18.00	234.00	59180.00	138.48
144	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	300	ಮೂಲೆ	ಉ:12.00 ಪೂ:9.00	9.00	12.00	108.00	59180.00	63.91
145	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	318	ಮೂಲೆ	ಉ:12.00 ಪ:12.00	12.00	6.00	72.00	59180.00	42.61
146	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	338	ಮೂಲೆ	ಉ:12.00 ಪೂ.9.00	12.00	9.00	108.00	59180.00	63.91
147	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	363	ಮೂಲೆ	ದ:9.00 ಪ:12.00	12.00	13.70	164.40	59180.00	97.29
148	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	485	ಮೂಲೆ	ದ:9.00ಪ:12.00	9.00	12.00	108.00	59180.00	63.91
149	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	653	ಮೂಲೆ	ದ:9.00ಪ:9.00	13.00	12.00	156.00	59180.00	92.32
150	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	668	ಮೂಲೆ	ಉ.9.00 ಪ:9.00	9.00	12.00	108.00	59180.00	63.91
151	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	863	ಮೂಲೆ	ಉ.9.00 ಪ:12.00	18.00	12.00	216.00	59180.00	127.83
152	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	923	ಮೂಲೆ	ಉ.18.00 ಪ:12.00	24.00	15.00	360.00	59180.00	213.05
153	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1313	ಮೂಲೆ	ಉ.9.00 ಪೂ:9.00	9.00	12.00	108.00	59180.00	63.91
154	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1314	ಮೂಲೆ	ಉ:9.00 ಪ:12.00	12.00	18.00	216.00	59180.00	127.83
155	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1322	ಮೂಲೆ	ಉ:12.00 ಪ:12.00	9.00	12.00	108.00	59180.00	63.91
156	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1343	ಮೂಲೆ	ಉ:12.00 ಪ:12.00	12.00	9.00	108.00	59180.00	63.91
157	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1415	ಮೂಲೆ	ದಉ.9.00 ಪೂ:12.00	12.00	18.00	216.00	59180.00	127.83
158	ಲಲಿತಾದ್ರಿನಗರ (ದಕ್ಷಿಣ)	721	ಮೂಲೆ	ಉತ್ತರ18.00	9.00	12.00	108.00	59180.00	63.91
159	ಲಲಿತಾದ್ರಿನಗರ (ದಕ್ಷಿಣ)	722	ಮೂಲೆ	ಉತ್ತರ18.00	9.00	12.00	108.00	59180.00	63.91
160	ಗಾಯತ್ರಿಪುರಂ 1ನೇ ಹಂತ	388	ಮಧ್ಯಂತರ	ಪಶ್ಚಿಮ 9.00	9.00	14.00	126.00	64560.00	81.35
161	ಗಾಯತ್ರಿಪುರಂ 1ನೇ ಹಂತ	373	ಮಧ್ಯಂತರ	ಪೂರ್ವ9.00	9.00	15.00	135.00	64560.00	87.16
162	ಗಾಯತ್ರಿಪುರಂ 1ನೇ ಹಂತ	345	ಮಧ್ಯಂತರ	ಪಶ್ಚಿಮ9.00	10.00	12.00	120.00	64560.00	77.47
163	ಗಾಯತ್ರಿಪುರಂ 1ನೇ ಹಂತ	341	ಮಧ್ಯಂತರ	ಪಶ್ಚಿಮ 9.00	10.70	12.00	128.4	64560.00	82.90
164	ಗಾಯತ್ರಿಪುರಂ 1ನೇ ಹಂತ	314	ಮಧ್ಯಂತರ	ಪಶ್ಚಿಮ 9.00	12.00	9.00	108.00	64560.00	69.72
165	ಸಾತಗಳ್ಳಿ 2ನೇ ಹಂತ	4622	ಮೂಲೆ	ಪೂ–ಉ 9.00	(9.00+9.30)/2	(6.60+6.60)/2	60.39	37660.00	22.74
166	ಸಾತಗಳ್ಳಿ 2ನೇ ಹಂತ	4649	ಮೂಲೆ	9.00 ಪ – ಉ	9.00	6.00	54.00	37660.00	20.34
167	ಸಾತಗಳ್ಳಿ 2ನೇ ಹಂತ	4648	ಮೂಲೆ	9.00 ದ – ಪ	9.00	(6.10+6.30)/2	55.80	37660.00	21.01
168	ಸಾತಗಳ್ಳಿ 2ನೇ ಹಂತ	4597	ಮೂಲೆ	9.00 ಉ – ಪ	9.20	6.10	56.12	37660.00	21.13
169	ಸಾತಗಳ್ಳಿ 2ನೇ ಹಂತ	4596	ಮೂಲೆ	9.00 ಪ – ದ	9.00	(6.15+6.20)/2	55.57	37660.00	20.93
170	ಸಾತಗಳ್ಳಿ 2ನೇ ಹಂತ	4545	ಮೂಲೆ	9.00 ಉ	9.00	(6.10+6.15)/2	55.12	37660.00	20.76
171	ಸಾತಗಳ್ಳಿ 2ನೇ ಹಂತ	5406	ಮೂಲೆ	9.00 ಪೂ – ಪ	9.00	(6.00+8.50)/2	65.25	37660.00	24.57
172	ಸಾತಗಳ್ಳಿ 2ನೇ ಹಂತ	5405	ಮಧ್ಯಂತರ	9.00 ದ	9.00	6.00	54.00	32280.00	17.43
173	ಸಾತಗಳ್ಳಿ 2ನೇ ಹಂತ	5404	ಮಧ್ಯಂತರ	9.00 ದ	9.00	6.00	54.00	32280.00	17.43
174	ಸಾತಗಳ್ಳಿ 2ನೇ ಹಂತ	5403	ಮಧ್ಯಂತರ	9.00 ದ	9.00	6.00	54.00	32280.00	17.43
175	ಸಾತಗಳ್ಳಿ 2ನೇ ಹಂತ	5402	ಮಧ್ಯಂತರ	9.00 ದ	9.00	6.00	54.00	32280.00	17.43
176	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1698	ಮಧ್ಯಂತರ	9.00 ಪೂ	15.00	24.00	360.00	48643.00	175.11
177	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1697	ಮಧ್ಯಂತರ	9.00 ಪೂ	15.00	24.00	360.00	48643.00	175.11
178	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1696	ಮಧ್ಯಂತರ	9.00 ಪೂ	15.00	24.00	360.00	48643.00	175.11
179	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1695	ಮಧ್ಯಂತರ	9.00 ಪೂ	15.00	24.00	360.00	48643.00	175.11
180	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1694	ಮಧ್ಯಂತರ	9.00 ಪೂ	15.00	24.00	360.00	48643.00	175.11
181	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1693	ಮಧ್ಯಂತರ	9.00 ಪೂ	15.00	24.00	360.00	48643.00	175.11
182	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1692	ಮಧ್ಯಂತರ	9.00 ಪೂ	15.00	24.00	360.00	48643.00	175.11
183	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1688	ಮಧ್ಯಂತರ	9.00 ಪೂ	15.00	24.00	360.00	48643.00	175.11
184	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1689	ಮಧ್ಯಂತರ	9.00 ಪೂ	15.00	24.00	360.00	48643.00	175.11
185	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1690	ಮಧ್ಯಂತರ	9.00 ಪೂ	15.00	24.00	360.00	48643.00	175.11
186	ಹಂಚ್ಯಾ – ಸಾತಗಳ್ಳಿ ‘ಬಿ’ ವಲಯ	1691	ಮಧ್ಯಂತರ	9.00 ಪೂ	15.00	24.00	360.00	48643.00	175.11
187	ವಸಂತನಗರ	651	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
188	ವಸಂತನಗರ	682	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
189	ವಸಂತನಗರ	725	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
190	ವಸಂತನಗರ	754	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
191	ವಸಂತನಗರ	9	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
192	ವಸಂತನಗರ	10	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
193	ವಸಂತನಗರ	11	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
194	ವಸಂತನಗರ	12	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
195	ವಸಂತನಗರ	210	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
196	ವಸಂತನಗರ	1910	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
197	ವಸಂತನಗರ	1911	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
198	ವಸಂತನಗರ	1912	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
199	ವಸಂತನಗರ	1913	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
200	ವಸಂತನಗರ	1914	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು https://kppp.karnataka.gov.in ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ಯಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ICICI ಬ್ಯಾಂಕ್‌ಗೆ DEBIT CARD/CREDIT CARD/NET BANKING ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/– ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ Commissioner MDA Mysore, Bank of Baroda, Account No.89260100004660 (IFSC Code No. BARB0VJMUDA, 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. 11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) "ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. 18) ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕ್ಷಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕ್ಷಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ.

19 "ನಿವೇಶನಗಳ ಸ್ಥಳದ (Location), ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –

ಅ) ವಲಯ ಕಛೇರಿ–1 – 1. ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ – ಶ್ರೀಮತಿ.ರೂಪಶ್ರೀ, ಸಾ.ಅ., ಮೊಬೈಲ್ ನಂ.9740029156. ಆ) ವಲಯ ಕಛೇರಿ–2– ದಟ್ಟಗಳ್ಳಿ 3ನೇ ಹಂತ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಇ) ವಲಯ ಕಛೇರಿ–3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಈ) ವಲಯ ಕಛೇರಿ–4– ಹೆಬ್ಬಾಳು 2ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್,ಸ.ಅ., ಮೊಬೈಲ್ ನಂ.8197542740. ಉ) ವಲಯ ಕಛೇರಿ–5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಊ) ವಲಯ ಕಛೇರಿ–6 – ಶಾಂತವೇರಿ ಗೋಪಾಲಗೌಡ ನಗರ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಲಲಿತಾದ್ರಿನಗರ (ದಕ್ಷಿಣ) – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಋ) ವಲಯ ಕಛೇರಿ–8 – ಸಾತಗಳ್ಳಿ 2ನೇ ಮತ್ತು ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ, ವಸಂತನಗರ – ಶ್ರೀಮತಿ. ಮೇಘನ, ಕಿ.ಅ., ಮೊಬೈಲ್ ನಂ.9480884440. 20) ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು ದೂರವಾಣಿ ಸಂಖ್ಯೆ– 0821–2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/DDMYS/02/KSMCA/992/2025-26

ಅವಕಾಶ ಸಿಕ್ಕರೆ ಮತ್ತೆರಡು ಬಜೆಟ್ ಮಂಡಿಸುವೆ

ಹೈಕಮಾಂಡ್ ಬಿಡು ಅಂದ್ರೆ ಬಿಡ್ತೀನಿ, ಇರಿ ಅಂದ್ರೆ ಇರ್ತೀನಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಹೈಕಮಾಂಡ್ ಬಿಡು ಅಂದ್ರೆ ಬಿಡ್ತೀನಿ, ಮುಂದುವರಿಯಿರಿ ಎಂದರೆ ಮುಂದುವರಿಯುತ್ತೇನೆ. ಅವಕಾಶ ಕೊಟ್ಟರೆ ಮತ್ತೆರಡು ಬಜೆಟ್ ಮಂಡಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ವರುಣ ಹೋಬಳಿಯ ಪಿಲ್ಲಹಳ್ಳಿಯ ಹೆಲಿಪ್ಯಾಡ್‌ನಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿ, 'ನನಗೆ ಬಜೆಟ್‌ನ ದಾಖಲೆಗಳನ್ನು ಮುರಿಯುವುದರ ಮೇಲೆ ನಂಬಿಕೆ ಇಲ್ಲ' ಎಂದರು. 'ಯಾರೋ ಏನೋ ಹೇಳುವುದು ನನಗೆ ಮುಖ್ಯವಲ್ಲ. ಹೈಕಮಾಂಡ್ ತೀರ್ಮಾನವಷ್ಟೇ ಮುಖ್ಯ. ಹೈಕಮಾಂಡ್ ಮೇಲೆ ನನಗೆ ಯಾವಾಗಲೂ ವಿಶ್ವಾಸವಿದೆ. ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂದು ಇಡೀ ನಾಡಿನ ಜನ ಬಯಸಿದ್ದಾರೆ. ಆದರೆ, ಅಂತಿಮ ತೀರ್ಮಾನ ಹೈಕಮಾಂಡ್‌ನದ್ದೇ' ಎಂದರು.

ಸಾಲ ಮಾಡಿದ್ದೇವೆ, ಹೊರೆಯಾಗಿಲ್ಲ: 'ಅಭಿವೃದ್ಧಿಗಾಗಿ ಆರ್ಥಿಕ ಶಿಸ್ತಿನ ಇತಿಮಿತಿಯಲ್ಲೇ ಸಾಲ ಮಾಡಿದ್ದೇವೆ. ಅದರಿಂದ ರಾಜ್ಯದ ಜನರಿಗೆ ಹೊರೆಯಾಗಿಲ್ಲ' ಎಂದು ಸಮರ್ಥಿಸಿಕೊಂಡರು. 'ಸಾಲ ಮಾಡದೇ ಅಭಿವೃದ್ಧಿ ಸಾಧ್ಯವಿಲ್ಲ. ಆರ್ಥಿಕ ಹೊಣೆಗಾರಿಕೆ ಕಾಯ್ದೆ ತಿಳಿಸಿರುವ ಮಾನದಂಡಗಳ ಮಿತಿಯಲ್ಲಿಯೇ ನಮ್ಮ ಸಾಲದ ಪ್ರಮಾಣವಿದೆ. ಆರ್ಥಿಕ ಹೊಣೆಗಾರಿಕೆ ಕಾಯ್ದೆಯಂತೆ ಸಾಲವು ಶೇ 25ರ ಮಿತಿಯಲ್ಲಿ ಇರಬೇಕು. ನಮ್ಮ ಸಾಲದ ಪ್ರಮಾಣ ಶೇ 24.94ರಷ್ಟಿದೆ' ಎಂದು ಹೇಳಿದರು.

'ಕೇಂದ್ರ ಸರ್ಕಾರದ ಸಾಲದ ಪ್ರಮಾಣ ₹ 218 ಲಕ್ಷ ಕೋಟಿಯಾಗಿದೆ. ಮೋದಿ ಅವರು ಅಧಿಕಾರಕ್ಕೆ ಬಂದ ನಂತರ ₹ 165 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಇದು ಈ ಕಾಯ್ದೆಯ ಪ್ರಕಾರ ಶೇ 55.6ರಷ್ಟಿದೆ. ದೇಶದ ವಿತ್ತೀಯ ಕೊರತೆ ಶೇ 4.4ರಷ್ಟಿದ್ದು, ಶೇ 3ರೊಳಗೆ ಇರಬೇಕಾಗಿತ್ತು. ರಾಜ್ಯದ ವಿತ್ತೀಯ ಕೊರತೆ ಶೇ 2.95 ರಷ್ಟಿದ್ದು, ಕಾಯ್ದೆಯು ಸೂಚಿಸಿರುವ ಜಿಡಿಪಿಯ ಶೇ 3ರ ಮಿತಿಯೊಳಗೇ ಇದೆ. ಹೀಗಾಗಿ, ನಾವು ಹೆಚ್ಚಾಗಿ ಸಾಲ ಮಾಡಿದ್ದೇವೆ ಎನ್ನುವ ಬಿಜೆಪಿಯವರ ಹೇಳಿಕೆ ಸತ್ಯಕ್ಕೆ ದೂರವಾದುದು' ಎಂದು ಸಮರ್ಥಿಸಿಕೊಂಡರು. 'ಈ ಎಲ್ಲ ಮಾಹಿತಿಗಳು ಆರ್.ಅಶೋಕ ಹಾಗೂ ಬಿಜೆಪಿಯವರಿಗೆ ಗೊತ್ತಾ? ಅವರೆಲ್ಲರೂ ಆರ್ಥಿಕ ಹೊಣೆಗಾರಿಕೆ ಕಾಯ್ದೆಯನ್ನು ಚೆನ್ನಾಗಿ ಓದಿಕೊಳ್ಳಲು ಹೇಳಿ' ಎಂದರು.

ಎಲ್ಲ ವರ್ಗದವರಿಗಾಗಿ: 'ನಾನು ಒಂದು ವರ್ಗದ ಪರವಾಗಿ ಬಜೆಟ್ ಮಂಡಿಸಿಲ್ಲ. ರಾಜ್ಯದ ಸಮಗ್ರ ಅಭಿವೃದ್ಧಿ, ಸಾಮಾಜಿಕ ನ್ಯಾಯವನ್ನು ಕೇಂದ್ರೀಕರಿಸಿ ರೂಪಿಸಿದ್ದು. ಎಲ್ಲರಿಗೂ ಸಮಾನ ಅವಕಾಶ ನೀಡುವುದೇ ಉದ್ದೇಶ' ಎಂದರು. 'ಕೇಂದ್ರದಿಂದ ರಾಜ್ಯಕ್ಕೆ ₹ 10ಸಾವಿರ ಕೋಟಿ ನಷ್ಟವಾಗಿದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ನ್ಯಾಯಯುತವಾಗಿ ನೀಡಬೇಕಾಗಿದ್ದ ಅನುದಾನ ಕೊಡದ ಕಾರಣ ರಾಜ್ಯದ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿದೆ' ಎಂದು ದೂರಿದರು.

> ಕೇಂದ್ರ ಸರ್ಕಾರವು ಅಡುಗೆ ಅನಿಲ ಸಿಲಿಂಡರ್ ಬೆಲೆ ಹೆಚ್ಚಿಸಿರುವುದು ಜನಸಾಮಾನ್ಯರು ಸೇರಿ ಎಲ್ಲರ ಮೇಲೂ ಹೊರೆಯಾಗಿ ಪರಿಣಮಿಸಿದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಕಷ್ಟ ಬಂದಾಗಷ್ಟೇ ಅಲ್ಲ, ಸದಾ ದೇವರ ನೆನೆಯಬೇಕು'

ಮೈಸೂರು: 'ದೇವಸ್ಥಾನದಲ್ಲಿ ಮಾತ್ರ ದೇವರಿಲ್ಲ. ಎಲ್ಲ ಕಡೆ ಇದ್ದಾನೆ. ಕಷ್ಟ ಬಂದಾಗ ಮಾತ್ರ ದೇವರನ್ನು ನೆನೆಯದೇ ಯಾವಾಗಲೂ ನೆನೆಯಬೇಕು. ನಮ್ಮಲ್ಲೂ ದೇವರಿದ್ದಾನೆ ಎಂಬುದು ನನ್ನ ಬಲವಾದ ನಂಬಿಕೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಹೇಳಿದರು.

ತಾಲ್ಲೂಕಿನ ವರುಣ ಹೋಬಳಿಯ ಪಿಲ್ಲಹಳ್ಳಿಯಲ್ಲಿ ದಂಡಿನಮಾರಮ್ಮ ದೇವಸ್ಥಾನವನ್ನು ಶನಿವಾರ ಉದ್ಘಾಟಿಸಿ ಮಾತನಾಡಿ, 'ನಮ್ಮ ಊರಿನಲ್ಲೂ (ಸಿದ್ದರಾಮನಹುಂಡಿ) ದಂಡಿನ ಮಾರಮ್ಮನ ದೇವಸ್ಥಾನವಿದೆ. ನಾವು ಚಿಕ್ಕವರಿದ್ದಾಗ ಜಾತ್ರೆಯ ದಿನ ದೇವಸ್ಥಾನಕ್ಕೆ ತಂಬಿಟ್ಟಿನ ಆರತಿ ತೆಗೆದುಕೊಂಡು ಹೋಗುತ್ತಿದ್ದೆವು' ಎಂದರು.

'ನಾವು ಚಿಕ್ಕವರಿದ್ದಾಗ ಹಳ್ಳಿಗಾಡಿನಲ್ಲಿ ಸಿಗುತ್ತಿದ್ದ ಸಿಹಿ ತಿನಿಸುಗಳೆಂದರೆ ತಂಬಿಟ್ಟು ಹಾಗೂ ಕೊಬ್ಬರಿ ಮಿಠಾಯಿ ಮಾತ್ರವೇ. ಅದನ್ನೇ ತಿನ್ನುತ್ತಿದ್ದೆವು. ಆಗ ತಂಬಿಟ್ಟು ತಿನ್ನುವುದೇ ಮಜಾ' ಎಂದು ಅವರು ತಮ್ಮ ಬಾಲ್ಯದ ದಿನಗಳನ್ನು ನೆನೆದರು. 'ಮೂರ್ತಿ ಪೂಜೆಯಿಂದಷ್ಟೇ ದೇವರು ಒಲಿಯುವುದಿಲ್ಲ. ಎಲ್ಲರಿಗೂ ಒಳ್ಳೆಯದನ್ನೇ ಬಯಸಬೇಕು. ಕೇಡು ಬಯಸಬಾರದು. ಯಾವ ದೇವರೂ ಅಥವಾ ಧರ್ಮವೂ ದ್ವೇಷಿಸಿ ಎಂದಿಲ್ಲ, ಪ್ರೀತಿಸಿ ಎಂದೇ ಹೇಳುತ್ತದೆ. ಅದನ್ನು ಎಲ್ಲರೂ ಪಾಲಿಸಬೇಕು. ಎಲ್ಲರನ್ನೂ ಪ್ರೀತಿಸಬೇಕು' ಎಂದು ಸಲಹೆ ನೀಡಿದರು. 'ಅಧಿಕಾರ ಎಂದಿಗೂ ಬಲಾಢ್ಯರ ಕೈಯಲ್ಲಿ ಇರಬಾರದು. ಎಲ್ಲರನ್ನೂ ಪ್ರೀತಿಸುವವರು, ಎಲ್ಲರನ್ನೂ ಸಮಾನವಾಗಿ ಕಾಣುವವರ ಕೈಯಲ್ಲಿರಬೇಕು' ಎಂದರು.


ಮೈಸೂರು ತಾಲ್ಲೂಕಿನ ಪಿಲ್ಲಹಳ್ಳಿಯಲ್ಲಿ ಶನಿವಾರ ದಂಡಿನ ಮಾರಮ್ಮ ದೇವಸ್ಥಾನವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಪೂಜೆ ಸಲ್ಲಿಸಿದರು. ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ ಜೊತೆಗಿದ್ದರು

ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಕೆ.ಶಿವಕುಮಾರ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯ ಶಿವಕುಮಾರ್ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ


ಮುಖ್ಯಮಂತ್ರಿಗೆ ತಿಳಿ ಹೇಳಿ; ಲಕ್ಷ್ಮಿ ಹೆಬ್ಬಾಳ್ಕರ್‌ಗೆ ಸಲಹೆ

ಹುಣಸೂರು (ಮೈಸೂರು ಜಿಲ್ಲೆ): 'ರಾಜ್ಯ ಸರ್ಕಾರ ವಿವಿಧ ಗ್ಯಾರಂಟಿ ಹೆಸರಿನಲ್ಲಿ ಸಾಮಾಜಿಕ ಭದ್ರತೆ ಕಲ್ಪಿಸುವ ಭರದಲ್ಲಿ ಬಂಡವಾಳ ವೃದ್ಧಿಗೆ ಆದ್ಯತೆ ನೀಡದಿರುವುದು ಭವಿಷ್ಯದ ದೃಷ್ಟಿಯಿಂದ ಆಘಾತಕಾರಿಯಾಗಿದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆತಂಕ ವ್ಯಕ್ತಪಡಿಸಿದರು.

ತಾಲ್ಲೂಕಿನ ಮಾದಹಳ್ಳಿಯ ಉಕ್ಕಿನ ಕಂತೆ ಮಠದಲ್ಲಿ ಶನಿವಾರ ಗುರು-ಬೂದಿಸ್ವಾಮಿಗಳ 397ನೇ ಆರಾಧನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವೇಳೆ, ವೇದಿಕೆಯಲ್ಲಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಉದ್ದೇಶಿಸಿ ಈ ಮಾತು ಹೇಳಿದರು.

'ಮಹಿಳೆಯರಿಗೆ ನಿಮ್ಮ ಇಲಾಖೆಯಿಂದ ನೀಡುತ್ತಿರುವ ₹2 ಸಾವಿರ ಗೃಹಲಕ್ಷ್ಮಿ ಹಣದ ಬಗ್ಗೆ ನನ್ನ ತಕರಾರು ಇಲ್ಲ, ವಿರೋಧವೂ ಇಲ್ಲ. ಮೂರು ವರ್ಷಗಳಿಂದ ಯೋಜನೆಯ ಮೂಲಕ ₹70–75 ಸಾವಿರ ಕೋಟಿ ನೀಡಿರಬಹುದು. ಆದರೆ, ಹಣವನ್ನು ಎಲ್ಲಿಂದ ತರುತ್ತಿದ್ದೀರಿ' ಎಂದು ಎಚ್‌ಡಿಕೆ ಪ್ರಶ್ನಿಸಿದರು.

'ಪ್ರಸಕ್ತ ಸಾಲಿನಲ್ಲಿ ರಾಜ್ಯದ ಸಾಲದ ಮೊತ್ತ ₹ 8.24 ಲಕ್ಷ ಕೋಟಿಯಾಗಿದೆ. ಮುಂದಿನ ದಿನದಲ್ಲಿ ₹9.50ಲಕ್ಷದಿಂದ ₹10 ಲಕ್ಷ ಕೋಟಿಗೆ ತಲುಪಲಿದೆ. ಇದಕ್ಕೆ ಸರಿಸಮನಾಗಿ ಬಂಡವಾಳ ಕ್ರೋಢೀಕರಣಕ್ಕೆ ಆದ್ಯತೆ ನೀಡದಿದ್ದರೆ ಭವಿಷ್ಯದ ದಿನಗಳು ಗಂಭೀರವಾಗಿ ಇರಲಿವೆ' ಎಂದು ಎಚ್ಚರಿಸಿದರು. 'ರಾಜ್ಯದಲ್ಲಿ ಎರಡು ಬಾರಿ ಮುಖ್ಯಮಂತ್ರಿ ಯಾಗಿ ಬಜೆಟ್ ಮಂಡಿಸಿದ ಅನುಭವ ನನಗೆ ಇದ್ದು, ಸರ್ಕಾರ ಈಗಲೂ ಎಚ್ಚರಿಕೆಯಿಂದ ಹೆಜ್ಜೆ ಹಾಕಿ ಆರ್ಥಿಕ ಸ್ಥಿತಿಗತಿಯನ್ನು ತೂಗಬೇಕಾಗಿದೆ' ಎಂದರು.



ಬಜೆಟ್: ನಾಳೆ ಕಾರ್ಯಾಗಾರ

ಮಂಗಳೂರು: ಬಜೆಟ್ ಲೆಕ್ಕಾಚಾರಗಳ ಕುರಿತು ಎಲ್ಲ ಶಾಸಕರಿಗೆ ಇದೇ 9ರಂದು ಬೆಂಗಳೂರಿನ ಹೋಟೆಲ್ ಲಲಿತ್ ಅಶೋಕದಲ್ಲಿ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

17 ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವರು. ಸೋಮವಾರ ಬಜೆಟ್ ಕಲಾಪದ ಬಳಿಕ ಸಂಜೆ 4 ರಿಂದ ಕಾರ್ಯಾಗಾರ ನಡೆಯಲಿದೆ ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

'ಬಜೆಟ್ ರೂಪಿಸುವ ಕುರಿತು ಉತ್ತಮ ಅನುಭವ ಹೊಂದಿರುವ ಕೆಲವು ಅಧಿಕಾರಿಗಳು, ನಿವೃತ್ತ ಮುಖ್ಯ ಕಾರ್ಯದರ್ಶಿಗಳು ಹಾಗೂ ಹಣಕಾಸು ತಜ್ಞರು ಕೂಡ ಭಾಗವಹಿಸಲಿದ್ದಾರೆ. ಭಾಗವಹಿಸುವಂತೆ ಎಲ್ಲ ಶಾಸಕರಿಗೆ ತಿಳಿಸಿದ್ದೇವೆ. ಸಭಾಪತಿ ಬಸವರಾಜ ಹೊರಟ್ಟಿ ನಾನು ಚರ್ಚಿಸಿ ಕಾರ್ಯಾಗಾರ ಏರ್ಪಡಿಸಲಾಗುತ್ತಿದೆ' ಎಂದರು. ಅನೇಕ ಶಾಸಕರಿಗೆ ಸಂಪನ್ಮೂಲ ಕ್ರೋಢೀಕರಣ, ಹಣಕಾಸಿನ ವರ್ಗೀಕರಣ ಹೇಗೆ, ವಿತ್ತೀಯ ಹೊಣೆಗಾರಿಕೆ, ವಿತ್ತೀಯ ಕೊರತೆ ಕುರಿತು ತಿಳಿವಳಿಕೆ ಇರುವುದಿಲ್ಲ. ನನಗೂ ಮೊದಲು ಶಾಸಕನಾದಾಗ ಗೊತ್ತಿರಲಿಲ್ಲ. ಈ ಕಾರ್ಯಾಗಾರದಿಂದ ಶಾಸಕರು ಬಜೆಟ್ ಚರ್ಚೆಯಲ್ಲಿ ಸಮರ್ಥವಾಗಿ ಭಾಗವಹಿಸಲು ಸಾಧ್ಯವಾಗಲಿದೆ' ಎಂದರು.

ಬಜೆಟ್ ಕುರಿತು ಪ್ರತಿಕ್ರಿಯಿಸಲು ಖಾದರ್ ನಿರಾಕರಿಸಿದರು. ಸಾಲದ ಪ್ರಮಾಣ ಹೆಚ್ಚಾಗಿದೆ ಎಂಬ ಟೀಕೆಗೆ, 'ಕೇಂದ್ರ ಬಜೆಟ್ ಕುರಿತೂ ಟೀಕೆಗಳು ಬಂದಿವೆ. ಸಭಾಧ್ಯಕ್ಷನಾಗಿ ಹೇಳಿಕೆ ನೀಡುವುದು ಸರಿಯಲ್ಲ. ಸರಿಯಾಗದು. ಬಜೆಟ್ ಕುರಿತು ಸದನದಲ್ಲಿ ಅರ್ಥಪೂರ್ಣ ಚರ್ಚೆ ಆಗುವಂತೆ ನೋಡಿಕೊಳ್ಳುವುದು ನನ್ನ ಹೊಣೆ' ಎಂದರು.

ಗ್ರಾಮಸ್ಥರ ಬಾಧಿಸುವ ಗಂಭೀರ ಕಾಯಿಲೆ

ಕೊಪ್ಪಳ: ಹಿರೇಬಗನಾಳ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ಸರ್ವೆ • ಮಾಲಿನ್ಯದಿಂದ ಅನಾರೋಗ್ಯ

• ಪ್ರಮೋದ ಕುಲಕರ್ಣಿ

ಕೊಪ್ಪಳ: ಕಾರ್ಖಾನೆಗಳು ಕೇಂದ್ರೀಕೃತವಾಗಿರುವ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ಸುತ್ತಲಿನ ಪರಿಸರ ಮಾಲಿನ್ಯವಾಗಿದ್ದು, ಗ್ರಾಮದ ಜನರಲ್ಲಿ ಗಂಭೀರ ಕಾಯಿಲೆಗಳು ಪತ್ತೆಯಾಗಿವೆ.

ಕಾರ್ಖಾನೆಗಳು ಹೊರಸೂಸುವ ಕಪ್ಪುಕಣಗಳ ದೂಳಿನಿಂದ ಮಾಲಿನ್ಯ ಆಗುತ್ತಿದೆ. ನಿತ್ಯ ಯಾತನೆ ಅನುಭವಿಸುವಂತಾಗಿದೆ ಎಂದು ಗ್ರಾಮಸ್ಥರು ದೂರುತ್ತಾರೆ.

ಇತ್ತೀಚೆಗೆ ಗ್ರಾಮಕ್ಕೆ ಭೇಟಿ ನೀಡಿದ್ದ ಶಾಸಕ ರಾಘವೇಂದ್ರ ಹಿಟ್ನಾಳ ಅವರನ್ನೂ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡಿದ್ದರು. ಎರಡು ದಿನಗಳ ಹಿಂದೆ ಜಿಲ್ಲಾಧಿಕಾರಿ ತೆರಳಿದ್ದಾಗಲೂ ಮಾಲಿನ್ಯದ ದುಷ್ಪರಿಣಾಮ ಜನರ ಮೇಲೆ ಹೇಗೆ ಆಗಿದೆ ಎನ್ನುವುದು ಅವರಿಗೆ ಮನವರಿಕೆಯಾಗಿತ್ತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹಿರೇಬಗನಾಳ ಗ್ರಾಮದಲ್ಲಿ ಇದೇ ವರ್ಷದ ಫೆಬ್ರುವರಿಯಲ್ಲಿ ಜನರ ಆರೋಗ್ಯ ತಪಾಸಣೆ ನಡೆಸಿದೆ. ಗ್ರಾಮದಲ್ಲಿ 208 ಮಕ್ಕಳು ಸೇರಿ 2,333 ಜನಸಂಖ್ಯೆಯಿದೆ. ಈ ಪೈಕಿ ಉಸಿರಾಟ ಸಂಬಂಧಿ ಕಾಯಿಲೆಯಿಂದ 124, ಚರ್ಮಕಾಯಿಲೆಯಿಂದ 49, ಒಬ್ಬರು ಗರ್ಭಕಂಠ ಹಾಗೂ ಬಾಯಿ ಕ್ಯಾನ್ಸರ್, 25 ಜನರಲ್ಲಿ ಟಿಬಿ, 58 ಜನರಲ್ಲಿ ಬಿಪಿ, 40 ಜನರಲ್ಲಿ ಮಧುಮೇಹ, 42 ವ್ಯಕ್ತಿಗಳಲ್ಲಿ ದೃಷ್ಟಿದೋಷ ಹಾಗೂ ಮೂವರಿಗೆ ಪಾರ್ಶ್ವವಾಯು (ಸ್ಟ್ರೋಕ್) ಆಗಿದೆ ಎನ್ನುವುದು ಗೊತ್ತಾಗಿದೆ.


ಹಿರೇಬಗನಾಳದಲ್ಲಿ ನಡೆದ ಸಭೆಯಲ್ಲಿ ಅನಾರೋಗ್ಯಪೀಡಿತ ಮಗುವಿನೊಂದಿಗೆ ತಾಯಿ ಕಣ್ಣೀರು ಹಾಕಿದ ಚಿತ್ರಣ

ಗ್ರಾಮಸ್ಥರ ಅನಾರೋಗ್ಯ ಬಗ್ಗೆ ನಿರಂತರವಾಗಿ ದೂರುಗಳು ಬಂದಿದ್ದರಿಂದ ಆರೋಗ್ಯ ಇಲಾಖೆ ಗ್ರಾಮದಲ್ಲಿ ತಪಾಸಣೆ ಮಾಡಿದ್ದು, ನೆರೆಯ ಹಾಲವರ್ತಿ, ಅಲ್ಲಾನಗರ ಸೇರಿದಂತೆ ವಿವಿಧೆಡೆಯೂ ತಪಾಸಣೆಗೆ ಮುಂದಾಗಿದೆ.

ಕಾರ್ಖಾನೆಗಳ ಮಾಲಿನ್ಯ ನಿಯಂತ್ರಿಸಬೇಕು ಹಾಗೂ ಕಾರ್ಖಾನೆಗಳ ವಿಸ್ತರಣೆಗೆ ಅವಕಾಶ ಕೊಡಬಾರದು ಎಂದು ಆಗ್ರಹಿಸ ಜಿಲ್ಲಾ ಬಚಾವೊ ಆಂದೋಲನ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ 128 ದಿನಗಳಿಂದ ಜಿಲ್ಲಾ ಕೇಂದ್ರದಲ್ಲಿ ಧರಣಿ ನಡೆಸುತ್ತಿದೆ.

'ಮಾಲಿನ್ಯದಿಂದ ಕಾರ್ಖಾನೆಗಳ ಸುತ್ತಲೂ ಇರುವ ಗ್ರಾಮಗಳ ಜನರ ಬದುಕು ಅಸಹನೀಯವಾಗಿದೆ ಎಂದು ಧರಣಿ ಆರಂಭಿಸಿದಾಗಲೇ ಹೇಳಿದ್ದೆವು. ಆದ್ದರಿಂದ ಮಾಲಿನ್ಯದಿಂದ ಬಾಧಿತ ಗ್ರಾಮಗಳ ಜನರನ್ನು ಭಾರತೀಯ ವೈದ್ಯಕೀಯ ಸಂಸ್ಥೆಯಿಂದಲೇ ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಬೇಕು. ಆಗ ಇನ್ನಷ್ಟು ಸಮಸ್ಯೆಗಳು ಗೊತ್ತಾಗುತ್ತವೆ' ಎಂದು ಕ್ರಿಯಾ ವೇದಿಕೆಯ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಆಗ್ರಹಿಸಿದ್ದಾರೆ.

> ಹಿರೇಬಗನಾಳ ಗ್ರಾಮಸ್ಥರಲ್ಲಿ ಹಲವು ಕಾಯಿಲೆಗಳು ಕಂಡುಬಂದಿದ್ದು, ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಪ್ರತಿ ಹತ್ತು ದಿನಗಳಿಗೊಮ್ಮೆ ಅಲ್ಲಿನ ಜನರ ಆರೋಗ್ಯ ತಪಾಸಣೆ ನಡೆಸಲಾಗುವುದು
> **ಡಾ. ಲಿಂಗರಾಜು ಟಿ.,** ಡಿಎಚ್‌ಒ, ಕೊಪ್ಪಳ

> ಗ್ರಾಮದ ಬಹಳಷ್ಟು ಜನ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ತಪಾಸಣೆ ವೇಳೆಯೂ ಗ್ರಾಮದ ಜನರಲ್ಲಿ ಸಮಸ್ಯೆ ಇರುವುದು ಬಹಿರಂಗವಾಗಿದೆ. ಇದಕ್ಕೆ ಕಾರ್ಖಾನೆಗಳಿಂದಾಗುವ ಮಾಲಿನ್ಯವೇ ಕಾರಣ
> **ಗವಿಸಿದ್ದಪ್ಪ ಪುಟಗಿ,** ಹಿರೇಬಗನಾಳ ಗ್ರಾಮಸ್ಥ

> ಹಿರೇಬಗನಾಳ ಗ್ರಾಮದ ಜನರಲ್ಲಿ ಆರೋಗ್ಯ ಸಮಸ್ಯೆಗಳು ಕಂಡುಬಂದಿವೆ. ಮಾಲಿನ್ಯ ಉಂಟು ಮಾಡುತ್ತಿರುವ ಕಾರ್ಖಾನೆಗಳಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗುವುದು.
> **ಡಾ.ಸುರೇಶ ಇಟ್ನಾಳ,** ಜಿಲ್ಲಾಧಿಕಾರಿ

ಚಿಟಿಕೆ ಸುದ್ದಿ

ತುಂಗಭದ್ರಾ 13ನೇ ಗೇಟ್ ಅಳವಡಿಕೆ ಪೂರ್ಣ

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಗೆ 13ನೇ ಗೇಟ್ ಕ್ರೆಸ್ಟ್‌ಗೇಟ್ ಅಳವಡಿಕೆ ಶನಿವಾರ ಕೊನೆಗೊಂಡಿದೆ. ಇನ್ನೂ 3 ಗೇಟ್ ಅಳವಡಿಕೆ ಪ್ರಗತಿಯಲ್ಲಿದೆ' ಎಂದು ತುಂಗಭದ್ರಾ ಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

'ಹಳೆಯ 25 ಕ್ರೆಸ್ಟ್‌ಗೇಟ್‌ಗಳನ್ನು ಪೂರ್ಣ ತೆರವುಗೊಳಿಸಲಾಗಿದೆ. 2024ರ ಆಗಸ್ಟ್‌ನಲ್ಲಿ 19ನೇ ಕ್ರೆಸ್ಟ್‌ಗೇಟ್ ಕೊಚ್ಚಿ ಹೋದ ತಾತ್ಕಾಲಿಕ ಗೇಟ್ ಅಳವಡಿಕೆಗೆ ತೆರವುಗೊಳಿಸಿದ್ದ ಸ್ಕೈವಾಕ್ ಅನ್ನು ಶನಿವಾರ ಮತ್ತೆ ಅಳವಡಿಸಲಾಯಿತು' ಎಂದು ಹೇಳಿದ್ದಾರೆ.

ಕೆರೆಯಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳ ಸಾವು

ಸಕಲೇಶಪುರ (ಹಾಸನ ಜಿಲ್ಲೆ): ತಾಲ್ಲೂಕಿನ ಓಂನಗರದ ಕೆರೆಗೆ ಶನಿವಾರ ಈಜಲು ತೆರಳಿದ್ದ ಪಾಳ್ಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಭರತ್ (18) ಮತ್ತು ಮಿಥುನ್ (19) ಕೆಸರಿನಲ್ಲಿ ಸಿಲುಕಿ ಮೃತಪಟ್ಟರು. ದ್ವಿತೀಯ ಪಿಯುಸಿಯ ಮಿಥುನ್ ಶನಿವಾರದ ಪರೀಕ್ಷೆಗೆ ಗೈರಾಗಿದ್ದ. ಭರತ್ ಪ್ರಥಮ ಪಿಯುಸಿ ವಿದ್ಯಾರ್ಥಿ. ನಾಲ್ವರು ಸ್ನೇಹಿತರು ಈಜಲು ತೆರಳಿದ್ದಾಗ ದುರ್ಘಟನೆ ನಡೆದಿದೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಲಿಕೆ ಆರೋಗ್ಯ ನಿರೀಕ್ಷಕಿ ಲೋಕಾ ಬಲೆಗೆ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆರೋಗ್ಯ ನಿರೀಕ್ಷಕಿ (ಧಾರವಾಡದ ವಲಯ ಕಚೇರಿ 1) ಹೀನಾ ಕೌಸರ್ ಅವರು ಶನಿವಾರ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಲೋಕಾಯುಕ್ತ ಅಧಿಕಾರಿ ವೆಂಕನಗೌಡ ಮತ್ತು ತಂಡದವರು ಕಾರ್ಯಾಚರಣೆ ನಡೆಸಿದರು. 'ಹೀನಾ ಅವರು ಮಳೆಪ್ಪ ತಳವಾರ ಅವರಿಗೆ ರೊಟ್ಟಿ ಅಂಗಡಿಗೆ ಪರವಾನಗಿ ನೀಡಲು ₹ 4,500 ಲಂಚಕ್ಕೆ ಬೇಡಿಕೆ ಇಟ್ಟಿದ್ದು, ₹ 1 ಸಾವಿರ ಪಡೆದಿದ್ದರು. ಬಾಕಿ ಹಣ ಪಡೆಯುವಾಗ ಸಿಕ್ಕಿಬಿದ್ದರು' ಎಂದು ಲೋಕಾಯುಕ್ತ ವರಿಷ್ಠಾಧಿಕಾರಿ ಸಿದ್ದಲಿಂಗಪ್ಪ ಎಸ್.ಟಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕುಡಿತದಿಂದ ದೌರ್ಜನ್ಯ ಅಧ್ಯಯನಕ್ಕೆ ನೆರವು'

ಮಂಗಳೂರು: ದೌರ್ಜನ್ಯಕ್ಕೊಳಗಾದ ಮಹಿಳೆಯರಲ್ಲಿ ಮದ್ಯವ್ಯಸನಿ ಗಂಡನಿಂದ ಹಲ್ಲೆಗೊಳಗಾದವರೇ ಹೆಚ್ಚಿದ್ದಾರೆ. ಈ ಬಗ್ಗೆ ಅಧ್ಯಯನ ನಡೆಸಲು ಯಾವುದಾದರೂ ವಿಶ್ವವಿದ್ಯಾಲಯ ಮುಂದೆ ಬಂದಲ್ಲಿ ರಾಜ್ಯ ಮಹಿಳಾ ಆಯೋಗವು ಆರ್ಥಿಕ ನೆರವು ಒದಗಿಸಲು ಸಿದ್ಧವಿದೆ ಎಂದು ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಹೇಳಿದರು.


ಡಾ.ನಾಗಲಕ್ಷ್ಮಿ ಚೌಧರಿ

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಅಂಗಡಿಗಳಲ್ಲೂ ಮದ್ಯ ಸಿಗುತ್ತಿರುವ ಬಗ್ಗೆ ದೂರುಗಳಿವೆ. ಆಯಾ ಜಿಲ್ಲಾಡಳಿತಗಳು ಕ್ರಮ ಕೈಗೊಳ್ಳಬೇಕು ಎಂದರು. ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ 44 ವರ್ಷದ ಮಹಿಳೆ ಮೇಲೆ, ಕುಡಿದು ಬಂದಿದ್ದ ಆಕೆಯ ಗಂಡ ಆ್ಯಸಿಡ್ ಎರಚಿದ್ದಾನೆ. ಸಂತ್ರಸ್ತೆಗೆ ಸರ್ಕಾರದಿಂದ ಸಿಗುವ ಸೌಲಭ್ಯ ಒದಗಿಸುವಂತೆ ಸೂಚಿಸಲಾಗಿದೆ ಎಂದರು.

ಯುಪಿಎಸ್‌ಸಿ ಪರೀಕ್ಷೆ

ಬಳ್ಳಾರಿಯ ಯಶವಂತ್‌ಗೆ 409ನೇ ರ‍್ಯಾಂಕ್


ಯಶವಂತ್

ಬಳ್ಳಾರಿ: ಬಳ್ಳಾರಿಯ ಸಿ. ಯಶವಂತ ಕುಮಾರ್ (28) ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 409ನೇ ರ‍್ಯಾಂಕ್ ಗಳಿಸಿದ್ದಾರೆ.

ವೃತ್ತಿಯಲ್ಲಿ ಬಡಗಿಯಾಗಿರುವ ಸಿ. ಶ್ರೀನಿವಾಸ್ ಮತ್ತು ಸಿ. ಅರುಣಾ ಅವರ ಎರಡನೇ ಮಗ ಯಶವಂತ್ ತಮ್ಮ ನಾಲ್ಕನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದ್ದಾರೆ. ಹತ್ತನೇ ತರಗತಿವರೆಗೆ ಬಳ್ಳಾರಿಯ ಖಾಸಗಿ ಶಾಲೆಗಳಲ್ಲಿ ಓದಿರುವ ಯಶವಂತ್, 2022ರಲ್ಲಿ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ ಎಂಬಿಬಿಎಸ್ ಪದವಿ ಪಡೆದರು.

'ನಿರೀಕ್ಷಿತ ರ‍್ಯಾಂಕ್ ಬಾರದ ಕಾರಣ ಯಶವಂತ್ ಮತ್ತೊಮ್ಮೆ ಯುಪಿಎಸ್‌ಸಿಗೆ ಸಿದ್ಧತೆ ನಡೆಸುವ ಇರಾದೆಯಲ್ಲಿದ್ದಾರೆ' ಎಂದು ಯಶವಂತ್ ಅವರ ತಂದೆ ಸಿ. ಶ್ರೀನಿವಾಸ ಪ್ರಜಾವಾಣಿಗೆ ತಿಳಿಸಿದರು. 'ನಿತ್ಯ ಬೆಳಿಗ್ಗೆ 10 ಗಂಟೆಗೆ ಮನೆಯಿಂದ ಹೋಗುತ್ತಿದ್ದ ಯಶವಂತ್ ದಿನವಿಡೀ ಗ್ರಂಥಾಲಯದಲ್ಲಿ ಇರುತ್ತಿದ್ದರು. ಪರೀಕ್ಷೆಗಾಗಿ ಹಿಂದೆ ತರಬೇತಿ ಪಡೆದಿದ್ದರು. ಈ ಬಾರಿ ಸ್ವಯಂ ಓದಿ ಪಾಸು ಮಾಡಿದ್ದಾರೆ' ಎಂದರು.

ಡಾ. ಮುತ್ತೇಶ್ ಗೌಡಗೆ 622ನೇ ರ‍್ಯಾಂಕ್


ಮುತ್ತೇಶ್

ಕೆ.ಆರ್.ಪೇಟೆ: ತಾಲ್ಲೂಕಿನ ತ್ರಿವೇಣಿ ಸಂಗಮ ಸಮೀಪದ ಅಂಬಿಗರಹಳ್ಳಿಯ ಡಾ.ಎ.ಎಸ್.ಮುತ್ತೇಶ್ ಗೌಡ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 622ನೇ ರ‍್ಯಾಂಕ್ ಗಳಿಸಿದ್ದಾರೆ. ಇದು ಅವರ ಮೂರನೇ ಪ್ರಯತ್ನ.

ರೈತ ಎ.ಎಲ್.ಶಿವರಾಮು– ತಾಯಿ ಅರುಣಕುಮಾರಿ ದಂಪತಿಯ ಮಗನಾದ ಅವರು ಪಟ್ಟಣದ ಆಶೀರ್ವಾದ ಶಾಲೆಯಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ, ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಪಿಯು ಶಿಕ್ಷಣ ಪಡೆದರು. ಮಂಡ್ಯದ ಸರ್ಕಾರಿ ವೈದ್ಯಕೀಯ ಕಾಲೇಜಿನಿಂದ ಎಂಬಿಬಿಎಸ್ ಪದವಿ ಪಡೆದರು.

ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿದ್ದರು. 'ಮಗ ವೈದ್ಯ ವೃತ್ತಿ ಮಾಡುತ್ತಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದು ಹೆಮ್ಮೆ ಮೂಡಿಸಿದೆ' ಎಂದು ಪೋಷಕರು ಹೇಳಿದರು. 'ವೈದ್ಯನಾಗಿ ಜನರಿಗೆ ಸ್ಪಂದಿಸುತ್ತಿದ್ದೆ. ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಸಲುವಾಗಿಯೇ ಯುಪಿಎಸ್‌ಸಿ ಪರೀಕ್ಷೆಗೆ ಹಾಜರಾದೆ. ಜನರ ಒಳಿತಿಗೆ ಪ್ರಯತ್ನಿಸುತ್ತೇನೆ' ಎಂದು ಡಾ.ಮುತ್ತೇಶ್ ಗೌಡ ತಿಳಿಸಿದರು.

301ನೇ ರ‍್ಯಾಂಕ್‌ಗೆ ಇಬ್ಬರ ಪ್ರತಿಪಾದನೆ

ಪಟ್ನಾ (ಪಿಟಿಐ): ಯುಪಿಎಸ್‌ಸಿ ಪ್ರಕಟಿಸಿರುವ ನಾಗರಿಕ ಸೇವೆಗಳ ಪರೀಕ್ಷೆಯ ಫಲಿತಾಂಶದಲ್ಲಿ ಬಂದಿರುವ 301ನೇ ರ‍್ಯಾಂಕ್ ತಮ್ಮದೇ ಎಂದು ಇಬ್ಬರು ಅಭ್ಯರ್ಥಿಗಳು ಪ್ರತಿಪಾದಿಸಿದ್ದಾರೆ.

301ನೇ ರ‍್ಯಾಂಕ್ ಆಕಾಂಕ್ಷಾ ಸಿಂಗ್ ಎಂಬುವವರು ಪಡೆದಿದ್ದಾರೆ. ಈಗ ಇಬ್ಬರು ಅಭ್ಯರ್ಥಿಗಳು ಇದೇ ಸ್ಥಾನಕ್ಕಾಗಿ ಹಕ್ಕು ಮಂಡಿಸುತ್ತಿದ್ದಾರೆ. ನಿಷೇಧಿತ ರಣವೀರ್ ಸೇನಾದ ಸಂಸ್ಥಾಪಕ ಬ್ರಹ್ಮೇಶ್ವರ ಸಿಂಗ್ ಅವರ ಮೊಮ್ಮಗಳು, ಬಿಹಾರದ ಆಕಾಂಕ್ಷಾ ಸಿಂಗ್ ತಾನೇ 301 ರ‍್ಯಾಂಕ್ ಪಡೆದಿರುವುದಾಗಿ ಪ್ರತಿಪಾದಿಸಿದ್ದಾರೆ. '2025 ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ, ನಾನು ಎರಡನೇ ಪ್ರಯತ್ನದಲ್ಲಿ 301ನೇ ರ‍್ಯಾಂಕ್ ಗಳಿಸಿದ್ದೇನೆ' ಎಂದು ಆಕಾಂಕ್ಷಾ ಹೇಳಿಕೊಂಡಿದ್ದಾರೆ.

ಮತ್ತೊಂದೆಡೆ, ಉತ್ತರ ಪ್ರದೇಶದ ಗಾಜಿಪುರದ ಆಕಾಂಕ್ಷಾ ಸಿಂಗ್, ಇದು ತಾನು ಪಡೆದಿರುವ ರ‍್ಯಾಂಕ್ ಎಂದು ಸಮರ್ಥಿಸಿಕೊಂಡಿದ್ದಾರೆ. 'ನನ್ನ ರ‍್ಯಾಂಕ್ ಮತ್ತು ಗುರುತನ್ನು ಬೇರೆಯವರು ನಕಲು ಮಾಡಿರುವುದು ಬೆಳಕಿಗೆ ಬಂದಿದೆ' ಎಂದು ಫೇಸ್‌ಬುಕ್‌ನಲ್ಲಿ ಕೆಲವು ದಾಖಲೆಗಳ ಸಮೇತ ಪೋಸ್ಟ್ ಮಾಡಿದ್ದಾರೆ. 'ಮಹಿಳೆಯೊಬ್ಬರು 301ನೇ ರ‍್ಯಾಂಕ್ ತಮ್ಮದು ಎಂದು ಪ್ರತಿಪಾದಿಸಿದ್ದಾರೆ. ಆದರೆ, ಪ್ರವೇಶಪತ್ರದಲ್ಲಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಸ್ಪಷ್ಟವಾಗುತ್ತದೆ' ಎಂದರು.

ಹೋಳಿ ಸಂಭ್ರಮ...

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ


ಹುಬ್ಬಳ್ಳಿಯ ಬಾನಿ ಓಣಿಯಲ್ಲಿ ಶನಿವಾರ ರಂಗಪಂಚಮಿ ಪ್ರಯುಕ್ತ ಆಯೋಜಿಸಿದ್ದ 'ರೇನ್ ಡ್ಯಾನ್ಸ್' ಕಾರ್ಯಕ್ರಮದಲ್ಲಿ ಯುವಜನರು ಸಂಭ್ರಮಿಸಿದ್ದು ಹೀಗೆ

ಎಸ್.ಟಿಗೆ ಶೇ 7ರ ಮೀಸಲಾತಿ: ಮಾ. 31ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡಕ್ಕೆ ಹೆಚ್ಚಳ ಮಾಡಲಾಗಿದ್ದ ಶೇ 7ರ ಮೀಸಲಾತಿ ಜಾರಿಗೊಳಿಸಲು ರಾಜ್ಯ ಸರ್ಕಾರ ಮಾರ್ಚ್ ಅಂತ್ಯದ ಒಳಗೆ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗ, ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ಸಮಿತಿಯ ಸಲ್ಲಿಸಿದ್ದ ವರದಿ ಪ್ರಕಾರ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಮೀಸಲಾತಿ ಪ್ರಮಾಣವನ್ನು ಈ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಕ್ರಮವಾಗಿ ಶೇಕಡ 15ರಿಂದ ಶೇ 17ಕ್ಕೆ ಮತ್ತು ಶೇ 3ರಿಂದ ಶೇ 7ಕ್ಕೆ ಹೆಚ್ಚಳ ಮಾಡಲಾಗಿತ್ತು. ವಿಧಾನಸಭೆ, ವಿಧಾನ ಪರಿಷತ್‌ನಲ್ಲೂ ಸರ್ವಾನುಮತದಿಂದ ಅಂಗೀಕಾರವಾಗಿತ್ತು. ಆದರೆ, ಕೆಲವರು ಕೋರ್ಟ್ ಮೊರೆ ಹೋಗಿದ್ದರ ಪರಿಣಾಮವಾಗಿ ಮೀಸಲಾತಿ ಹೆಚ್ಚಳದ ಸೌಲಭ್ಯ ಪರಿಶಿಷ್ಟರಿಗೆ ಸಿಕ್ಕಿಲ್ಲ' ಎಂದು ದೂರಿದರು.

ಬೆಳಗಾವಿಯ ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮ ಪಂಚಾಯಿತಿಯ ಯೋಜನೆ

ಹೆಣ್ಣು ಮಗು ಜನಿಸಿದರೆ ₹5,500 ಠೇವಣಿ

• ಇಮಾಮ್‌ಹುಸೇನ್ ಗೂಡುನವರ

ಇಂದು ಮಹಿಳಾ ದಿನಾಚರಣೆ

ಹೂಲಿ (ಬೆಳಗಾವಿ ಜಿಲ್ಲೆ): ಈ ಊರಿನಲ್ಲಿ ದಂಪತಿಗೆ ಮೊದಲ ಬಾರಿ ಅಥವಾ ಸತತ ಎರಡನೇ ಬಾರಿಗೆ ಹೆಣ್ಣು ಮಗು ಜನಿಸಿದರೆ, ಆ ಮಗುವಿನ ಹೆಸರಿನಲ್ಲಿ ಗ್ರಾಮ ಪಂಚಾಯಿತಿಯು ₹5,500 ಠೇವಣಿ ಇರಿಸುತ್ತದೆ.

ಈ ಉದ್ದೇಶದಿಂದ ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮ ಪಂಚಾಯಿತಿಯು 'ಕುಮಾರಿ ಸಮೃದ್ಧಿ' ಎಂಬ ಯೋಜನೆಯನ್ನು 2022ರ ಆಗಸ್ಟ್ ತಿಂಗಳಿನಿಂದ ಜಾರಿಗೊಳಿಸಿದೆ.

2022ರ ಆಗಸ್ಟ್ 15ರಿಂದ 2025ರ ಆಗಸ್ಟ್ 15ರವರೆಗೆ ಪ್ರತಿ ಮಗುವಿನ ಹೆಸರಿನಲ್ಲಿ ₹5 ಸಾವಿರ ಠೇವಣಿ ಇರಿಸಲಾಗುತ್ತಿತ್ತು. 2025ರ ಆಗಸ್ಟ್ 16ರಿಂದ ಮೊತ್ತವನ್ನು ₹5,500ಕ್ಕೆ ಹೆಚ್ಚಿಸಲಾಗಿದೆ. ಈವರೆಗೆ 49 ಮಕ್ಕಳ ಹೆಸರಿನಲ್ಲಿ ಒಟ್ಟು ₹2.46 ಲಕ್ಷ ಠೇವಣಿ ಇರಿಸಲಾಗಿದೆ.

'12 ಸಾವಿರ ಜನಸಂಖ್ಯೆವುಳ್ಳ ಹೂಲಿ ಗ್ರಾಮ ಪಂಚಾಯಿತಿಯಲ್ಲಿ ವಾರ್ಷಿಕ ₹17 ಲಕ್ಷ ಆದಾಯ ಸಂಗ್ರಹವಾಗುತ್ತಿದೆ. ಈ ಸಂಪನ್ಮೂಲ ಬಳಸಿಕೊಂಡು, ಮಗುವಿನ ಹೆಸರಿನಲ್ಲಿ ಕರ್ನಾಟಕ ವಿಕಾಸ ಬ್ಯಾಂಕ್‌ನ ಹೂಲಿ ಶಾಖೆಯಲ್ಲಿ ಠೇವಣಿ ಇರಿಸುತ್ತೇವೆ. 18 ವರ್ಷದ ಬಳಿಕ ಹಣ ಬಡ್ಡಿ ಸಮೇತ ಮಗುವಿಗೆ ಸಿಗುತ್ತದೆ' ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಮಹಾದೇವಪ್ಪ ಕಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಾನು ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಈ ಯೋಜನೆ ಘೋಷಿಸಿದೆ. ಹೆಣ್ಣು ಮಕ್ಕಳ ಬಗ್ಗೆ ಸಕಾರಾತ್ಮಕ ಭಾವನೆ ಮೂಡಲಿ ಮತ್ತು ಅವರ ಭವಿಷ್ಯಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಜಾರಿಗೊಳಿಸಲಾಯಿತು' ಎಂದು ಗ್ರಾಮ ಪಂಚಾಯಿತಿ ಸದಸ್ಯ ವಿರೂಪಾಕ್ಷ ತೊರಗಲ್ಲ ತಿಳಿಸಿದರು.


ಹೂಲಿಯಲ್ಲಿ ಹೆಣ್ಣು ಮಗುವಿನ ತಾಯಂದಿರರಿಗೆ ಠೇವಣಿಯ ದಾಖಲೆಗಳನ್ನು ನೀಡುತ್ತಿರುವುದು

> ಪ್ರತಿ ವರ್ಷ ಜನವರಿ 26 ಮತ್ತು ಆಗಸ್ಟ್ 15ರಂದು ನಡೆಯುವ ಕಾರ್ಯಕ್ರಮಗಳಲ್ಲಿ, ಠೇವಣಿಯ ದಾಖಲೆಯನ್ನು ತಾಯಂದಿರರಿಗೆ ನೀಡುತ್ತೇವೆ. ಆ ಹಣವು ಹೆಣ್ಣುಮಕ್ಕಳ ಬದುಕಿಗೆ ಉಪಯುಕ್ತ ಆಗಬೇಕು
> **ವಿರೂಪಾಕ್ಷ ತೊರಗಲ್ಲ,** ಸದಸ್ಯ, ಹೂಲಿ ಗ್ರಾಮ ಪಂಚಾಯಿತಿ

> ಕೂಲಿ ಮಾಡಿ ಬದುಕು ಸಾಗಿಸುವ ನಮಗೆ ಹಣ ಉಳಿತಾಯ ಮಾಡುವುದೇ ಕಷ್ಟ. ನಮ್ಮ ಮಗುವಿನ ಹೆಸರಿನಲ್ಲಿ ಗ್ರಾಮ ಪಂಚಾಯಿತಿಯು ₹5 ಸಾವಿರ ಠೇವಣಿ ಇಟ್ಟಿದ್ದು ಖುಷಿ ತಂದಿದೆ
> **ದೀಪಾ ಕಂಬಳಿ,** ಹೂಲಿ

702 ಎಕರೆ ಕಾಡಲ್ಲಿ ಅದಿರು ಶೋಧ

ಸಂಡೂರು ದೋಣಿಮಲೈನಲ್ಲಿ ಕಾರ್ಯಾಚರಣೆಗೆ ಅಸ್ತು

ಪ್ರಜಾವಾಣಿ ವಾರ್ತೆ



ನವದೆಹಲಿ: ಬಳ್ಳಾರಿ ಜಿಲ್ಲೆಯ ಸಂಡೂರಿನ ದೋಣಿಮಲೈ ಬ್ಲಾಕ್‌ನ 702 ಎಕರೆ ಕಾಡಿನಲ್ಲಿ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು (ಎನ್‌ಎಂಡಿಸಿ) ಅದಿರು ಹುಡುಕಾಟ ಕಾರ್ಯಾಚರಣೆ ನಡೆಸಲಿದೆ.

ದೋಣಿಮಲೈ ಕಬ್ಬಿಣದ ಅದಿರು ಗಣಿಯ ಪಕ್ಕದಲ್ಲಿರುವ ಅರಣ್ಯದಲ್ಲಿ ಅನ್ವೇಷಣೆ ನಡೆಸಲು ಅನುಮತಿ ನೀಡುವಂತೆ ಕೋರಿ ನಿಗಮವು ಗಣಿ ಹಾಗೂ ಭೂವಿಜ್ಞಾನ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಅನುಮತಿ ನೀಡುವ ಕುರಿತು ಪರಿಶೀಲಿಸುವಂತೆ ಗಣಿ ಇಲಾಖೆಯ ನಿರ್ದೇಶಕರು ಅರಣ್ಯ ಇಲಾಖೆಗೆ ಪತ್ರ ಬರೆದಿದ್ದರು. ಆ ಬಳಿಕವು ನಿಗಮವು ಅರಣ್ಯ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಬಳ್ಳಾರಿ ಜಿಲ್ಲೆಯ ಅರಣ್ಯ ಅಧಿಕಾರಿಗಳ ಸ್ಥಳ ಪರಿಶೀಲನಾ ವರದಿಯ ಶಿಫಾರಸಿನ ಆಧಾರದಲ್ಲಿ ಎನ್‌ಎಂಡಿಸಿಗೆ ಅರಣ್ಯ ಇಲಾಖೆ ಅನುಮತಿ ಕೊಟ್ಟಿದೆ.

ದೋಣಿಮಲೈಯ ನಿಕ್ಷೇಪಗಳಲ್ಲಿ 118 ಮಿಲಿಯನ್ ಟನ್ ಅದಿರು ಇದ್ದು, ಗಣಿಯ ನಿರೀಕ್ಷಿತ ಜೀವಿತಾವಧಿ 2041ರ ವರೆಗೆ ಇದೆ ಎಂದು ಅಂದಾಜಿಸಲಾಗಿದೆ. ಪರಿಶೋಧನೆ ನಡೆಸಿದರೆ ಇನ್ನಷ್ಟು ನಿಕ್ಷೇಪ ಸಿಗಬಹುದು ಎಂದು ನಿಗಮವು ಪ್ರಸ್ತಾವದಲ್ಲಿ ತಿಳಿಸಿತ್ತು. ಕಾರ್ಯಾಚರಣೆಗಾಗಿ ಹೊಸ ಸಂಪರ್ಕ ರಸ್ತೆ ನಿರ್ಮಿಸುವುದಿಲ್ಲ ಹಾಗೂ ಮರಗಳನ್ನು ಕತ್ತರಿಸುವುದಿಲ್ಲ ಎಂದೂ ನಿಗಮವು ಸ್ಪಷ್ಟಪಡಿಸಿತ್ತು.

'ಈ ಅನುಮೋದನೆಯು ಪ್ರಸ್ತಾವಿತ ಪ್ರದೇಶದಲ್ಲಿ ಖನಿಜ ಮತ್ತು ಖನಿಜೇತರ ಪ್ರದೇಶವನ್ನು ತಿಳಿದುಕೊಳ್ಳುವ ಪರಿಶೋಧನಾ ಕಾರ್ಯಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಇದಲ್ಲದೆ, ಗಣಿ ತ್ಯಾಜ್ಯಗಳನ್ನು ಸುರಿಯಲು ಈ ಪ್ರದೇಶ ಬಳಸಿಕೊಳ್ಳುವಂತಿಲ್ಲ. ಇದಕ್ಕೆ ನಿಗಮವು ಪರ್ಯಾಯ ಅರಣ್ಯೇತರ ಪ್ರದೇಶವನ್ನು ಅನ್ವೇಷಿಸಬೇಕು' ಎಂದು ಅರಣ್ಯ ಇಲಾಖೆ ನಿರ್ದೇಶನ ನೀಡಿದೆ.

ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘಿಸದೆಯೇ, ಸಂಬಂಧಪಟ್ಟ ಡಿಸಿಎಫ್‌ಗಳ ಮಾರ್ಗದರ್ಶನದಲ್ಲಿ ಶೋಧ ಕಾರ್ಯಾಚರಣೆ ನಡೆಸಬೇಕು. 12 ತಿಂಗಳುಗಳ ಒಳಗೆ ಈ ಪ್ರಕ್ರಿಯೆ ಮುಗಿಸಬೇಕು. ಒಂದು ವೇಳೆ ನಿಗಮವು ಮೂರು ತಿಂಗಳೊಳಗೆ ಸಮೀಕ್ಷೆ ಕಾರ್ಯ ಆರಂಭಿಸದಿದ್ದರೆ ಈಗ ನೀಡಿರುವ ಅನುಮೋದನೆಯನ್ನು ರದ್ದುಗೊಳಿಸಲಾಗುತ್ತದೆ ಎಂದೂ ಅರಣ್ಯ ಇಲಾಖೆ ಸ್ಪಷ್ಟಪಡಿಸಿದೆ.

ಸಮೀಕ್ಷೆಗೆ ಪ್ರಸ್ತಾಪಿಸಲಾದ ಪ್ರದೇಶವು ಹುಲಿ ಕಾರಿಡಾರ್, ರಾಷ್ಟ್ರೀಯ ಉದ್ಯಾನ/ವನ್ಯಜೀವಿ ಅಭಯಾರಣ್ಯ ಅಥವಾ ಸಂರಕ್ಷಿತ ಪರಿಸರ ಸೂಕ್ಷ್ಮ ವಲಯಗಳಲ್ಲಿ ಬಂದರೆ ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972 ರ ಪ್ರಕಾರ ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಅನುಮತಿ ಪಡೆಯಬೇಕು ಎಂದು ಸೂಚಿಸಿದೆ.

'ಸೈಬರ್ ಅಪರಾಧ ಮಟ್ಟಹಾಕಲು ಕ್ರಮ'

ಮೂರನೇ ವರ್ಷದ ಸೈಬರ್ ಅಪರಾಧ ತನಿಖಾ ಶೃಂಗ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 62 ಸಾವಿರ ಮಂದಿಗೆ ತರಬೇತಿ
- ಸಂಶೋಧನಾ ಸಾಮರ್ಥ್ಯ ವೃದ್ಧಿ
- ಸೈಬರ್ ಸುರಕ್ಷತೆ ಒದಗಿಸಲು ಸರ್ಕಾರ ಬದ್ಧ

ಬೆಂಗಳೂರು: 'ರಾಜ್ಯ ಸರ್ಕಾರವು ಸೈಬರ್ ಅಪರಾಧಗಳನ್ನು ಮಟ್ಟಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸಿಐಡಿ ಹಾಗೂ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ನಗರದಲ್ಲಿ ಶನಿವಾರ ಆಯೋಜಿಸಿದ್ದ ಮೂರನೇ ವರ್ಷದ ಸೈಬರ್ ಅಪರಾಧ ತನಿಖಾ ಶೃಂಗದಲ್ಲಿ ಅವರು ಮಾತನಾಡಿದರು.

'ಸೈಬರ್ ದಾಳಿ ಪ್ರಕರಣಗಳನ್ನು ತನಿಖೆ ಮಾಡಲು ಮತ್ತು ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸಲು ಅಗತ್ಯವಾದ ಕೌಶಲ, ತರಬೇತಿ ಮತ್ತು ತಂತ್ರಜ್ಞಾನದ ಜತೆಗೆ ವಿಶೇಷ ಸೈಬರ್ ಅಪರಾಧ ಘಟಕಗಳನ್ನು ಸ್ಥಾಪಿಸಲಾಗಿದೆ' ಎಂದು ಹೇಳಿದರು.

'ಕರ್ನಾಟಕವು ವಿಶ್ವದಲ್ಲೇ ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆ ಹೊಂದಿದೆ. ಕರ್ನಾಟಕ ಕೇವಲ ಒಂದು ರಾಜ್ಯವಲ್ಲ. ಅದು ಜಾಗತಿಕ ಬ್ರ್ಯಾಂಡ್. ಉತ್ತಮ ಮತ್ತು ಅತ್ಯಂತ ಸುರಕ್ಷಿತ ಡಿಜಿಟಲ್ ವ್ಯವಸ್ಥೆಯನ್ನು ರಾಜ್ಯ ಹೊಂದಿದೆ' ಎಂದರು.


'ಎಲ್ಲ ಜಿಲ್ಲೆಗಳು ಮತ್ತು ಪ್ರಮುಖ ನಗರಗಳಲ್ಲಿ ಒಟ್ಟು 43 ಸೈಬರ್ ಅಪರಾಧ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ. ನಾಗರಿಕರಿಗೆ ಸೈಬರ್ ಸುರಕ್ಷತೆ ಒದಗಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಸಿಸಿಐಟಿಆರ್ ಸ್ಥಾಪನೆಯಿಂದ ಸೈಬರ್ ಅಪರಾಧ ತನಿಖೆಯನ್ನು ಬಲಪಡಿಸಲಾಗಿದೆ. ಸಂಶೋಧನಾ ಸಾಮರ್ಥ್ಯ ವೃದ್ಧಿ ಆಗಿದೆ. ನಮ್ಮ ಪೊಲೀಸ್ ಅಧಿಕಾರಿಗಳಲ್ಲಿ ತಾಂತ್ರಿಕ ಕೌಶಲಗಳು ಹೆಚ್ಚಿವೆ. ಇದರಿಂದ ತನಿಖೆಗೂ ಸಹಕಾರಿ ಆಗಿದೆ' ಎಂದರು.

'ಸೈಬರ್ ಅಪರಾಧ ಪ್ರಕರಣಗಳ ನಿಯಂತ್ರಣ ಹಾಗೂ ಸೈಬರ್ ವಂಚಕರ ಪತ್ತೆಗೆ ರಾಜ್ಯದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ನಾಗರಿಕರು, ವಿವಿಧ ಇಲಾಖೆಯ ಅಧಿಕಾರಿಗಳೂ ಸೇರಿದಂತೆ ಒಟ್ಟು 62 ಸಾವಿರ ಮಂದಿಗೆ ಇದುವರೆಗೆ ತರಬೇತಿ ನೀಡಲಾಗಿದೆ' ಎಂದು ತಿಳಿಸಿದರು.

'ಸೈಬರ್ ಅಪರಾಧವು ಯಾವುದೇ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾಗಿಲ್ಲ. ಇದು ಮಿತಿಯಿಲ್ಲದ, ತಂತ್ರಜ್ಞಾನ ಆಧಾರಿತ ಮತ್ತು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಅಪರಾಧ. ಹಣಕಾಸಿನ ವಂಚನೆಗಳು ಮತ್ತು ಕ್ರಿಪ್ಟೊಕರೆನ್ಸಿ, ಡಾರ್ಕ್‌ವೆಬ್ ಆಧಾರಿತ ಮಾದಕವಸ್ತು ಜಾಲಗಳು ಮತ್ತು ಡೇಟಾ ಉಲ್ಲಂಘನೆಯವರೆಗೆ, ಬೆದರಿಕೆಗಳ ಪ್ರಮಾಣ ವೇಗವಾಗಿ ಹೆಚ್ಚುತ್ತಿದೆ. ಈ ಸವಾಲುಗಳನ್ನು ತಾಂತ್ರಿಕ ಸಾಮರ್ಥ್ಯದಿಂದ ಮಾತ್ರವಲ್ಲದೆ ಕಾನೂನುಗಳನ್ನು ಬಲಪಡಿಸುವ ಮೂಲಕ ಸಂಘಟನಾತ್ಮಕವಾಗಿ ಎದುರಿಸಬೇಕಿದೆ' ಎಂದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣವ್ ಮೊಹಂತಿ, ಇನ್ಫೊಸಿಸ್ ಫೌಂಡೇಷನ್ ಟ್ರಸ್ಟಿ ಸುನೀಲ್ ಕುಮಾರ್ ಧಾರೇಶ್ವರ್, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ಸಿಇಒ ವಿನಾಯಕ ಗೋಡ್ಸೆ ಉಪಸ್ಥಿತರಿದ್ದರು.



ಸಿಐಡಿ ಹಾಗೂ ಸೈಬರ್ ಅಪರಾಧ ತನಿಖಾ ತರಬೇತಿ–ಸಂಶೋಧನಾ ಕೇಂದ್ರದಿಂದ ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ಮೂರನೇ ವರ್ಷದ 'ಸೈಬರ್ ಅಪರಾಧ ತನಿಖಾ ಶೃಂಗ'ದಲ್ಲಿ ಜಿ.ಪರಮೇಶ್ವರ ಅವರು ಪೊಲೀಸ್ ಅಧಿಕಾರಿಗಳು ಹಾಗೂ ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾದ ಸಿಬ್ಬಂದಿ ಜತೆಗೆ ಚರ್ಚಿಸಿದರು

> ಡಿಜಿಟಲ್ ಸುರಕ್ಷತೆ ಒದಗಿಸಲು ಖಾಸಗಿ ವಲಯ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ನಿರಂತರವಾಗಿ ಕೈಜೋಡಿಸಿ ಕೆಲಸ ಮಾಡಲಾಗುತ್ತಿದೆ
> **ಜಿ.ಪರಮೇಶ್ವರ**, ಗೃಹ ಸಚಿವ

'ಐಎಎಸ್ ಬಾಬಾ: 24 ಮಂದಿಗೆ ರ‍್ಯಾಂಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2025ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ ರಾಜ್ಯದಿಂದ ರ‍್ಯಾಂಕ್ ಪಡೆದವರಲ್ಲಿ 24 ಮಂದಿ ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದರು' ಎಂದು ಐಎಎಸ್ ಬಾಬಾ ಸಂಸ್ಥೆಯ ಸಂಸ್ಥಾಪಕ ಎಸ್. ಮೋಹನ್ ಕುಮಾರ್ ಹೇಳಿದ್ದಾರೆ.

'ಅಖಿಲ ಭಾರತ ಮಟ್ಟದಲ್ಲಿ ಮೊದಲನೇ ರ‍್ಯಾಂಕ್ ಪಡೆದ ಅನುಜ್ ಅಗ್ನಿಹೋತ್ರಿ ಹಾಗೂ ದ್ವಿತೀಯ ರ‍್ಯಾಂಕ್ ಪಡೆದ ರಾಜೇಶ್ವರಿ ಸುವೆ ಎಂ. ಅವರು ನಮ್ಮ ಸಂಸ್ಥೆ ನಡೆಸಿದ್ದ ಪೂರ್ವಭಾವಿ ಪರೀಕ್ಷಾ ಸರಣಿಯನ್ನು ಎದುರಿಸಿದ್ದರು. ಮುಖ್ಯ ಪರೀಕ್ಷೆ ಹಾಗೂ ವ್ಯಕ್ತಿತ್ವ ಪರೀಕ್ಷೆಯಲ್ಲಿ ತರಬೇತಿ ಪಡೆದಿದ್ದ ಕಿರಣ ಕಮತೆ ಅವರು 53ನೇ ರ‍್ಯಾಂಕ್ ಪಡೆದು, ರಾಜ್ಯಕ್ಕೆ ಮೊದಲನೆಯವರಾಗಿದ್ದಾರೆ. ಅಗ್ರ ನೂರು ರ‍್ಯಾಂಕ್‌ಗಳಲ್ಲಿ ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದ 20ಕ್ಕೂ ಹೆಚ್ಚು ಮಂದಿ ಇದ್ದಾರೆ. ದೇಶದಾದ್ಯಂತ 200ಕ್ಕೂ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

'ಅಗ್ರ 10 ರ‍್ಯಾಂಕ್‌ಗಳಲ್ಲಿ ಮೊದಲ 4 ರ‍್ಯಾಂಕ್‌ಗಳನ್ನು ಸಂಸ್ಥೆಯ ಅಭ್ಯರ್ಥಿಗಳು ಪಡೆದುಕೊಂಡಿದ್ದಾರೆ. ಇದು ಸಂಸ್ಥೆಯ ಅತ್ಯುನ್ನತ ಸಾಧನೆಯ ಕೈಗನ್ನಡಿಯಾಗಿದೆ. ಕರ್ನಾಟಕದಿಂದ ರ‍್ಯಾಂಕ್ ಪಡೆದ 31 ಅಭ್ಯರ್ಥಿಗಳಲ್ಲಿ, 24 ಮಂದಿ ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದವರಾಗಿದ್ದಾರೆ' ಎಂದು ಅವರು ಹೇಳಿದ್ದಾರೆ.



ಕೇಂದ್ರ ನಾಗರಿಕ ಸೇವೆಗೆ ಆಯ್ಕೆಯಾಗಿರುವ ವರುಣ್ ಗೌಡ, ಪ್ರವೀಣ, ಸಂದೀಪ್ ಬಾಡದ ಅವರೊಂದಿಗೆ ಎಸ್ ಮೋಹನ್ ಕುಮಾರ್



ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘ ಅಧ್ಯಕ್ಷ ಎಲ್.ಬೈರಪ್ಪ ಹಾಗೂ ವಯಾ ವಿಕಾಸ್ ಸಂಸ್ಥೆಯ ಪವಿತ್ರಾ ರೆಡ್ಡಿ ಅವರು ನಿವೃತ್ತರು, ಕುಟುಂಬ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಯೋಜನೆಗಳ ಅನುಷ್ಠಾನ ಕುರಿತು ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು. ಸಂಘದ ಪದಾಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

ನಿವೃತ್ತರಿಗೆ 'ವಯಾ ವಿಕಾಸ್' ಆಸರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಸರ್ಕಾರಿ ನೌಕರರ ಸರ್ವತೋಮುಖ ಕ್ಷೇಮಾಭಿವೃದ್ಧಿಗೆ 'ವಯಾ ವಿಕಾಸ್ ಸಂಸ್ಥೆ' ಮುಂದಾಗಿದೆ.

ನಿವೃತ್ತರ ಆರೋಗ್ಯ, ರಕ್ಷಣೆ, ಆರ್ಥಿಕ ಹಾಗೂ ಕಾನೂನು ಸೇವೆಗಳನ್ನು ಒದಗಿಸಲು ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘದ ಜತೆ ಒಪ್ಪಂದ ಮಾಡಿಕೊಂಡಿದೆ.

ವಯಾ ವಿಕಾಸ್ ಸಂಸ್ಥೆಯ ಸಿಒಒ ಪವಿತ್ರಾ ರೆಡ್ಡಿ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಲ್.ಬೈರಪ್ಪ ಶನಿವಾರ ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು. ರಾಜ್ಯದಲ್ಲಿ 5 ಲಕ್ಷಕ್ಕೂ ಹೆಚ್ಚು ನಿವೃತ್ತರು ಮತ್ತು ಕುಟುಂಬ ಪಿಂಚಣಿದಾರರು ಇದ್ದಾರೆ.

ಇನ್ಫೊಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಅಧ್ಯಕ್ಷತೆಯ ವಯಾ ವಿಕಾಸ್ ಸಂಸ್ಥೆಯು ಹಿರಿಯ ನಾಗರಿಕರ ಕ್ಷೇಮ, ಘನತೆ ಹಾಗೂ ಸಮಾಜದಲ್ಲಿ ಅವರ ನಿರಂತರ ಭಾಗವಹಿಸುವಿಕೆಯನ್ನು ಉತ್ತೇಜಿಸುತ್ತಿದೆ. ವಿವಿಧ ಸರ್ಕಾರಿ ಸಂಸ್ಥೆಗಳ ಸಹಯೋಗದಲ್ಲಿ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಹೊಸ ಒಡಂಬಡಿಕೆಯ ಫಲವಾಗಿ ನಿವೃತ್ತ ನೌಕರರು ಮತ್ತು ಕುಟುಂಬ ಪಿಂಚಣಿದಾರರ ಆರೋಗ್ಯ ರಕ್ಷಣೆಯೂ ಸೇರಿ ಅವರ ಯೋಗಕ್ಷೇಮಕ್ಕೆ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಿದೆ.

ಪಶ್ಚಿಮ ಏಷ್ಯಾ ಸಂಘರ್ಷ ತೀವ್ರ

ಟೆಹರಾನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇಸ್ರೇಲ್ ದಾಳಿ

ಟೆಹರಾನ್ (ಎಪಿ/ ಎಎಫ್‌ಪಿ): ಇಸ್ರೇಲ್ ಸೇನೆ ಇರಾನ್ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ಶನಿವಾರ ಟೆಹರಾನ್‌ನಲ್ಲಿರುವ ಮೆಹರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಿಂಚಿನ ದಾಳಿ ಮೂಲಕ ನಾಶಪಡಿಸಿರುವುದಾಗಿ ಹೇಳಿದೆ.

ಇರಾನ್ ವಿರುದ್ಧ ಯುದ್ಧ ಆರಂಭಗೊಂಡ (ಫೆ.28) ನಂತರ ಇಸ್ರೇಲ್ ನಡೆಸಿದ ಅತಿ ದೊಡ್ಡ ವೈಮಾನಿಕ ದಾಳಿ ಇದಾಗಿದೆ. ಟೆಹರಾನ್‌ನಲ್ಲಿರುವ ಮಿಲಿಟರಿ ಅಕಾಡೆಮಿ, ಭೂಗತ ಕಮಾಂಡ್ ಸೆಂಟರ್, ಕ್ಷಿಪಣಿ ಸಂಗ್ರಹ ಘಟಕವನ್ನು ಗುರಿಯಾಗಿಸಿ ಏಕಕಾಲದಲ್ಲಿ 80 ಯುದ್ಧ ವಿಮಾನಗಳ ಮೂಲಕ ದಾಳಿ ನಡೆದಿದೆ.

ದಾಳಿಯ ಬೆನ್ನಲ್ಲೇ, ಟೆಹರಾನ್‌ನಲ್ಲಿ ಕ್ಷಿಪಣಿಗಳನ್ನು ಇರಿಸಿದ್ದ ಸ್ಥಳದಲ್ಲಿ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಮೆಹರಾಬಾದ್ ವಿಮಾನ ನಿಲ್ದಾಣದಿಂದ ಮುಗಿಲೆತ್ತರಕ್ಕೆ ದಟ್ಟ ಹೊಗೆ ಮತ್ತು ಬೆಂಕಿ ಏಳುತ್ತಿರುವ ದೃಶ್ಯ ಕಂಡುಬಂದಿತು ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ಇರಾನ್ ಕೂಡ ಪ್ರತೀಕಾರದ ದಾಳಿ ಮುಂದುವರಿಸಿರುವುದರಿಂದ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಇನ್ನಷ್ಟು ವಿಷಮಗೊಂಡಿದೆ. ಜೆರುಸಲೇಂ, ದುಬೈ, ಬಹರೇನ್ ರಾಜಧಾನಿ ಮನಾಮ, ರಿಯಾದ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ.

‘ಸಂಪೂರ್ಣ ನಿಯಂತ್ರಣ’

ಹೊರ್ಮುಜ್ ಜಲಸಂಧಿಯ ಮೂಲಕ ಸಾಗುತ್ತಿದ್ದ ದ್ವೀಪ ರಾಷ್ಟ್ರ ಮಾಲ್ಟಾಗೆ ಸೇರಿದ ತೈಲ ನೌಕೆ ‘ಪ್ರೈಮಾ’ ಮೇಲೆ ದಾಳಿ ನಡೆಸಿರುವುದಾಗಿ ಇರಾನಿನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ ಹೇಳಿದೆ. ಹೊರ್ಮುಜ್ ಜಾಗತಿಕ ತೈಲ ಸಾಗಾಟದ ಪ್ರಮುಖ ಮಾರ್ಗವಾಗಿದ್ದು, ಈ ಮಾರ್ಗದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುವುದಾಗಿ ಹೇಳಿದೆ.

ವಿಮಾನ ಹಾರಾಟ ರದ್ದು: ಇರಾನ್‌ನ ಕ್ಷಿಪಣಿ ದಾಳಿ ಹಿನ್ನೆಲೆಯಲ್ಲಿ, ಶನಿವಾರ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಎಲ್ಲ ವಿಮಾನಗಳ ಹಾರಾಟವನ್ನು ಕೆಲ ಸಮಯ ರದ್ದುಗೊಳಿಸಲಾಗಿತ್ತು.

ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಯ ಬೆನ್ನಲ್ಲೇ ತೀವ್ರಗೊಂಡಿರುವ ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ಸದ್ಯ ಲೆಬನಾನ್, ಸೈಪ್ರಸ್, ಟರ್ಕಿ, ಅಜರ್‌ಬೈಜಾನ್, ಶ್ರೀಲಂಕಾ ಕರಾವಳಿ ಸೇರಿ ಪಶ್ಚಿಮ ಏಷ್ಯಾ ದೇಶಗಳ ಗಡಿಯಾಚೆಗೂ ವಿಸ್ತರಿಸಿದೆ.



ಇಸ್ರೇಲ್ ನಡೆಸಿದ ದಾಳಿಯಲ್ಲಿ ಟೆಹರಾನ್‌ನ ಮೆಹರಾಬಾದ್ ವಿಮಾನ ನಿಲ್ದಾಣದಲ್ಲಿ ಬೆಂಕಿ ಹಾಗೂ ದಟ್ಟ ಹೊಗೆ ಎದ್ದಿತ್ತು —ಎಎಫ್‌ಪಿ ಚಿತ್ರ

ಪೂರ್ವ ಲೆಬನಾನ್‌ನಲ್ಲಿ 41 ಸಾವು

ಬೈರೂತ್ (ರಾಯಿಟರ್ಸ್): ಪೂರ್ವ ಲೆಬನಾನ್‌ನಲ್ಲಿ ಇಸ್ರೇಲ್ ಪಡೆ ನಡೆಸಿದ ದಾಳಿಯಲ್ಲಿ ಲೆಬನಾನ್‌ನ ಮೂವರು ಸೈನಿಕರು ಸೇರಿದಂತೆ 41 ಮಂದಿ ಸಾವಿಗೀಡಾಗಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ.

ನಬಿ ಶೀತ್ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ನಡೆದ ದಾಳಿಯಲ್ಲಿ 40 ಮಂದಿ ಗಾಯಗೊಂಡಿದ್ದಾರೆ ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಈವರೆಗೆ 200ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದು, 3 ಲಕ್ಷಕ್ಕೂ ಅಧಿಕ ಮಂದಿಯನ್ನು ಸರ್ಕಾರಿ ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರು ಇಸ್ರೇಲ್ ಮೇಲೆ ಡ್ರೋನ್ ಮತ್ತು ರಾಕೆಟ್‌ಗಳ ಮೂಲಕ ಸೋಮವಾರ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಭಾರಿ ದಾಳಿ ಮುಂದುವರಿಸಿದೆ.

ಕಮಾಂಡೊ ಕಾರ್ಯಾಚರಣೆ: ಲೆಬನಾನ್‌ನ ಬೈರೂತ್‌ನಲ್ಲಿ ಹೆಲಿಕಾಪ್ಟರ್ ಮೂಲಕ ಇಸ್ರೇಲ್ ತನ್ನ ಕಮಾಂಡೊಗಳನ್ನು ಇಳಿಸಿ ಶನಿವಾರ ಕ್ಷಿಪ್ರ ಕಾರ್ಯಾಚರಣೆ ನಡೆಸಿದೆ. 1986ರಿಂದ ಕಾಣೆಯಾಗಿರುವ ಇಸ್ರೇಲ್ ವಾಯುಪಡೆ ಪೈಲಟ್ ರಾನ್ ಅರಾದ್ ಅವರ ಕುರಿತು ಮಾಹಿತಿ ಕಲೆ ಹಾಕಲು ಸ್ಥಳದಲ್ಲಿ ಕೆಲಕಾಲ ಶೋಧ ನಡೆಸಿದೆ. ಆದರೆ ಈ ವೇಳೆ ಯಾವುದೇ ಕುರುಹು ಪತ್ತೆಯಾಗಿಲ್ಲ ಎನ್ನಲಾಗಿದೆ.

1986ರಲ್ಲಿ ನಡೆದ ಕಾರ್ಯಾಚರಣೆ ವೇಳೆ ಲೆಬನಾನ್‌ನಲ್ಲಿ ವಿಮಾನ ಪತನೊಂಡಾಗ ಕೆಳಕ್ಕೆ ಜಿಗಿದಿದ್ದ ಅರಾದ್ ಅವರನ್ನು ಬಂಧಿಸಲಾಗಿತ್ತು. ಆ ಬಳಿಕ ಅವರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಅರಾದ್ ಮೃತಪಟ್ಟಿದ್ದಾರೆ ಎಂದು ಭಾವಿಸಲಾಗಿದೆ. ಆದರೂ, ಮೃತದೇಹ ಅಥವಾ ಅವಶೇಷಗಳನ್ನು ಇದುವರೆಗೂ ಇಸ್ರೇಲ್‌ಗೆ ಹಸ್ತಾಂತರಿಸಲಾಗಿಲ್ಲ.

ಉಕ್ರೇನ್ ಮೇಲೆ ರಷ್ಯಾ ದಾಳಿ: 11 ಮಂದಿ ಸಾವು

ಹಾರ್ಕಿವ್ (ಉಕ್ರೇನ್) (ಎಎಫ್‌ಪಿ): ಉಕ್ರೇನ್ ಮೇಲೆ ರಷ್ಯಾ ಸೇನೆಯು ಡ್ರೋನ್ ಮತ್ತು ಕ್ಷಿಪಣಿಗಳ ಮೂಲಕ ದಾಳಿ ಮಾಡಿದ್ದು, 11 ಮಂದಿ ಮೃತಪಟ್ಟಿದ್ದಾರೆ. ಹಲವು ಕಟ್ಟಡಗಳಿಗೆ ಹಾನಿಯಾಗಿವೆ.

‘ಉಕ್ರೇನ್‌ನಲ್ಲಿನ ಇಂಧನ ವ್ಯವಸ್ಥೆ ಮತ್ತು ರೈಲ್ವೆ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ರಷ್ಯಾವು 480 ಡ್ರೋನ್ ಹಾಗೂ 29 ಕ್ಷಿಪಣಿಗಳ ಮೂಲಕ ಶುಕ್ರವಾರ ರಾತ್ರಿ ದಾಳಿ ಮಾಡಿದೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದರು.

‘ಉಕ್ರೇನ್‌ನ ಕಟ್ಟಡಗಳು ಮತ್ತು ಮೂಲಸೌಕರ್ಯಗಳನ್ನು ನಾಶಪಡಿಸುವ ಯತ್ನವನ್ನು ರಷ್ಯಾ ಕೈಬಿಟ್ಟಿಲ್ಲ. ಹಾಗಾಗಿ ಮಿತ್ರರಾಷ್ಟ್ರಗಳು ನಮಗೆ ಬೆಂಬಲ ನೀಡಬೇಕು’ ಎಂದು ಅವರು ಒತ್ತಾಯಿಸಿದರು. ಉಕ್ರೇನ್‌ನಲ್ಲಿನ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ನಿಖರ ದಾಳಿ ನಡೆಸಲಾಗಿದೆ. ಅದಕ್ಕೂ ಮೊದಲು ಉಕ್ರೇನ್ 120 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾ ಹೇಳಿದೆ.

‘ರಷ್ಯಾದ 453 ಡ್ರೋನ್‌ಗಳು ಮತ್ತು 19 ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ. ಆದರೆ ವಾಯು ರಕ್ಷಣಾ ವ್ಯವಸ್ಥೆಯನ್ನು ದಾಟಿ ಬಂದ 9 ಕ್ಷಿಪಣಿಗಳು ಮತ್ತು 26 ಡ್ರೋನ್‌ಗಳು ಕಟ್ಟಡಗಳ ಮೇಲೆ ಅಪ್ಪಳಿಸಿವೆ’ ಎಂದು ಉಕ್ರೇನ್‌ನ ವಾಯುಪಡೆ ತಿಳಿಸಿದೆ.

ಹಾರ್ಕಿವ್‌ನಲ್ಲಿನ ಐದು ಮಹಡಿಯ ವಸತಿ ಕಟ್ಟಡದ ಮೇಲೆ ನಡೆದ ದಾಳಿಯಲ್ಲಿ ಇಬ್ಬರು ಮಕ್ಕಳು ಸೇರಿ 9 ಮಂದಿ ಮೃತಪಟ್ಟಿದ್ದಾರೆ. 15 ಮಂದಿ ಗಾಯಗೊಂಡಿದ್ದಾರೆ. 19 ವಸತಿ ಕಟ್ಟಡಗಳಿಗೆ ಹಾನಿಯಾಗಿವೆ. ವಾಣಿಜ್ಯ ಕಟ್ಟಡಗಳು, ವಿದ್ಯುತ್ ಸಂಪರ್ಕ ವ್ಯವಸ್ಥೆ ಮತ್ತು ವಾಹನಗಳು ಹಾನಿಗೊಂಡಿವೆ. ಇತರ ಪ್ರದೇಶಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಸುದ್ದಿ 2 ನಿಮಿಷ

3 ಕೋಟಿ ಟನ್ ಗೋಧಿ ಖರೀದಿ ಗುರಿ

ನವದೆಹಲಿ (ಪಿಟಿಐ): 2026–27ರ ಹಿಂಗಾರು ಹಂಗಾಮಿನಲ್ಲಿ 3.03 ಕೋಟಿ ಟನ್‌ನಷ್ಟು ಗೋಧಿ ಖರೀದಿಸಲು ಕೇಂದ್ರ ಸರ್ಕಾರ ಗುರಿಯನ್ನು ನಿಗದಿಪಡಿಸಿದೆ.

ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಗಳ ಆಹಾರ ಕಾರ್ಯದರ್ಶಿಗಳ ಸಭೆಯಲ್ಲಿ ಈ ಗುರಿ ಅಂತಿಮಗೊಳಿಸಲಾಗಿದೆ.

2025–26ರ ಹಿಂಗಾರು ಹಂಗಾಮಿನಲ್ಲಿ ಅಂದಾಜು 76 ಲಕ್ಷ ಟನ್ ಭತ್ತ ಖರೀದಿಸಲಾಗುವುದು. 7.79 ಲಕ್ಷ ಟನ್ ಧಾನ್ಯಗಳನ್ನು ರಾಜ್ಯಗಳಿಂದ ಖರೀದಿ ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕಳೆದ ವರ್ಷದಲ್ಲಿ 11.79 ಕೋಟಿ ಟನ್‌ನಷ್ಟು ಗೋಧಿ ಉತ್ಪಾದನೆ ಆಗಿತ್ತು. ಈ ಬಾರಿ 3.34 ಕೋಟಿ ಹೆಕ್ಟೇರ್‌ನಲ್ಲಿ ಗೋಧಿ ಬಿತ್ತನೆ ಆಗಿದ್ದು, ಅನುಕೂಲಕರ ಹವಾಮಾನದಿಂದ ಅದು ಈ ಬಾರಿ 12 ಕೋಟಿ ಟನ್‌ಗೆ ತಲುಪುವ ಸಾಧ್ಯತೆ ಇದೆ.



ಪ್ರಸಕ್ತ ವರ್ಷದ ಏಪ್ರಿಲ್ 1ರ ವೇಳೆಗೆ ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ಗೋಧಿ ದಾಸ್ತಾನು ಅಂದಾಜು 1.82 ಕೋಟಿ ಟನ್‌ನಷ್ಟು ಆಗಲಿದೆ. ಇದು ದೇಶದ ಅಗತ್ಯಗಳನ್ನು ಪೂರೈಸಲಿದೆ ಎಂದು ತಿಳಿಸಿವೆ.

ಪಿಂಚಣಿ ಹೆಚ್ಚಳಕ್ಕೆ ಒತ್ತಾಯಿಸಿ ಪ್ರತಿಭಟನೆ ನಾಳೆಯಿಂದ

ನವದೆಹಲಿ (ಪಿಟಿಐ): ಮಾಸಿಕ ಕನಿಷ್ಠ ಪಿಂಚಣಿಯ ಮೊತ್ತವನ್ನು ₹7,500ಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿ, ನೌಕರರ ಪಿಂಚಣಿ ಯೋಜನೆಯ 1995 (ಇಪಿಎಸ್–95) ಅಡಿಯಲ್ಲಿನ ಪಿಂಚಣಿದಾರರು ಮಾರ್ಚ್ 9ರಿಂದ ಮೂರು ದಿನದವರೆಗೆ ದೆಹಲಿಯ ಜಂತರ್‌ಮಂತರ್ ಬಳಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಪ್ರಸ್ತುತ ಈ ಪಿಂಚಣಿದಾರರಿಗೆ ಮಾಸಿಕ ಕನಿಷ್ಠ ಪಿಂಚಣಿ ₹1 ಸಾವಿರ ಇದೆ.

ಕೇಂದ್ರ, ರಾಜ್ಯ ಸರ್ಕಾರ ನೌಕರರು, ಸಹಕಾರ, ಖಾಸಗಿ ಸೇರಿದಂತೆ ವಿವಿಧ ವಲಯದ 81 ಲಕ್ಷ ಪಿಂಚಣಿದಾರರಿದ್ದು, ಕಳೆದ ಒಂಬತ್ತು ವರ್ಷಗಳಿಂದ ಪಿಂಚಣಿ ಹೆಚ್ಚಿಸುವಂತೆ ಹೋರಾಟ ನಡೆಸುತ್ತಿದ್ದಾರೆ.

ಪ್ರಧಾನ ಮಂತ್ರಿ, ಕೇಂದ್ರದ ಎಲ್ಲ ಸಚಿವರು ಮತ್ತು ಎಲ್ಲ ಪಕ್ಷಗಳ ಸಂಸದರಿಗೆ ಪಿಂಚಣಿ ಮೊತ್ತವನ್ನು ಹೆಚ್ಚಿಸುವಂತೆ ಮನವಿ ಸಲ್ಲಿಸಲಾಗಿದೆ. ಆದರೆ, ಸರ್ಕಾರವು ನಮ್ಮ ಕೂಗನ್ನು ನಿರ್ಲಕ್ಷಿಸುತ್ತಿದೆ. ಹೀಗಾಗಿ, ಪ್ರತಿಭಟನೆಗೆ ಮುಂದಾಗಿರುವುದಾಗಿ ಸಂಘಟನೆ ತಿಳಿಸಿದೆ.

ಮಾಸಿಕ ಕನಿಷ್ಠ ಪಿಂಚಣಿ ಮೊತ್ತವನ್ನು ₹7,500ಕ್ಕೆ ಹೆಚ್ಚಿಸುವುದು, ತುಟ್ಟಿ ಭತ್ಯೆ, ಪಿಂಚಣಿದಾರರು ಮತ್ತು ಅವರ ಸಂಗಾತಿಗೆ ಉಚಿತವಾಗಿ ವೈದ್ಯಕೀಯ ಸವಲತ್ತು ನೀಡುವಂತೆ ಬೇಡಿಕೆ ಸಲ್ಲಿಸಿವೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18000-20000
ದಾವಣಗೆರೆ	₹12750-12750
ಹಿರಿಯೂರು	₹12200-12200
ತುಮಕೂರು	₹16100-19500
ವಿಜಯಪುರ	₹7200-8500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1665 (1650)
ಸೋಯಾ (ರಿಫೈನ್ಡ್)	₹1375 (1370)
ಸೂರ್ಯಕಾಂತಿ (ರಿಫೈನ್ಡ್)	₹1625 (1620)
ಪಾಮೋಲಿನ್	₹1350 (1345)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹480
	12 ಕ್ಕೆ	₹63
ಮೈಸೂರು:	100 ಕ್ಕೆ	₹480

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹389-753
ದ್ವಿತಳಿ (ಬಿ.ವಿ)	₹312-895

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹211.50
ಆರ್‌ಎಸ್‌ಎಸ್-5	₹205
ಗುಡ್ ಲಾಟ್	₹190

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23100
ಎಸಿ	₹13175
ಆರ್‌ಪಿ	₹18400
ಆರ್‌ಸಿ	₹9975

ಇಂಧನ ಖರೀದಿಗೆ ಬೇರೆ ದೇಶದ ಅನುಮತಿ ಭಾರತಕ್ಕೆ ಬೇಕಿಲ್ಲ: ಕೇಂದ್ರ

ರಷ್ಯಾದ ತೈಲ ಖರೀದಿ ಅಬಾಧಿತ

ನವದೆಹಲಿ (ಎಎಫ್‌ಪಿ): ‘ರಷ್ಯಾದಿಂದ ತೈಲ ಖರೀದಿಸಲು ಭಾರತಕ್ಕೆ ಯಾವುದೇ ದೇಶದ ಅನುಮತಿ ಬೇಕಿಲ್ಲ. ರಷ್ಯಾದಿಂದ ಭಾರತದ ಕಚ್ಚಾ ತೈಲ ಖರೀದಿ ಅಬಾಧಿತವಾಗಿ ಮುಂದುವರಿದಿದೆ’ ಎಂದು ಸರ್ಕಾರದ ಮೂಲಗಳು ಶನಿವಾರ ತಿಳಿಸಿವೆ.



ಪಶ್ಚಿಮ ಏಷ್ಯಾ ಸಂಘರ್ಷದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದರಿಂದ ತಾತ್ಕಾಲಿಕವಾಗಿ ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಅಮೆರಿಕವು ಭಾರತಕ್ಕೆ 30 ದಿನಗಳ ವಿನಾಯಿತಿ ನೀಡಿದೆ. ಆದರೆ, ಭಾರತಕ್ಕೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಅಮೆರಿಕದ ಒಪ್ಪಿಗೆ ಅಗತ್ಯವಿಲ್ಲ ಎಂದು ಮೂಲಗಳು ಹೇಳಿವೆ.

‘ಭಾರತವು ಮೊದಲಿನಿಂದಲೂ ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದೆ. ಭಾರತಕ್ಕೆ ರಷ್ಯಾವೇ ಅತಿದೊಡ್ಡ ತೈಲ ಪೂರೈಕೆ ದೇಶವಾಗಿದೆ’ ಎಂದಿವೆ.

ರಷ್ಯಾದಿಂದ ಕಚ್ಚಾ ತೈಲ ಆಮದು ನಿಲ್ಲಿಸುವಂತೆ ಒತ್ತಡ ಹೇರಿ ಅಮೆರಿಕ ಭಾರತದ ಸರಕುಗಳ ಮೇಲೆ ಶೇ 25ರಷ್ಟು ದಂಡನಾತ್ಮಕ ಸುಂಕ ವಿಧಿಸಿತ್ತು. ಇತ್ತೀಚೆಗೆ ಇದನ್ನು ಕೈಬಿಡಲಾಗಿತ್ತು.

ರಷ್ಯಾದ ತೈಲ ಖರೀದಿ ವಿಚಾರದಲ್ಲಿ ಅಮೆರಿಕದ ವಿನಾಯಿತಿ ಬಗ್ಗೆ ಭಾರತ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇದನ್ನು ಒಪ್ಪಿಕೊಂಡಿಲ್ಲ ಅಥವಾ ತಿರಸ್ಕರಿಸಿಲ್ಲ. ತೈಲ ಖರೀದಿಯು ರಾಷ್ಟ್ರೀಯ ಹಿತಾಸಕ್ತಿಯ ವಿಚಾರವೂ ಆಗಿದೆ ಎಂದು ಮೂಲಗಳು ಹೇಳಿವೆ.

ದೇಶದಲ್ಲಿ ಸಾಕಷ್ಟು ಪೆಟ್ರೋಲಿಯಂ ಉತ್ಪನ್ನ ಮತ್ತು 25 ಕೋಟಿಗಿಂತ ಹೆಚ್ಚು ಕಚ್ಚಾ ತೈಲದ ಬ್ಯಾರೆಲ್‌ಗಳ ಸಂಗ್ರಹ ಇದೆ. ಯುದ್ಧದಿಂದ ಉಂಟಾಗಿರುವ ಅಲ್ಪಾವಧಿಯ ಬಿಕ್ಕಟ್ಟನ್ನು ಇದು ನಿಭಾಯಿಸಲಿದೆ ಎಂದು ಹೇಳಿವೆ.

ಹೊಸ ಇಂಧನ ಮೂಲಗಳ ಅನ್ವೇಷಣೆ

ನವದೆಹಲಿ (ಪಿಟಿಐ): ಭಾರತವು ತನ್ನ ಇಂಧನ ಭದ್ರತೆಯನ್ನು ಮತ್ತಷ್ಟು ಬಲಪಡಿಸಲು ಪರ್ಯಾಯ ಇಂಧನ ಮೂಲಗಳನ್ನು ಅನ್ವೇಷಿಸುತ್ತಿದೆ. ಆಸ್ಟ್ರೇಲಿಯಾ, ಕೆನಡಾ ಮತ್ತು ಇತರೆ ಹಲವಾರು ದೇಶಗಳು ಹೆಚ್ಚುವರಿ ಅನಿಲ ಪೂರೈಕೆ ಮಾಡುವುದಾಗಿ ಹೇಳಿವೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಭಾರತದ ಕಚ್ಚಾ ತೈಲ ಆಮದುಗಳಿಗೆ ಹೊರ್ಮುಜ್ ಜಲಸಂಧಿಯು ಏಕೈಕ ಮಾರ್ಗವಲ್ಲ. ಹೊರ್ಮುಜ್ ಜಲಸಂಧಿಯ ಮೂಲಕ ಭಾರತ ಶೇ 40ರಷ್ಟು ಕಚ್ಚಾ ತೈಲವನ್ನು ಮಾತ್ರ ಆಮದು ಮಾಡಿಕೊಳ್ಳುತ್ತದೆ. ಉಳಿದ ಶೇ 60ರಷ್ಟು ತೈಲವನ್ನು ಬೇರೆ ಮಾರ್ಗದ ಮೂಲಕ ತರಿಸಿಕೊಳ್ಳುತ್ತದೆ. ಈ ಮಾರ್ಗವು ಸಂಘರ್ಷಕ್ಕೆ ಒಳಗಾಗಿಲ್ಲ ಎಂದು ಹೇಳಿವೆ.

ಆಸ್ಟ್ರೇಲಿಯಾ ಮತ್ತು ಕೆನಡಾ ಸೇರಿದಂತೆ ಹಲವು ದೇಶಗಳು ಹೆಚ್ಚುವರಿ ಅನಿಲ ಪೂರೈಕೆ ಮಾಡುವುದಾಗಿ ಹೇಳಿವೆ. ಜೊತೆಗೆ ಭಾರತವು ಇಂಧನ ಭದ್ರತೆಯನ್ನು ಹೆಚ್ಚಿಸಿಕೊಳ್ಳಲು ಪರ್ಯಾಯ ಮೂಲಗಳನ್ನು ಅನ್ವೇಷಿಸುವುದನ್ನು ಮುಂದುವರೆಸಿದೆ ಎಂದು ಹೇಳಿವೆ.

ಭಾರತವು ಇತ್ತೀಚೆಗೆ, ಅಮೆರಿಕ ಮತ್ತು ಯುಎಇ ಜೊತೆ ಹೊಸ ಇಂಧನ ಒಪ್ಪಂದ ಮಾಡಿಕೊಂಡಿದೆ. ಕಳೆದ ದಶಕದಲ್ಲಿ ಭಾರತವು 27 ದೇಶಗಳಿಂದ ತೈಲ ಖರೀದಿಸುತ್ತಿತ್ತು. ಅದು ಈಗ 40ಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿವೆ.

ಅಡಿಕೆ ಧಾರಣೆ

ಕಾರ್ಕಳ	
ಕೋಕ	26000-47000
ಹೊಸತು	35000-53000
ಕುಮಟಾ	
ಚಾಲಿ	49099-50099
ಚಿಪ್ಪು	34899-35699
ಕೋಕ	16869-33422
ಫ್ಯಾಕ್ಟರಿ	27849-28569

ಹೊಸಚಾಲಿ	45698-47409
ಸಿದ್ದಾಪುರ	
ಬಿಳಿಗೋಟು	28399-37899
ಚಾಲಿ	41089-48599
ಕೋಕ	23899-34699
ಕೆಂಪುಗೋಟು	28900-34899
ರಾಶಿ	48819-54009

ತಟ್ಟಿಬೆಟ್ಟೆ	36900-43229
ಶಿರಸಿ	
ಬೆಟ್ಟೆ	40618-51099
ಬಿಳಿಗೋಟು	26709-39681
ಚಾಲಿ	44299-48689
ಕೆಂಪುಗೋಟು	28100-37898
ರಾಶಿ	50898-55109

ಮುಂಬೈ ಧಾರಣೆ (ಶೇಂಗಾ)

07-03-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1665 (1660)
ಒಂದು ವಾರದ ಡೆಲಿವರಿ	1660 (1655)
ಪಾಮ್ ವಾರದ ಡೆಲಿವರಿ	1348 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1565 (1560)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,60,300 (1,59,450)
ಬೆಳ್ಳಿ ಕೆ.ಜಿಗೆ	2,65,300 (2,62,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪಾಕ್: 47 ಮಂದಿಗೆ 10 ವರ್ಷ ಜೈಲು

ಇಸ್ಲಾಮಾಬಾದ್ (ಪಿಟಿಐ): 2023ರ ಮಾರ್ಚ್ 9ರಂದು ನಡೆದ ಪ್ರತಿಭಟನೆಯಲ್ಲಿ ಹಿಂಸಾಚಾರ ಹಾಗೂ ವಿಧ್ವಂಸಕ ಕೃತ್ಯಗಳನ್ನು ಎಸಗಿದ ಪ್ರಕರಣದಲ್ಲಿ ಪಾಕಿಸ್ತಾನ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷದ ನಾಯಕರು ಹಾಗೂ ಬೆಂಬಲಿಗರು ಸೇರಿ 47 ಮಂದಿಗೆ ಇಲ್ಲಿನ ಭಯೋತ್ಪಾದನಾ ನಿಗ್ರಹ ನ್ಯಾಯಾಲಯವು ತಲಾ 10 ವರ್ಷ ಜೈಲು ಹಾಗೂ 5 ಲಕ್ಷ ಪಾಕಿಸ್ತಾನ ರೂಪಾಯಿ ದಂಡ ವಿಧಿಸಿ ಶನಿವಾರ ತೀರ್ಪು ನೀಡಿದೆ.

ರಾವಲ್ಪಿಂಡಿ ನ್ಯಾಯಾಲಯದ ನ್ಯಾಯಧೀಶರಾದ ಅಮ್ಜದ್ ಅಲಿ ಶಾ ಅವರು, ಅಪರಾಧಿಗಳ ಚರ ಮತ್ತು ಸ್ಥಿರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ತೀರ್ಪು ಪ್ರಕಟಿಸಿದರು.

ಸಿಲಿಂಡರ್ ಬೆಲೆ ಏರಿಕೆ: ಸಿ.ಎಂ ಖಂಡನೆ

ಪ್ರಧಾನಿ ನರೇಂದ್ರ ಮೋದಿ ರಾಜೀನಾಮೆ ನೀಡಲಿ: ಸಿದ್ದರಾಮಯ್ಯ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣದುಬ್ಬರ, ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿರುವ ಭಾರತದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆಯು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ ಮಾಡಿರುವ ಅವರು, ‘ಗೃಹ ಬಳಕೆಯ ಸಿಲಿಂಡರ್‌ಗಳ ಬೆಲೆಯನ್ನು ಸುಮಾರು ₹60ರಷ್ಟು ಹೆಚ್ಚಿಸಿರುವುದು ಸಾಮಾನ್ಯ ಜನರ ಜೀವನನಿರ್ವಹಣೆಯ ವೆಚ್ಚ ದುಬಾರಿಯಾಗಲಿದೆ. ಬೆಲೆ ಏರಿಕೆಯು ಅನಿವಾರ್ಯ ಕ್ರಮವೇನಲ್ಲ. ಶರಣಾಗತಿಯನ್ನೇ ದೇಶದ ಕಾರ್ಯತಂತ್ರವೆಂದು ತಿಳಿದುಕೊಂಡ ವಿದೇಶಾಂಗ ನೀತಿಯ ಫಲವಾಗಿದೆ’ ಎಂದು ಟೀಕಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಮಾತುಗಳಿಗೆ ಮೂಕರಂತೆ ತಲೆಯಾಡಿಸುವ ಮೂಲಕ ಭಾರತದ ಸಾರ್ವಭೌಮತೆಯನ್ನು ಬೇರೊಂದು ರಾಷ್ಟ್ರದ ಪಾದದಡಿ ಇಟ್ಟಿದ್ದಾರೆ. ದಶಕಗಳಿಂದ ಭಾರತೀಯರಿಗೆ ಇಂಧನ ಸ್ಥಿರತೆಯನ್ನು ಖಾತ್ರಿಪಡಿಸಿದ ರಷ್ಯಾ, ಇರಾನ್‌ನಂತಹ ದೇಶಗಳ ಜತೆಗಿನ ಭಾರತದ ದೀರ್ಘಕಾಲೀನ ಸಹಭಾಗಿತ್ವವನ್ನು ಹಾಳುಗೆಡವಿದ್ದಾರೆ’ ಎಂದು ದೂರಿದ್ದಾರೆ.

‘ನೆಹರೂ ಅವರು ಹೇಳಿದಂತೆ, ದೇಶದ ವಿದೇಶಾಂಗ ನೀತಿಯು ಆರ್ಥಿಕ ನೀತಿಯ ಫಲವಾಗಿರುತ್ತದೆ. ರಾಜತಾಂತ್ರಿಕತೆ ಕಾರ್ಯತಂತ್ರವಾಗದೆ, ಪ್ರದರ್ಶನದ ವಸ್ತುವಾಗಿ ಮಾರ್ಪಟ್ಟಾಗ, ಅದಕ್ಕೆ ಅನಿವಾರ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದ ಜನರು ಬಲಿಯಾಗುತ್ತಾರೆ. ಮಾಜಿ ಸೇನಾಧಿಕಾರಿ ಜನರಲ್ ಎಂ.ಎಂ.ನರವಣೆ ಅವರು ಭಾರತದ ವಿದೇಶಾಂಗ ನೀತಿ ನಿರ್ಧಾರಗಳಲ್ಲಿ ಸಾಂಸ್ಥಿಕ ಸಮಾಲೋಚನೆ ಮತ್ತು ವ್ಯೂಹಾತ್ಮಕ ತಿಳಿವಳಿಕೆಯ ಕೊರತೆಯ ಬಗ್ಗೆ ಗಂಭೀರ ಆತಂಕಗಳನ್ನು ಎತ್ತಿದ್ದರು. ಇದು ಪ್ರಧಾನಮಂತ್ರಿಗೆ ರಾಜತಾಂತ್ರಿಕ ನಿಲುವು ಮತ್ತು ಅದರ ಆರ್ಥಿಕ ಪರಿಣಾಮಗಳ ತಿಳಿವಳಿಕೆಯ ಕೊರತೆ ಇದೆ ಎಂಬ ಅನುಮಾನವನ್ನು ಖಚಿತಪಡಿಸುವಂತಿದೆ’ ಎಂದಿದ್ದಾರೆ.

‘ಭಾರತದ ಇಂದಿನ ವಿದೇಶಾಂಗ ನೀತಿಯ ವೈಫಲ್ಯವು ನರೇಂದ್ರ ಮೋದಿ ಅವರಿಗೆ ಇರುವ ಎಪ್‌ಸ್ಟೈನ್ ಫೈಲ್ಸ್‌ನ ಭಯ ಮತ್ತು ರಾಜತಾಂತ್ರಿಕ ತೀರ್ಮಾನಗಳಲ್ಲಿನ ಅಜ್ಞಾನ ತೋರುತ್ತದೆ. ಜಾಗತಿಕ ಮಟ್ಟದಲ್ಲಿ ದೇಶದ ಮಾನ ಕಳೆಯುತ್ತಿರುವ ಅವರು ಬಹಿರಂಗವಾಗಿ ದೇಶದ ಜನರ ಕ್ಷಮೆಯಾಚಿಸಿ, ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.



ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ವಿರೋಧಿಸಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಭುವನೇಶ್ವರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ದರ ಏರಿಕೆ: ವಿಪಕ್ಷಗಳಿಂದ ವಾಗ್ದಾಳಿ

ನವದೆಹಲಿ: ವಾಣಿಜ್ಯ ಮತ್ತು ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಏರಿಕೆ ವಿಚಾರವಾಗಿ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಶನಿವಾರ ವಾಗ್ದಾಳಿ ನಡೆಸಿದವು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ‘ಹಣದುಬ್ಬರದ ನೆಪದಲ್ಲಿ ಜನರ ಬೆವರನ್ನು ಹೀರಲಾಗುತ್ತಿದೆ’ ಎಂದು ಆರೋಪಿಸಿದರು. ಕಾಂಗ್ರೆಸ್‌ನ ಮಹಿಳಾ ಘಟಕವು ದೆಹಲಿಯಲ್ಲಿ ಪ್ರತಿಭಟನೆ ನಡೆಸಿತು.

ಟಿಎಂಸಿ ಮುಖ್ಯಸ್ಥೆ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ‘ಸರ್ಕಾರದ ‘ಜನವಿರೋಧಿ’ ನೀತಿಗಳ ವಿರುದ್ಧ ಟಿಎಂಸಿ ಮಹಿಳಾ ಘಟಕವು ಭಾನುವಾರ ಪ್ರತಿಭಟನೆ ನಡೆಸಲಿದೆ’ ಎಂದು ಹೇಳಿದರು.

‘ಕಪ್ಪು ಬಣ್ಣದ ಬಟ್ಟೆ ಧರಿಸುವ ಅಗತ್ಯ ಬಿದ್ದರೆ ಧರಿಸುತ್ತೇವೆ. ಪ್ರಜಾಸತ್ತಾತ್ಮಕವಾಗಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತೇವೆ’ ಎಂದು ಮಮತಾ ತಿಳಿಸಿದರು.

ಬೆಲೆ ಏರಿಕೆ ಅನಿವಾರ್ಯ: ಎಚ್‌ಡಿಕೆ

ಮಂಡ್ಯ: ‘ಅಂತರರಾಷ್ಟ್ರೀಯ ಮಟ್ಟದ ಬೆಳವಣಿಗೆ ಹಿನ್ನೆಲೆಯಲ್ಲಿ ಎಲ್‌ಪಿಜಿ ದರ ಅನಿವಾರ್ಯವಾಗಿ ಏರಿಕೆಯಾಗಿದೆ. ಅದರ ಹೊರೆ ಹೊರಲು ತಯಾರಾಗಬೇಕು’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದ ವಿ.ಸಿ ಫಾರಂನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿದ್ದರಾಮಯ್ಯನವರು ದಾಖಲೆಯ ಬಜೆಟ್ ಮಂಡಿಸಿದ್ದಾರೆ ಎನ್ನಲಾಗದು. ದಾಖಲೆ ಬಜೆಟ್ ಹೊಡೆತ ಜನರ ಮೇಲೆ ಹೇಗೆ ಬೀಳುತ್ತದೆಂಬುದನ್ನು ಕಾದು ನೋಡಬೇಕು. ಏಕೆಂದರೆ ಆರ್ಥಿಕ ತಜ್ಞರೇ ಬಜೆಟ್ ಸಮಸ್ಯಾತ್ಮಕವಾಗಿದೆ ಎಂದು ಹೇಳಿದ್ದಾರೆ’ ಎಂದರು

ಮನೆ ಬಳಕೆ ಎಲ್‌ಪಿಜಿ ₹60 ತುಟ್ಟಿ

ಒಂದನೇ ಪುಟದಿಂದ...

ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ (ಎಚ್‌ಪಿಸಿಎಲ್) ಗ್ರಾಹಕರಿಗೆ ಬೆಲೆ ಏರಿಕೆ ಅನ್ವಯಿಸಲಿದೆ. ಸ್ಥಳೀಯ ಮಾರಾಟ ತೆರಿಗೆ ಅಥವಾ ವ್ಯಾಟ್ ಆಧರಿಸಿ ರಾಜ್ಯದಿಂದ ರಾಜ್ಯಕ್ಕೆ ಸಿಲಿಂಡರ್ ದರದಲ್ಲಿ ಅಲ್ಪ ವ್ಯತ್ಯಾಸ ಇರುತ್ತದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಮನೆ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರವನ್ನು ₹50 ಹೆಚ್ಚಳ ಮಾಡಲಾಗಿತ್ತು. ಇದೀಗ ಒಂದು ವರ್ಷದೊಳಗಿನ ಎರಡನೆಯ ಏರಿಕೆ ಇದಾಗಿದೆ.

‘ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿಲ್ಲ. ಎಲ್‌ಪಿಜಿ ದರ ಪರಿಷ್ಕರಣೆ ಬಿಸಿಯು ಗ್ರಾಹಕರಿಗೆ ಅಷ್ಟಾಗಿ ತಟ್ಟುವುದಿಲ್ಲ, ಪ್ರತಿ ದಿನ ಹೆಚ್ಚುವರಿಯಾಗಿ ಒಬ್ಬ ವ್ಯಕ್ತಿ/ಕುಟುಂಬಕ್ಕೆ 20ಪೈಸೆಯಷ್ಟು ಮಾತ್ರ ಹೊರೆ ಬೀಳುತ್ತದೆ’ ಎಂದು ಕೇಂದ್ರ ಸರ್ಕಾರ ಹೇಳಿದೆ.

ದೇಶದಲ್ಲಿ 10 ಕೋಟಿಯಷ್ಟು ಬಡ ಕುಟುಂಬಗಳು ಉಜ್ವಲ ಯೋಜನೆಯಡಿ ಉಚಿತ ಎಲ್‌ಪಿಜಿ ಸಂಪರ್ಕ ಪಡೆದು ಕೊಂಡಿದ್ದು, ಅವರಿಗೂ ಬೆಲೆ ಏರಿಕೆಯ ಬಿಸಿ ತಟ್ಟಲಿದೆ. ಉಜ್ವಲ ಫಲಾನುಭವಿಗಳು ₹300 ಸಬ್ಸಿಡಿ ಹೊರತುಪಡಿಸಿ, ಪ್ರತಿ ಸಿಲಿಂಡರ್‌ಗೆ ₹613 ಪಾವತಿಸಬೇಕಿದೆ.

ವಾಣಿಜ್ಯ ಸಿಲಿಂಡರ್ ₹114 ಏರಿಕೆ: ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಬಳಸುವ 19 ಕೆ.ಜಿ ತೂಕದ ವಾಣಿಜ್ಯ ಸಿಲಿಂಡರ್ ಬೆಲೆ ₹114.5ರಷ್ಟು ಹೆಚ್ಚಿದ್ದು, ನವದೆಹಲಿಯಲ್ಲಿ ₹1,883ಕ್ಕೆ ಏರಿದೆ. ಆರು ದಿನಗಳ ಹಿಂದಷ್ಟೇ ವಾಣಿಜ್ಯ ಸಿಲಿಂಡರ್ ಬೆಲೆಯನ್ನು ₹28 ಹೆಚ್ಚಿಸಲಾಗಿತ್ತು. ಈ ವರ್ಷದ ಆರಂಭದಿಂದ ಇದುವರೆಗೆ ವಾಣಿಜ್ಯ ಸಿಲಿಂಡರ್ ಬೆಲೆಯಲ್ಲಿ ಒಟ್ಟು ₹302.50 ಏರಿಕೆಯಾಗಿದೆ.

ಭಾರತದ ಮೇಲೆ ಪರಿಣಾಮ: ಭಾರತವು ಒಟ್ಟು ಅನಿಲ ಬೇಡಿಕೆಯಲ್ಲಿ ಶೇ 40 ರಷ್ಟನ್ನು ಕೊಲ್ಲಿ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತದೆ. ಪಶ್ಚಿಮ ಏಷ್ಯಾ ಯುದ್ಧ ಮುಂದುವರಿದಿರುವುದರಿಂದ ಹೊರ್ಮುಜ್ ಜಲಸಂಧಿ ಮೂಲಕ ತೈಲ ನೌಕೆಗಳ ಸಾಗಾಟಕ್ಕೆ ಅಡ್ಡಿಯಾಗಿದ್ದು, ತೈಲ, ಅನಿಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

ನೇಪಾಳ: ಒಲಿ ವಿರುದ್ಧ ಗೆದ್ದ ಶಾ

ಕಾಠ್ಮಂಡು (ಎಎಫ್‌ಪಿ/ಪಿಟಿಐ): ಯುವ ರಾಜಕಾರಣಿ ಬಾಲೇಂದ್ರ ಶಾ ಅವರು ನಾಲ್ಕು ಬಾರಿ ಕಾಠ್ಮಂಡು ಪ್ರಧಾನಿಯಾಗಿದ್ದ 74 ವರ್ಷದ ಕೆ.ಪಿ. ಶರ್ಮಾ ಒಲಿ ಅವರನ್ನು ಸುಮಾರು 50 ಸಾವಿರ ಮತಗಳ ಭಾರಿ ಅಂತರದಿಂದ ಸೋಲಿಸಿ ಗೆಲುವಿನ ನಗೆ ಬೀರಿದ್ದಾರೆ.

ಶಾ ಅವರ ರಾಷ್ಟ್ರೀಯ ಸ್ವತಂತ್ರ ಪಕ್ಷವು (ಆರ್‌ಎಸ್‌ಪಿ) ಭಾರಿ ಗೆಲುವಿನತ್ತ ಮುನ್ನುಗ್ಗುತ್ತಿದೆ.

ಮೇಯರ್ ಆಗಿದ್ದವರೊಬ್ಬರು ಪ್ರಧಾನಿ ಹುದ್ದೆಗೆ ಏರುವ ಸನಿಹದಲ್ಲಿ ಇರುವುದು ನೇಪಾಳದ ಇತ್ತೀಚಿನ ರಾಜಕಾರಣ ಇತಿಹಾಸದಲ್ಲಿಯೇ ಪ್ರಮುಖ ಬದಲಾವಣೆ ಆಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಶನಿವಾರದ ಸಂಜೆವರೆಗೆ ಆರ್‌ಎಸ್‌ಪಿ ಪಕ್ಷವು 62 ಕ್ಷೇತ್ರಗಳನ್ನು ಗೆದ್ದುಕೊಂಡಿದೆ. ಇಲ್ಲಿಯವರೆಗೆ ಒಟ್ಟು 78 ಕ್ಷೇತ್ರಗಳ ಫಲಿತಾಂಶ ಪ್ರಕಟಗೊಂಡಿದ್ದು, ಮತ ಎಣಿಕೆ ನಡೆಯುತ್ತಿರುವ ಉಳಿದ ಕ್ಷೇತ್ರಗಳ ಪೈಕಿ 60 ಕ್ಷೇತ್ರಗಳಲ್ಲಿ ಪಕ್ಷ ಮುನ್ನಡೆ ಸಾಧಿಸಿದೆ.

‘ಮತ ಎಣಿಕೆಯು ಸೋಮವಾರ ಪೂರ್ಣಗೊಳ್ಳಬಹುದು’ ಎಂದು ಚುನಾವಣಾ ಆಯೋಗ ಹೇಳಿದೆ.

ತೆಲಂಗಾಣ: 130 ನಕ್ಸಲರು ಶರಣು

ಹೈದರಾಬಾದ್ (ಪಿಟಿಐ): ಭಾರತ ಮಾರ್ಚ್ 31ರ ವೇಳೆಗೆ ನಕ್ಸಲ್‌ಮುಕ್ತ ರಾಷ್ಟ್ರವಾಗಲಿದೆ ಎಂದು ಕೇಂದ್ರ ಸರ್ಕಾರವು ಗಡುವು ನಿಗದಿ ಮಾಡಿರುವ ನಡುವೆಯೇ ಸುಮಾರು 130 ನಕ್ಸಲರು ಶನಿವಾರ ಶರಣಾಗಿದ್ದಾರೆ.

ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ಎದುರು ನಕ್ಸಲರು ಶರಣಾಗಿದ್ದಾರೆ. ಇದೇ ವೇಳೆ ಎಕೆ–47 ರೈಫಲ್ಸ್, 5,200 ಜೀವಂತ ಮದ್ದುಗುಂಡುಗಳು ಸೇರಿದಂತೆ 124 ಬಂದೂಕುಗಳನ್ನು ಹಸ್ತಾಂತರಿಸಿದ್ದಾರೆ.

130 ಮಂದಿ ಪೈಕಿ 125 ಮಂದಿ ಛತ್ತೀಸಗಢ ರಾಜ್ಯದವರು, ನಾಲ್ವರು ತೆಲಂಗಾಣದವರು ಮತ್ತು ಒಬ್ಬರು ಆಂಧ್ರ ಪ್ರದೇಶದವರು ಎಂದು ಡಿಜಿಪಿ ಶಿವಧರ್ ರೆಡ್ಡಿ ತಿಳಿಸಿದ್ದಾರೆ. ಶರಣಾದ ನಕ್ಸಲರು ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿಗೆ (ಪಿಎಲ್‌ಜಿಎ) ಸೇರಿದವರು ಅವರು ತಿಳಿಸಿದರು.

ಜನವರಿ 2024ರಿಂದ ಈವರೆಗೆ ತೆಲಂಗಾಣದಲ್ಲಿ 721 ನಕ್ಸಲರು ಶರಣಾಗಿದ್ದಾರೆ.

ಕೇರಳ: ಗ್ಯಾರಂಟಿ ಯೋಜನೆ ಘೋಷಿಸಿದ ‘ಕೈ’

ಕಾಲೇಜು ವಿದ್ಯಾರ್ಥಿನಿಯರಿಗೆ ಮಾಸಿಕ 1,000 ಸಹಾಯಧನ • ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಕಾಲೇಜು ವಿದ್ಯಾರ್ಥಿನಿಯರಿಗೆ ಮಾಸಿಕ 1,000 ಸಹಾಯಧನ ಸೇರಿದಂತೆ ಹಲವು ಗ್ಯಾರಂಟಿ ಯೋಜನೆಗಳನ್ನು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಘೋಷಣೆ ಮಾಡಿದರು. ಕೆಲವೇ ತಿಂಗಳಲ್ಲಿ ಕೇರಳದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಅವರು ರಾಜ್ಯವ್ಯಾಪಿ ನಡೆಸಿದ್ದ ‘ಪುದುಯುಗ (ನವಯುವ) ಯಾತ್ರೆ’ಯ ಸಮಾರೋಪ ಸಮಾರಂಭದಲ್ಲಿ ರಾಹುಲ್ ಭಾಗವಹಿಸಿ ಮಾತನಾಡಿದರು. ‘ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕೂಟದ ಗೆಲುವಿಗಾಗಿ ಪಕ್ಷದ ಎಲ್ಲ ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡಬೇಕು’ ಎಂದು ಕಿವಿಮಾತು ಹೇಳಿದರು.

ಟಿ–20 ವಿಶ್ವಕಪ್‌ನಲ್ಲಿ ಇತ್ತೀಚೆಗೆ ಉತ್ತಮ ಪ್ರದರ್ಶನ ನೀಡಿದ ತಿರುವನಂತಪುರದ ಸಂಜು ಸ್ಯಾಮ್ಸನ್ ಅವರಿಗೆ ರಾಹುಲ್ ಶುಭಾಶಯ ಕೋರಿದರು.

ಯೋಜನೆಗಳು ಯಾವುವು?

- ಕೇರಳ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ
- ಕಾಲೇಜಿ ವಿದ್ಯಾರ್ಥಿನಿಯರಿಗೆ ತಿಂಗಳಿಗೆ ₹1,000 ಸಹಾಯಧನ
- ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರು ಹೆಸರಿನಲ್ಲಿ ಪ್ರತಿ ಕುಟುಂಬಕ್ಕೆ ₹25 ಲಕ್ಷ ಆರೋಗ್ಯ ವಿಮೆ
- ವಿವಿಧ ಪಿಂಚಣಿ ಮೊತ್ತವನ್ನು ₹2 ಸಾವಿರದಿಂದ ₹3 ಸಾವಿರಕ್ಕೆ ಏರಿಸುವುದು
- ವೃದ್ಧರಿಗಾಗಿಯೇ ಪ್ರತ್ಯೇಕ ಇಲಾಖೆ ಸ್ಥಾಪನೆ

‘ಸಿಪಿಎಂ ಅಲ್ಲ ಸಿಜೆಪಿ’

ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ನಿಯಂತ್ರಿಸುತ್ತಿದ್ದಾರೆ. ಸಿಪಿಎಂ ಮತ್ತು ಬಿಜೆಪಿ ಗುಟ್ಟಾಗಿ ಕೈಜೋಡಿಸಿವೆ. ಇದಲ್ಲದಿದ್ದರೆ, ಜಾರಿ ನಿರ್ದೇಶನಾಲಯ ಸೇರಿ ಹಲವು ಕೇಂದ್ರ ತನಿಖಾ ಸಂಸ್ಥೆಗಳು ಪಿಣರಾಯಿ ವಿಜಯನ್ ಅವರ ವಿರುದ್ಧ ಯಾಕಾಗಿ ಕ್ರಮ ಕೈಗೊಳ್ಳುತ್ತಿಲ್ಲ? ಸಿಪಿಎಂ ಅನ್ನು ಸಿಜೆಪಿ ಎಂದು ಮರುನಾಮಕರಣ ಮಾಡಬೇಕು ಎಂದು ರಾಹುಲ್ ಆರೋಪಿಸಿದರು.



ಕೇರಳದ ಶಿವಗಿರಿ ಮಠದ ಶ್ರೀ ಶಾರದಾಂಬ ದೇವಸ್ಥಾನಕ್ಕೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು –ಪಿಟಿಐ ಚಿತ್ರ

ಗುಂಪೊಂದು ನೃತ್ಯ ಮಾಡುತ್ತಿದೆ. ಒಮ್ಮೆಲೆ ಒಬ್ಬ ವ್ಯಕ್ತಿಯು ತನ್ನದೇ ನೃತ್ಯ ಮಾಡಲು ಆರಂಭಿಸುತ್ತಾನೆ. ಹೀಗೆ ಮಾಡಿದರೆ ಹಾಸ್ಯಾಸ್ಪದ ಎನ್ನಿಸುತ್ತದೆ. ಆದ್ದರಿಂದ, ಯುಡಿಎಫ್ ನಾಯಕರಿಗೆ ಕೇರಳದ ಜನತೆಯ ಪರವಾಗಿ ನನ್ನ ಸಲಹೆ ಇಷ್ಟೆ. ಎಲ್ಲರೂ ಒಟ್ಟುಗೂಡಿ ನೃತ್ಯ ಮಾಡಿ. ನಾನೇನಾದರೂ ತಪ್ಪು ಸಲಹೆ ನೀಡಿದ್ದರೆ ಕ್ಷಮಿಸಿ ಎಂದು ರಾಹುಲ್ ಹೇಳಿದರು. ಇದಕ್ಕೆ ಸಮಾರಂಭದಲ್ಲಿ ಇದ್ದ ಕಾರ್ಯಕರ್ತರು ಜೋರಾಗಿ ಚಪ್ಪಾಳೆ ತಟ್ಟಿ ಪ್ರತಿಕ್ರಿಯಿಸಿದರು.

‘ಅಮೆರಿಕಕ್ಕೆ ದತ್ತಾಂಶ ಹಸ್ತಾಂತರ’

ತಿರುವನಂತಪುರ (ಪಿಟಿಐ): ಭಾರತ–ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಭಾಗವಾಗಿ ದೇಶದ ದತ್ತಾಂಶ ಸಂಪನ್ಮೂಲವನ್ನು ಅಮೆರಿಕಕ್ಕೆ ಹಸ್ತಾಂತರಿಸಲಾಗಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಟೆಕ್ನೊ ಪಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ‘ಒಬ್ಬರ ಬಳಿ ಮಾತುಕತೆಗೆ ಹೋಗುವ ಮುನ್ನ ಅವರ ಬಳಿ ಏನಿದೆ ಎಂದು ತಿಳಿಯಬೇಕು. ಭಾರತದ ದತ್ತಾಂಶ ವಿಶ್ವದಲ್ಲೇ ಅತ್ಯಂತ ಮೌಲ್ಯಯುತ ಎನ್ನುವುದನ್ನು ತಿಳಿದುಕೊಂಡಿದ್ದರೆ, ನಮಗೆ ಕೃಷಿಯ ಮೇಲೆ ಯಾವುದೇ ತೆರಿಗೆ ಇರುತ್ತಿರಲಿಲ್ಲ’ ಎಂದರು.

ಮಹಿಳೆಯರಿಗೆ ಭರಪೂರ ಕೊಡುಗೆ ಘೋಷಿಸಿದ ವಿಜಯ್



ವಿಜಯ್

ಚೆನ್ನೈ (ಪಿಟಿಐ): ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ತಮ್ಮ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಮಹಿಳೆಯರಿಗೆ ಪ್ರತಿ ತಿಂಗಳು ₹2,500, ಮದುವೆಯ ಉಡುಗೊರೆಯಾಗಿ 8 ಗ್ರಾಂ ಚಿನ್ನ ಮತ್ತು ರೇಷ್ಮೆ ಸೀರೆ ಹಾಗೂ ಎಲ್ಲ ಕುಟುಂಬಗಳಿಗೆ ವಾರ್ಷಿಕ ಆರು ಎಲ್‌ಪಿಜಿ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡುವುದಾಗಿ ಭರವಸೆ ನೀಡಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ವಿಜಯ್ ಅವರು, ‘ಸರ್ಕಾರಿ ಉದ್ಯೋಗಿಗಳ ಹೊರತಾಗಿ ಎಲ್ಲ ಮಹಿಳೆಯರಿಗೆ 60 ವರ್ಷದವರೆಗೆ ಪ್ರತಿ ತಿಂಗಳು ₹2,500 ನೀಡಲಾಗುತ್ತದೆ’ ಎಂದು ತಿಳಿಸಿದರು.

ವಿಜಯ್ ನೀಡಿದ ಭರವಸೆಗಳೇನು?

- ‘ಕಾಮರಾಜ ಶಿಕ್ಷಣ ಗ್ಯಾರಂಟಿ ಯೋಜನೆ’ಯಡಿ ವಿದ್ಯಾರ್ಥಿನಿಯರ ತಾಯಿ ಅಥವಾ ಪೋಷಕರಿಗೆ ವಾರ್ಷಿಕ ₹15,000 ನೆರವು
- ಮಹಿಳಾ ಸುರಕ್ಷತೆ ಹಿತದೃಷ್ಟಿಯಿಂದ ಸಾರ್ವಜನಿಕ ಸಾರಿಗೆಗಳಲ್ಲಿ ಪ್ಯಾನಿಕ್ ಬಟನ್ ಅಳವಡಿಕೆ
- ಪಡಿತರ ಅಂಗಡಿಗಳಲ್ಲಿ ಉಚಿತವಾಗಿ ಸ್ಯಾನಿಟರಿ ನ್ಯಾಪ್ಕಿನ್ ವಿತರಣೆ
- ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ₹5 ಲಕ್ಷದವರೆಗೆ ಬಡ್ಡಿರಹಿತ ಸಾಲ
- ನವಜಾತ ಹೆಣ್ಣು ಶಿಶುವಿಗೆ ಚಿನ್ನದ ಉಂಗುರ ಮತ್ತು ಪೌಡರ್, ಎಣ್ಣೆ, ಡೈಪರ್ ಒಳಗೊಂಡ ವೆಲ್‌ಕಮ್ ಕಿಟ್
- ರಾಜ್ಯ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ
- ಮಹಿಳೆಯರ ವಿರುದ್ಧದ ಅಪರಾಧಗಳ ವಿರುದ್ಧ ಶೂನ್ಯ ಸಹಿಷ್ಣುತೆ
- ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ವಿಶೇಷ ಸಂಚಾರಿ ನ್ಯಾಯಾಲಯಗಳ ಸ್ಥಾಪನೆ

‘ಯುವ ಸಾಥಿ’ ಯೋಜನೆ ಜಾರಿಗೊಳಿಸಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ

ಪಶ್ಚಿಮ ಬಂಗಾಳ: ನಿರುದ್ಯೋಗಿಗಳಿಗೆ ₹1,500

ಕೋಲ್ಕತ್ತ (ಪಿಟಿಐ): ವಿಧಾನಸಭೆ ಚುನಾವಣೆ ಹೊಸ್ತಿಲಲ್ಲೇ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಯುವ ಸಮುದಾಯಕ್ಕೆ ಹೊಸ ಕೊಡುಗೆ ಘೋಷಿಸಿದ್ದಾರೆ.

10ನೇ ತರಗತಿ ಉತ್ತೀರ್ಣರಾದ ನಿರುದ್ಯೋಗಿಗಳಿಗೆ ಮಾಸಿಕ ₹1,500 ಭತ್ಯೆ ನೀಡುವ ‘ಯುವ ಸಾಥಿ’ ಯೋಜನೆ ಜಾರಿಗೊಳಿಸಿದ್ದಾರೆ.

‘ವಿಶ್ವ ಮಹಿಳಾ ದಿನದ ಉಡುಗೊರೆಯಾಗಿ ಈ ಯೋಜನೆ ಜಾರಿ ಮಾಡಿದ್ದು, ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು 21ರಿಂದ 40 ವರ್ಷ ವಯಸ್ಸಿನ ಉದ್ಯೋಗಾಂಕ್ಷಿಗಳು ಭತ್ಯೆಗೆ ಅರ್ಹರಾಗಿದ್ದಾರೆ’ ಎಂದು ಮಮತಾ ಬ್ಯಾನರ್ಜಿ ತಿಳಿಸಿದ್ದಾರೆ.

ಎಸ್‌ಐಆರ್ ನಂತರ ಹಲವು ಮತದಾರರ ಹೆಸರು ಅಳಿಸಿ ಹಾಕಲಾಗಿದೆ ಎಂದು ಆರೋಪಿಸಿ ನಡೆಸುತ್ತಿರುವ ಧರಣಿ ಸ್ಥಳದಲ್ಲೇ ಮಮತಾ ಅವರು ಈ ಯೋಜನೆ ಬಗ್ಗೆ ಮಾಹಿತಿ ನೀಡಿದರು.

‘ಏಪ್ರಿಲ್‌ನಿಂದ ಯೋಜನೆ ಆರಂಭಿಸಲು ನಿರ್ಧರಿಸಿದ್ದೆವು. ಆದರೆ ಮಾರ್ಚ್ 7ರಿಂದಲೇ ಗೌರವಧನ ವಿತರಣೆ ಶುರುವಾಗಿದೆ. ಅಂದಾಜು ಒಂದು ಕೋಟಿ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಇನ್ನೂ ವ್ಯಾಸಂಗ ಮಾಡುತ್ತಿರುವ, ವಿದ್ಯಾರ್ಥಿ ವೇತನ ಹೊರತುಪಡಿಸಿ ಬೇರೆ ಯೋಜನೆಯ ಫಲಾನುಭವಿ ಅಲ್ಲದವರಿಗೂ ಈ ಗೌರವ ಧನ ಸಿಗಲಿದೆ’ ಎಂದರು.



ಮತದಾರರ ಪಟ್ಟಿಯಿಂದ ಮತದಾರರ ಹೆಸರು ಅಳಿಸಿ ಹಾಕಿರುವುದನ್ನು ಖಂಡಿಸಿ ಕೋಲ್ಕತ್ತದಲ್ಲಿ ಮಮತಾ ಬ್ಯಾನರ್ಜಿ ಶನಿವಾರವೂ ಧರಣಿ ನಡೆಸಿದರು. ಹೆಸರು ಕೈಬಿಟ್ಟಿರುವ ಭವಾನಿಪುರ ಕ್ಷೇತ್ರದ ಮಹಿಳೆಯರು ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

‘ಧೈರ್ಯವಿದ್ದರೆ ಬಂಗಾಳ ವಿಭಜಿಸಿ’

‘ಎಸ್‌ಐಆರ್ ನಂತರ ಮತದಾರರ ಹೆಸರನ್ನು ಬೃಹತ್ ಪ್ರಮಾಣದಲ್ಲಿ ಅಳಿಸಿ ಹಾಕಿರುವುದು ರಾಜ್ಯವನ್ನು ವಿಭಜಿಸುವ ಹುನ್ನಾರ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

‘ಚುನಾವಣಾ ಆಯೋಗ ಮತ್ತು ಬಿಜೆಪಿಯ ಉದ್ದೇಶ ಬಂಗಾಳವನ್ನು ಇಬ್ಭಾಗ ಮಾಡುವುದು. ರಾಜ್ಯವನ್ನು ವಿಭಜಿಸಿ ಮತ ಪಡೆಯಲು ಬಿಜೆಪಿ ಬಯಸುತ್ತಿದೆ. ರಾಜ್ಯದ ಒಂದು ಭಾಗವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿಸುವ ಹುನ್ನಾರ ಅಡಗಿದೆ. ಇತರೆ ರಾಜ್ಯಗಳಲ್ಲಿ ಬಿಜೆಪಿಯವರು ಬಂಗಾಳಿ ಭಾಷಿಗರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ’ ಎಂದು ಅವರು ಆರೋಪಿಸಿದರು.

‘ರಾಜ್ಯದಲ್ಲಿ ನಿರುದ್ಯೋಗ ಪ್ರಮಾಣ ಶೇ 40ರಷ್ಟು ಇಳಿದಿದೆ. ಕನಿಷ್ಠ 40 ಲಕ್ಷ ಮಂದಿಗೆ ಕೌಶಲ ಆಧಾರಿತ ತರಬೇತಿ ನೀಡಿದ್ದೇವೆ. ಇದರಲ್ಲಿ 10 ಲಕ್ಷ ಮಂದಿ ಈಗಾಗಲೇ ಉದ್ಯೋಗಿಗಳಾಗಿದ್ದಾರೆ’ ಎಂದು ಹೇಳಿದರು.

‘ರೈತರಿಗೆ ಪ್ರತಿ ತಿಂಗಳೂ ₹ 10,000 ಪ್ರೋತ್ಸಾಹ ಧನ ನೀಡುತ್ತಿದ್ದೇವೆ. ಭೂರಹಿತ ರೈತರು ಮಾಸಿಕ ₹ 4,000 ಪಡೆಯುತ್ತಿದ್ದಾರೆ’ ಎಂದು ತಿಳಿಸಿದರು.

‘ಬಿರ್‌ಭುಮ್ ಜಿಲ್ಲೆಯ ದೇವುಚಾ ಪಚಾಮಿ ಬೃಹತ್ ಕಲ್ಲಿದ್ದಲು ಘಟಕದಲ್ಲಿ ಒಂದು ಲಕ್ಷ ಮಂದಿಗೆ ಉದ್ಯೋಗ ದೊರೆಯಲಿದೆ’ ಎಂದು ಹೇಳಿದರು.

ಬಿಜೆಪಿ ಸಲಹೆಯಂತೆ ಮಾತನಾಡುವ ರಾಷ್ಟ್ರಪತಿ: ಮಮತಾ ಆರೋಪ

ವಿಧಾನಸಭಾ ಚುನಾವಣೆಗೆ ಮುನ್ನ ಸಾಂವಿಧಾನಿಕ ಹುದ್ದೆಯಲ್ಲಿ ಇರುವವರೊಂದಿಗೆ ಸಂಘರ್ಷ ಮುಂದುವರಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶನಿವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಟೀಕಿಸಿದ್ದಾರೆ.

ಕೋಲ್ಕತ್ತದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ‘ರಾಷ್ಟ್ರಪತಿ ಮುರ್ಮು ಅವರು ಬಿಜೆಪಿಯ ಸಲಹೆಯಂತೆ ಮಾತನಾಡುತ್ತಾರೆ ಎಂದು ಆರೋಪಿಸಿದ ಮಮತಾ, ಮಣಿಪುರ ಮತ್ತು ಛತ್ತೀಸಗಢದ ಬುಡಕಟ್ಟು ಜನರ ಮೇಲಿನ ದೌರ್ಜನ್ಯದ ಬಗ್ಗೆ ಅವರು ಏಕೆ ಮೌನವಾಗಿದ್ದಾರೆ’ ಎಂದು ಪ್ರಶ್ನಿಸಿದ್ದಾರೆ.

ಮುರ್ಮು ಅವರು ಉತ್ತರ ಬಂಗಾಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ‘ರಾಜ್ಯದ ಕೆಲವು ಭಾಗಗಳಲ್ಲಿರುವ ಬುಡಕಟ್ಟು ಜನಾಂಗದವರ ಅಭಿವೃದ್ಧಿಯ ಕುಂಠಿತಗೊಂಡಿರುವುದೇಕೆ ಎಂದು ಪ್ರಶ್ನಿಸಿದ್ದರು. ತಮ್ಮನ್ನು ಸ್ವಾಗತಿಸಲು ಯಾರೂ ಬಾರದಿರುವುದಕ್ಕೆ ಅಚ್ಚರಿಪಟ್ಟಿದ್ದ ಮುರ್ಮು ಅವರು, ಮುಖ್ಯಮಂತ್ರಿ ಅಥವಾ ಸಚಿವರು ಅಸಮಾಧನಾಗೊಂಡಿದ್ದಾರೆಯೇ’ ಎಂದು ಹೇಳಿದ್ದರು. ಈ ಹೇಳಿಕೆ ನೀಡಿದ ಕೆಲವೇ ಗಂಟೆಗಳ ನಂತರ ಮಮತಾ ಅವರು ಮುರ್ಮು ಅವರ ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

‘ರಾಷ್ಟ್ರಪತಿಯವರು ಬಿಜೆಪಿಯ ಸಲಹೆಯ ಮೇರೆಗೆ ಬುಡಕಟ್ಟುಗಳ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ ಎಂದು ಆರೋಪಿಸಿ, ರಾಜಕೀಯ ಮಾಡುತ್ತಿರುವುದು ದುರದೃಷ್ಟಕರ’ ಎಂದು ಮಮತಾ ಹೇಳಿದ್ದಾರೆ.

‘ಈ ವಿಷಯವನ್ನು ಹೇಳಲು ನನಗೆ ನಾಚಿಕೆಯಾಗುತ್ತಿದೆ. ಗೌರವಾನ್ವಿತ ರಾಷ್ಟ್ರಪತಿಯವರನ್ನು ನಾವು ಗೌರವಿಸುತ್ತೇವೆ. ಆದರೆ, ಅವರನ್ನೂ ರಾಜಕೀಯ ಮಾರಾಟ ಮಾಡಲು ಕಳುಹಿಸಲಾಗುತ್ತಿದೆ. ಕ್ಷಮಿಸಿ, ಮೇಡಂ. ನನಗೆ ನಿಮ್ಮ ಬಗ್ಗೆ ಅಪಾರ ಗೌರವವಿದೆ, ಆದರೆ ನೀವು ಬಿಜೆಪಿಯ ನೀತಿಗಳು ಮತ್ತು ಅವರ ಸೂಚನೆಗಳನ್ನು ಅನುಸರಿಸುತ್ತಿದ್ದೀರಿ’ ಎಂದು ಅವರು ಹೇಳಿದರು.

ಬಿಹಾರ: ಎ.6ಕ್ಕೆ ಹೊಸ ಸಿ.ಎಂ?

ಮುಖ್ಯಮಂತ್ರಿ ಹುದ್ದೆಗೆ ನಿತೀಶ್ ತಕ್ಷಣಕ್ಕೆ ರಾಜೀನಾಮೆ ಇಲ್ಲ

• ಅಭಯ್ ಕುಮಾರ್

ಪಟ್ನಾ: ರಾಜ್ಯಸಭೆಗೆ ನಿತೀಶ್ ಕುಮಾರ್ ಅವರು ಮಾರ್ಚ್ 16ರಂದು ಆಯ್ಕೆಯಾದರೂ ಮುಖ್ಯಮಂತ್ರಿ ಹುದ್ದೆಗೆ ತಕ್ಷಣಕ್ಕೆ ರಾಜೀನಾಮೆ ನೀಡುವುದಿಲ್ಲ.

ಏಪ್ರಿಲ್ 5 ಅಥವಾ 6ರಂದು ಎನ್‌ಡಿಎ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಈ ಸಭೆಯಲ್ಲಿ ನೂತನ ನಾಯಕನ್ನು ಆಯ್ಕೆ ಮಾಡಲಾಗುವುದು ಎಂದು ಇಲ್ಲಿನ ಆಡಳಿತ ಪಕ್ಷದ ಮೂಲಗಳು ದೃಢಪಡಿಸಿವೆ.

‘ನಿರ್ಗಮಿಸುತ್ತಿರುವ ರಾಜ್ಯಸಭಾ ಸದಸ್ಯರ ಪ್ರಸ್ತುತದ ಅವಧಿ ಏಪ್ರಿಲ್ 9ರಂದು ಕೊನೆಗೊಳ್ಳುತ್ತದೆ. ನಿತೀಶ್ ಕುಮಾರ್ ಅವರು ಏಪ್ರಿಲ್‌ನಲ್ಲಿ ಸಂಸತ್ತಿನ ಮೇಲ್ಮನೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಅವರ ಹಿಂದಿನ ಆಡಳಿತದ ದಾಖಲೆಗಳನ್ನು ಗಮನಿಸಿದರೆ, ಅವರು ಅದೇ ಸಮಯದಲ್ಲಿ ಮುಖ್ಯಮಂತ್ರಿ ಹುದ್ದೆಯನ್ನು ತ್ಯಜಿಸುವ ಸಾಧ್ಯತೆ ಇದೆ’ ಎಂದು ಮೂಲಗಳು ‘ಪ್ರಜಾವಾಣಿ’ಗೆ ಖಚಿತಪಡಿಸಿವೆ.

ರಚನೆಯಾಗಲಿರುವ ಹೊಸ ಸರ್ಕಾರದ ಬಗ್ಗೆ ಈಗಾಗಲೇ ಗೊಂದಲಗಳು ಶುರುವಾಗಿವೆ. ಹೊಸ ಸಚಿವ ಸಂಪುಟಕ್ಕೆ 17 + 15 + 2 + 1 + 1 ಸೂತ್ರ ಅನ್ವಯಿಸಲು ತಾತ್ವಿಕವಾಗಿ ನಿರ್ಧರಿಸಲಾಗಿದೆ. ಈ ಸೂತ್ರದ ಅರ್ಥವೇನೆಂದರೆ, ಬಿಜೆಪಿ ನೇತೃತ್ವದ ಹೊಸ ಸರ್ಕಾರದಲ್ಲಿ ಬಿಜೆಪಿಯ 17 ಸಚಿವರು (ಮುಖ್ಯಮಂತ್ರಿ ಹುದ್ದೆ ಸೇರಿದಂತೆ), ಜೆಡಿ (ಯು)ನ 15 ಸಚಿವರು (ನಿತೀಶ್ ಅವರ ಪುತ್ರ ನಿಶಾಂತ್ ಕುಮಾರ್ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ಸೇರಿದಂತೆ), ಚಿರಾಗ್ ಪಾಸ್ವಾನ್ ಅವರ ಪಕ್ಷವನ್ನು ಪ್ರತಿನಿಧಿಸುವ ಎಲ್‌ಜೆಪಿ (ಆರ್)ಯಿಂದ ಇಬ್ಬರು ಸಚಿವರು, ಹಿಂದೂಸ್ತಾನ್ ಅವಾಮ್ ಮೋರ್ಚಾ (ಎಚ್‌ಎಎಂ) ಮತ್ತು ರಾಷ್ಟ್ರೀಯ ಲೋಕ ಮೋರ್ಚಾಗೆ (ಆರ್‌ಎಲ್‌ಎಂ) ತಲಾ ಒಂದು ಸಚಿವ ಸ್ಥಾನ ಇರುತ್ತದೆ.

ಎಚ್‌ಎಎಂ ಮುಖ್ಯಸ್ಥ ಜಿತನ್ ರಾಮ್ ಮಾಂಝಿ ಅವರ ಪುತ್ರ ಸುಮನ್ ಕುಮಾರ್ ಮತ್ತು ಆರ್‌ಎಲ್‌ಎಂ ಮುಖ್ಯಸ್ಥ ಉಪೇಂದ್ರ ಕುಶ್ವಾಹ ಅವರ ಪುತ್ರ ದೀಪಕ್ ಪ್ರಕಾಶ್ ಅವರು ಮುಂದಿನ ಸರ್ಕಾರದಲ್ಲಿ ಎನ್‌ಡಿಎ ಮಿತ್ರಪಕ್ಷಗಳನ್ನು ಪ್ರತಿನಿಧಿಸುವ ಸಚಿವರಾಗಿ ಮುಂದುವರಿಯುತ್ತಾರೆ.



ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಜೆಡಿಯು ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗಿಯಾದರು –ಪಿಟಿಐ ಚಿತ್ರ

‘ಡಿಸಿಎಂ ಆಗಿ ನಿಶಾಂತ್ ಆಯ್ಕೆಗೆ ನಿರ್ಧಾರ’


ಪಟ್ನಾ (ಪಿಟಿಐ): ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಅವರನ್ನು ಉಪ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದು ಪಕ್ಷದ ಶಾಸಕ ಹರಿ ನಾರಾಯಣ್ ಸಿಂಗ್ ಅವರು ತಿಳಿಸಿದ್ದಾರೆ.

‘ನಿಶಾಂತ್ ಅವರು ವಿಧಾನಪರಿಷತ್ ಸದಸ್ಯರಾಗಿ ಮುಂದಿನ ತಿಂಗಳು ಆಯ್ಕೆಯಾಗಲಿದ್ದಾರೆ’ ಎಂದು ನಿತೀಶ್ ಆಪ್ತ ಹರಿ ನಾರಾಯಣ್ ತಿಳಿಸಿದ್ದಾರೆ.

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ

ಪದಚ್ಯುತಿ ನಿರ್ಣಯಕ್ಕೆ ಟಿಎಂಸಿ ಬೆಂಬಲ

ನವದೆಹಲಿ (ಪಿಟಿಐ): ಸಂಸತ್ ಬಜೆಟ್ ಅಧಿವೇಶನ ಮಾರ್ಚ್ 9ರಿಂದ ಪುನರಾರಂಭ ವಾಗಲಿದ್ದು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬೆಂಬಲ ಸೂಚಿಸಿದೆ.



ಓಂ ಬಿರ್ಲಾ

‘ಪಕ್ಷಪಾತ ಧೋರಣೆಯಿಂದ ವರ್ತಿಸಿದ್ದಾರೆ’ ಎಂಬ ಆರೋಪದ ಮೇರೆಗೆ ಓಂ ಬಿರ್ಲಾ ಅವರನ್ನು ಸ್ಪೀಕರ್ ಸ್ಥಾನದಿಂದ ಪದಚ್ಯುತಿಗೊಳಿಸುವ ನಿರ್ಣಯವನ್ನು ಮಂಡಿಸಲು ವಿರೋಧ ಪಕ್ಷದ ಕನಿಷ್ಠ 118 ಸಂಸದರು ನೋಟಿಸ್ ನೀಡಿದ್ದರು. ಆ ಸಂದರ್ಭದಲ್ಲಿ ಟಿಎಂಸಿ ಸಂಸದರು ನೋಟಿಸ್‌ಗೆ ಸಹಿ ಹಾಕಿರಲಿಲ್ಲ.

‘ನಮ್ಮ ಪಕ್ಷ ಯಾವಾಗಲೂ ಅವಿಶ್ವಾಸ ನಿರ್ಣಯದ ಪರ ನಿಲುವು ಹೊಂದಿತ್ತು. ನಿರ್ಣಯವನ್ನು ಆತುರವಾಗಿ ಮಂಡಿಸುವುದು ಇಷ್ಟವಿರಲಿಲ್ಲ. ಆದ್ದರಿಂದ, ಬಜೆಟ್ ಅಧಿವೇಶನದ ಕೊನೆಯ ಭಾಗದಲ್ಲಿ, ಮೂರು ದಿನಗಳ ನಂತರ ಅದನ್ನು ಸಲ್ಲಿಸಿ ಎಂದು ನಾವು ಹೇಳಿದ್ದೆವು’ ಎಂದು ಟಿಎಂಸಿ ನಾಯಕರೊಬ್ಬರು ತಿಳಿಸಿದ್ದಾರೆ.

‘ಸೋಮವಾರ ನೋಟಿಸ್ ಅನ್ನು ಪರಿಗಣಿಸುವ ವೇಳೆ, ಅನಾರೋಗ್ಯ ಪೀಡಿತರನ್ನು ಹೊರತುಪಡಿಸಿ, ಟಿಎಂಸಿಯ ಬಹುತೇಕ ಸಂಸದರು ಲೋಕಸಭೆಯಲ್ಲಿ ಹಾಜರಿರುತ್ತಾರೆ. ಈ ಸಂಬಂಧ ಇಂಡಿಯಾ ಬಣದ ಇತರ ನಾಯಕ ರೊಂದಿಗೆ ಟಿಎಂಸಿ ನಾಯಕರು ಸಂಪರ್ಕದಲ್ಲಿದ್ದಾರೆ’ ಎಂದು ಹೇಳಿದ್ದಾರೆ.

ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸಲು ವಿರೋಧ ಪಕ್ಷದ ಸದಸ್ಯರು ಮಂಡಿಸಿರುವ ನಿರ್ಣಯವು ಮಾರ್ಚ್ 9ರಂದು ಲೋಕಸಭೆಯ ಕಾರ್ಯಸೂಚಿಯಲ್ಲಿಪಟ್ಟಿಮಾಡಲಾಗಿದೆ.

ವಿಪ್ ಜಾರಿ: ಸದನದಲ್ಲಿ ಎಲ್ಲ ಸಂಸದರು ಹಾಜರಿರುವಂತೆ ಆಡಳಿತಾರೂಢ ಬಿಜೆಪಿ ಮತ್ತು ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ವಿಪ್ ಜಾರಿ ಮಾಡಿವೆ. ಸರ್ಕಾರ ಬಹುಮತ ಹೊಂದಿರುವುದರಿಂದ ನಿರ್ಣಯಕ್ಕೆ ಸೋಲಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

‘ದೋಷರಹಿತ ಪಟ್ಟಿ ಪ್ರಜಾಪ್ರಭುತ್ವದ ಮೂಲಾಧಾರ’

ಕೊಚ್ಚಿ (ಪಿಟಿಐ): ದೋಷರಹಿತ ಮತದಾರರ ಪಟ್ಟಿಗಳು ಪ್ರಜಾಪ್ರಭುತ್ವದ ಮೂಲಾಧಾರವಾಗಿದ್ದು, ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗೆ ಉಳಿಯಬಾರದು, ಅನರ್ಹರು ಪಟ್ಟಿಯೊಳಗೆ ಸೇರಬಾರದು. ಈ ಸ್ಪಷ್ಟ ಉದ್ದೇಶದಿಂದಲೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿದರು.



ಜ್ಞಾನೇಶ್ ಕುಮಾರ್

ಮುಂಬರುವ ಕೇರಳ ವಿಧಾನಸಭಾ ಚುನಾವಣೆಯ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಜಾಪ್ರಭುತ್ವ ಎನ್ನುವುದು ಈ ರಾಜ್ಯಕ್ಕೆ ಹೊಸದೇನಲ್ಲ. ಕೇರಳವು ದೇಶದ ಮತ್ತು ಪ್ರಪಂಚದ ಅನೇಕ ಭಾಗಗಳಿಗೆ ಪ್ರಜಾ ಪ್ರಭುತ್ವದ ಅನುಷ್ಠಾನದ ಬಗ್ಗೆ ಕಲಿಸಿದೆ’ ಎಂದರು.

ಇದೇ ವೇಳೆ ರಾಜ್ಯದೊಂದಿಗಿನ ತಮ್ಮ ಸಂಬಂಧವನ್ನು ನೆನಪಿಸಿಕೊಂಡ ಕುಮಾರ್, ‘ಕೇರಳದಲ್ಲಿ 18 ವರ್ಷ ಕೆಲಸ ಮಾಡಿದ್ದೇನೆ. 22 ವರ್ಷಗಳ ಹಿಂದೆ ರಾಜ್ಯದ ಎರ್ನಾಕುಲಂ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಿದ್ದೇನೆ’ ಎಂದು ಹೇಳಿದರು.

ಕೇರಳದಲ್ಲಿ ಸಾವಿರ ವರ್ಷಗಳಿಗೂ ಹಿಂದೆಯೇ 'ನಟ್ಟುಕುಟ್ಟಂ' (ಗ್ರಾಮ ಸಭೆಗಳು) ನಡೆಯುತ್ತಿದ್ದವು. ಇದು ಗ್ರಾಮಸ್ಥರು ಸಾಮೂಹಿಕವಾಗಿ ನಿರ್ಧಾರ ಕೈಗೊಳ್ಳುವುದಕ್ಕೆ ಅಡಿಪಾಯ ಹಾಕಿತು’ ಎಂದು ಅವರು ಉಲ್ಲೇಖಿಸಿದರು.

‘1960ರಲ್ಲಿ ಕೇರಳ ಮೊದಲ ಚುನಾವಣಾ ನೀತಿ ಸಂಹಿತೆಯನ್ನು ಜಾರಿಗೆ ತಂದಿತು. ನಂತರ ಇದನ್ನು ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿ ಭಾರತದ ಚುನಾವಣಾ ಆಯೋಗವು ಅಂಗೀಕರಿಸಿತು. ಇಂದು ನಾವು ಇದನ್ನು ಮಾದರಿ ನೀತಿ ಸಂಹಿತೆ ಎಂದು ಕರೆಯುತ್ತೇವೆ’ ಎಂದು ಅವರು ವಿವರಿಸಿದರು.

ಚುನಾವಣೆಯ ನಿರ್ವಹಣೆಯಲ್ಲಿ ಕೇರಳವು ಮುಂಚೂಣಿಯಲ್ಲಿರುವ ರಾಜ್ಯವಾಗಿದೆ ಎಂದು ಹೇಳಿದ ಕುಮಾರ್, 1982 ರಲ್ಲಿ ಪರವೂರು ವಿಧಾನ ಸಭಾ ಕ್ಷೇತ್ರದಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಎಲೆಕ್ಟ್ರಾನಿಕ್ ಮತಯಂತ್ರಗಳ ಬಳಕೆಯನ್ನು ಪರಿಚಯಿಸಲಾಯಿತು’ ಎಂದು ನೆನಪಿಸಿದರು.

ಇರಾನ್‌ನ ‘ಲವಣ್’ ನಿಲುಗಡೆಗೆ ಭಾರತ ಅನುಮೋದನೆ: ಜೈಶಂಕರ್

ನವದೆಹಲಿ (ಪಿಟಿಐ): ಕೊಚ್ಚಿಯಲ್ಲಿ ಇರಾನಿನ ನೌಕೆ ‘ಐಆರ್‌ಐಎಸ್ ಲವಣ್’ ಅನ್ನು ತುರ್ತು ನಿಲುಗಡೆಗೆ ಭಾರತದ ಅನುಮೋದಿಸಿದೆ ವಿದೇಶಾಂಗ ಸಚಿವ ಜೈಶಂಕರ್ ದೃಢಪಡಿಸಿದರು.

‘ನಮ್ಮ ಗಡಿಗಳಿಗೆ ಹತ್ತಿರದ ಪ್ರದೇಶದಲ್ಲಿದ್ದ ನಮ್ಮ ದೇಶದ ಹಡಗುಗಳಲ್ಲಿ ಒಂದು ಹಡಗು ನಮ್ಮ ಬಂದರಿಗೆ ಬರಲು ಬಯಸಿದೆ ಎಂದು ಇರಾನ್ ಕಡೆಯಿಂದ ನಮಗೆ ಸಂದೇಶ ಬಂದಿತ್ತು. ಹಡಗಿನಲ್ಲಿದ್ದವರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದೂ ಸಂದೇಶದಲ್ಲಿ ತಿಳಿಸಿದ್ದರು.

‘ಇರಾನ್ ನೌಕೆಗೆ ಮಾರ್ಚ್ 1 ರಂದು ನಮ್ಮ ಗಡಿ ಪ್ರದೇಶದೊಳಗೆ ಬರಲು ತಿಳಿಸಿದೆವು . ಅವರು ನಮ್ಮ ಗಡಿ ಪ್ರದೇಶ ತಲುಪಲು ಕೆಲವು ದಿನಗಳನ್ನು ತೆಗೆದುಕೊಂಡರು. ನಂತರ ಕೊಚ್ಚಿಯ ಬಂದರು ತಲುಪಿದರು’ ಎಂದರು.

ಅಮೆರಿಕವು ಇರಾನಿನ ಯುದ್ಧನೌಕೆ ಐಆರ್‌ಐಎಸ್ ದೇನಾ ಮೇಲೆ ದಾಳಿ ಮಾಡಿ ಮುಳುಗಿಸುವ ಕೆಲವು ದಿನಗಳ ಮೊದಲು, ಆ ಹಡಗನ್ನು ಲಂಗರು ಹಾಕಲು ಮಾಡಿದ್ದ ವಿನಂತಿಯನ್ನು ಭಾರತೀಯ ನೌಕಾಪಡೆಯು ಅನುಮೋದಿಸಿತ್ತು.

ಐಆರ್‌ಐಎಸ್ ಲವಣ್ ಹಡಗು ಮಾರ್ಚ್ 4ರಂದು ಕೊಚ್ಚಿಯನ್ನು ತಲುಪಿದೆ. ಅದರಲ್ಲಿದ್ದ 183 ಸಿಬ್ಬಂದಿಯನ್ನು ಪ್ರಸ್ತುತ ಮಾನವೀಯ ಆಧಾರದ ಮೇಲೆ ಭಾರತೀಯ ನೌಕಾ ಸೌಲಭ್ಯಗಳನ್ನು ನೀಡಲಾಗಿದೆ.

ಗೆಲುವಿನ ಹಳಿಗೆ ಮರಳಿದ ಬಿಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಯಾನ್ ವಿಲಿಯಮ್ಸ್ ಮತ್ತು ಆಶಿಕ್ ಕುರುನಿಯನ್ ಗಳಿಸಿದ ಗೋಲುಗಳ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡವು ಶನಿವಾರ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 2–1ರಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ತಂಡವನ್ನು ಮಣಿಸಿತು.

ಕೋಲ್ಕತ್ತದ ವಿವೇಕಾನಂದ ಭಾರತಿ ಕ್ರೀಡಾಂಗಣದಲ್ಲಿ ತವರಿನಾಚೆಯ ತನ್ನ ಮೊದಲ ಪಂದ್ಯವನ್ನು ಆಡಿದ ಸುನಿಲ್ ಚೆಟ್ರಿ ಬಳಗವು ಲೀಗ್‌ನಲ್ಲಿ ಎರಡನೇ ಗೆಲುವು ದಾಖಲಿಸಿತು. ಇದರೊಂದಿಗೆ ಲೀಗ್ ಪಟ್ಟಿಯಲ್ಲಿ 7 ಅಂಕಗಳೊಂದಿಗೆ ಆರನೇ ಸ್ಥಾನಕ್ಕೇರಿತು.

ಕಳೆದ ವಾರ ಕಂಠೀರವ ಕ್ರೀಡಾಂಗಣದಲ್ಲಿ ಪಂಜಾಬ್ ಎಫ್‌ಸಿ ವಿರುದ್ಧ 0–2ರಿಂದ ಸೋಲು ಅನುಭವಿಸಿದ್ದ ಬಿಎಫ್‌ಸಿ ಗೆಲುವಿನ ಹಳಿಗೆ ಮರಳಿತು.

ಮುಖ್ಯ ಕೋಚ್ ರೆನೆಡಿ ಸಿಂಗ್ ಅವರು ಆರಂಭಿಕ ತಂಡದಲ್ಲಿ ಮೂರು ಬದಲಾವಣೆಗಳನ್ನು ಮಾಡಿದರು. ಸುನಿಲ್ ಚೆಟ್ರಿ ಮತ್ತು ಸಿರೋಜ್ ಕುಜಿಯೆವ್ ಈ ಋತುವಿನಲ್ಲಿ ತಮ್ಮ ಮೊದಲ ಅವಕಾಶ ಪಡೆದರೆ, ಗಾಯದಿಂದಾಗಿ ಕಳೆದ ಎರಡು ಪಂದ್ಯಗಳಿಂದ ದೂರ ಉಳಿದಿದ್ದ ರಾಹುಲ್ ಭೆಕೆ ಅವರೂ ಅವಕಾಶ ಗಳಿಸಿದರು.



ಗೋಲು ದಾಖಲಿಸಿದ ಸಂಭ್ರಮದಲ್ಲಿ ರಯಾನ್ ವಿಲಿಯಮ್ಸ್

ಪಂದ್ಯದ ಆರಂಭದಿಂದಲೇ ಚುರುಕಿನ ಆಟವಾಡಿದ ಬಿಎಫ್‌ಸಿ ಆಟಗಾರರು ಕಾರ್ನರ್‌ಗಳು ಮತ್ತು ಕ್ರಾಸ್‌ಗಳ ಮೂಲಕ ಪ್ರಭಾವ ಬೀರಿದರು. 22ನೇ ನಿಮಿಷ ಚೆಟ್ರಿ ಪಡೆಗೆ ಮುನ್ನಡೆ ಲಭಿಸಿತು. ಸಿರೋಜ್ ಕುಜಿಯೆವ್ ನೀಡಿದ ಕಾರ್ನರ್ ಅನ್ನು ಚೆಟ್ರಿ, ರಯಾನ್ ಅವರತ್ತ ಮಾಡಿದರು. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡ ರಯಾನ್ ಚೆಂಡನ್ನು ಗುರಿ ಸೇರಿಸಿದರು. ಅದಾದ 19 ನಿಮಿಷಗಳ ಬಳಿಕ ಆಶಿಕ್ ಅಮೋಘ ಹೊಡೆತದೊಡನೆ ಗೋಲು ದಾಖಲಿಸಿದರು. ಹೀಗಾಗಿ, ಮೊದಲಾರ್ಧವನ್ನು ಬೆಂಗಳೂರು ತಂಡವು 2-0 ಮುನ್ನಡೆಯೊಂದಿಗೆ ಮುಗಿಸಿತು.

ದ್ವಿತೀಯಾರ್ಧದಲ್ಲಿ ಮೊಹಮ್ಮಡನ್ ಪರ ರಾಯ್ ಮಹಿತೋಷ್ 51ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ, ತಂಡದ ಹಿನ್ನಡೆಯನ್ನು ತಗ್ಗಿಸಿದರು. ಪಂದ್ಯದ ಕೊನೆಯ ಕ್ಷಣಗಳಲ್ಲಿ ಸಮಬಲಕ್ಕಾಗಿ ಮೊಹಮ್ಮಡನ್ ಹೋರಾಟ ನಡೆಸಿತಾದರೂ ಪ್ರಯೋಜನವಾಗಲಿಲ್ಲ.

ಏಷ್ಯನ್ ಕಪ್: ಜಪಾನ್‌ಗೆ ಸುಲಭ ತುತ್ತಾದ ಭಾರತ

ಪರ್ತ್ (ಎಎಫ್‌ಪಿ): ಬಲಿಷ್ಠ ಜಪಾನ್ ತಂಡವು ಶನಿವಾರ ಮಹಿಳಾ ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭಾರತವನ್ನು 11–0 ಅಂತರದಿಂದ ಸುಲಭವಾಗಿ ಮಣಿಸಿ, ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯಿತು.

ಸಿ ಗುಂಪಿನಲ್ಲಿರುವ ಭಾರತ ತಂಡಕ್ಕೆ ಇದು ಸತತ ಎರಡನೇ ಸೋಲಾಗಿದೆ. ಗುಂಪು ಹಂತದ ತನ್ನ ಮೊದಲ ಪಂದ್ಯದಲ್ಲಿ 1–2ರಿಂದ ವಿಯೆಟ್ನಾಂ ತಂಡಕ್ಕೆ ಸೋತಿತ್ತು. ಇದರೊಂದಿಗೆ ಭಾರತ ತಂಡದ ನಾಕೌಟ್ ಕನಸು ಬಹುತೇಕ ಕಮರಿದೆ.

ಹಿನಾಟಾ ಮಿಯಾಜಾವಾ ಮತ್ತು ರಿಕೊ ಉಯೆಕಿ ಇಬ್ಬರೂ ಹ್ಯಾಟ್ರಿಕ್ ಗೋಲುಗಳನ್ನು ಗಳಿಸಿ ಜಪಾನ್ ಗೆಲುವಿನಲ್ಲಿ ಮಿಂಚಿದರು. ಸತತ ಎರಡು ಪಂದ್ಯಗಳನ್ನು ಗೆದ್ದ ಜಪಾನ್ (6 ಅಂಕ) ಗುಂಪಿನಲ್ಲಿ ಅಗ್ರಸ್ಥಾನ ಬಲಪಡಿಸಿಕೊಂಡಿತು. ಒಂದು ಪಂದ್ಯ ಬಾಕಿ ಇರುವಂತೆ ಎಂಟರ ಘಟ್ಟಕ್ಕೆ ಅರ್ಹತೆ ಪಡೆಯಿತು. ಜಪಾನ್ ಇದಕ್ಕೂ ಮುನ್ನ 2–0ಯಿಂದ ತೈವಾನ್ ತಂಡವನ್ನು ಮಣಿಸಿತ್ತು.

ದಿನದ ಮತ್ತೊಂದು ಪಂದ್ಯದಲ್ಲಿ ತೈವಾನ್ ತಂಡವು 1–0ಯಿಂದ ವಿಯೆಟ್ನಾಂ ತಂಡವನ್ನು ಮಣಿಸಿತು. ತೈವಾನ್ ಮತ್ತು ವಿಯೆಟ್ನಾಂ ತಲಾ ಮೂರು ಅಂಕಗಳೊಂದಿಗೆ ಗುಂಪಿನಲ್ಲಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿವೆ. ಎರಡೂ ಪಂದ್ಯ ಸೋತಿರುವ ಭಾರತ ತಂಡವು ಕೊನೆಯ ಸ್ಥಾನದಲ್ಲಿದೆ. ಭಾರತ ತಂಡವು ಮಂಗಳವಾರ ತನ್ನ ಕೊನೆಯ ಪಂದ್ಯದಲ್ಲಿ ತೈವಾನ್ ತಂಡವನ್ನು ಎದುರಿಸಲಿದೆ.

ಟಿ.ಟಿ: ಧಾರವಾಡ ಸೆಮಿಗೆ

ಧಾರವಾಡ: ಆತಿಥೇಯ ಧಾರವಾಡ ತಂಡವು ಶನಿವಾರ ನಡೆದ ಅಂತರ ಜಿಲ್ಲಾ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದೆ.



ಮೈಸೂರಿನ ಶ್ರೀನಿಧಿ

ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆ, ಜಿಲ್ಲಾ ಟಿಟಿ ಸಂಸ್ಥೆ ಮತ್ತು ಕಾಸ್ಮಸ್ ಕ್ಲಬ್ ವತಿಯಿಂದ ನಗರದ ಕಾಸ್ಮಸ್ ಕ್ಲಬ್ ಅಂಕಣದಲ್ಲಿ ಶನಿವಾರ ನಡೆದ ಮಹಿಳಾ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಧಾರವಾಡ 3–1ರಲ್ಲಿ ಉತ್ತರ ಕನ್ನಡ ತಂಡವನ್ನು ಮಣಿಸಿತು. ಇನ್ನುಳಿದ ಪಂದ್ಯಗಳಲ್ಲಿ ಬೆಳಗಾವಿ 3–1 ರಲ್ಲಿ ಕಲಬುರಗಿ ತಂಡದ ವಿರುದ್ಧ, ಮಂಡ್ಯ 3–1ರಲ್ಲಿ ಉಡುಪಿ ವಿರುದ್ಧ ಹಾಗೂ ದಕ್ಷಿಣ ಕನ್ನಡ 3–2ರಲ್ಲಿ ಮೈಸೂರು ತಂಡದ ಎದುರು ಜಯ ಸಾಧಿಸಿದವು.

ಸೆಮಿಫೈನಲ್ ಮೊದಲ ಪಂದ್ಯದಲ್ಲಿ ಬೆಳಗಾವಿ ತಂಡವು ಮಂಡ್ಯ ತಂಡದ ವಿರುದ್ಧ ಹಾಗೂ ಎರಡನೇ ಪಂದ್ಯದಲ್ಲಿ ಧಾರವಾಡ ತಂಡವು ದಕ್ಷಿಣ ಕನ್ನಡ ತಂಡದ ವಿರುದ್ಧ ಸೆಣಸಲಿದೆ.

ಪುರುಷರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ದಕ್ಷಿಣ ಕನ್ನಡ 3–2ರಲ್ಲಿ ಬೆಳಗಾವಿ ವಿರುದ್ಧ, ಧಾರವಾಡ 3–2ರಲ್ಲಿ ಉಡುಪಿ ತಂಡದ ಎದುರು, ಮಂಡ್ಯ ತಂಡವು 3–2ರಲ್ಲಿ ಕಲಬುರಗಿ ತಂಡದ ವಿರುದ್ಧ ಹಾಗೂ ಉತ್ತರ ಕನ್ನಡ ತಂಡವು 3–2ರಲ್ಲಿ ಮೈಸೂರು ತಂಡದ ವಿರುದ್ಧ ಗೆಲುವು ಸಾಧಿಸಿದೆ.

ಚೆಸ್: ಅಬ್ದುಸತ್ತಾರೋವ್‌ಗೆ ಕಿರೀಟ



ಪ್ರಾಗ್ (ಝೆಕ್ ರಿಪಬ್ಲಿಕ್): ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರು ಪ್ರಾಗ್ ಇಂಟರ್‌ನ್ಯಾಷನಲ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಶನಿವಾರ ನಡೆದ ಒಂಬತ್ತನೇ ಹಾಗೂ ಅಂತಿಮ ಸುತ್ತಿನಲ್ಲಿ ಅಮೆರಿಕದ ಹ್ಯಾನ್ಸ್ ನೀಮನ್ ಜೊತೆ ಡ್ರಾ ಮಾಡಿಕೊಂಡ ಅವರು ಒಟ್ಟು 6 ಪಾಯಿಂಟ್ಸ್ ಸಂಗ್ರಹಿಸಿದರು.

ಪ್ರಶಸ್ತಿಗೆ ಅವರಿಗೆ ಸಮೀಪದ ನಿಕಟ ಸ್ಪರ್ಧಿಯಾಗಿದ್ದ ಡಚ್ ಆಟಗಾರ ಜೋರ್ಡನ್ ವಾನ್ ಫೊರೀಸ್ಟ್ ಅಂತಿಮ ಸುತ್ತಿನಲ್ಲಿ ಇರಾನ್‌ನ ಪರ್ಹಾಮ್ ಮಘಸೂಡ್ಲು ಅವರಿಗೆ ಮಣಿಸಿದರು. ಭಾರತದ ಅರವಿಂದ ಚಿದಂಬರಮ್ ಅವರೂ ಒಂಬತ್ತನೇ ಸುತ್ತಿನಲ್ಲಿ (ಝೆಕ್ ರಿಪಬ್ಲಿಕ್‌ನ ಡೇವಿಡ್ ನವಾರ ವಿರುದ್ಧ) ಜಯಗಳಿಸಿದರು.

ಮಘಸೂಡ್ಲು, ಅರವಿಂದ ಚಿದಂಬರಮ್ ಮತ್ತು ವಾನ್ ಫೊರೀಸ್ಟ್ ಅವರು ತಲಾ 5 ಪಾಯಿಂಟ್ಸ್ ಪಡೆದರು. ಆದರೆ ಟೈಬ್ರೇಕರ್ ಆಧಾರದ ಮೇಲೆ ಕ್ರಮವಾಗಿ ಎರಡರಿಂದ ನಾಲ್ಕರವರೆಗಿನ ಸ್ಥಾನಗಳನ್ನು ಪಡೆದರು.

ಗುಕೇಶ್‌ಗೆ ಕೊನೆಗೂ ಜಯ: ಡಿ.ಗುಕೇಶ್ (3.5) ಟೂರ್ನಿಯ ಅಂತಿಮ ಸುತ್ತಿನಲ್ಲಿ ಸ್ಪೇನ್‌ನ ಡೇವಿಡ್ ಆ್ಯಂಟನ್ ಗಿಜಾರೊ (3.5) ಅವರನ್ನು ಸೋಲಿಸಿದರು. ಇದು ಗುಕೇಶ್ ಅವರಿಗೆ ಟೂರ್ನಿಯಲ್ಲಿ ಮೊದಲ ಗೆಲುವು ಎನಿಸಿತು.

ಟೆನಿಸ್: ಸಿಂಗಲ್ಸ್‌ನಲ್ಲಿ ಗೆಳತಿಯರ ಮುಖಾಮುಖಿ

ಡಬಲ್ಸ್ ಪ್ರಶಸ್ತಿ ಗೆದ್ದ ಅಂಕಿತಾ–ವೈಷ್ಣವಿ

• ಬಸವರಾಜ ದಳವಾಯಿ

ಕಲಬುರಗಿ: ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿಗೆ ಮುತ್ತಿಟ್ಟ ಭಾರತದ ಅಂಕಿತಾ ರೈನಾ ಹಾಗೂ ವೈಷ್ಣವಿ ಅಡ್ಕರ್ ಅವರು ಐಟಿಎಫ್ ಕಲಬುರಗಿ ಓಪನ್ ಮಹಿಳೆಯರ ಟೆನಿಸ್ ಟೂರ್ನಿಯ ಸಿಂಗಲ್ಸ್ ಫೈನಲ್‌ನಲ್ಲಿ ಭಾನುವಾರ ಮುಖಾಮುಖಿಯಾಗಲಿದ್ದಾರೆ.

ಇಲ್ಲಿನ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಡಬಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅಂಕಿತಾ–ವೈಷ್ಣವಿ ನೇರ ಸೆಟ್‌ಗಳಿಂದ ಸ್ವದೇಶದ ಆಟಗಾರ್ತಿಯರಾದ ಸೋಹಾ ಸಾದಿಕ್–ಆಕಾಂಕ್ಷಾ ದಿಲೀಪ್ ನಿಟ್ಟೂರೆ ಅವರನ್ನು ಪರಾಭವಗೊಳಿಸಿದರು.

61 ನಿಮಿಷಗಳ ಆಟದಲ್ಲಿ ಅಂಕಿತಾ–ವೈಷ್ಣವಿ ಜೋಡಿಗೆ 6–2, 6–2 ರಿಂದ ಜಯ ಒಲಿಯಿತು. ಎರಡೂ ಸೆಟ್‌ಗಳಲ್ಲಿ ಎರಡು ಮತ್ತು ಆರನೇ ಗೇಮ್ ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟ ಈ ಜೋಡಿ ಸಂಪೂರ್ಣ ಪಾರಮ್ಯ ಮೆರೆಯಿತು.

ಸಿಂಗಲ್ಸ್‌ನಲ್ಲಿ ಗೆಳತಿಯರ ಮುಖಾಮುಖಿ: ಟೂರ್ನಿಯುದ್ದಕ್ಕೂ ಭರ್ಜರಿ ಲಯದಲ್ಲಿರುವ ಅಂಕಿತಾ ಮತ್ತು ವೈಷ್ಣವಿ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಸುತ್ತಿಗೆ ಕಾಲಿಟ್ಟರು. ಶನಿವಾರ 1 ತಾಸು 11 ನಿಮಿಷಗಳ ಕಾಲ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ವೈಷ್ಣವಿ 6–3, 6–2ರಿಂದ ಅಗ್ರಶ್ರೇಯಾಂಕದ ಯಾಸ್ಮಿನ್ ಜಿಂಬ್ರೆರೆ ಅವರಿಗೆ ಆಘಾತ ನೀಡಿದರು.

ಸೋತು ಗೆದ್ದ ಅಂಕಿತಾ: ಮೊದಲ ಸೆಟ್ ಕೈಚೆಲ್ಲಿದರೂ ಛಲಬಿಡದ ಅಂಕಿತಾ ಅವರಿಗೆ ಸೆಮಿಫೈನಲ್ ಪೈಪೋಟಿಯಲ್ಲಿ 4–6, 6–4, 6–2ರಿಂದ ಆರನೇ ಶ್ರೇಯಾಂಕದ ಥಾಸಪಾರ್ನ್ ನಕ್ಲೊ ಎದುರು ಗೆಲುವು ಒಲಿಯಿತು.

ಪಂದ್ಯದ ಆರಂಭದಲ್ಲಿ ಎಂಟನೇ ಶ್ರೇಯಾಂಕದ ಅಂಕಿತಾ ಕೊಂಚ ಮಂಕಾದಂತೆ ಕಂಡುಬಂದರು. ಆರಂಭದ ಸೆಟ್‌ನ ಮೊದಲ ಗೇಮ್ ಗೆದ್ದು ಆತ್ಮವಿಶ್ವಾಸದಲ್ಲಿದ್ದರು. ಡ್ರಾಪ್‌ಶಾಟ್ ಹಾಗೂ ಉತ್ತಮ ಬೇಸ್‌ಲೈನ್ ಹೊಡೆತಗಳಿಂದ ಸತತ ನಾಲ್ಕು ಗೇಮ್ ಜಯಿಸಿದ ಥಾಯ್ಲೆಂಡ್ ಆಟಗಾರ್ತಿ ಅಂಕಿತಾ ಈ ಸೆಟ್‌ನಲ್ಲಿ ಮೇಲುಗೈ ಸಾಧಿಸಿದರು.

ಎರಡು ಮತ್ತು ಮೂರನೇ ಸೆಟ್‌ಗಳಲ್ಲಿ ಭರ್ಜರಿ ತಿರುಗೇಟು ನೀಡಿದ ಅಂಕಿತಾ, ಎದುರಾಳಿಯ ಎಲ್ಲ ಪ್ರಯತ್ನಗಳನ್ನು ಹತ್ತಿಕ್ಕಿದರು. ಎರಡು ತಾಸು 43 ನಿಮಿಷ ನಡೆದ ಹಣಾಹಣಿಯಲ್ಲಿ ತವರಿನ ಪ್ರೇಕ್ಷಕರ ಚಪ್ಪಾಳೆ, ಪ್ರೋತ್ಸಾಹ ಅಂಕಿತಾ ಅವರ ಗೆಲುವಿಗೆ ಇನ್ನಷ್ಟು ಬಲ ತುಂಬಿತು.

ಭಾನುವಾರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯ ನಡೆಯಲಿದೆ.



ಡಬಲ್ಸ್ ವಿಭಾಗದಲ್ಲಿ ಗೆದ್ದ ಭಾರತದ ಅಂಕಿತಾ ರೈನಾ ಹಾಗೂ ವೈಷ್ಣವಿ ಅಡ್ಕರ್ ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು ಚಿತ್ರ: ತಾಜುದ್ದೀನ್ ಆಜಾದ್

ಭಾನುವಾರದ ಪುರವಣಿ



ಕೆ.ಆರ್.ಅರ್ಚನಾ

ನಮ್ಮ ನಡುವೆಯೇ ತಣ್ಣಗೆ ತಮ್ಮ ಕೆಲಸ ಮಾಡುತ್ತಾ ಸಮಾಜಮುಖಿಯಾಗಿ ನಿಲ್ಲುವ ಮಹಿಳೆಯರು ಹಲವರು. ಮಕ್ಕಳ ನಡುವೆ ನಿಂತವರು, ಫುಟ್‌ಪಾತ್ ಮೇಲೆ ಹೋರಾಡುವವರು, ಪರದೆ ಮೇಲೆ ಕಾಣಿಸಿಕೊಂಡವರು–ವಿಭಿನ್ನ ಹಾದಿಗಳಲ್ಲಿದ್ದರೂ ಈ ಮೂವರ ನಿಲುವು ಒಂದೇ: ಸಮಾಜದ ಪರ. ಮಹಿಳಾ ದಿನದ ಅಂಗವಾಗಿ ಈ ವಿಶೇಷ.

ನಟ ರಿಷಬ್ ಶೆಟ್ಟಿ ನಿರ್ಮಾಣದ, ಜೈಶಂಕರ್ ಆರ್ಯರ್ ನಿರ್ದೇಶನದ ಸಿನಿಮಾ 'ಶಿವಮ್ಮ ಯರೇಹಂಚಿನಾಳ'. ಬೂಸಾನ್ ಸೇರಿದಂತೆ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪಡೆದ ಈ ಸಿನಿಮಾದಲ್ಲಿ ನಟಿಸಿದವರು ಕೊಪ್ಪಳದ ಯರೇಹಂಚಿನಾಳ ಗ್ರಾಮದ ಶರಣಮ್ಮ ಚೆಟ್ಟಿ. ಹೊಲ–ಮನೆ ಕೆಲಸ ಮಾಡಿಕೊಂಡಿರುವ ಅವರು ಮಾತಾದಾಗ...



ಶರಣಮ್ಮ ಚೆಟ್ಟಿ

ಬಯಲಿನಿಂದ ಶೌಚಾಲಯದವರೆಗೆ...

• ಅಸ್ರಾ ಮಾವಾದ್

ಹದಿನಾಲ್ಕು ವರ್ಷಗಳಾಗುವವರೆಗೂ ಶೌಚಾಲಯವೆಂಬುದು ಏನೆಂಬುದೇ ಕಾಣದ ಪಶ್ಚಿಮಘಟ್ಟದ ಪುಟ್ಟ ಹುಡುಗಿ ಇಂದು ಶೌಚಾಲಯಗಳೇ ಇಲ್ಲದ, ಅಥವಾ ಇದ್ದರೂ ಬಳಕೆಗೆ ಯೋಗ್ಯವಾಗದ ಸ್ಥಳಗಳಲ್ಲಿ ಶೌಚಾಲಯ ನಿರ್ಮಾಣ ಹಾಗೂ ಸ್ವಚ್ಛತೆಯ ಅರಿವು ಮೂಡಿಸಲು ತಂಡ ಕಟ್ಟಿಕೊಂಡು ಹೋರಾಟ ನಡೆಸುತ್ತಿದ್ದಾರೆ.

ಮಂಜು ಮುಸುಕಿದ ಪಶ್ಚಿಮಘಟ್ಟದ ಹಾದಿಗಳಲ್ಲಿ ಬರಿಗಾಲಿನಲ್ಲಿ ಸರ್ಕಾರಿ ಶಾಲೆಯ ಕಡೆಗೆ ಹೆಜ್ಜೆ ಹಾಕುತ್ತಿದ್ದ ಹುಡುಗಿಯೇ ಕೆ.ಆರ್.ಅರ್ಚನಾ. ಇಂದು ಶಾಲೆಗಳ ಮೂಲಸೌಕರ್ಯಗಳಲ್ಲಿ ಅತ್ಯಂತ ಅಗತ್ಯವಾದ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆಗೆ ಅಹರ್ನಿಶಿ ದುಡಿಯುತ್ತಿರುವುದು ಒಂದು ಸಾಮಾಜಿಕ ಪರಿವರ್ತನೆಯ ಕಥೆಯಾಗಿದೆ.

ಅರ್ಚನಾ ಬೆಳೆದ ಮನೆ ಸರಳ ಜೀವನದ ಸಂಕೇತವಾಗಿತ್ತು. ಹವಾಯಿ ಚಪ್ಪಲಿ, ಒಂದು ಮೇಜು, ಕಾಫಿ ಕುಡಿಯಲು ಒಂದು ಸ್ಟೀಲ್ ಗ್ಲಾಸ್–ಇವೇ ಮನೆಯ ಐಷಾರಾಮಿ ವಸ್ತುಗಳು. ಮನೆಯೊಳಗೆ ಸ್ಟೀಲ್ ಗ್ಲಾಸ್‌ನಲ್ಲಿ ಕಾಫಿ ಕುಡಿಯುತ್ತಿದ್ದರೂ, ಸಾರ್ವಜನಿಕ ಸ್ಥಳಗಳಲ್ಲಿ ಜಾತಿಯ ಕಾರಣದಿಂದ ತೆಂಗಿನಕಾಯಿ ಗೆರಟೆಯಲ್ಲಿ ಕಾಫಿ ಕುಡಿಯಬೇಕಾದ ಪರಿಸ್ಥಿತಿಯನ್ನು ಅವರು ಅನುಭವಿಸಿದ್ದಾರೆ. ಆ ಅನುಭವಗಳು ಅವರ ಮನಸ್ಸಿನಲ್ಲಿ ಎಂದೆಂದಿಗೂ ಅಳಿಸಲಾಗದ ಗುರುತುಗಳನ್ನು ಬಿಟ್ಟವು.

ಅರ್ಚನಾ ಅವರ ತಂದೆ ಸಕಲೇಶಪುರದ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಆದರೆ ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ ಶೌಚಾಲಯ ಇರಲಿಲ್ಲ. ಬಯಲಿನಲ್ಲಿ ಶೌಚಕ್ಕೆ ಹೋಗುವುದು ದಿನನಿತ್ಯದ ಜೀವನದ ಭಾಗವಾಗಿತ್ತು. ಆದರೆ ಅದು ಸುಲಭದ ಸಂಗತಿಯೇನೂ ಅಲ್ಲ. ಹಾವುಗಳ ಭಯ, ಜನರ ಓಡಾಟದಿಂದ ಸಂಕೋಚ–ಇವು ಎಳೆಮನಸ್ಸನ್ನು ಭಾರಗೊಳಿಸುತ್ತಿದ್ದವು.

ಬಯಲಿನಲ್ಲಿ ಮೂತ್ರ ವಿಸರ್ಜನೆ ಮಾಡಲು ಮನಸ್ಸಾಗದೆ, ಕೆಲವೊಮ್ಮೆ ದಿನಗಟ್ಟಲೆ ನೀರು ಕುಡಿಯದೆ ತಾಳಿಕೊಳ್ಳುವುದು ಅವರಿಗೆ ರೂಢಿಯಾಗಿತ್ತು. ಕನಿಷ್ಠ ಸೀರೆ ತಟ್ಟಿಯಾದರೂ ಇದ್ದರೆ ನಿರಾಳವಾಗಿ ನೈಸರ್ಗಿಕ ಕ್ರಿಯೆ ಮುಗಿಸಬಹುದಲ್ಲ ಎಂಬ ಆಲೋಚನೆ ಅವರ ಮನಸ್ಸಿನಲ್ಲಿ ಆಗಾಗ್ಗೆ ಮೂಡುತ್ತಿತ್ತು.

'ಸ್ವಚ್ಛತೆಗೆ ಅಷ್ಟೊಂದು ಮಹತ್ವ ಕೊಡಬೇಕಿಲ್ಲ ಎಂಬ ನಂಬಿಕೆಯಲ್ಲಿ ನಾನು ಬೆಳೆದಿದ್ದೆ. ಆದರೆ ದೊಡ್ಡವಳಾದಂತೆ ಅದು ಒಂದು ದೊಡ್ಡ ನ್ಯೂನತೆ ಎಂದು ಅರಿವಾಯಿತು. ಇಂದಿಗೂ ಅನೇಕ ಕಡೆಗಳಲ್ಲಿ ಇದೇ ಪರಿಸ್ಥಿತಿ ಮುಂದುವರಿದಿರುವುದನ್ನು ನೋಡಿದಾಗ ನೋವಾಗುತ್ತದೆ' ಎನ್ನುತ್ತಾರೆ ಅರ್ಚನಾ.

ತಮ್ಮ ಗ್ರಾಮ ನೆಲಗಹಳ್ಳಿಯನ್ನು ಬಿಟ್ಟು ಸಮಾಜ ಅಧ್ಯಯನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಅವರು ಬೆಂಗಳೂರಿಗೆ ಬಂದರು.

14ನೇ ಪುಟಕ್ಕೆ...

ಪಾಲಂನ ಪ್ರಭೇಚಿಯ ಫುಟ್‌ಪಾತ್ ಹೋರಾಟ

• ಅಬ್ದುಲ್ ರಹಿಮಾನ್

ಕೆಂಪು ಸಿಗ್ನಲ್. ಮಧ್ಯಾಹ್ನದ ಬಿಸಿಲು. ಎರಞಿಪಾಲಂನ ಜಂಕ್ಷನ್‌ನಲ್ಲಿ ವಾಹನಗಳ ಸಾಲು... ಕಾರುಗಳ ಹಾರ್ನ್, ಬಸ್‌ಗಳ ಗರ್ಜನೆ, ಜನರ ಓಡಾಟ–ನಗರ ತನ್ನದೇ ಗಡಿಬಿಡಿಯಲ್ಲಿ ಮುಳುಗಿದೆ. ಅಷ್ಟರಲ್ಲಿ ಒಂದು ಸ್ಕೂಟರ್ ಸಾಲಿನಿಂದ ಹೊರಬಂದು ಫುಟ್‌ಪಾತ್‌ಗೆ ನುಗ್ಗುತ್ತದೆ. ಪಾದಚಾರಿಗಳು ಬೆಚ್ಚಿಬಿದ್ದು ಬದಿಗೆ ಸರಿಯುತ್ತಾರೆ. ಕೆಲವರು ಅಸಹನೆಯ ನೋಟ ಬೀರುತ್ತಾರೆ. ಯಾರೂ ಮಾತಾಡುವುದಿಲ್ಲ.

ಆ ಕ್ಷಣದಲ್ಲಿ, ನೆರೆಕೂದಲನ್ನು ಹಿಂದೆ ಕಟ್ಟಿಕೊಂಡು, ಸೀರೆ ಉಟ್ಟ ವೃದ್ಧೆಯೊಬ್ಬರು ಫುಟ್‌ಪಾತ್ ಮಧ್ಯೆ ನಿಂತುಕೊಳ್ಳುತ್ತಾರೆ. ಅವರ ಕಣ್ಣುಗಳಲ್ಲಿ ಭಯವಿಲ್ಲ, ಧ್ವನಿಯಲ್ಲಿ ನಡುಕುವಿಲ್ಲ.

'ಇದು ಪಾದಚಾರಿಗಳ ರಸ್ತೆ. ಹಿಂದಕ್ಕೆ ಹೋಗಿ'

ಸ್ಕೂಟರ್ ಸವಾರ ಅಚ್ಚರಿಯಿಂದ ನೋಡುತ್ತಾನೆ. 'ಪಕ್ಕಕ್ಕೆ ಸರಿಯಿರಿ' ಎಂದು ಅವನೇ ಸೂಚನೆ ಕೊಡಲು ಯತ್ನಿಸುತ್ತಾನೆ. ಆದರೆ ಆ ವೃದ್ಧೆ ಒಂದು ಹೆಜ್ಜೆಯೂ ಹಿಂದಕ್ಕೆ ಸರಿಯುವುದಿಲ್ಲ. ಅವನು ಮುನ್ನುಗ್ಗಲು ಪ್ರಯತ್ನಿಸುತ್ತಾನೆ. ಅವರು ಕಾಲು ಅಡ್ಡಗಟ್ಟಿ ನಿಲ್ಲಿಸುತ್ತಾರೆ. ಬ್ಯಾಗ್‌ನಿಂದ ಮೊಬೈಲ್ ತೆಗೆದು ವಾಹನದ ಸಂಖ್ಯೆ ದಾಖಲಿಸಲು ಮುಂದಾಗುತ್ತಾರೆ. ಕ್ಷಣಕಾಲ ತೀವ್ರ ಮೌನ. ನಂತರ ಸ್ಕೂಟರ್ ಹಿಂದಿರುಗಿ ರಸ್ತೆಗೆ ಇಳಿಯುತ್ತದೆ.

ಪಕ್ಕದ ಕಟ್ಟಡದ ಮಳಿಗೆಯ ಮೇಲ್ಛಾವಣಿಯಿಂದ ಈ ದೃಶ್ಯವನ್ನು ಯಾರೋ ಚಿತ್ರೀಕರಿಸುತ್ತಾರೆ. ವಿಡಿಯೊ ಸಾಮಾಜಿಕ ಜಾಲತಾಣಕ್ಕೆ ತಲುಪಿದ ಕ್ಷಣದಿಂದಲೇ ಅದು ಕಾಳ್ಗಿಚ್ಚಿನಂತೆ ಹರಡುತ್ತದೆ.

'ಸಿಂಗಂ ಪೆಣ್ಣೆ!'

'ಇದನ್ನೇ ನಾಗರಿಕ ಧೈರ್ಯ ಅಂದ್ರು!'

'73ರಲ್ಲಿ ಇಷ್ಟೊಂದು ಆತ್ಮವಿಶ್ವಾಸ!'



ನಾ ದಾರಿ ಬಿಡೋಲ್ಲ...ಇದು ಪಾದಾಚಾರಿ ರಸ್ತೆ.



ಪ್ರಭಾವತಿ

'ಫುಟ್‌ಪಾತ್‌ಗಾಗಿ ಹೋರಾಡಿದ ನಿಜವಾದ ನಾಯಕಿ!'

ಥಮ್ಸ್ ಅಪ್ ತೋರಿಸುತ್ತಿರುವ ಆ ವೃದ್ಧೆಯ ಚಿತ್ರ ವೈರಲ್ ಆಗುತ್ತದೆ. ಸಾವಿರಾರು ಶೇರ್‌ಗಳು. ಲಕ್ಷಾಂತರ ವೀಕ್ಷಣೆಗಳು. ಪ್ರಶಂಸೆಯ ಸುರಿಮಳೆ.

ಆ ವೃದ್ಧೆ– 73 ವರ್ಷದ ಪ್ರಭಾವತಿ. ಕೋಯಿಕ್ಕೋಡ್‌ನ ಜನಪ್ರಿಯ 'ಪ್ರಭೇಚಿ'.

'ಈ ಅನುಭವ ನನಗೆ ಹೊಸದೇನಲ್ಲ'

'ಫುಟ್‌ಪಾತ್‌ನಲ್ಲಿ ವಾಹನ ತಡೆದದ್ದು ಇದೇ ಮೊದಲಲ್ಲ' ಎಂದು ಅವರು ಸಮಾಧಾನದಿಂದ ಹೇಳುತ್ತಾರೆ.

15ನೇ ಪುಟಕ್ಕೆ...

ಯರೇಹಂಚಿನಾಳದ ಶರಣಮ್ಮ ಈಗ ಎಲ್ಲರ ಶಿವಮ್ಮ!

• ಶರಣಮ್ಮ ಚೆಟ್ಟಿ

ಹಳ್ಳ್ಯಾಗ ಬೆಳ್ದಾವ್ರು ನಾವ್. ಊರ್‌ಕಡೆ ಬಸವಣ್ಣನ ಹಬ್ಬ ಗ್ರ್ಯಾಂಡ್ ಆಗತ್ರೀ. ಅಲ್ಲೆ ಒಳ್ಳೊಳ್ಳೆ ನಾಟ್ಕ ಬರ್ತಿತ್ರಿ. ನಾಟ್ಕ ಐತಿ ಅಂದ್ರೆ ನಿದ್ದೆ ಮಾಡಲ್ರಿ. ಆವಾಗ ಯಲಬುರ್ಗದಾಗ ಒಂದ್ ಸಿನ್ಮಾ ಬಿದ್ದಿತ್ರಿ. ಬಂಡಿ ಕಟ್ಕೊಂಡು ಹೋಗಿ ಅಣ್ಣತಂಗಿ, ಸತಿ ಸಕ್ಕೂಬಾಯಿ, ಯಜಮಾನ ನೋಡೇನ್ರಿ. ಜಾಸ್ತಿ ಅಂದ್ರ ಟಿವ್ಯಾಗ ಸಿನ್ಮಾ ನೋಡಿದ್ವಿ ಅಷ್ಟ. ಆಗೆಲ್ಲಾ ಕನ್ಸುಮನಸನ್ಯಾಗೂ ಸಿನ್ಮಾದಾಗ ಬರ್ತೀನಿ ಅಂತ ಅದ್ಕೊಂಡಿರ್ಲಿಲ್ಲ!

ಈಗ ಒಂದ್ ಕನಸನಂಗ ಎಲ್ಲಾ ಕಣ್ಮುಂದೈತ್ರಿ. ಅಂದಂಗ ನಮ್ ಹುಟ್ಟೂರು ಯಲಬುರ್ಗಾ ಹತ್ರ ಇರೊ ಬಂಡಿಹಾಳ್ರಿ. ನಾನ್ ಸಾಲಿಗೇ ಹೋಗಿಲ್ಲ. ಆವಾಗ ಎಲ್ ಸಾಲಿ, ಮನೇಲಿ ಬಡ್ತಾನಾ ತಮ್ಮಾರಾ. ಪರಿಸ್ಥಿತಿ ಬಾಳಾ ಗಂಭೀರಿತ್ರಿ. ನಾನ್ ಸಣ್ಣಾಕಿ ಇರೋದ್ರಾಗ ಅಣ್ಣಗ ಮದ್ವೆ ಆತ್ರಿ. ಅತ್ತಿಗೆ ಬಂದ್ಲು. ವರ್ಷಕ್ಕೊಂದು ಡೆಲಿವ್ರಿ ಅಂಗ ಆರು ಮಕ್ಳು ಹೆತ್ರು. ಅಕ್ಕ ಗಂಡನ ಮನೆಗೆ ಹೋದ್ಲು. ನಾನು ನಡುವಿನ್ಯಾಕಿ. ಹೊಲ ಮನೆ ಕೆಲ್ಸನೇ ಭಾಳ ರೂಢಿ ಆಗೈತ್ರಿ. ಅಣ್ಣವ್ರ್ ಮಕ್ಳ ಜೊತೆ ಜೋಳ, ಕಡ್ಲೆ ಕೀಳೋದು ಮಾಡ್ತಿದ್ದೆ. ವೈನಿಯವ್ರ್ ಮಕ್ಳ್ ಜೊತೆಗೇ ಅಂಗನವಾಡಿಗೆ ಹೋಗಿ ಸಾಕ್ಷರತ ಸಾಲಿ ಮೂಲಕ ಪೆನ್ನಿನ ಸಹಿ ಮಾಡೋದು ಬಂತ್ರಿ. ಅ..ಆ..ಇ..ಈ.. ಅಕ್ಷರಗಳನ್ನ, ಹತ್ರ ತಾನ ಮಗ್ಗೀನ ಕಲ್ತಿದ್ದೀನ್ರಿ. ಶಾಲೆ ಕಲ್ತಿದ್ರೆ ಬಿಗ್‌ಬಾಸ್ ಕದಾನೇ ಬಡೀತಿದ್ದೆ ನೋಡ್ರಿ!

ಹಿಂಗ್ ಜೀವ್ನ ಸಾಗಿ ಮದ್ವೆ ಆತು. ಲಗ್ನ ಆಗಿರೋ ವರ್ಷ್ ನೆನ್‌ಪಿಲ್ರಿ. ಏಳು ವಯಸ್ಸು ನೋಡಿ ಆಗ. ಅಕ್ಕಂದು ಮೊದ್ಲು ಆತ್ರಿ ಜೋಡಿಯಾಗ ನಂದೂ ಆತು. ಆಗೆಲ್ಲ ಸಣ್ ವಯಸ್ಸಿಗಾ ಲಗ್ನ ಸಾಮಾನ್ಯ ಆಗಿತ್ರಿ. ಈಗೆಲ್ಲ ಕಾನೂನು ಬಂದೈತಿ. ತಿಳಿವಳ್ಕೆ ಇಲ್ದೆ ಮದ್ವೆ ಮಾಡಿಕೊಟ್ರು. ಹಿಂಗ ಚನ್ನಪ್ಪ ಅವ್ರನ್ನ ಮದ್ವೆ ಆಗಿ ಯರೇಹಂಚಿನಾಳಕ್ಕ ಬಂದೆ. ಅವ್ರೂ ರೈತ್ರು. ನಾನಾದ್ರೂ ಚೂರು ಸಹಿ ಮಾಡೋಕ, ಮಾತಾಡೋಕಾ ಕಲ್ತಿದ್ದೀನ್ರಿ. ಅವ್ರು ಹಳ್ಳಿ ಮಂದಿ ಥರಾ ಭಾಳಾ ನಾಚ್ಕೆ. ನಮಗಿರೊ ಇಬ್ರೂ ಹೆಣ್ಮಕ್ಕಳಿಗೆ ಮದ್ವೆ ಮಾಡಿ ಕೊಟ್ಟೀವ್ರೀ.

ಹೀಗಿರೋವಾಗ ಒಂದಿನ ಜೈಶಂಕರ್ ಮನ್ಗೆ ಹೋಗಿದ್ದೆ. ನನ್ ಮಾತ್ ಕೇಳಿ ನನ್ನ ಹುಡ್ಕೊಂಡ್ ಮನ್ಗೆ ಬಂದಿದ್ದ. ನಾನು ಆಕ್ಳ ಹಾಲ್ ಹಿಂಡಾಕತ್ತಿದ್ದೆ. ಜೈಶಂಕರ್ ಬಂದ್ ಸಿನ್ಮಾ ಮಾಡ್ತೀರಾ ಅಂದ್ರು. ನಾನು ತಮಾಷೆಗೆ ಅನ್ಕೊಂಡೆ. 'ಜಾಸ್ತಿ ಅಂದ್ರ ದೊಡ್ಡಾಟ ನೋಡಿನ್ರೀ..ಹೊಲ್ದಾಗ ಹಾಡ್ತಿದ್ವಿ ಅಷ್ಟೇ. ಪಿಚ್ಚರ್ ಅಂದ್ರ ಭಯ ಐತ್ರಿ. ಒಲ್ರಿ ನಾವು ಬೆಂಗಳೂರಿಗೆ ಬಂದ್ ಸಿನ್ಮಾ ಮಾಡಕ್ಕ ಆಕ್ಕತ್ತೇನ್ರಿ' ಅಂದಿದ್ನಿರಿ. ಅಲ್ದೆ ಮದ್ವೆಗೆ ರೊಟ್ಟಿ ಮಾಡೋದು, ಹೊಲ್ದಲ್ಲಿ ಕೆಲ್ಸ ಮಾಡೋದು ಬಿಟ್ ಬರೋದೆಂಗೆ ಅಂತ ಕೇಳಿದ್ದೆ.

ಆದ್ರ ಜೈಶಂಕರ್ ಶೂಟಿಂಗ್‌ಗ ಹಗರಿಬೊಮ್ಮನಹಳ್ಳಿ, ಕುಷ್ಟಗಿ, ಯಲಬುರ್ಗಾ, ಗಂಗಾವತಿ ಸುತ್ತಹಳ್ಳಿಗೆ ಕರ್ಕೊಂಡು ಸುತ್ತಾಡ್ದಾಗ ಧೈರ್ಯ ಬಂತ್ರಿ. ಚನ್ನಪ್ಪೋರೂ ಬೆಂಬ್ಲ ಇತ್ರಿ. ನಾವ್ ಹಳ್ಳಿಯೋರ್ ಇದ್ದಿದ್ದು ಒದ್ರಿ ಬಿಡ್ತೀವಿ. ಮಾತು ಇಷ್ಟೇ ಸ್ಪೀಡು. ಮಾತಾಗ ಕಪಟ ಇಲ್ರಿ. ಸಿನ್ಮಾದಲ್ಲಿ ನಟ್ನೆ ಕಷ್ಟ್ ಆದ್ರೂ ಮಾತು ಸಲೀಸಾತು.



13ನೇ ಪುಟಕ್ಕೆ...

ಬೆಳಕನಿಟ್ಟು ತೂಗಿದಾಕೆ, ಸಾಧನೆ ಶಿಖರ ಏರಿದಾಕೆ



ಪ್ರಜಾವಾಣಿ ಸಾಧಕಿಯರು 2026

ನಮ್ಮ ಸಮಾಜದ ಚಾಲಕ ಶಕ್ತಿಯಾದ ಮಹಿಳೆಯರ ನಿಸ್ವಾರ್ಥ ಸೇವೆ ಮತ್ತು ಸಾಧನೆಯನ್ನು ಗುರುತಿಸಲು ಎರಡು ವರ್ಷಗಳ ಹಿಂದೆ ಆರಂಭಿಸಲಾದ 'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿಗೆ ಇದೀಗ ಸಾರ್ಥಕ ಮೂರನೇ ವರ್ಷಕ್ಕೆ ಕಾಲಿಟ್ಟ ಸಂಭ್ರಮ. ಸಾಧಕಿಯರನ್ನು ಎಲೆಮರೆಯಿಂದ ಹೆಕ್ಕಿ ತೆಗೆದು, ಗುರುತಿಸಿ, ಗೌರವಿಸಿದ ಶ್ರೇಯ ಈ ಪ್ರಶಸ್ತಿಯದು. ನಮ್ಮ ಸುತ್ತಲಿನ ಸಮಾಜ ಇಂದು ಇಷ್ಟು ಸಹ್ಯವಾಗಿ ಉಳಿಯುವಲ್ಲಿ ಸ್ತ್ರೀಶಕ್ತಿಯೇ ಪ್ರಧಾನ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಆ ಶಕ್ತಿ ಅಷ್ಟೊಂದು ಢಾಳಾಗಿ ಪ್ರಕಟಗೊಳ್ಳದೆ 'ಅದೃಶ್ಯ'ವಾಗಿ ಉಳಿದಿದೆ. ಸುತ್ತಲ ಸಮಾಜದ ಪರಿವರ್ತನೆಗೆ ಕಾರಣರಾದ ಅಸಾಮಾನ್ಯ ಸಾಧಕಿಯರ ಯಶೋಗಾಥೆಗಳನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶದ ಈ ಪ್ರಶಸ್ತಿಯು ಅಂತಹ ಮತ್ತೊಂದು ಸಾಧಕಿಯರ ತಂಡದೊಂದಿಗೆ ಈಗ ನಿಮ್ಮ ಮುಂದೆ ಬಂದಿದೆ. ಇದೋ ಈ ಸಾಲಿನ ಸಾಧಕಿಯರು ಇಲ್ಲಿದ್ದಾರೆ.

ಅವಳ ಸಾಧನೆ ಸಂಭ್ರಮಿಸೋಣ
ನಮ್ಮ ಜಗವ ಬೆಳಗೋಣ...



ಎಸ್. ಆಶಾ
ಕೆರೆ, ಕಟ್ಟೆಗಳಿಗೆ ಪುನಶ್ಚೇತನ ನೀಡಿ ಗ್ರಾಮೀಣರ ಬದುಕು ಹಸನಾಗಿಸಿದ ಪರಿಸರ ಕಾರ್ಯಕರ್ತೆ



ಟಿ.ಸಿ. ದೀಪಿಕಾ
ಅಂಧತ್ವ ಮೆಟ್ಟಿನಿಂತು, ದೇಶಕ್ಕೆ 'ಅಂಧ ಮಹಿಳೆಯರ ಟಿ–20 ವಿಶ್ವಕಪ್ ಕ್ರಿಕೆಟ್' ಟ್ರೋಫಿ ಗೆದ್ದುಕೊಟ್ಟ ಅನನ್ಯ ಪ್ರತಿಭೆ



ಗಿರಿಜಮ್ಮ ಸಾರಂಗ
ಜನಪದ ಗಾಯನದ ಮೂಲಕ ಪರಂಪರೆಯ ಕೊಂಡಿಯಾಗಿರುವ ಅಪರೂಪದ ಗಾಯಕಿ



ಸವಿತಾ
ಅಂಗವೈಕಲ್ಯವನ್ನು ಮೆಟ್ಟಿನಿಂತು, ಬೈಕ್‌ನಲ್ಲಿ ಆಹಾರ ಪೂರೈಕೆ ಮಾಡುವ ಛಲಗಾತಿ



ಜಾನು
ಮಾತನಾಡುವ ಗೊಂಬೆ ಕಲೆಯ ದೇಶದ ಪ್ರಥಮ ಲಿಂಗತ್ವ ಅಲ್ಪಸಂಖ್ಯಾತ ಕಲಾವಿದೆ

ಶಿವಲೀಲಾ ಸಿ. ಪಾಟೀಲ
ಗಾರ್ಮೆಂಟ್ಸ್ ಉದ್ಯಮ ಸ್ಥಾಪಿಸಿ 70 ಮಹಿಳೆಯರಿಗೆ ಉದ್ಯೋಗ ನೀಡಿದ ಉದ್ಯಮಿ





ರಾಗಿಣಿ
ರಾಗಿ ಉತ್ಪನ್ನಗಳ ತಯಾರಿಕಾ ಘಟಕ ಸ್ಥಾಪಿಸಿ ಇತರರಿಗೆ ಪ್ರೇರಣೆಯಾದ ಬುಡಕಟ್ಟು ಮಹಿಳೆ





ಕಮಲಮ್ಮ
ಗುಡ್ಡಗಾಡು ಪ್ರದೇಶದ ಹಳ್ಳಿಗಳಲ್ಲಿ 200ಕ್ಕೂ ಅಧಿಕ ಹೆರಿಗೆ ಮಾಡಿಸಿರುವ ಸೂಲಗಿತ್ತಿ



ಶಂಕರವ್ವ ಲಮಾಣಿ
ರೋಡ್ ರೋಲರ್ ಚಲಾಯಿಸುವ ಛಲಗಾತಿ. ಮೇಸ್ತ್ರಿಯಾಗಿ 30 ಮಂದಿಗೆ ಕೆಲಸ ನೀಡಿರುವ 'ಅವ್ವ'

ಎಂ. ಗೌಸಿಯಾ ಖಾನ್
'ಬಳ್ಳಾರಿ ಗಣಿ ಧಣಿ'ಗಳ ಎದುರು ಏಕಾಂಗಿಯಾಗಿ ಹೋರಾಡಿ ತುಂಡು ಭೂಮಿಯನ್ನು ಉಳಿಸಿಕೊಂಡ ದಿಟ್ಟೆ

ಏಷ್ಯಾದ ಮೊದಲ ಮೇಲ್ಗಾಲುವೆ...



ಬಂಗಾರದೊಡ್ಡಿ ನಾಲೆಗೆ ನಿರ್ಮಿಸಿರುವ ಅಕ್ವಾಡಕ್ಟ್ (ಮೇಲ್ಗಾಲುವೆ)



ಕಂಠೀರವ ನರಸರಾಜ ಒಡೆಯರ್ ವಿಗ್ರಹ

• ಚಿತ್ರ–ಬರಹ: ಗಣಂಗೂರು ನಂಜೇಗೌಡ

'ಕೆರೆಯಂ ಕಟ್ಟಿಸು, ದೇವಾಗಾರಮಂ ನಿರ್ಮಿಸು, ಬಾವಿಯಂ ಸಮೆಸು...'

ಜನಪರ ಕಾಳಜಿಯ ತಾಯಿಯೊಬ್ಬಳು ಹೇಳಿದ ಈ ಮಾತುಗಳನ್ನು ದೊರೆ ಕಂಠೀರವ ನರಸರಾಜ ಒಡೆಯರ್ ಅಕ್ಷರಶಃ ಪಾಲಿಸಿದ್ದಾರೆ. ಮೈಸೂರು ಒಡೆಯರ್ ವಂಶದ ಈ ಶೂರರಾಜನು ಕೇವಲ ಯುದ್ಧರಂಗದ ವೀರನಲ್ಲ; ನೀರಾವರಿ ವ್ಯವಸ್ಥೆಯಲ್ಲಿ ದೂರದೃಷ್ಟಿಯನ್ನೂ ತೋರಿದ ಆಡಳಿತಗಾರ. ಆ ದೃಷ್ಟಿಯ ಜೀವಂತ ಸಾಕ್ಷಿಯೇ ಬಂಗಾರದೊಡ್ಡಿ ನಾಲೆ.

ರಾಜಧಾನಿ ಶ್ರೀರಂಗಪಟ್ಟಣದಿಂದ ಸುಮಾರು ಮೂರು ಕಿಲೋಮೀಟರ್ ಪಶ್ಚಿಮಕ್ಕೆ, ಕಾವೇರಿ ನದಿ ಕವಲಾಗಿ ಒಡೆಯುವ ಸ್ಥಳದಲ್ಲಿ ಕ್ರಿ.ಶ. 1646ರಲ್ಲಿ 568 ಅಡಿ ಉದ್ದದ ಅಣೆಕಟ್ಟೆ ನಿರ್ಮಿಸಲಾಯಿತು. ಕಾಡುಗಲ್ಲು ಮತ್ತು ಸುರಕಿ ಗಾರೆಯಿಂದ ಕಟ್ಟಿದ ಈ ಒಡ್ಡಿನ ಎಡ ಮಗ್ಗುಲಿನಿಂದ ಆರಂಭವಾದ ಕಾಲುವೆ, ಸುಮಾರು 8 ಕಿಲೋಮೀಟರ್ ದೂರ ಹರಿದು 864 ಎಕರೆ ಕೃಷಿಭೂಮಿಗೆ ನೀರೊದಗಿಸಿತು. ಸೀಳುಗಳನ್ನು ಸೇರಿಸಿದರೆ ನಾಲೆಯ ಒಟ್ಟು ಉದ್ದ 15.23 ಕಿಲೋಮೀಟರ್‌ಗಳು.



ಶ್ರೀರಂಗಪಟ್ಟಣದಲ್ಲಿ ಹರಿಯುವ ಬಂಗಾರದೊಡ್ಡಿ ನಾಲೆ

ಬಂಗಾರದೊಡ್ಡಿ ನಾಲೆ

50 ಕ್ಯೂಸೆಕ್ ನೀರು ಹರಿಸುವ ಸಾಮರ್ಥ್ಯ ಹೊಂದಿದ್ದ ಈ ನಾಲೆ, ಗೂಳಿತಿಟ್ಟು ಬಳಿ ಆರಂಭವಾಗಿ ಹೊಲಗಳತ್ತ ಸಾಗುತ್ತದೆ. ಆರಂಭದಿಂದ ಮೂರು ಕಿಲೋಮೀಟರ್ ಬಳಿಕ ಕಾವೇರಿ ನದಿಯನ್ನು ದಾಟಲು ನಿರ್ಮಿಸಲಾದ ಮೇಲ್ಗಾಲುವೆ (ಅಕ್ವಾಡಕ್ಟ್) ಅದರ ವೈಶಿಷ್ಟ್ಯ.

ನದಿಯ ಮಟ್ಟದಿಂದ ಸುಮಾರು 30 ಅಡಿ ಎತ್ತರದಲ್ಲಿ ನಿರ್ಮಿತವಾದ ಮೇಲ್ಗಾಲುವೆ, ಸುಮಾರು 300 ಅಡಿ ಉದ್ದವಿದೆ. ಕಲ್ಲು ಚಪ್ಪಡಿಗಳು, ಸುಟ್ಟ ಇಟ್ಟಿಗೆ, ಸುರಕಿ ಗಾರೆ ಬಳಸಲಾಗಿದೆ. ಆದರೆ ಕಬ್ಬಿಣದ ಲವಲೇಶವೂ ಇಲ್ಲ! ಈ ರಚನೆ ಏಷ್ಯಾದ ಮೊದಲ ಮೇಲ್ಗಾಲುವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎನ್ನುವುದು ಸ್ಥಳೀಯ ಇತಿಹಾಸಕಾರರ ಅಭಿಪ್ರಾಯ.

ಉತ್ತರ ತುದಿಯಲ್ಲಿ ಇದು ಮೂರು ಸೀಳುಗಳಾಗಿ ಕವಲೊಡೆಯುತ್ತದೆ: ಒಂದು ಸೀಳು ಶ್ರೀರಂಗಪಟ್ಟಣ ಕೋಟೆಯತ್ತ ನೆಲಾಂತರ್ಗತವಾಗಿ. ಮತ್ತೊಂದು ದರಿಯಾ ದೌಲತ್ ಬಾಗ್ ಕಡೆ. ಇನ್ನೊಂದು ಗುಂಬಜ್ ಸ್ಮಾರಕ ಎದುರು ಹರಿದು ಸಂಗಮದ ಬಳಿ ಕಾವೇರಿಗೆ ಸೇರುತ್ತದೆ. ರಂಗನತಿಟ್ಟು ಪಕ್ಷಿಧಾಮ ಈ ನಾಲೆಗೆ ಕೂಗಳತೆ ದೂರದಲ್ಲಿದೆ.

ಫ್ರಾನ್ಸ್‌ನ ಮಾದರಿಗೂ ಸಾಟಿ

ಫ್ರಾನ್ಸ್‌ನ ಪಾಂಟ್ ದು ಗಾರ್ಡ್ ಬಳಿ ರೋಮನ್ನರು ಕ್ರಿ.ಶ. ಮೊದಲ ಶತಮಾನದಲ್ಲಿ ನಿರ್ಮಿಸಿದ ಅಕ್ವಾಡಕ್ಟ್ ವಿಶ್ವ ಪಾರಂಪರಿಕ ತಾಣವಾಗಿ ಗುರುತಿಸಲಾಗಿದೆ. ಅದಕ್ಕೆ ಸಮಾನ ವಿನ್ಯಾಸದ ಬಂಗಾರದೊಡ್ಡಿ ಮೇಲ್ಗಾಲುವೆ ಮೂರೂವರೆ ಶತಮಾನಗಳಿಂದ ನಿಂತಿದ್ದರೂ, ಇದುವರೆಗೆ ಸ್ಮಾರಕ ಪಟ್ಟಿಗೆ ಸೇರಿಸಿಲ್ಲ. ನಿರ್ವಹಣೆಯ ಕೊರತೆಯಿಂದಾಗಿ ಮೂಲ ಮೇಲ್ಗಾಲುವೆ ಶಿಥಿಲಾವಸ್ಥೆಗೆ ತಲುಪಿದೆ. ಇತ್ತೀಚಿನ ವರ್ಷಗಳಲ್ಲಿ ಅದರ ಪಕ್ಕದಲ್ಲೇ ಸಿಮೆಂಟ್ ನಾಲೆ ನಿರ್ಮಿಸಿ ನೀರು ಹರಿಸಲಾಗುತ್ತಿದೆ.

ಶೂರನ ಪ್ರೇಮಕಥೆ

ಮಲ್ಲಯುದ್ಧದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಕಂಠೀರವ, ತಿರುಚಿನಾಪಳ್ಳಿಯ ಜಟ್ಟಿಯೊಬ್ಬನನ್ನು ಸೋಲಿಸಿ 'ರಣಧೀರ' ಬಿರುದು ಪಡೆದ. ಇದರಿಂದ ಕುಪಿತನಾದ ಪಾಳೇಗಾರನು ದೊಡ್ಡಮ್ಮಣ್ಣಿ ಎಂಬ ನೃತ್ಯಗಾತಿ ಮತ್ತು 25 ಮಂದಿ ಜಟ್ಟಿಗಳನ್ನು ಮೋಸದ ಮೂಲಕ ಕಳುಹಿಸಿದ. ಆದರೆ ಅರಸ ತನ್ನ 'ವಿಜಯನಾರಸಿಂಹ' ಕತ್ತಿಯಿಂದ ಅವರನ್ನು ಸಂಹರಿಸಿದ. ಅಪ್ರತಿಮ ಸಾಹಸಕ್ಕೆ ಮನಸೋತ ದೊಡ್ಡಮ್ಮಣ್ಣಿ ಅರಸನ ಉಪಪತ್ನಿಯಾದಳು. ಆಕೆಯನ್ನು ಅಕ್ಕರೆಯಿಂದ 'ಬಂಗಾರಿ' ಎಂದು ಕರೆಯಲಾರಂಭಿಸಿದ.

ಪರೋಪಕಾರ ಗುಣ ಸಂಪನ್ನೆಯಾದ ಬಂಗಾರಿ, ಜನೋಪಯೋಗಿ ಕಾರ್ಯವಾಗಿ ನಾಲೆ ನಿರ್ಮಿಸಲು ಮನವಿ ಮಾಡಿದ್ದಾಳೆ ಎನ್ನುವುದು ಇತಿಹಾಸದ ಪುಟಗಳ ಉಲ್ಲೇಖ. ಪ್ರೇಯಸಿಯ ಮಾತಿಗೆ ಓಗೊಟ್ಟ ಅರಸ, ಕಾವೇರಿಗೆ ಒಡ್ಡು ಕಟ್ಟಿಸಿ, ನಾಲೆ ತೋಡಿಸಿ ಅದಕ್ಕೆ 'ಬಂಗಾರದೊಡ್ಡಿ ನಾಲೆ' ಎಂಬ ಹೆಸರಿಟ್ಟ.

ರೈತರ ಬದುಕಿನಲ್ಲಿ ಹರಿದ ಬಂಗಾರಿ

ಸುಮಾರು ನಾಲ್ಕು ಶತಮಾನಗಳ ಹಿಂದೆ ನಿರ್ಮಿತವಾದ ಈ ಕಾಲುವೆ, ಅನೇಕ ತಲೆಮಾರುಗಳ ರೈತರ ಬದುಕನ್ನು ಹಸಿರಾಗಿಸಿದೆ. ಬಂಗಾರಿ ಕೇವಲ ಅರಮನೆಯ ಪ್ರೇಯಸಿಯಾಗಿರಲಿಲ್ಲ; ಹೊಲಗಳ ಹಸಿರಾಗಿ, ರೈತರ ನಂಬಿಕೆಯಾಗಿಯೂ ಹರಿದಳು.

ಸಂರಕ್ಷಣೆಯ ಅಗತ್ಯ

ಮೂರು ಪದರಗಳ ಅಸಾಧಾರಣ ವಿನ್ಯಾಸ ಹೊಂದಿರುವ ಈ ಮೇಲ್ಗಾಲುವೆ, ದಕ್ಷಿಣ ಭಾರತದ ಜಲವಾಸ್ತುಶಿಲ್ಪದ ಅಪೂರ್ವ ಉದಾಹರಣೆ. ಆದರೆ ಅಧಿಕೃತ ಪಾರಂಪರಿಕ ಮಾನ್ಯತೆ ಇನ್ನೂ ಸಿಕ್ಕಿಲ್ಲ. ನೀರಾವರಿ ವ್ಯವಸ್ಥೆ, ಇತಿಹಾಸ, ಪ್ರೇಮಕಥೆ– ಇವೆಲ್ಲವೂ ಒಂದೇ ಕಾಲುವೆಯಲ್ಲಿ ಹರಿಯುವ ಈ ತಾಣ ಸಂರಕ್ಷಣೆಗಾಗಿ ಕೂಗು ಕೇಳಿಸುತ್ತಿದೆ.

ಬಂಗಾರಿ ಕೇವಲ ಒಂದು ಹೆಸರಲ್ಲ. ಅದು ಒಂದು ಕಾಲದ ಪ್ರೀತಿ, ಒಂದು ರಾಜನ ದೂರದೃಷ್ಟಿ, ಮತ್ತು ರೈತರ ಬದುಕಿನಲ್ಲಿ ಹರಿದ ಬಂಗಾರದ ಜಲಧಾರೆ. ❖

ಕ್ಯಾನ್ವಾಸ್‌ಗಳು ನಿವೇದಿಸಿದ ಎಡೆದೊರೆ ಇತಿಹಾಸ

• ಚಿತ್ರ–ಬರಹ: ಈರಣ್ಣ ಬೆಂಗಾಲಿ

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಕ್ಯಾನ್ವಾಸ್‌ಗಳು ಸಾಲಾಗಿದ್ದವು. ಕುಂಚದ ತುದಿಯಲ್ಲಿ ಬಣ್ಣಗಳು ನೃತ್ಯ ಮಾಡುತ್ತಿದ್ದವು. ಆ ಬಣ್ಣಗಳ ನಡುವೆ ನಿಧಾನವಾಗಿ ಎದ್ದೇಳುತ್ತಿತ್ತು ಎಡೆದೊರೆಯ ಇತಿಹಾಸ. ಇದು ಕೇವಲ ಚಿತ್ರಕಲಾ ಶಿಬಿರವಲ್ಲ; ಜಿಲ್ಲೆಯ ಆತ್ಮವನ್ನು ಹಿಡಿದು ನಿಲ್ಲಿಸುವ ಕಲಾವಿದರ ಸಮೂಹ ಸಾಧನೆ.

ಅನ್ನ, ಚಿನ್ನ, ಬೆಳಕಿನ ನೆಲವೆಂದೇ ಕರೆಯಲ್ಪಡುವ ರಾಯಚೂರು ಜಿಲ್ಲೆಯು ಕೃಷ್ಣೆ ಮತ್ತು ತುಂಗೆ ನದಿಗಳ ಮಧ್ಯದ ಫಲವತ್ತಾದ ಭೂಮಿಯ ಕಥೆಯನ್ನು ಇತಿಹಾಸ ಹಲವು ಯುದ್ಧಗಳ ಮೂಲಕ ಬರೆದಿದೆ. ಆದರೆ ಈ ಬಾರಿ ಆ ಕಥೆಯನ್ನು ಬರೆಯಲು ಕತ್ತಿಗಳು ಇರಲಿಲ್ಲ; ಕುಂಚಗಳಿದ್ದವು.

ಮೂರು ದಿನ ಇಪ್ಪತ್ತಕ್ಕೂ ಹೆಚ್ಚು ಕಲಾವಿದರು ಶಿಬಿರದಲ್ಲಿ ಬೀಡುಬಿಟ್ಟಿದ್ದರು. ಯುವಕರಿಂದ ಹಿಡಿದು ಹಿರಿಯರ ತನಕ ಪ್ರತಿಯೊಬ್ಬರ ಕಣ್ಣಲ್ಲೂ ಒಂದೇ ಉತ್ಸಾಹ: 'ನಮ್ಮ ಜಿಲ್ಲೆಯನ್ನು ನಮ್ಮ ಬಣ್ಣದಲ್ಲಿ ಹೇಳಬೇಕು.'

ಕ್ಯಾನ್ವಾಸ್ ಮೇಲೆ ಮೊದಲು ನೆಲೆ ನಿಂತದ್ದು ರಾಯಚೂರು ಕೋಟೆ. ಕಲ್ಲಿನ ಗಟ್ಟಿತನ, ಬೆಟ್ಟದ ಉಬ್ಬರವಿಳಿವು, ಕೋಟೆಗೋಡೆಗಳ ಬಿರುಕುಗಳವರೆಗೂ ಗಮನಿಸಿ ಚಿತ್ರಿಸಿದ ರೀತಿ–ಅದು ಕೇವಲ ಚಿತ್ರವಲ್ಲ, ಅಧ್ಯಯನ. ಬಸ್ ನಿಲ್ದಾಣದ ಬಳಿಯ ಗುಬ್ಬೇರ ಬೆಟ್ಟದ ನೈಜರೂಪ ಕಲಾವಿದರ ಸೂಕ್ಷ್ಮ ಕಣ್ಣನ್ನು ಸಾಬೀತುಪಡಿಸಿತು.

ಮುಂದೆ ಮೂಡಿಬಂದದ್ದು ಮುದಗಲ್ ಕೋಟೆ. ಗತಕಾಲದ ಘನತೆಯನ್ನು ಸ್ಮರಿಸುವ ಆ ಕೋಟೆಯ ಚಿತ್ರ, ಮೌನವಾಗಿ ಇತಿಹಾಸವನ್ನು ನಿವೇದಿಸುವಂತಿತ್ತು.

ವಿಶಾಲ ಬಯಲಿನಲ್ಲಿ ಶಿಲ್ಪಸೌಂದರ್ಯವಾಗಿ ನಿಂತಿರುವ ಮಲಿಯಾಬಾದ್ ಕೋಟೆಯ ಅಲಂಕೃತ ಕಲ್ಲಾನೆಗಳು ಕ್ಯಾನ್ವಾಸ್ ಮೇಲೆ ಜೀವಂತ ತಳೆದವು. ಬಣ್ಣದ ಹೊಳಪಿನಲ್ಲಿ ಆನೆಗಳು ನಮ್ಮತ್ತವೇ ನಡೆಯುತ್ತಿವೆ ಎನ್ನಿಸುವ ಭಾವ ಮೂಡಿತು. ಕಲಾವಿದರ ಕುಂಚ ಇಲ್ಲಿ ಕಲ್ಲಿಗೆ ಜೀವ ತುಂಬಿತ್ತು.

ದರವಾಜುಗಳ ಮೂಲಕ ಕಾಲಯಾನ

ರಾಯಚೂರು ನಗರ ಪ್ರವೇಶದ ದಾರಿಯಲ್ಲಿ ಸ್ವಾಗತಿಸುವ ಮಕ್ಕಾ ದರವಾಜ, ದೊಡ್ಡಿ ದರವಾಜ, ಕಾಂಟಿ ದರವಾಜ ಇವುಗಳ ಚಿತ್ರಗಳು ಶಿಬಿರದ ಪ್ರಮುಖ ಆಕರ್ಷಣೆ. ವಿಶೇಷವಾಗಿ ತೀನ್ ಕಂದಿಲ್ ಸಮೀಪದ ಮುಳ್ಳಿನ ದರವಾಜು ಕ್ಯಾನ್ವಾಸ್ ಮೇಲೆ ಅರಳಿದಾಗ, ಪ್ರತಿದಿನ ಅದರ ಮುಂದೆ ಹಾದುಹೋಗುವ ಜನರೂ ಹೊಸದಾಗಿ ನೋಡುವಂತಾಯಿತು.



ಕಲಾಕುಂಚದಲ್ಲಿ ಮಲಿಯಾಬಾದ್ ಅಲಂಕೃತ ಕಲ್ಲಾನೆಗಳು

ನವರಂಗ ದರವಾಜಿನ ಚಿತ್ರ ಇಂದು ಪ್ರಾಚ್ಯವಸ್ತು ಇಲಾಖೆಯ ಕಚೇರಿಯಾಗಿರುವ ಆ ಕಟ್ಟಡ ಗತಕಾಲ ಮತ್ತು ವರ್ತಮಾನದ ಸೇತುವೆಯಂತೆ ಕಾಣಿಸಿತು. ಕಲಾವಿದರು ಇಲ್ಲಿ ಕೇವಲ ಕಟ್ಟಡವನ್ನೇ ಬಿಡಿಸಲಿಲ್ಲ; ಅದರ ಪಾತ್ರವನ್ನೂ ಸೂಚಿಸಿದರು.

ಈ ಶಿಬಿರದ ವೈಶಿಷ್ಟ್ಯ ಎಂದರೆ, ಅದು ಕೇವಲ ಇತಿಹಾಸದ ಸ್ಮಾರಕಗಳಿಗೆ ಸೀಮಿತವಾಗಿರಲಿಲ್ಲ. ರಾಯಚೂರು ಉಷ್ಣವಿದ್ಯುತ್ ಸ್ಥಾವರ (ಆರ್‌ಟಿಪಿಎಸ್)ದ ಹೊಗೆ ಉಗುಳುವ ಚಿಮಣಿಗಳು ಕ್ಯಾನ್ವಾಸ್ ಮೇಲೆ ಮೂಡಿದವು. ಹೊಗೆ ಹಸಿರು ನೆಲವನ್ನು ಮುಸುಕುವ ಚಿತ್ರಗಳು ಪರಿಸರದ ಪ್ರಶ್ನೆಯನ್ನೂ ಮೌನವಾಗಿ ಎತ್ತಿದವು.

ಗಬ್ಬೂರಿನ ಪ್ರಾಚೀನ ದೇವಾಲಯ, ಅಶೋಕ ಶಿಲಾಶಾಸನ ಇವೆಲ್ಲವೂ ಕಲಾವಿದರ ಕಣ್ಣಲ್ಲಿ ಹೊಸ ಅರ್ಥ ಪಡೆದುಕೊಂಡವು. ಅವರು ಚಿತ್ರಿಸಿದ್ದು ಕೇವಲ ದೃಶ್ಯವಲ್ಲ; ಸಂಸ್ಕೃತಿಯ ಸ್ಮೃತಿ, ನೆಲದ ಹೆಮ್ಮೆ.

ಪಿಎಬಿ ಈಶ್ವರ್, ರಾಮಣ್ಣ ಮ್ಯಾದಾರ್, ಸಮೀರಣ ಜೋಶಿ, ಪ್ರಭಾಕರ ಮಂಕಾಲ, ಶಿವಾನಂದ ಸಾತಿಹಾಳ, ಶಾಂತಪ್ಪ, ಅಮರೇಗೌಡ, ಎ.ಎಸ್.ಕುಮಾರ್, ಶ್ರೀನಿವಾಸ ಬಂಡಿ, ಎನ್. ಹೇಮರೆಡ್ಡಿ, ರವಿ ನಾಯಕ್, ಮಲ್ಲಿಕಾರ್ಜುನ ಆಲೂರ್, ಪ್ರಕಾಶ ಆನೆಗುಂದಿ, ಮಲ್ಲಯ್ಯ ಕೆಂಭಾವಿ, ರುದ್ರಪ್ಪ ತಳವಾರ, ಸಿದ್ದಪ್ಪ ನಾಯಕ್, ಪಿ. ಅಮರೇಶ್, ಸಿ.ಎಚ್.ಗೋಪಿ, ಪ್ರಿಯಾ, ಉಮೇಶ್ ಪತ್ತಾರ್, ಉಸ್ಮಾನ ಅಲಿ, ತಿಮ್ಮಪ್ಪ, ವೀರೇಶ, ಶಿವುಕುಮಾರ, ಪವನಕುಮಾರ–ಹೀಗೆ ಅನೇಕರು ತಮ್ಮ ತಮ್ಮ ಶೈಲಿಯಲ್ಲಿ ಜಿಲ್ಲೆಯ ಕಥೆ ಹೇಳಿದರು.

ವಾಟರ್ ಕಲರ್‌ನ ನಾಜೂಕು, ಆಯಿಲ್ ಕಲರ್‌ನ ಗಾಢತೆ, ಪೋಸ್ಟರ್ ಕಲರ್‌ನ ಪ್ರಖರತೆ, ಮಿಕ್ಸ್ ಮೀಡಿಯಾದ ಪ್ರಯೋಗಶೀಲ ಮಾಧ್ಯಮವೂ ವಿಭಿನ್ನ ಸ್ತರ ನೀಡಿತು. ಆದರೆ ಎಲ್ಲ ಚಿತ್ರಗಳಲ್ಲೂ ಒಂದೇ ಹೃದಯ ದನಿ ಕೇಳಿಸಿತು: 'ಇದು ನಮ್ಮ ಎಡೆದೊರೆ.'

ಆಡಳಿತದ ಬೆಂಬಲ, ಕಲಾವಿದರ ದೃಢನಿಶ್ಚಯ

ಜಿಲ್ಲಾಡಳಿತದ ನೇತೃತ್ವದಲ್ಲಿ ಆಯೋಜಿತವಾದ ರಾಯಚೂರು ಜಿಲ್ಲಾ ಉತ್ಸವದಲ್ಲಿ ನಡೆದ ಈ ಶಿಬಿರಕ್ಕೆ ಹಿರಿಯ ಕಲಾವಿದರಾದ ಎಚ್.ಎಚ್. ಮ್ಯಾದಾರ್ ಮತ್ತು ಪಿ. ಚಂದ್ರಶೇಖರ ಅವರ ಸಲಹೆ ದಿಕ್ಕು ತೋರಿಸಿತು. ಆದರೆ ಯಶಸ್ಸಿನ ಮೂಲ ಕಲಾವಿದರ ಪರಿಶ್ರಮ. ಬಿಸಿಲಿನ ನಡುವೆಯೂ ಅವರು ಕ್ಯಾನ್ವಾಸ್ ಮುಂದೆ ಗಂಟೆಗಟ್ಟಲೆ ನಿಂತರು. ಪ್ರತಿಯೊಂದು ರೇಖೆ, ಪ್ರತಿಯೊಂದು ನೆರಳು ಅವರ ಏಕಾಗ್ರತೆಯ ಸಾಕ್ಷಿ.

ಈ ಶಿಬಿರವು ಸಾಬೀತುಪಡಿಸಿದ್ದು ಏನೆಂದರೆ; ಜಿಲ್ಲೆಯ ಇತಿಹಾಸ ಕೇವಲ ಪುಸ್ತಕಗಳಲ್ಲಿ ಮಾತ್ರ ಇರಬೇಕಿಲ್ಲ. ಅದು ಬಣ್ಣಗಳಲ್ಲಿ, ಗೋಡೆಗಳಲ್ಲಿ, ಜನರ ನೆನಪುಗಳಲ್ಲಿ ಬದುಕಬಹುದು.

ಕಲಾವಿದರು ಎಡೆದೊರೆಯ ವೈಭವವನ್ನು ಕೇವಲ ಚಿತ್ರಿಸಲಿಲ್ಲ; ಅದನ್ನು ಜೀವಂತಗೊಳಿಸಿದರು. ಅವರ ಕುಂಚದಲ್ಲಿ ಕಲ್ಲು ಮಾತಾಡಿತು, ದರವಾಜುಗಳು ತೆರೆದವು, ಆನೆಗಳು ನಡೆದುಬಂದವು, ಚಿಮಣಿಗಳು ಹೊಗೆ ಉಗುಳಿದವು.

ರಾಯಚೂರು ಜಿಲ್ಲೆಯ ಸುತ್ತಾಟ ಮಾಡಲು ವಾಹನ ಬೇಕಾಗಬಹುದು. ಆದರೆ ಈ ಚಿತ್ರಗಳನ್ನು ನೋಡಿದರೆ ಸಾಕು, ಒಂದು ಸಂಪೂರ್ಣ ಕಾಲಯಾನ ಸಾಧ್ಯ.

ಕಲಾವಿದರ ಕೈಚಳಕದಲ್ಲಿ ಮೂಡಿದ ಈ ಬಣ್ಣಗಳು ಕೇವಲ ಅಲಂಕಾರವಲ್ಲ; ಅವು ಜಿಲ್ಲೆಯ ಆತ್ಮದ ಪ್ರತಿಬಿಂಬ. ಎಡೆದೊರೆ ಮತ್ತೆ ಜೀವಂತವಾಗಿದೆ; ಕುಂಚದ ತುದಿಯಲ್ಲಿ. ❖



ಕಲಾವಿದನ ಕೈಚಳಕದಲ್ಲಿ ಗುಬ್ಬೇರ ಬೆಟ್ಟ



ಕ್ಯಾನ್ವಾಸ್‌ನಲ್ಲಿ ಕಂಡ ಬೆಳಕು ನೀಡುವ ವಿದ್ಯುತ್ ಚಿಮಣಿಗಳು

ಯರೇಹಂಚಿನಾಳದ ಶರಣಮ್ಮ....

12ನೇ ಪುಟದಿಂದ...

ಸಿನ್ಮಾ ಸಾಕಾಗೋತ್ರಿ. ಮೊದಲು ಕ್ಯಾಮೆರಾ ನೋಡೇ ಮಾತ್ ಹೇಳ್ತಿದ್ದೆ. ಆಂಟಿ ಕ್ಯಾಮೆರಾ ನೋಡ್ಬ್ಯಾಡ್ರಿ ಅಂತ ಹೇಳಿ ಹೇಳಿ ಸುಸ್ತಾಗಿತ್ರಿ ಅವ್ರಗ. ಐ ವಿಲ್ ಡು ಇಟ್ (I will do it) ಅನ್ನೋದಕ್ಕೆ ಮುಂಜಾನಿಂದ ಸಂಜಿ ತನ್ಕ ಅನಸ್ಕೆ ಹತ್ತಿದ್ರೂ ಬಂದಿಲ್ರಿ. ನಾವು ಕಸ, ಕಳೆ ತೆಗೆಯೋರು. ಇಂಗ್ಲಿಸ್ ಪ್ರಾಕ್ಟೀಸ್ ಮಾಡ್ಸಿದ್ರು. ಎಂಟ್ಹತ್ ದಿನ್‌ದೊಳ್ಗ ಸರಿಯಾತ್ರಿ. ಮೊದ್ಲೇ ರೊಟ್ಟಿ ತಟ್ಟೋ ಕೈ ಅಂತದ್ರಾಗ ಮಗ್ಳ ಪಾತ್ರ ಮಾಡ್ದ ಹೆಣ್‌ಮಗೀಗೆ ಎರಡ್ ತಟ್ಟಿದ್ದೆ. ನಾನ್ ಶೂಟಿಂಗ್‌ಗ ಹೋದಾಗ ಮಕ್ಳು ಮನೆಗೆ ಬಂದು ಚನ್ನಪ್ಪೋರ ನೋಡ್ಕೋತಿದ್ರಿ. ಇದನ್ನೆಲ್ಲಾ ನೆನ್ಸ್‌ಕೊಂಡ್ರೆ ನಾನ್ ಸಿನ್ಮಾ ಮಾಡಿದ್ನಾ ಅಂತ ಇಗ್ಲೂ ಅನಸ್ತೈತ್ರಿ.

ಸಿನ್ಮಾದಲ್ಲಿ ಬರ್ದೇ ಇರ್ತಿದ್ರೆ ಶರಣಮ್ಮ ಯರೇಹಂಚಿನಾಳದಾಗ ನಾಲ್ಕೈದು ಮನ್ಗೆ ಅಷ್ಟೇ ಗೊತ್ತಾಗ್ತಿತ್ರಿ. ಶರಣಮ್ಮ ಅನ್ನೋಳ್ ಶರಣಮ್ಮ ಆಗಿಯೇ ಇರ್ತಿದ್ಲು. ನನ್ಗ ಅಡೆತಡೆಗಳನ್ನು ಬದಿಗಿಟ್ಟು ಗುರಿ ಸಾಧಿಸ್ಬೇಕು ಅನ್ನೋ ಛಲವಿತ್ರಿ. ಇವೆಲ್ಲಾ ಸಾಲಿಲಿ ಕಲ್ತ್ ಪಾಠ ಅಲ್ರಿ, ಈ ಭೂಮ್ತಾಯಿ, ಈ ಜೀವ್ನ ಕಲ್ಸೈತ್ ನೋಡ್ರಿ.

ಇತ್ತೀಚೆಗ ಉತ್ತರ ಕರ್ನಾಟಕದ್ ಸಂಜನಾ ಅಂತ ಒಂದ್ ಹಾಡಲ್ಲಿ ಅಮ್ಮನ ಪಾರ್ಟ್ ಮಾಡೇನ್ರಿ. ಸಿನ್ಮಾಗೂ ಕರ್ದಿದ್ರಿ. ಆದ್ರ ಹೊಲ ಬಿಟ್ ಹೋಗಾಕ ಸಮಸ್ಯೆ ಆಗುತ್ರಿ. ಅನ್ನ ಇದ್ರ ಉಣ್ಬೋದು, ರೊಕ್ಕ ಉಣ್ಣಕ್ಕ ಆಗ್ತೇನ್ರಿ. ಈಗ ದುಡಿಯೋದು ಉಣ್ಣೋದು ನಡೀತಿತ್ರಿ. ಇದ್ರ ಜೊತೆಗೆ ಕಲೆನೂ. ಹೊಲ್ದ ಕೆಲ್ಸ ಮಾಡ್ತಿದ್ರೆ ಪೇಪರ್‌ನಾಗ ಬರ್ತಿತ್ತೇನ್ರಿ. ತಾಲೂಕು, ಜಿಲ್ಲೆಯಾಗ ಯಾರೂ ಮಾತಾಡಿಸ್ತಿರ್ಲಿಲ್ಲ. ಈಗ ಎಲ್ರೂ ಚಲೋ ಮಾತಾಡ್ಸಕ್ಯಾತ್ತಾರಿ. ಫಸ್ಟ್ ಫಿಲಂ ಶೂಟಿಂಗ್ ಶುರುವಾತಲ್ರಿ, ಆಗ 'ಹೊಂಟ್ಲು ನೋಡು ಕಾರಲ್ಲಿ ಒಬ್ಬಾಕಿ..ಮರ್ಯಾದೆ ಮಾನಿ ಇಲ್ಲೇನು..' ಅಂತಾ ಹಿಯಾಳಿಸುತ್ತಿದ್ರು.

ಈಗ 'ಅಬಾ ಅಬಾ ಬಾಬಾ ಶರಣಮ್ಮ ಬೆಂಗಳೂರಾಗ ಹೋಗಿದ್ಯಲ್ಲ ಏನ್ ಮಾಡಾಕ ಕರ್ಸಿದ್ರು ನಿಮ್ಮನ್ನ. ಮೊಬೈಲ್ನಾಗ, ಟಿವ್ಯಾಗ ಬಂದಿದ್ರಿ. ಇನ್ನೊಂದು ಫಿಲಂಗ ಹೋದ್ರಾ ನಾನು ಬರ್ತೀನಿ ಕರಿಬೇ' ಅಂತಾರ. ಕಥೆ ಕೇಳ್ತಾರೆ ನನ್ ಬಳಿ. ರಿಷಬ್ ಶೆಟ್ರ್ ಯಾವಾಗ ಬರ್ತಾರ ಅಂತ ಕೇಳ್ತಾರಾ.

ಈ ಸಿನಿಮಾ ಬಂದ್ ಮೇಲೆ ಊರವ್ರೂ ಸೇರ್ಸಿ ಎಲ್ಲರೂ ಶಿವಮ್ಮ ಅಂತಾರ. ಶರಣಮ್ಮ ಅನ್ನೋದೆ ಬಿಟ್‌ಬಿಟ್ಟವ್ರೆ. 'ಓಯ್ ಬನ್ರಿ ಶಿವಮ್ಮೋರೆ ಸೆಲ್ಫಿ ತೆಗೊಳ್ಳೋಣ, ಶಿವಮ್ಮೋರೆ ಆರಾಮಾ? ಅಂತಾರ. ಹೀಗ ಒಂದ್ ಸಿನ್ಮಾ ನನ್ನನ್ನ 'ಶರಣಮ್ಮ' ಬದ್ಲು 'ಶಿವಮ್ಮ' ಮಾಡೈತಿ ನೋಡ್ರಿ.

ನಿರೂಪಣೆ: ಅಭಿಲಾಷ್ ಪಿ.ಎಸ್.

ಮುನ್ನೋಟ 08-03-2026 ರಿಂದ 14-03-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹಿಡಿದ ಕೆಲಸ ಪೂರ್ತಿಗೊಂಡು ಮನಸ್ಸಿಗೆ ಸಂತೋಷವಾಗುತ್ತದೆ. ಕುಟುಂಬಕ್ಕಾಗಿ ಹಣ ಖರ್ಚು ಮಾಡಬೇಕಾಗಬಹುದು. ಹಿರಿಯರ ಸಲಹೆಗಳು ನಿಮಗೆ ಬಹಳ ಉಪಯುಕ್ತವಾಗಿರುತ್ತವೆ. ಸಂಗಾತಿಯ ಸಹಕಾರದಿಂದ ಕುಟುಂಬದಲ್ಲಿ ಸಂತೋಷ ಹೆಚ್ಚುತ್ತದೆ. ಆಸ್ತಿ ಮಾಡಲು ಬೇಕಾದ ಆರ್ಥಿಕ ಮೂಲಗಳು ತಿಳಿಯುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವೈಭವದ ಜೀವನವನ್ನು ನಡೆಸುವತ್ತ ಆಸಕ್ತಿ ತೋರುವಿರಿ. ಆದಾಯವು ಉತ್ತಮವಾಗಿರುತ್ತದೆ. ಹಿರಿಯ ಮಹಿಳೆಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ತೊಂದರೆಯಾಗಬಹುದು. ವೃತ್ತಿಗೆ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಂಡವರಿಗೆ ಯಶಸ್ಸು ಲಭಿಸುತ್ತದೆ. ವಿದ್ಯಾರ್ಥಿಗಳಿಗೆ ಯಶಸ್ಸು ಅಲ್ಪವಿರುತ್ತದೆ. ಶೀತ ಸಂಬಂಧಿತ ದೋಷಗಳು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿಯ ಸಹಾಯದಿಂದ ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯವು ಸುಧಾರಿಸುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಿರುತ್ತದೆ. ಉಷ್ಣ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಗೆ ನಿಮ್ಮಿಂದ ಆರ್ಥಿಕ ಸಹಾಯ ಲಭಿಸುತ್ತದೆ. ವೃತ್ತಿಯಲ್ಲಿ ವೇತನ ಹೆಚ್ಚಾಗುವ ಸಂದರ್ಭವಿದೆ. ವೃತ್ತಿಯಲ್ಲಿ ಸ್ವಲ್ಪ ಕಿರಿಕಿರಿಗಳು ಆಗಬಹುದು. ಹಿರಿಯರ ವ್ಯವಹಾರಗಳಲ್ಲಿ ನಿಮಗೆ ಅವಕಾಶಗಳು ದೊರೆತು ಹೆಚ್ಚು ಲಾಭವಾಗುವ ಸಂದರ್ಭವಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಚುರುಕಾದ ನಡವಳಿಕೆಯನ್ನು ನೀವು ಹೊಂದಿರುವಿರಿ. ಆದಾಯವು ಕಡಿಮೆ ಇದ್ದರೂ ಕೂಡ ಅದರಲ್ಲಿ ತೂಗಿಸುವಿರಿ. ಹೈನುಗಾರಿಕೆಯಿಂದ ಹೆಚ್ಚು ಆದಾಯವಿರುತ್ತದೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು. ಕೃಷಿ ವಿಜ್ಞಾನವನ್ನು ಓದುತ್ತಿರುವವರಿಗೆ ಬಹಳ ಅಭಿವೃದ್ಧಿ ಇರುತ್ತದೆ. ಪಿತ್ತದ ಸಮಸ್ಯೆ ಕೆಲವರನ್ನು ಕಾಡಬಹುದು. ಸಂಗಾತಿಯ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಅತಿಯಾದ ಉದಾಸೀನತೆ ನಿಮ್ಮಲ್ಲಿ ಇರುತ್ತದೆ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಸಂಗಾತಿಗೆ ಸ್ಥಿರಾಸ್ತಿ ದೊರೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುವ ಕಾಲ. ಗುಪ್ತ ರೋಗಗಳು ಕೆಲವರನ್ನು ಬಾಧಿಸಬಹುದು. ಸಂಗಾತಿಯ ಸಹಕಾರದಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅನುಕೂಲವಿರುತ್ತದೆ. ಆಭರಣ ವ್ಯಾಪಾರಸ್ಥರಿಗೆ ವ್ಯಾಪಾರ ಮಂದಗತಿಯಲ್ಲಿದ್ದು, ಆದಾಯ ಕಡಿಮೆ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವಾರದ ಆರಂಭದಲ್ಲಿ ಬಹಳ ಒತ್ತಡ ಇರುತ್ತದೆ. ಆದಾಯವು ಸ್ವಲ್ಪ ಮಟ್ಟಿಗೆ ಚೇತರಿಕೆಯನ್ನು ಕಾಣುತ್ತದೆ. ಬಂಧುಗಳಿಂದ ನಿಮಗೆ ಆರ್ಥಿಕ ನಷ್ಟವಾಗಬಹುದು. ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಕಡಿಮೆ. ವಾಯುಯಾನ ಕ್ಷೇತ್ರದ ವಿದ್ಯಾರ್ಥಿಗಳಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಮೂಳೆಗಳ ತೊಂದರೆ ಅಥವಾ ಶ್ವಾಸಕೋಶದ ತೊಂದರೆ ಕೆಲವರನ್ನು ಕಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವಾರದ ಆರಂಭದಲ್ಲಿ ಬಹಳ ಆನಂದ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಹಿರಿಯರಿಂದ ನಿಮಗೆ ಆರ್ಥಿಕ ಸಹಾಯ ಸಿಗಬಹುದು. ಆಸ್ತಿ ಕೊಳ್ಳುವಾಗ ಎಚ್ಚರ, ಮೋಸ ಹೋಗುವ ಸಾಧ್ಯತೆಗಳಿವೆ. ಆಟೋಮೊಬೈಲ್ ಕ್ಷೇತ್ರದ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ. ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಮೂಳೆಯ ತೊಂದರೆ ಕೆಲವರನ್ನು ಕಾಡಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವಾರದ ಆರಂಭದಲ್ಲಿ ಬಹಳ ಆನಂದ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಹಿರಿಯರಿಂದ ನಿಮಗೆ ಆರ್ಥಿಕ ಸಹಾಯ ಸಿಗಬಹುದು. ಆಸ್ತಿ ಕೊಳ್ಳುವಾಗ ಎಚ್ಚರ, ಮೋಸ ಹೋಗುವ ಸಾಧ್ಯತೆಗಳಿವೆ. ಆಟೋಮೊಬೈಲ್ ಕ್ಷೇತ್ರದ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ. ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಮೂಳೆಯ ತೊಂದರೆ ಕೆಲವರನ್ನು ಕಾಡಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿರೀಕ್ಷೆ ಮಾಡದೆ ಗೌರವ ದೊರೆಯುವ ಸಾಧ್ಯತೆ ಇದೆ. ಆದಾಯವು ಕಡಿಮೆ ಇದ್ದರೂ ಬೇರೆ ಮೂಲಗಳಿಂದ ಆದಾಯ ಹೊಂದಾಣಿಕೆ ಮಾಡಿಕೊಳ್ಳುವಿರಿ. ಸಂಸಾರದಲ್ಲಿ ಒತ್ತಡಗಳಿದ್ದರೂ ಕೂಡ, ಅದನ್ನು ಮೀರಿ ಸಂತೋಷವಿರುತ್ತದೆ. ಶಸ್ತ್ರ ಚಿಕಿತ್ಸೆ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ಅನಾರೋಗ್ಯ ಪೀಡಿತರ ಆರೋಗ್ಯ ಸುಧಾರಿಸುತ್ತದೆ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೃತ್ತಿಶ್ರದ್ಧೆ ನಿಮ್ಮಲ್ಲಿ ಬಹಳ ಹೆಚ್ಚಾಗಿ ಇರುತ್ತದೆ. ಆದಾಯವು ಸಾಕಷ್ಟು ಸುಧಾರಿಸುತ್ತದೆ. ಹಿತ ಶತ್ರುಗಳನ್ನು ಗುರುತಿಸಿ ಸರಿಯಾದ ಉತ್ತರ ನೀಡುವಿರಿ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಹೆಚ್ಚು ಶ್ರಮಪಟ್ಟಲ್ಲಿ ಅತ್ಯುತ್ತಮ ಫಲಿತಾಂಶವನ್ನು ಪಡೆಯುವ ಯೋಗ ವಿದ್ಯಾರ್ಥಿಗಳಿಗೆ ಇರುತ್ತದೆ. ಲೇವಾದೇವಿ ವ್ಯವಹಾರಗಳು ಬೇಡ. ದೇಹದಲ್ಲಿ ಪಿತ್ತ ಹೆಚ್ಚಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯವು ಸ್ವಲ್ಪ ಮಟ್ಟಿಗೆ ಸುಧಾರಿಸುತ್ತದೆ. ಚುರುಕಾಗಿ ಕೆಲಸ ಮಾಡುವುದು ನಿಮಗೆ ಒಳ್ಳೆಯದು. ವಿದ್ಯಾರ್ಥಿಗಳಿಗೆ ಅವರ ಅಪೇಕ್ಷೆಗೆ ಮೀರಿದ ಫಲಿತಾಂಶ ದೊರೆಯುತ್ತದೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಪ್ರೀತಿ ಪ್ರೇಮದಲ್ಲಿರುವವರಿಗೆ ಯಶಸ್ಸು ದೊರೆಯುವುದು ಕಡಿಮೆ. ಗಣಿಗಾರಿಕೆ ಮಾಡುವವರ ಆದಾಯ ಹೆಚ್ಚುತ್ತದೆ. ವೃತ್ತಿಯಲ್ಲಿ ಸ್ವಲ್ಪಮಟ್ಟಿನ ಅಭಿವೃದ್ಧಿಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆದಾಯವು ಕಡಿಮೆ ಇರುತ್ತದೆ. ಸ್ತ್ರೀಯರ ಸಹಕಾರ ಸಾಕಷ್ಟು ದೊರೆಯುತ್ತದೆ. ಆಸ್ತಿಯನ್ನು ಕೊಳ್ಳಲು ಬೇಕಾದ ಹಣ ಲಭಿಸುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಫಲಿತಾಂಶ ಇರುವುದಿಲ್ಲ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಅತಿ ವ್ಯಾವಹಾರಿಕತೆ ನಿಮಗೆ ಬೇಸರ ತರಿಸಬಹುದು.


ಪದಬಂಧ 2934

ಮೇಲಿಂದ ಕೆಳಕ್ಕೆ

1. ಶಶಿಯ ಬೆಳಕನ್ನು ಕಬಳಿಸಿದಾಗ ಹಣ ಮಾಡುವ ಸಾಧ್ಯತೆ ಇದೆಯೆ? 5
2. ಅಪಹರಿಸುವ ಈಶ್ವರ ಒಳ್ಳೆಯದನ್ನುಂಟುಮಾಡುವ ಹಸ್ತ ಚಾಚುತ್ತಾನೆ 5
3. ಮಹಾಶಿವ ಕುಪಿತಗೊಂಡಾಗ ಮಾಡುವ ನರ್ತನ 5
4. ಪರದೇಶಕ್ಕೆ ಮಾಡುವ ಮಹಾ ಪ್ರಯಾಣ 5
8. ರಘುವಂಶದಲ್ಲಿ ಹುಟ್ಟಿದವ 3
9. ಮೇಲಿನಿಂದ ಮನಸ್ತಾಪವಾದರೆ ಕೆಳಗಿನಿಂದ ಕೆಟ್ಟ ಕೆಲಸ ಮಾಡುವವ 3
11. ಕುವೆಂಪು ನಾಟಕದಲ್ಲಿ ನೆತ್ತರಿನ ಕಣ್ಣವಳು 3
12. ಹಿಂದಿ ಚಲನಚಿತ್ರಗಳಲ್ಲಿ ಸರ್ವೇಸಾಧಾರಣ ಕಾಣಿಸಿಕೊಳ್ಳುವ ಹುಚ್ಚು ಪ್ರಿಯಕರ 3
14. ಆನೆಯ ಮುಖದ ಗೌರಿ ತನಯ 5
15. ಅಪಹಾಸ್ಯಕ್ಕೆ ಗುರಿ ಮಾಡುವ ಕೆಲಸ 5
16. ಕಾಮ ಮತ್ತು ಸೌಂದರ್ಯಕ್ಕೆ ಹೆಸರಾದ ಸತಿ ಪತಿ 5
17. ಹಸೆಮಣೆ ಏರಿರುವ ಮದುಮಕ್ಕಳು 5

ಎಡದಿಂದ ಬಲಕ್ಕೆ

2. ಹಸಿಯಾದ ಎಲೆ ಬಳ್ಳಿಗಳ ಬಣ್ಣ 3
5. ಸ್ವರ್ಗದ ಒಡೆಯನ ಮನ್ಮಥ ಪುತ್ರ 5
6. ಭಾರತದ ಉತ್ತರ ಭಾಗ ಆರ್ಯರಾದರೆ ದಕ್ಷಿಣ ಭಾಗ ? 5
7. ನಮ್ಮ ನುಡಿ, ನಮ್ಮ ಉಲಿ, ನಮ್ಮ ಮಾತೃ ಭಾಷೆ 3
8. ಯುದ್ಧ ಯಾವಾಗಲೂ ಘೋರ ಭಯಂಕರ 5
10. ಅಭಯವನ್ನು ನೀಡಿ ಹರಿವ ಹೊಳೆ 5
13. ವಿಶ್ವವನ್ನೇ ಆಕರ್ಷಿಸುವ ಮೈಸೂರಿನ ಅರಮನೆ 5
16. ಆಡಳಿತ ವಲಯಕ್ಕೆ ಸೇರಿದ ಕಾಪು ಕಾಡು 5
18. ಬಾಳಿನಲ್ಲಿ ಹಿತವಾಗುವ ಸ್ನೇಹಿತೆ 3
19. ಪದಬಂಧದಲ್ಲಿ ಆಗೊಮ್ಮೆ ಈಗೊಮ್ಮೆ ಶಬ್ಧಗಳ ಸ್ಥಾನ ಆಚೆಈಚೆಯಾಗಬಹುದು 5
20. ಹಸುವಿನ ಕಾಲಡಿ ನಿಮಗಿದು ಸಿಗಬಹುದು 5
21. ಗರಿಗೆದರಿ ಕುಣಿವ ಪಕ್ಷಿ ಹಿಂದು ಮುಂದಾಗಿದೆ 3



ಪದಬಂಧ ಉತ್ತರ -2933

ಮೇಲಿಂದ ಕೆಳಕ್ಕೆ

1. ಪತಿತ 2.ನಜರು 3.ಪರಿಮಾಣ 4.ತಿರುಳು 7.ಮಾದಕ 9.ಗಳಗನಾಥ 10.ಹೂವಿನಹಾರ 12.ದೂರಸಂಚಾರ 17.ಮಂಗಳ 18.ತಾರಕಾಂತ 19.ಸ್ಥಿರಾಯು 20.ಕಾತರ 21.ಸ್ತಿಮಿತ

ಎಡದಿಂದ ಬಲಕ್ಕೆ

1. ಪರಿಜ್ಞಾನ 3. ಪಶುಪತಿ 5.ಜಲಸುಂದರಿ 6.ತಲೆಮಾರು 8.ಮಾಸಗಳು 10.ಹೂರಣ 11.ಬಂದೂಕ 13.ಕಾವಿ 14.ಗತಿ 15.ಹಾಸಂ 16.ಹಾಡು 17.ಮಂಥನ 18.ತಾತ್ಸಾರ 19.ಸ್ಥಿರವಾರ 20.ಕಾಳಹಸ್ತಿ 22.ಕಾಂಚಾಣಗೀತ 23.ಯುವಗೀತ 24.ರನ್ನದಾತ



ಅಬೌಟ್ ರಾಮ್
ಬೊಂಬೆಯಾಟದ ವಿಕಸಿತ ರಂಗರೂಪ

• ವಿಕ್ರಮ ವಿಸಾಜಿ



ರಾಮ ಹಾಗೂ ರಾವಣರ ನಡುವಿನ ಯುದ್ಧದ ದೃಶ್ಯ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿಯ ಪ್ರೇಕ್ಷಕರು ರಂಗದ ಮೇಲೆ ಬೊಂಬೆಯಾಟದ ಕಲಾಪ್ರದರ್ಶನ ನೋಡಿ ಬಹಳ ಕಾಲವೇ ಆಗಿತ್ತು. ಕಲಬುರಗಿ ನಾಟಕೋತ್ಸವ ಇಂಥದ್ದೊಂದು ಪ್ರಯೋಗವನ್ನು ನೋಡುವ ಅವಕಾಶ ಕಲ್ಪಿಸಿತ್ತು. ದೆಹಲಿಯ ಕಟ್ ಕಥಾ ಪಪೆಟ್ ಟ್ರಸ್ಟ್‌ನವರ 'ಅಬೌಟ್ ರಾಮ್' ಪ್ರದರ್ಶನ ಬೊಂಬೆಯಾಟದ ಆಧುನಿಕ ಕಲಾ ಸಾಧ್ಯತೆಗಳನ್ನು ತೆರೆದಿಟ್ಟಿತು. ಪ್ರಸಿದ್ಧ ಬೊಂಬೆಯಾಟ ಪ್ರದರ್ಶಕಿ ಅನುರೂಪಾ ರಾಯ್ ನಿರ್ದೇಶನದಲ್ಲಿ ಇದು ಮೂಡಿಬಂತು.

ಮಾತುಗಳಿಲ್ಲದೆ ಕೇವಲ ಸಂಗೀತ ಮತ್ತು ಹಲವು ಬಗೆಯ ಸದ್ದುಗಳ ಬಳಕೆಯಿಂದ ರಾಮಾಯಣದ ಪ್ರಸಂಗಗಳನ್ನು ನಿರೂಪಿಸಿದ್ದರು. ಸಾಂಪ್ರದಾಯಿಕ ಕಲಾ ಪ್ರಕಾರ ಇಲ್ಲಿ ಕೊಲಾಜ್ ಮಾದರಿಯ ರೂಪು ಪಡೆದಿತ್ತು. ತೊಗಲ ಬೊಂಬೆ, ಚಿತ್ರಪಟದ ಬೊಂಬೆ, ಕೈಗವಸಿನ ಬೊಂಬೆ, ಸೂತ್ರದ ಬೊಂಬೆ, ಬುನ್‌ರಾಕ್ ಬೊಂಬೆ, ಮುಖವಾಡಗಳು, ನಟರನ್ನು ಏಕಕಾಲಕ್ಕೆ ಒಳಗೊಂಡ ಪ್ರಯೋಗವಿದು.

ಬೊಂಬೆ ಮತ್ತು ನಟರ ಮುಖಾಮುಖಿ ಅಚ್ಚರಿಗೊಳಿಸುವಷ್ಟು ಹೊಸತನದಿಂದ ಕೂಡಿತ್ತು. ಮೈಮ್‌ನ ಆಕರ್ಷಕ ಅಭಿವ್ಯಕ್ತಿ ಒಂದೆಡೆಯಾದರೆ, ಬೊಂಬೆಗಳ ಮಾಂತ್ರಿಕ ದೈಹಿಕ ಚಲನೆ ಇನ್ನೊಂದೆಡೆ. ರಾಮಾಯಣದ ಕತೆ, ಬೊಂಬೆಯಾಟದ ಕಲೆ, ಗ್ರಾಫಿಕ್ಸ್ ತಂತ್ರಜ್ಞಾನವನ್ನು ಸೇರಿಸಿ ಪ್ರಯೋಗವನ್ನು ಅಣಿಗೊಳಿಸಲಾಗಿತ್ತು. ಹಲವು ಕಲಾ ಸಾಧ್ಯತೆಗಳನ್ನು ಏಕಸೂತ್ರದಲ್ಲಿ ಹೊಂದಿಸುವ ಪ್ರಯತ್ನವಿದು. ಹೊಸ ಪ್ರೇಕ್ಷಕರನ್ನು ಹೊಸ ರೀತಿಯಲ್ಲಿ ತಲುಪುವ ವಿಧಾನವಿದು. ಪರಂಪರೆ ಮತ್ತು ಆಧುನಿಕತೆಗಳ ಸಂಗಮದಂತಿತ್ತು.

ರಂಗಭೂಮಿಯನ್ನು ಕ್ರಿಯಾಶೀಲಗೊಳಿಸುವ ಮಾರ್ಗಗಳಲ್ಲಿ ಇದೂ ಕೂಡ ಒಂದು. ಹಳೆಯದು ಮತ್ತು ಹೊಸದು, ಪರಂಪರೆ ಮತ್ತು ಆಧುನಿಕತೆ ಇಂಥ ಭೇದಗಳು ಅಳಿದು ಎಲ್ಲವೂ ರಂಗದ ಮೇಲೆ ರೂಪಾಂತರಗೊಳ್ಳುತ್ತಿರುವುದರ ಸೂಚನೆಯಂತಿತ್ತು. ಸ್ವಾತಂತ್ರ್ಯ, ಮುಕ್ತತೆ, ಪ್ರಯೋಗಶೀಲತೆಯಿಂದ ಹಳೆಯ ಕಲಾಪ್ರಕಾರಗಳು ಕೂಡ ಬೆಳಗಿಕೊಳ್ಳುತ್ತವೆ. ಆಧುನಿಕ ರಂಗಭೂಮಿಯ ಜಾಡ್ಯತೆಯನ್ನು ಕೊಂಚ ಅಲುಗಾಡಿಸುತ್ತವೆ. ಬೊಂಬೆಯಾಟದ ವಿಕಸಿತ ರಂಗರೂಪವಿದು.

ಸೀತೆ ಅಪಹರಣವಾದ ಮೇಲೆ ರಾಮ ದುಃಖದಲ್ಲಿ ತೊಳಲಾಡುತ್ತಿರುವುದರ ಮೂಲಕ ನಾಟಕ ಆರಂಭವಾಯಿತು. ಅಶೋಕವನದಲ್ಲಿ ಏಕಾಂಗಿ ಸೀತೆ, ಹನುಮಂತನ ಪ್ರವೇಶ, ಲಂಕೆಯನ್ನು ಬೆಂಕಿಗೆ ಆಹುತಿಯಾಗಿಸಿದ್ದು, ರಾಮ ಹಾಗೂ ರಾವಣರ ನಡುವಿನ ಯುದ್ಧ, ಸೀತೆಯ ಆಗಮನ, ಆಕೆಯ ಶೀಲದ ಕುರಿತ ಶಂಕೆ, ಸೀತೆ ಭೂಮಿಯ ಒಡಲೊಳಗೆ ಸೇರಿದ್ದು ಕೊನೆಗೆ ರಾಮ ಪಟ್ಟದ ಮೇಲೆ ವಿಷಣ್ಣನಾಗಿ ಕುಳಿತುಕೊಳ್ಳುವುದರೊಂದಿಗೆ ನಾಟಕಕ್ಕೆ ತೆರೆ ಬಿದ್ದಿತ್ತು.

ಸೀತೆಯದೂ ಕೂಡ ಅದೇ ಪಾಡು. ಅಶೋಕವನದಲ್ಲೂ ಆಕೆ ಏಕಾಂಗಿ, ಇನ್ನೇನು ರಾಮನೊಂದಿಗೆ ಜೀವನ ಆರಂಭಿಸಬೇಕೆಂದುಕೊಂಡಾಗ ಅದಕ್ಕೆ ಅವಕಾಶವಾಗದು. ರಾಮ ನಾಟಕದ ಆರಂಭದಲ್ಲೂ ಏಕಾಂಗಿ, ಮುಕ್ತಾಯದಲ್ಲೂ ಏಕಾಂಗಿ. ಒಟ್ಟಿನಲ್ಲಿ ರಾಮನಿಗೆ ಏಕಾಂಗಿ ಜೀವನ ತಪ್ಪಿದ್ದಲ್ಲ. ಹೊರಗಿನ ಎಲ್ಲಾ ಯುದ್ಧಗಳನ್ನು ಗೆದ್ದ ಮೇಲೂ ಆತನ ಮನಸ್ಸಿನಲ್ಲಿ ನಡೆಯುತ್ತಿರುವ ಯುದ್ಧ ನಿಲ್ಲುತ್ತಿಲ್ಲ. ಆತನ ಮನೋರಂಗವೂ ಒಂದು ರಣರಂಗವಾಗಿಯೇ ಪರಿವರ್ತನೆಯಾಗಿದೆ. ಅಲ್ಲಿ ಮತ್ತೆ ಮತ್ತೆ ಗಾಯಗೊಳ್ಳುತ್ತಿರುವವನು ಸ್ವತಃ ರಾಮ. ರಾಮನಿಗೆ ಅದೆಷ್ಟು ಗಾಯಗಳು. ನಾಟಕದ ಕೊನೆಯಲ್ಲಿ ಪಟ್ಟದ ಮೇಲೆ ಮೂಕವಾಗಿ ಬಂದು ಕುಳಿತ ರಾಮನ ಮೂಕವೇದನೆ ಪ್ರೇಕ್ಷಕರಿಗೆ ತಾಕಿದಂತ್ತಿತ್ತು. ಪರಿಚಿತವಿರುವ ಕತೆಯ ಎಳೆಗಳು ಬೊಂಬೆಗಳ ಮೂಲಕ ಬಿಚ್ಚಿಕೊಂಡಿತ್ತು. ಹಾಗೆ ನೋಡಿದರೆ ಕತೆ ಇಲ್ಲಿ ಮುಖ್ಯವೇ ಅಲ್ಲ. ಕತೆಯ ನಿರೂಪಣೆಯೇ ಮುಖ್ಯ ಎನ್ನುವಂತಿತ್ತು.

ಈ ಬೊಂಬೆಯ ಕಲಾ ಪ್ರದರ್ಶನದಲ್ಲಿ ನಿರ್ದೇಶಕರ ಕಲ್ಪನೆ ಒಂದೆಡೆಯಾದರೆ, ಈ ಬೊಂಬೆಗಳ ದೇಹದ ಪ್ರಮಾಣ ಕೊಡುವ ಸೂಚನೆಗಳು ಇನ್ನೊಂದೆಡೆ. ತಮ್ಮ ನಟನೆಯ ಸೂಚನೆಗಳನ್ನು ಇವುಗಳ ದೇಹಾಕೃತಿಗಳೇ ನಿರ್ಧರಿಸುತ್ತವೆ. ಅವುಗಳ ದೇಹ ಪ್ರಮಾಣದಿಂದಾಗಿ ಹಿಗ್ಗುವಿಕೆ ಮತ್ತು ಕುಗ್ಗುವಿಕೆ ನಿರ್ಧಾರಗೊಳ್ಳುತ್ತದೆ. ಯಾವ ಸ್ತರದಲ್ಲಿ ಅವುಗಳ ಚಲನೆಯನ್ನು ಕೈಗೊಳ್ಳಬಹುದು ಎಂಬುದು ನಿರ್ದೇಶಕರಿಗೆ ಹೊಳೆಯುತ್ತದೆ. ಕತೆಯ ಸಂದರ್ಭಕ್ಕೆ ತಕ್ಕಂತೆ ಇವುಗಳ ಚಲನೆಯ ಗತಿಯನ್ನು ನಿರ್ಧರಿಸಿದ್ದು ಅನುರೂಪಾ ರಾಯ್ ಅವರ ಸೂಕ್ಷ್ಮತೆಗೆ ಸಾಕ್ಷಿಯಾಗಿತ್ತು. ದುಃಖದಲ್ಲಿ ಕೂತ ರಾಮ, ವ್ಯಗ್ರತೆಯಿಂದ ಕಾದಾಡುತ್ತಿದ್ದ ರಾಮನ ನಡುವೆ ಎಷ್ಟೆಲ್ಲಾ ವ್ಯತ್ಯಾಸವಿತ್ತು. ಎರಡೂ ಕೂಡ ಒಂದೇ ಬೊಂಬೆ. ಆದರೆ ಸೂತ್ರಧಾರರ ಕೈಚಳಕ ಅವುಗಳ ಸ್ವಭಾವವನ್ನೆ ಬದಲಾಯಿಸಿತ್ತು.

ಬೊಂಬೆ ನಿರ್ಜೀವವಾದದ್ದು. ಆದರೆ ನಟರ ಸಹಾಯದಿಂದ ಅವು ಜೀವಂತಗೊಂಡು, ಜೀವಂತ ಕತೆಯನ್ನು ಮಂಡಿಸಿದವು. ಬೊಂಬೆಗಳ ಮುಖಭಾವ ಯಾವಾಗಲೂ ಸ್ಥಿರವಾದದ್ದು. ಆದರೆ ಅವುಗಳ ಆಂಗಿಕ ಚಲನೆಯ ಮುಖಾಂತರ ಅವುಗಳ ಭಾವಲೋಕ ಹೊರಹೊಮ್ಮುತ್ತಿತ್ತು. ಕೆಲವೊಂದು ಬೊಂಬೆಗಳನ್ನು ನಿರ್ವಹಿಸಲು ಒಬ್ಬ ಸೂತ್ರಧಾರ ಮಾತ್ರವಿದ್ದರೆ, ರಾಮನ ಬೊಂಬೆಯನ್ನು ನಿರ್ವಹಿಸಿಲು ಮೂವರು ಸೂತ್ರಧಾರರಿದ್ದರು.

ರಾಮ ಬುನ್‌ರಾಕ್ ಬೊಂಬೆಯ ರೂಪದಲ್ಲಿದ್ದ. ಬೊಂಬೆಯ ಸೊಂಟ ಮತ್ತು ಕೈ ಒಬ್ಬ ನಟನ ಕೈಯಲ್ಲಿದ್ದರೆ, ಇನ್ನೊಂದು ಕೈ ಮತ್ತು ತಲೆ ಇನ್ನೊಬ್ಬ ನಟನ ಕೈಯಲ್ಲಿತ್ತು. ಎರಡೂ ಕಾಲುಗಳನ್ನು ಆಡಿಸಲು ಹಿಮ್ಮಡಿ ಹಿಡಿದುಕೊಂಡ ಮತ್ತೊಬ್ಬ ನಟನಿದ್ದ. ಮೂವರ ಕೈಚಳಕ ಮತ್ತು ಸಮನ್ವಯತೆಯಲ್ಲಿ ಅಪೂರ್ವ ಸಿದ್ಧಿಯಿತ್ತು. ಮನುಷ್ಯರಂತೆಯೇ ಬೊಂಬೆ ವರ್ತಿಸುತ್ತಿತ್ತು. ಇದಕ್ಕಿಂತಲೂ ವಿಶೇಷವಾದದ್ದೆಂದರೆ ಮನುಷ್ಯರಿಗೆ ಸಾಧ್ಯವಾಗದ್ದನ್ನೂ ಬೊಂಬೆ ಅಭಿನಯಿಸಿ ತೋರಿಸುತ್ತಿತ್ತು. ಬೊಂಬೆಯಾಡಿಸುತ್ತಿದ್ದ ನಟರು ಯಾಂತ್ರಿಕವಾಗಿ, ಅವರ ಕೈಯಲ್ಲಾಡುತ್ತಿದ್ದ ಬೊಂಬೆ ಜೀವಂತವಾಗಿ ತೋರಹತ್ತಿದವು. ನಿರ್ದೇಶಕರು ಇನ್ನೂ ಹೊಸ ತಂತ್ರಗಳಿಗೆ ಅವಕಾಶ ಕಲ್ಪಿಸಿದ್ದರು. ಬೊಂಬೆಯಾಡಿಸುತ್ತಿದ್ದ ನಟರೇ ಒಮ್ಮೊಮ್ಮೆ ಪಾತ್ರಧಾರಿಗಳಾಗಿ ಬೊಂಬೆಗಳೊಂದಿಗೆ ಕಾದಾಟಕ್ಕಿಳಿಯುತ್ತಿದ್ದರು. ಆಡಿಸುವವನೇ ಎದುರಾಳಿಯಾದಾಗ ನಾಟಕಕ್ಕೆ ಇನ್ನಷ್ಟು ಕಳೆಗಟ್ಟಿತ್ತು. ಪರಂಪರಾಗತ ಕಲಾಪ್ರದರ್ಶನಗಳನ್ನು ಕರಗಿಸಿ ಹೊಸ ಅಚ್ಚಿಗೆ ಎರಕಹೊಯ್ಯುವ ದಾರಿಗಳನ್ನು ಈ ಪ್ರದರ್ಶನ ದಿಟ್ಟವಾಗಿ ಕಾಣಿಸಿತ್ತು.

ಬೊಂಬೆಯಾಟವು ಕೇವಲ ಪರಂಪರೆಯ ಅವಶೇಷವಲ್ಲ; ಅದು ಸಮಕಾಲೀನ ರಂಗಭಾಷೆಯ ಸಾಧ್ಯತೆಯೂ ಹೌದು.



ಕಲ್ಬಿ

ದನಗಳ 'ಕಲ್ಬಿ' ಕಣ್ಮರೆ

• ಬೀರಣ್ಣ ನಾಯಕ ಮೊಗಟಾ

ಹಿಂದಿನಿಂದಲೂ ಹೈನುಗಾರಿಕೆ ಕೃಷಿಯ ಅವಿಭಾಜ್ಯ ಅಂಗವಾಗಿತ್ತು. ದನದ ಕೊಟ್ಟಿಗೆ ಇಲ್ಲದ ಮನೆಗಳೇ ವಿರಳ. ಹಾಲು, ಮೊಸರು, ತುಪ್ಪದ ಅಗತ್ಯಕ್ಕೆ ಮಾತ್ರವಲ್ಲ, ಹೊಲದ ಕೆಲಸಗಳಿಗೆ ಎತ್ತು, ಕೋಣ, ಆಕಳುಗಳು ಅನಿವಾರ್ಯವಾಗಿದ್ದವು.

ಹುಲ್ಲು-ಮೇವು ಸಮೃದ್ಧವಾಗಿದ್ದ ಮಲೆನಾಡಿನಲ್ಲಿ 'ಗೋವುಗಳಿಲ್ಲದ ಮನೆ ಎಂದರೆ ಮಕ್ಕಳಿಲ್ಲದ ಮನೆ' ಎಂಬ ಮಾತು ಕೂಡ ಪ್ರಸಿದ್ಧವಾಗಿತ್ತು. ಹಟ್ಟಿಯಲ್ಲಿದ್ದ ದನಕರುಗಳು ಮನೆಯ ಸದಸ್ಯರಂತೆ ಕಾಣಲಾಗುತ್ತಿತ್ತು. ಹೀಗಾಗಿ ದನಗಳನ್ನು ಸಾಕಲು ಮನೆಗಳಲ್ಲಿ ಹಲವು ರೀತಿಯ ವ್ಯವಸ್ಥೆಗಳನ್ನೂ ಮಾಡಲಾಗುತ್ತಿತ್ತು. ಅವುಗಳಲ್ಲಿ ಗಮನಾರ್ಹವಾದುದು ದನಗಳ ಆಹಾರ ಸಂಗ್ರಹಕ್ಕಾಗಿ ನಿರ್ಮಿಸುತ್ತಿದ್ದ 'ಕಲ್ಬಿ'.

ಮಲೆನಾಡಿನ ಮನೆಗಳಲ್ಲಿ ಬಡವರಾಗಲಿ, ಶ್ರೀಮಂತರಾಗಲಿ ಮನೆಯ ಹೊರಭಾಗದ ಒಂದು ಮೂಲೆಯಲ್ಲಿ ದನದ ಕೊಟ್ಟಿಗೆ ಸಾಮಾನ್ಯ. ಮನೆಯವರ ಸಾಮರ್ಥ್ಯಕ್ಕೆ ತಕ್ಕಂತೆ ಕೊಟ್ಟಿಗೆಯ ನಿರ್ಮಾಣವಾಗುತ್ತಿತ್ತು. ಅದರೊಳಗೆ ಹುಲ್ಲು ಸಂಗ್ರಹಿಸಲು ಅಟ್ಟ, ಹಿಂಡಿ ಮತ್ತು ಇತರೆ ಆಹಾರ ಸಂಗ್ರಹಿಸಲು ವಿಶೇಷ ವ್ಯವಸ್ಥೆಗಳು ಕೂಡ ಇದ್ದವು. ಈ ವ್ಯವಸ್ಥೆಗಳ ನಡುವೆ ಪ್ರಮುಖ ಸ್ಥಾನ ಪಡೆದಿದ್ದುದೇ 'ಕಲ್ಬಿ'.



ಕಲ್ಬಿ ಒಳಗೆ...

ಮಲೆನಾಡಿನ ದೀರ್ಘ ಮಳೆಗಾಲವನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡ ವ್ಯವಸ್ಥೆಯಿದು. ಮಳೆ ನೀರು ತಟ್ಟದ ಸುರಕ್ಷಿತ ಸ್ಥಳದಲ್ಲಿ 'ಕಲ್ಬಿ'ಯನ್ನು ನಿರ್ಮಿಸುತ್ತಿದ್ದರು. ಸಾಮಾನ್ಯವಾಗಿ ಸುಮಾರು ಏಳು ಅಡಿ ಉದ್ದ, ಮೂರೂವರೆ ಅಡಿ ಅಗಲ ಹಾಗೂ ಮೂರೂವರೆ ಅಡಿ ಎತ್ತರದ ಈ ಕಲ್ಬಿಯನ್ನು ಹಿಂಡಿ ಕಣಜ, ಗೋದಾನಿ, ದನಬಳ್ಳು ಎಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತು. ನಾಲ್ಕು ಬದಿಗಳ ಗೋಡೆಗಳನ್ನು ಕಲ್ಲು ಅಥವಾ ದಪ್ಪ ಹಲಿಗೆಯಿಂದ ಕಟ್ಟಿಕೊಂಡು, ಮೇಲ್ಭಾಗಕ್ಕೆ ಮರದ ಹಲಗೆಯ ಮುಚ್ಚಳ ಹಾಕುತ್ತಿದ್ದರು.

ಈ ಕಲ್ಬಿಯೊಳಗೆ ದನಗಳಿಗೆ ಬೇಕಾಗುವ ವಿಶೇಷ ಆಹಾರವನ್ನು ಸಂಗ್ರಹಿಸುತ್ತಿದ್ದರು. ಹಿಂಡಿ, ಹತ್ತಿ ಕಾಳು, ಹುರಳಿ, ಕೊಬ್ಬರಿ ಹಿಂಡಿ, ಶೇಂಗಾ ಹಿಂಡಿ ಮುಂತಾದ ಪೌಷ್ಟಿಕ ಮೇವುಗಳನ್ನು ಇಲ್ಲಿ ತುಂಬಿಡುತ್ತಿದ್ದರು. ಮಳೆಗಾಲದ ಮೂರು ನಾಲ್ಕು ತಿಂಗಳು ಹೊರಗೆ ಮೇವು ದೊರಕದ ಸಂದರ್ಭದಲ್ಲೂ ದನಗಳಿಗೆ ಆಹಾರ ಕೊರತೆಯಾಗದಂತೆ ಈ ಸಂಗ್ರಹ ನೆರವಾಗುತ್ತಿತ್ತು. ಈ ರೀತಿಯ ಸಂಗ್ರಹ ವ್ಯವಸ್ಥೆಯಿಂದ ಮೇವು ತೇವದಿಂದ ಹಾಳಾಗುವುದಿಲ್ಲ; ಇಲಿ, ಹೆಗ್ಗಣಗಳ ಹಾನಿಯೂ ಕಡಿಮೆ. ದನಗಳ ಆಹಾರವನ್ನು ಸುರಕ್ಷಿತವಾಗಿ ಉಳಿಸುವಲ್ಲಿ 'ಕಲ್ಬಿ' ಮನೆತನದ ಜಾಣ್ಮೆಯ ಸಂಕೇತವಾಗಿತ್ತು.

ಆದರೆ ಕಾಲ ಬದಲಾಗುತ್ತಿದ್ದಂತೆ ಮಲೆನಾಡಿನ ಬದುಕಿನ ಚಿತ್ರವೂ ಬದಲಾಗುತ್ತಿದೆ. ಮನೆಮನೆಗಳಲ್ಲಿ ಕಂಡುಬರುವ ಕೊಟ್ಟಿಗೆಗಳು ನಿಧಾನವಾಗಿ ಕಾಣೆಯಾಗುತ್ತಿವೆ. ದನಕರುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಸು ಸಾಕುವವರ ಪ್ರಮಾಣವೂ ಗಣನೀಯವಾಗಿ ಕುಸಿದಿದೆ. ಹಳೆಯ ಕಾಲದ ಈ ರೀತಿಯ ವ್ಯವಸ್ಥೆಗಳು ಈಗ ಅಪರೂಪದ ನೆನಪುಗಳಾಗಿ ಉಳಿದಿವೆ.

ಇಂತಹ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಮತ್ತಿಹಳ್ಳಿಯ ಲಕ್ಷ್ಮೀನಾರಾಯಣ ಹೆಗಡೆ ಅವರ ಮನೆಯಲ್ಲೊಂದು 'ಕಲ್ಬಿ' ಕಾಣಿಸಿದಾಗ, ಅದು ಕೇವಲ ಒಂದು ಹಳೆಯ ಸಂಗ್ರಹ ಪೆಟ್ಟಿಗೆಯಂತೆ ಕಾಣುವುದಿಲ್ಲ. ಅದು ಮಲೆನಾಡಿನ ಬದುಕಿನ ಒಂದು ಅಧ್ಯಾಯವನ್ನು, ದನಗಳೊಂದಿಗೆ ಬೆಸೆದುಕೊಂಡಿದ್ದ ಕೃಷಿ ಸಂಸ್ಕೃತಿಯ ಒಂದು ತುಣುಕನ್ನು, ಹಳೆಯ ಕಾಲದ ಮನೆಯ ಜಾಣ್ಮೆಯನ್ನು ನೆನಪಿಸುವ ಜೀವಂತ ಸಾಕ್ಷಿಯಂತೆ ತೋರುತ್ತದೆ.

ಬಯಲಿನಿಂದ...

12ನೇ ಪುಟದಿಂದ...

ಅಲ್ಲಿ ಒಂದು ಎನ್‌ಜಿಒನಲ್ಲಿ ಕೆಲಸ ಆರಂಭಿಸಿದರು. ರತನ್ ಟಾಟಾ ಟ್ರಸ್ಟ್‌ಗೆ ಸಂಬಂಧಿಸಿದ 'ಸ್ಕೂಲ್ ಪ್ರೊಫೈಲ್' ಯೋಜನೆಯಡಿಯಲ್ಲಿ ಶಾಲೆಗಳ ಮೂಲಸೌಕರ್ಯಗಳ ಬಗ್ಗೆ ಲೆಕ್ಕಪರಿಶೀಲನೆ ನಡೆಯುತ್ತಿತ್ತು. ದಾಖಲೆಗಳಲ್ಲಿ ನೋಡಿದರೆ ಎಲ್ಲವೂ ಸರಿಯಾಗಿಯೇ ಕಾಣಿಸುತ್ತಿತ್ತು. ಶಾಲೆಗಳಲ್ಲಿ ಕಟ್ಟಡಗಳಿವೆಯೇ?–ಹೌದು. ಹೆಣ್ಣುಮಕ್ಕಳಿಗೆ ಶೌಚಾಲಯಗಳಿವೆಯೇ?–ಇದಕ್ಕೂ ಉತ್ತರ ಹೌದು.

ಆದರೆ ನಿಜಸ್ಥಿತಿ ನೋಡಲು ಶಾಲೆಗಳತ್ತ ಹೆಜ್ಜೆ ಇಟ್ಟಾಗ ಚಿತ್ರಣ ಸಂಪೂರ್ಣ ಭಿನ್ನವಾಗಿತ್ತು.

ಕೆಲವು ಶೌಚಾಲಯಗಳಿಗೆ ಬಾಗಿಲೇ ಇರಲಿಲ್ಲ. ಕೆಲವೆಡೆ ಬಾಗಿಲಿದ್ದರೂ ನೀರು ಇರಲಿಲ್ಲ. ಇನ್ನೂ ಕೆಲವು ಶೌಚಾಲಯಗಳು ಮನುಷ್ಯರು ಬಳಸಲಾಗದಷ್ಟು ಕೊಳಕಾಗಿದ್ದವು. ದಾಖಲೆಗಳಲ್ಲಿ ಇದ್ದ 'ಶೌಚಾಲಯ'ಗಳು ವಾಸ್ತವದಲ್ಲಿ ಮಕ್ಕಳಿಗೆ ಬಳಕೆಯಾಗದ ಸ್ಥಿತಿಯಲ್ಲಿದ್ದವು.

ಈ ಅನುಭವ ಅರ್ಚನಾಳ ಮನಸ್ಸಿನಲ್ಲಿ ಪ್ರಶ್ನೆಗಳ ಮಳೆಗರೆಯಿತು.

2017ರಿಂದ 2020ರವರೆಗೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿರುವ 35ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಅವರು ಭೇಟಿ ನೀಡಿದರು. ಅಲ್ಲಿನ ಮಕ್ಕಳೊಂದಿಗೆ ಮಾತನಾಡಿದರು. ಆ ಮಾತುಕತೆಗಳಲ್ಲಿ ಹೊರಬಂದ ಸಂಗತಿಗಳು ಅವರನ್ನು ಒಳಗಿಂದಲೇ ಕದಡಿದವು.

ಗ್ರಾಮೀಣ ಭಾಗದ ಅನೇಕ ಹೆಣ್ಣುಮಕ್ಕಳು ಮುಟ್ಟಿನ ಸಮಯದಲ್ಲಿ ಶಾಲೆಗೆ ಬರಲು ಸಂಕೋಚ ಪಡುತ್ತಿದ್ದರು. ಕಾರಣ ಸರಳ, ಶಾಲೆಯ ಶೌಚಾಲಯಗಳ ದುಸ್ಥಿತಿ. ಬೆಳಿಗ್ಗೆ ಎಂಟು ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೆ ಮಕ್ಕಳು ನೈಸರ್ಗಿಕ ಕ್ರಿಯೆಗಳನ್ನು ತಡೆದುಕೊಂಡೇ ತರಗತಿಯಲ್ಲಿ ಕುಳಿತಿರಬೇಕಾಗುತ್ತಿತ್ತು.

ಈ ದೃಶ್ಯಗಳನ್ನು ಕಂಡಾಗ ಅರ್ಚನಾಳಿಗೆ ತಮ್ಮ ಬಾಲ್ಯದ ನೆನಪುಗಳು ಮರಳಿ ಬಂದವು. ಬಾಲ್ಯದಲ್ಲಿ ಅನುಭವಿಸಿದ್ದ ಆತಂಕ, ದುಗುಡ ಮತ್ತು ಯಾರಿಗೂ ಹೇಳಿಕೊಳ್ಳಲಾಗದ ಸಂಕೋಚ ಎಲ್ಲವೂ ಮತ್ತೆ ಕಣ್ಣ ಮುಂದೆ ಬಂದವು. ಅದೇ ಸಂಕೋಚವನ್ನು ಅವರು ಶಾಲೆಯ ಹೆಣ್ಣುಮಕ್ಕಳ ಮುಖದಲ್ಲೂ ಕಂಡರು.



ಮುಟ್ಟಿನ ಪ್ಯಾಡ್‌ಗಳ ಬಗ್ಗೆ ವಿದ್ಯಾರ್ಥಿನಿಯರಿಗೆ ಅರಿವು ಮೂಡಿಸುತ್ತಿರುವ ಅರ್ಚನಾ

'ಇದಕ್ಕಾಗಿ ಏನಾದರೂ ಮಾಡಲೇಬೇಕು' ಎಂಬ ಸಂಕಲ್ಪ ಅಲ್ಲಿಂದಲೇ ಹುಟ್ಟಿತು.

ಆ ಸಮಯದಲ್ಲಿ ಒಂದು ಶಾಲೆಗೆ ಶೌಚಾಲಯ ನಿರ್ವಹಣೆಗೆ ವರ್ಷಕ್ಕೆ ಸರಾಸರಿ ಕೇವಲ ₹108 ಮಾತ್ರ ಬಜೆಟ್ ಇತ್ತು. ಒಂದು ಫಿನಾಯಿಲ್ ಬಾಟಲ್ ಕೂಡ ಖರೀದಿಸಲು ಸಾಕಾಗದಷ್ಟು ಮೊತ್ತ ಅದು.

ಶಾಲೆಗಳಿಗೆ ಭೇಟಿ ನೀಡಿದಾಗಲೆಲ್ಲಾ ಅರ್ಚನಾ ಅಲ್ಲಿ ಕಂಡ ದುಸ್ಥಿತಿಯ ಚಿತ್ರಗಳನ್ನು ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲು ಆರಂಭಿಸಿದರು. ಟ್ವಿಟರ್‌ನಲ್ಲಿ ಅವುಗಳನ್ನು ಪ್ರಕಟಿಸಿ ಆಗಿನ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರನ್ನು ಟ್ಯಾಗ್ ಮಾಡುತ್ತಿದ್ದರು.

'ಸಚಿವರನ್ನು ನೇರವಾಗಿ ಭೇಟಿಯಾಗುವಷ್ಟು ಪ್ರಭಾವ ನನಗಿರಲಿಲ್ಲ. ಆದರೆ ಸಾಮಾಜಿಕ ಮಾಧ್ಯಮ ಸಾಮಾನ್ಯರಿಗೂ ಧ್ವನಿಯಾಗಬಹುದು ಎಂದು ನನಗೆ ಅರ್ಥವಾಯಿತು' ಎಂದು ಅರ್ಚನಾ ಆ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

ಸಂಗ್ರಹಿಸಿದ ಮಾಹಿತಿಯನ್ನು ಆಧಾರವನ್ನಾಗಿ ಮಾಡಿಕೊಂಡು ಅವರು ಸುರಕ್ಷಿತ ಮತ್ತು ಸುವ್ಯವಸ್ಥಿತ ಶೌಚಾಲಯಗಳಿಗಾಗಿ ಅಭಿಯಾನ ಆರಂಭಿಸಿದರು.

ಅರ್ಚನಾ ಸ್ಥಾಪಿಸಿದ 'ಸ್ಟ್ಯಾಂಡ್4ಶೀ' ಎಂಬ ಉಪಕ್ರಮ ಇಂದು ಈ ಹೋರಾಟದ ಪ್ರಮುಖ ವೇದಿಕೆಯಾಗಿದೆ. ಮಾಹಿತಿ ಸಂಗ್ರಹ ಮತ್ತು ಸಂಶೋಧನೆ, ವರ್ತನೆ ಬದಲಾವಣೆ, ಮೂಲಸೌಕರ್ಯಗಳ ಮರುವಿನ್ಯಾಸ ಮತ್ತು ಸ್ವಚ್ಛತಾ ಸಿಬ್ಬಂದಿಗೆ ತರಬೇತಿ–ಈ ನಾಲ್ಕು ಪ್ರಮುಖ ಅಂಶಗಳ ಮೇಲೆ ಈ ಸಂಸ್ಥೆ ಕಾರ್ಯನಿರ್ವಹಿಸುತ್ತದೆ.

ಗ್ರಾಮಗಳಲ್ಲಿನ ಉತ್ಸಾಹಿ ಯುವಕರನ್ನು ಗುರುತಿಸಿ ಅವರಿಗೆ ತರಬೇತಿ ನೀಡಲಾಗುತ್ತದೆ. ಇದರಿಂದ ಶೌಚಾಲಯಗಳ ಮರುವಿನ್ಯಾಸದಲ್ಲಿ ಸ್ಥಳೀಯರೇ ಭಾಗಿಯಾಗುತ್ತಾರೆ. ಸರ್ಕಾರಿ ಶಾಲೆಗಳ ಕಿಶೋರಿಯರಿಗಾಗಿ ವಿಶೇಷ ಕಾರ್ಯಾಗಾರಗಳನ್ನೂ ನಡೆಸಲಾಗುತ್ತಿದೆ.

ಈ ಅಭಿಯಾನದ ಪರಿಣಾಮವಾಗಿ 2021ರ ಮಾರ್ಚ್ 8ರಂದು ಕರ್ನಾಟಕ ಸರ್ಕಾರ ಸರ್ಕಾರಿ ಶಾಲೆಗಳ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ ₹100 ಕೋಟಿ ಬಜೆಟ್ ಘೋಷಿಸಿತು.

ಆದರೆ ಅರ್ಚನಾಳ ಹೋರಾಟ ಅಲ್ಲಿಗೆ ನಿಂತಿಲ್ಲ. ಸರ್ಕಾರ ಮೀಸಲಿಟ್ಟ ಹಣವು ಶಾಲೆಗಳಲ್ಲಿ ಹೇಗೆ ಬಳಕೆಯಾಗುತ್ತಿದೆ ಎಂಬುದನ್ನು ಪರಿಶೀಲಿಸಲು ಅವರ ತಂಡ ಇನ್ನೂ ಕಾರ್ಯನಿರ್ವಹಿಸುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಹತ್ತು ಶಾಲೆಗಳಿಗೆ ಭೇಟಿ ನೀಡಿ ವರದಿ ಸಿದ್ಧಪಡಿಸಲಾಗುತ್ತಿದೆ.

ಈ ಹಾದಿಯಲ್ಲಿ ವೈಯಕ್ತಿಕ ಸವಾಲುಗಳೂ ಬಂದಿವೆ. ಶೌಚಾಲಯಗಳಿಗಾಗಿ ಕೆಲಸ ಮಾಡುತ್ತಿರುವ ಕಾರಣದಿಂದ ಮದುವೆ ಪ್ರಸ್ತಾವನೆಗಳೇ ನಿರಾಕರಿಸಲ್ಪಟ್ಟ ಸಂದರ್ಭಗಳೂ ಇದ್ದವು. ಆದರೂ ಅರ್ಚನಾ ತಮ್ಮ ಗುರಿಯಿಂದ ಹಿಂದೆ ಸರಿದಿಲ್ಲ. 'ನನ್ನ ಕನಸು ತುಂಬ ಸರಳ. ಒಂದು ದಿನ ಶಾಲೆಯ ಪ್ರತಿ ಹುಡುಗಿಯೂ ಆತ್ಮವಿಶ್ವಾಸದಿಂದ 'ಇದು ನಮ್ಮ ಶಾಲೆಯ ಶೌಚಾಲಯ. ಇದನ್ನು ನಾನು ಬಳಸುತ್ತೇನೆ' ಎಂದು ಹೆಮ್ಮೆಯಿಂದ ಹೇಳಬೇಕು' ಎನ್ನುತ್ತಾರೆ ಅವರು.


ಆತ್ಮಗೌರವ, ಆತ್ಮವಿಶ್ವಾಸ ಮತ್ತು ಸಮಾನತೆಯ ಅರಿವು–ಇವುಗಳ ಮೊದಲ ಹೆಜ್ಜೆ ಕೆಲವೊಮ್ಮೆ ದೊಡ್ಡ ವೇದಿಕೆಗಳಿಂದ ಆರಂಭವಾಗುವುದಿಲ್ಲ. ಅದು ಶಾಲೆಯ ಒಂದು ಸರಳ ಶೌಚಾಲಯದಿಂದಲೂ ಆರಂಭವಾಗಬಹುದು.

ಹಾಗಾದರೆ, ಸ್ವಗೌರವ ಮತ್ತು ಕ್ರಾಂತಿಕಾರಿ ಹೆಜ್ಜೆ ಶಾಲೆಯ ಶೌಚಾಲಯದಿಂದಲೇ ಆರಂಭವಾಗುತ್ತದೆ ಎಂದು ನಿಮಗೂ ಅನಿಸುವುದಿಲ್ಲವೇ?

ಅನುವಾದ: ರೂಪಾ ಕೆ.ಎಂ.

ಮೊದಲ ಓದು

ಒಂಟಿತನದಲ್ಲಿ ಅರಳಿದ ಕಥೆಗಾರ



ಬರಹಗಾರನೊಬ್ಬನ ಒಂಟಿ ನಡಿಗೆ
ಮೂಲ: ರಸ್ಕಿನ್ ಬಾಂಡ್
ಅನು: ಎಂ.ಎಸ್. ರಘುನಾಥ್
ಪ್ರ: ಕಾಮಧೇನು ಪುಸ್ತಕ ಭವನ
ಸಂ: 9448468939

ಲೇಖಕರ ಬಾಲ್ಯ ಹೇಗಿದ್ದಿರಬಹುದು. ಅವರನ್ನು ಬರೆಯಲು ಪ್ರೇರೇಪಿಸಿದ ಸಂಗತಿಗಳು ಯಾವುದಿರಬಹುದು ಎಂಬ ಕುತೂಹಲ ಸದಾ ಇರುತ್ತದೆ. ಇದಕ್ಕೆ ಪೂರಕವೆಂಬಂತಿದೆ ರಸ್ಕಿನ್ ಬಾಂಡ್ ಅವರ 'ಬರಹಗಾರನೊಬ್ಬನ ಒಂಟಿ ನಡಿಗೆ' ಆತ್ಮಚರಿತ್ರೆ. ಇದನ್ನು ಕನ್ನಡಕ್ಕೆ ಎಂ.ಎಸ್. ರಘುನಾಥ್ ತಂದಿದ್ದಾರೆ.


ಬ್ರಿಟಿಷ್ ಆಡಳಿತಗಾರರ ನಡುವೆ ಮೇಲ್ಮಧ್ಯಮ ಕುಟುಂಬದಲ್ಲಿ ಬೆಳೆದ ರಸ್ಕಿನ್ ಒಂಟಿತನದಲ್ಲಿಯೇ ತಮ್ಮನ್ನು ಕಂಡುಕೊಂಡವರು. ಕುಟುಂಬದ ಸದಸ್ಯರಂತಿದ್ದ ಕೆಲಸದವರಿಂದ ಕೇಳಿದ ಬೆರಗಿನ ಕಥೆಗಳು ಅವರ ಬಾಲ್ಯವನ್ನು ಒಪ್ಪಗೊಳಿಸಿವೆ. ಅದು ಅವರ ಸೃಜನಶೀಲ ಲೋಕವನ್ನು ವಿಸ್ತರಿಸಲು ನೆರವಾಗಿವೆ ಎಂಬುದನ್ನು ಅವರು ಹೇಳಲು ಮರೆಯುವುದಿಲ್ಲ. ಒಂದು ಸೃಜನಶೀಲ ಮನಸ್ಸಿಗೆ ಸಾಂಪ್ರದಾಯಿಕ ಶಿಕ್ಷಣದಿಂದ ಅಷ್ಟೇನೂ ಪ್ರೇರಪಣೆ ಸಿಗುವುದಿಲ್ಲ. ಅದಕ್ಕಾಗಿ ಅವರು ಅನುಭವಿಸುವ ಕಷ್ಟಗಳನ್ನು ಸರಳವಾಗಿ ತಿಳಿಸಿದ್ದಾರೆ.

ಪರೀಕ್ಷೆ ಹಾಗೂ ಪರೀಕ್ಷಕರ ಬಗ್ಗೆ ಲೇಖಕರಿಗಿದ್ದ ಅಸಡ್ಡೆಯನ್ನೂ ಇಲ್ಲಿ ಬಿಡಿಸಿ ಹೇಳಲಾಗಿದೆ. ತಾನು ಯಾರು, ತನ್ನ ವಂಶಾವಳಿ ಏನು ಎಂಬುದು ರಸ್ಕಿನ್ ಬಾಂಡ್ ಅವರನ್ನು ತೀವ್ರ ಕಾಡಿ, ಅದಕ್ಕಾಗಿ ಅವರು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಓಡಾಟದ ಮೂಲಕ ಹುಡುಕಾಟ ನಡೆಸುತ್ತಾರೆ. ಬದುಕಿನ ಹಲವು ಮಜಲುಗಳಲ್ಲಿ ಅಡಗಿರುವ ಪ್ರೀತಿ, ಪ್ರೇಮ, ಪ್ರಣಯದ ಹುಡುಕಾಟವನ್ನೂ ವಿಸ್ತೃತವಾಗಿ ತಿಳಿಸುತ್ತಾ ಹೋಗುತ್ತಾರೆ ರಸ್ಕಿನ್.

ಕಥೆಗಾರ ಹುಟ್ಟಿಕೊಂಡ ಬಗೆಯ ರಸ್ಕಿನ್ ಅವರ ಬದುಕಿನ ಹಲವು ಪುಟಗಳಲ್ಲಿ ಅಡಗಿದೆ. ಆದರೆ, ಈ ಕಥೆಗಳನ್ನು ಇನ್ನಷ್ಟು ಸಹಜ ಕನ್ನಡದಲ್ಲಿ ತರುವ ಅವಕಾಶ ಅನುವಾದಕರಿಗಿತ್ತು.

ಪುಟ: 358 ₹500

ಕರಾವಳಿಯ ಕೋಮು ಹಿಂಸಾಚಾರದ ಪರಿಚಯ



ಕರಾವಳಿಯ ರಕ್ತಕಣ್ಣೀರು
ಲೇ: ಇರ್ಷಾದ್ ಉಪ್ಪಿನಂಗಡಿ
ಪ್ರ: ಅಹರ್ನಿಶಿ
ಸಂ: 9449174662


ಕರಾವಳಿಯ ಕೋಮು ಹಿಂಸಾಚಾರವನ್ನು ಸ್ಥೂಲವಾಗಿ ಕಟ್ಟಿಕೊಡುವ ಕೃತಿ ಇದು. ಕೋಮು ದಳ್ಳುರಿಗೆ ಬಲಿಯಾದವರ ಮನೆಯ ದಯನೀಯ ಪರಿಸ್ಥಿತಿ, ಗಲಭೆಗಳಿಂದಾಗುವ ಸಾಮಾಜಿಕ, ರಾಜಕೀಯ ಹಾಗೂ ಕೌಟುಂಬಿಕ ಪರಿಣಾಮಗಳನ್ನು ಲೇಖಕರು ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿ ದಾಖಲಿಸಿದ್ದಾರೆ. ಕರಾವಳಿಯಲ್ಲಿ ಹುಟ್ಟಿ, ಬೆಳೆದು, ಅಲ್ಲಿಯೇ ವೃತ್ತಿ ಮಾಡಿ, ಅಲ್ಲಿನ ದ್ವೇಷದ ಬೆಂಕಿ ಕಾವನ್ನು ಖುದ್ದು ಅನುಭವಿಸಿದ್ದರಿಂದ, ಮತೀಯ ಗಲಭೆಗಳು ಸೃಷ್ಟಿಸುವ ನಿರ್ವಾತವನ್ನು ಭಾವಪೂರ್ಣವಾಗಿ ದಾಖಲಿಸಿದ್ದಾರೆ. ಯಾವುದೇ ಪ್ರಕರಣವನ್ನು ವೈಭವೀಕರಿಸದೆ, ಘಟನೆಯ ಹಿಂದಿನ ಆಯಾಮಗಳನ್ನು ನೈಜವಾಗಿ ಕಟ್ಟಿಕೊಟ್ಟಿದ್ದಾರೆ. ಕೋಮು ಹಿಂಸಾಚಾರಕ್ಕೆ ಬಲಿಯಾದ 13 ಕುಟುಂಬಗಳ ನೋವಿನ ಕಥೆಗಳು ಇಲ್ಲಿದೆ.

ಪ್ರಕರಣದ ಬಗ್ಗೆ ಸೀಮಿತವಾಗಿ ವಿವರಿಸಿ, ಅದರಿಂದ ಆ ಕುಟುಂಬಕ್ಕಾದ ಪರಿಣಾಮಗಳ ಬಗ್ಗೆ ಹೆಚ್ಚು ಒತ್ತು ನೀಡಲಾಗಿದೆ. ಕೊಲೆ ನಡೆದು, ಕೆಲವು ದಿನ ಚರ್ಚೆಯಲ್ಲಿದ್ದು ಎಲ್ಲವೂ ತಣ್ಣಗಾಗುತ್ತದೆ. ಆದರೆ ಆ ಕುಟುಂಬ ಅನುಭವಿಸುತ್ತಿರುವ ನೋವು, ಭಯ, ತಲ್ಲಣ ಮೊದಲಾದವು ಮರೆಯಾಗಿ ಬಿಡುತ್ತದೆ. ಕೋಮು ಅಫೀಮು ತಲೆಗೇರಿಸಿಕೊಂಡ ಘಾತುಕರು, ಅಮಾಯಕರನ್ನು, ಜೊತೆಗೆ ಇದ್ದ ಸ್ನೇಹಿತರನ್ನೇ ಕೊಲೆ ಮಾಡುವ ಭಯಾನಕ ಸಂಗತಿಗಳು ದಿಗ್ಭ್ರಮೆ ಮೂಡಿಸುತ್ತವೆ. ದ್ವೇಷದ ಜ್ವಾಲೆಗೆ ಬಲಿಯಾದವರೆಲ್ಲಾ ಬಡತನ ಹಿನ್ನೆಲೆಯುಳ್ಳ, ತಾವಾಯಿತು ತಮ್ಮ ಪಾಡಾಯಿತು ಎಂದಿದ್ದವರು ಎನ್ನುವುದು ಕೋಮುವಾದದ ಬೇರುಗಳು ಕರಾವಳಿಯಲ್ಲಿ ಹೇಗೆ ಬೇರೂರಿದೆ ಎನ್ನುವುದನ್ನು ಸೂಚಿಸುತ್ತದೆ.

ಮತೀಯವಾದದ ನಡುವೆಯೂ ಕರಾವಳಿಯಲ್ಲಿ ಬೇರೂರಿರುವ ಸೌಹಾರ್ದ ಪರಂಪರೆ ಬಗ್ಗೆಯೂ ಪುಸ್ತಕ ಬೆಳಕು ಚೆಲ್ಲುತ್ತದೆ. ತಮ್ಮವರನ್ನು ಕೊಂದವರ ಧರ್ಮವನ್ನು ದ್ವೇಷಿಸದ ತಾಯಂದಿರ ಮುಗ್ಧ ಮನಸುಗಳ ಪರಿಚಯವೂ ಇದೆ. ದಕ್ಷಿಣ ಕನ್ನಡದಲ್ಲಿ ಕೋಮು ಜ್ವಾಲೆಗೆ ಬಲಿಯಾದ 40 ಮಂದಿ ಅಮಾಯಕರ ಪಟ್ಟಿ, ಸಣ್ಣ ವಿವರಣೆಯೊಂದಿಗೆ ಲೇಖಕರು ನೀಡಿದ್ದಾರೆ. ದಕ್ಷಿಣ ಕನ್ನಡದ ಮೊದಲ ಕೋಮು ಗಲಭೆಯ ವಿವರವಾದ ಅಧ್ಯಾಯವೂ ಇದೆ.

ಪುಟ: 144 ₹160

ಗ್ರಾಹಕ ಹಕ್ಕುಗಳ ಮಾಹಿತಿ



ಬಳಕೆಸ್ನೇಹಿ ಜಗತ್ತು
ಲೇ: ವೈ.ಜಿ. ಮುರಳೀಧರನ್
ಪ್ರ: ಅಭಿನವ
ಸಂ: 9448804905

ಕನ್ನಡದಲ್ಲಿ ಗ್ರಾಹಕ ಹಕ್ಕುಗಳ ಕುರಿತು ಗಟ್ಟಿಯಾಗಿ ಧ್ವನಿಯೆತ್ತಿದವರಲ್ಲಿ ವೈ.ಜಿ.ಮುರಳೀಧರನ್ ಕೂಡ ಒಬ್ಬರು. ಈ ವಿಚಾರ ಕುರಿತು ಅವರು ಈತನಕ 3,500ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ನಾಡಿನ ಹಲವು ಪತ್ರಿಕೆಗಳಲ್ಲಿ ಗ್ರಾಹಕ ಜಾಗೃತಿ ಮೂಡಿಸುವ ಇವರ ಅಂಕಣಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಆಯ್ದ ಬರಹಗಳ ಸಂಗ್ರಹವೇ 'ಬಳಕೆಸ್ನೇಹಿ ಜಗತ್ತು' ಕೃತಿ. 'ಗ್ರಾಹಕ ಆಂದೋಲನ', 'ಗ್ರಾಹಕರ ಹಕ್ಕುಗಳು', 'ಆರೋಗ್ಯ ನೀತಿ' ಎಂಬ ಮೂರು ವಿಭಾಗಗಳಲ್ಲಿ ಒಟ್ಟು 42 ಲೇಖನಗಳನ್ನು ಈ ಪುಸ್ತಕ ಹೊಂದಿದೆ.

'ಖರೀದಿಸಿದ ವಸ್ತುವನ್ನು ಮರಳಿ ಪಡೆಯುವುದಿಲ್ಲ' ಎಂಬ ಉಲ್ಲೇಖ ಸಾಕಷ್ಟು ವಸ್ತುಗಳಲ್ಲಿ, ಮಳಿಗೆಗಳಲ್ಲಿ ಇರುತ್ತದೆ. ಆದರೆ ಈ ಸಾಲು ಕಾನೂನು ಬಾಹಿರ. ಯಾವುದೇ ಸಂಸ್ಥೆ ಒಂದು ವಸ್ತುವನ್ನು ಮಾರಾಟ ಮಾಡುವಾಗ ಹಲವು ಕಾನೂನುಗಳನ್ನು ಪಾಲಿಸಬೇಕು. ಅವುಗಳಲ್ಲಿ ಯಾವುದೇ ಒಂದು ಪಾಲನೆಯಾಗದಿದ್ದರೂ ಸಂಸ್ಥೆ ಆ ವಸ್ತುವನ್ನು ಮರಳಿ ಪಡೆಯಲೇಬೇಕು. ಇದರ ಅರಿವಿದ್ದ ಗ್ರಾಹಕರೊಬ್ಬರು ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಖರೀದಿಸಿದ್ದ ಆಹಾರ ಪದಾರ್ಥವೊಂದರ ವಿರುದ್ಧ ನ್ಯಾಯಾಲಯದ ಮೆಟ್ಟಿಲು ಏರುತ್ತಾರೆ. 'ಖರೀದಿಸಿದ ವಸ್ತುವನ್ನು ಹಿಂತಿರುಗಿಸಲು ಸಾಧ್ಯವಿದೆ' ಎಂಬ ಲೇಖನದಲ್ಲಿ ಈ ಇಡೀ ಪ್ರಕರಣ ಮತ್ತು ಅದರ ಫಲಶ್ರುತಿಯನ್ನು ಚೆನ್ನಾಗಿ ವಿವರಿಸಿದ್ದಾರೆ. ನ್ಯಾಯಾಲಯದಲ್ಲಿ ಬಗೆಹರಿದ ಈ ರೀತಿ ಹಲವು ಪ್ರಕರಣಗಳು ಕೃತಿಯಲ್ಲಿ ಸಿಗುತ್ತವೆ. ಜತೆಗೆ, ಸಾಮಾನ್ಯ ಗ್ರಾಹಕನಿಗೆ ಆತನ ಹಕ್ಕಿನ ಕುರಿತು ಜಾಗೃತಿ ಮೂಡಿಸುತ್ತವೆ.

ಗ್ರಾಹಕ ಕಾನೂನು, ಸರ್ಕಾರದ ನೀತಿಗಳ ಕುರಿತು ಹಲವು ಲೇಖನಗಳಿವೆ. ಆದರೆ ಅವುಗಳಲ್ಲಿ ಬಹುತೇಕ ಒಂದು ದಶಕದ ಹಿಂದಿನ ಲೇಖನಗಳು. ಹೀಗಾಗಿ ಕೆಲವು ವಿಷಯಗಳು ಇಂದಿಗೆ ಹಳತು ಅನ್ನಿಸುತ್ತವೆ. ಆದರೆ ಅಂದು ಪ್ರಸ್ತಾಪಿಸಿದ ಒಂದಷ್ಟು ವಿಷಯಗಳಲ್ಲಿ ಇಂದಿಗೂ ಮಹತ್ತರ ಬದಲಾವಣೆ ಆಗದಿರುವುದು ನಮ್ಮ ಆಡಳಿತ ವ್ಯವಸ್ಥೆಯ ಕಾರ್ಯವೈಖರಿಗೆ ಹಿಡಿದ ಕನ್ನಡಿಯಂತಿದೆ. ಗ್ರಾಹಕ ಹಕ್ಕಿನ ಕುರಿತು ಆಸಕ್ತಿ ಇರುವವರು, ಸಾಮಾನ್ಯ ಗ್ರಾಹಕ ತಿಳಿದುಕೊಳ್ಳಲೇಬೇಕಿರುವ ಸಾಕಷ್ಟು ಅಂಶಗಳು ಕೃತಿಯಲ್ಲಿವೆ.


ಪುಟ: 144 ₹200

ಪ್ರವಾಸ

ಭೀಮಬೆಟ್ಕಾ ಆದಿಮಾನವನ ಚಿತ್ರಕಲಾರಂಗ

ಪ್ರಯಾಣ ಯಾವಾಗ ಸೂಕ್ತ?
ಭೋಪಾಲ್‌ನಿಂದ ಸುಮಾರು 50 ಕಿ.ಮೀ ದೂರ. ಕಾರಿನಲ್ಲಿ ಪ್ರಯಾಣಿಸಿದರೆ ಸುಮಾರು 60–90 ನಿಮಿಷಗಳು ಬೇಕು. ಬೆಳಿಗ್ಗೆ 7.00ರಿಂದ ಸಂಜೆ 5.30 ಭೇಟಿಗೆ ಸೂಕ್ತ ಸಮಯ. ಬಿಸಿಲು ತಪ್ಪಿಸಲು ಬೆಳಿಗ್ಗೆ ಅಥವಾ ಸಂಜೆ ಸಮಯ ಉತ್ತಮ.

ಭೋಪಾಲ್ ಸಮೀಪದ ಈ ಶಿಲಾಶ್ರಯಗಳಲ್ಲಿ ಬಗೆಬಗೆಯ ಚಿತ್ರಗಳಿವೆ. ಇವು ನಮ್ಮ ಪೂರ್ವಜರ ಉಸಿರಾಟದ ತಾಣ. ಭೀಮ ವಿಶ್ರಾಂತಿ ಪಡೆದ ಸ್ಥಳವೆಂದೂ ಗುರುತಿಸಿಕೊಂಡಿರುವ ಈ ಗುಹೆಗಳಲ್ಲಿನ ಬಣ್ಣದ ಲೋಕದಲ್ಲೊಂದು ಸುತ್ತು...



ಶಿಲಾಶ್ರಯಗಳ ಹೊರನೋಟ ಹೀಗಿದೆ...



ಬೇಟೆಗೆ ಹೊರಟ ತಂಡ ಕಲ್ಲಿನ ಮೇಲೆ ಅಚ್ಚೊತ್ತಿದಾಗ..



ಬಗೆಬಗೆಯ ವನ್ಯಪ್ರಾಣಿಗಳ ಲೋಕ



ಈ ಚಿತ್ರಗಳು ಹೇಳುವ ಕಥೆ ಹತ್ತಾರು...

• ಚಿತ್ರ–ಬರಹ: ರಾಜೇಶ್ ಕಲ್ಲಾಜೆ

ಮಾನವ ಪ್ರಭೇದದ ಉಗಮ ಸುಮಾರು ಮೂರು ಲಕ್ಷ ವರ್ಷಗಳ ಹಿಂದೆ ಆಫ್ರಿಕಾ ಖಂಡದಲ್ಲಿ ಆಯಿತು ಎಂದು ವಿಜ್ಞಾನಿಗಳು ನಂಬುತ್ತಾರೆ. ಅಲ್ಲಿಂದ ಜಗತ್ತಿನ ವಿವಿಧ ದಿಕ್ಕುಗಳಿಗೆ ವಲಸೆ ಹೋದ ಮಾನವ, ಭಾರತದ ನೆಲವನ್ನೂ ತಲುಪಿದ. ಆ ಹೆಜ್ಜೆಗುರುತುಗಳು ಕಲ್ಲಿನ ಮೇಲೆ ಬಣ್ಣವಾಗಿ ಉಳಿದಿರುವ ಸ್ಥಳವೇ ಭೋಪಾಲ್ ಸಮೀಪದ ಭೀಮಬೆಟ್ಕಾ.

ಭೀಮಬೆಟ್ಕಾ 'ರಾತಾಪಾನಿ' ವನ್ಯಜೀವಿ ಅಭಯಾರಣ್ಯದ ಒಳಗೆ, ಸುಮಾರು 2000 ಹೆಕ್ಟೇರು ಪ್ರದೇಶದಲ್ಲಿ ಹರಡಿಕೊಂಡಿದೆ. ಇಲ್ಲಿ 750ಕ್ಕೂ ಹೆಚ್ಚು ಶಿಲಾಶ್ರಯಗಳಿದ್ದು, ಅವುಗಳಲ್ಲಿ ಕೆಲವು 30,000 ವರ್ಷಗಳಷ್ಟು ಹಳೆಯವು ಎಂದು ಪುರಾತತ್ವ ಅಧ್ಯಯನಗಳು ಸೂಚಿಸುತ್ತವೆ. ಶಿಲಾಯುಗದಿಂದ ಹಿಡಿದು ಕ್ರಿ.ಶ. ಸುಮಾರು 1000ನೇ ಇಸವಿಯವರೆಗೂ ವಿವಿಧ ಕಾಲಘಟ್ಟಗಳಲ್ಲಿ ಜನ ಇಲ್ಲಿ ವಾಸಿಸಿದ್ದರು.

ಬಂಡೆಕಲ್ಲುಗಳ ವಿಶಾಲ ಮಡಿಲುಗಳು ಮಳೆ, ಗಾಳಿ, ಬಿಸಿಲಿನಿಂದ ರಕ್ಷಣೆ ನೀಡುವ ಸಹಜ ಆಶ್ರಯ. ಆ ಆಶ್ರಯಗಳಲ್ಲಿ ಬದುಕಿದ ಆದಿಮಾನವ ತನ್ನ ದೈನಂದಿನ ಜೀವನವನ್ನು ಕಲ್ಲಿನ ಮೇಲೆ ಬರೆದಿಟ್ಟಿದ್ದಾನೆ–ಬೇಟೆ, ನೃತ್ಯ, ಕುಟುಂಬ, ಕಾಡುಪ್ರಾಣಿಗಳು, ಸಮೂಹ ಚಟುವಟಿಕೆಗಳು... ಇವುಗಳೆಲ್ಲವೂ ಸ್ಥಳೀಯ ನೈಸರ್ಗಿಕ ವರ್ಣಗಳಿಂದ ಮೂಡಿಬಂದ ಚಿತ್ರಗಳು.



ಕಾಡುಹಂದಿಯ ಚಿತ್ರಣ

'ಭೀಮಬೆಟ್ಕಾ' ಎಂಬ ಹೆಸರಿನ ಹಿಂದೆ ಪೌರಾಣಿಕ ಕಥನವೂ ಇದೆ. ಮಹಾಭಾರತದ ಭೀಮನು ವಿಶ್ರಾಂತಿ ಪಡೆದ ಸ್ಥಳ ಎಂಬುವುದು ಜನಪ್ರಿಯ ನಂಬಿಕೆ.

ಮರೆವಿನೊಳಗಿಂದ ಬೆಳಕಿಗೆ

1888ರಲ್ಲಿ ಬ್ರಿಟಿಷ್ ಅಧಿಕಾರಿಗಳು ಈ ಸ್ಥಳವನ್ನು ಮೊದಲು ಬೌದ್ಧ ಸ್ಮಾರಕವೆಂದು ತಪ್ಪಾಗಿ ಗುರುತಿಸಿದ್ದರು. ಆದರೆ 1957ರಲ್ಲಿ ಪುರಾತತ್ವಜ್ಞರಾದ ವಿಷ್ಣು ಶ್ರೀಧರ್ ವಾಕಂಕರ್ ಇದರ ನಿಜಸ್ವರೂಪವನ್ನು ಜಗತ್ತಿಗೆ ಪರಿಚಯಿಸಿದರು. 1970ರಿಂದ ವ್ಯಾಪಕ ಸರ್ವೇಕ್ಷಣಾ ಕೆಲಸ ಹಾಗೂ ಅಧ್ಯಯನ ಕಾರ್ಯಗಳು ಆರಂಭವಾದವು.

ಅಧ್ಯಯನಗಳ ಪ್ರಕಾರ, ಇಲ್ಲಿ ಶಿಲಾಯುಗದಿಂದ ಕ್ರಿ.ಪೂ. ಎರಡನೇ ಶತಮಾನದವರೆಗೂ ನಿರಂತರ ಮಾನವ ವಾಸ್ತವ್ಯವಿತ್ತು. ನಂತರ ಕೃಷಿ ಮತ್ತು ಸ್ಥಿರ ಜೀವನ ಪ್ರಾರಂಭವಾದಂತೆ ಗುಹಾ ವಾಸ ಕಡಿಮೆಯಾದರೂ, ಮಾನವನ ಸಾನ್ನಿಧ್ಯ ಸಂಪೂರ್ಣ ನಿಂತಿರಲಿಲ್ಲ. ಸುಮಾರು 2000–1500 ವರ್ಷಗಳ ಹಿಂದೆ ಸ್ಥಳೀಯ ಆದಿವಾಸಿಗಳಿಂದ ಮೂಡಿದಂತಹ ಚಿತ್ರಗಳೂ ಇಲ್ಲಿ ಕಾಣಸಿಗುತ್ತವೆ. ಅಂದರೆ, ಭೀಮಬೆಟ್ಕಾ ಕೇವಲ ಒಂದು ಯುಗದ ಕಥೆಯಲ್ಲ; ಅನೇಕ ಯುಗಗಳ ಸಂವಾದ.

ಸಭಾಂಗಣದಿಂದ ಮೃಗಾಲಯದವರೆಗೆ

ಇಲ್ಲಿನ ಪ್ರಮುಖ ಶಿಲಾಶ್ರಯಗಳಲ್ಲಿ 'ಸಭಾಂಗಣ ಗುಹೆ' ವಿಶಾಲವಾದುದು. ಇದರ ಒಳಗೆ ಸಣ್ಣ ಮಗುವಿನ ಎಡಗೈ ಮುದ್ರೆ, ಬೇಟೆಯ ದೃಶ್ಯಗಳು, ಕಾಡುಪ್ರಾಣಿಗಳ ಚಿತ್ರಗಳು ಸ್ಪಷ್ಟವಾಗಿ ಕಾಣುತ್ತವೆ. ಸಾವಿರಾರು ವರ್ಷಗಳ ಹಿಂದೆ ಮಗು ತನ್ನ ಕೈಯನ್ನು ಬಣ್ಣದಲ್ಲಿ ಮುಳುಗಿಸಿ ಕಲ್ಲಿನ ಮೇಲೆ ಒತ್ತಿದ್ದು ಇಂದಿಗೂ ನೋಡಬಹುದು.

'ಮೃಗಾಲಯ ಗುಹೆ' ಮತ್ತೊಂದು ವಿಶೇಷ ತಾಣ. ಇಲ್ಲಿ ಆನೆ, ಜಿಂಕೆ, ಖಡ್ಗಮೃಗ, ನವಿಲು, ಹಂದಿ, ಹಾವು, ಕಾಡುಕೋಣಗಳ ಚಿತ್ರಣಗಳಿವೆ. ಕಾಡಿನ ಜೀವಜಗತ್ತಿನ ವೈವಿಧ್ಯವನ್ನು ಬಣ್ಣದಲ್ಲಿ ಹಿಡಿದಿಟ್ಟಿರುವ ಈ ಗುಹೆ, ಆದಿಮಾನವನ ಪ್ರಕೃತಿ ಸಂವೇದನೆಯನ್ನು ಅನಾವರಣಗೊಳಿಸುತ್ತದೆ. 750ಕ್ಕೂ ಹೆಚ್ಚು ಶಿಲಾಶ್ರಯಗಳಿದ್ದರೂ, ಕೇವಲ 15–20 ಗುಹೆಗಳಷ್ಟೇ ಪ್ರವಾಸಿಗರಿಗೆ ತೆರೆಯಲಾಗಿದೆ.

ವಿಶ್ವ ಪಾರಂಪರಿಕ ಮುದ್ರೆ

ಭಾರತದ ಹಲವೆಡೆ ಶಿಲಾಶ್ರಯಗಳಿದ್ದರೂ, ಭೀಮಬೆಟ್ಕಾದಷ್ಟು ಹಳೆಯ ಮತ್ತು ನಿರಂತರ ಚಿತ್ರಣಗಳಿರುವ ಸ್ಥಳಗಳು ವಿರಳ. ಜಗತ್ತಿನ ಮಟ್ಟದಲ್ಲೂ ಇಂತಹ ಪುರಾತನ ಚಿತ್ರಕಲೆಗೆ ಸ್ಪೇನ್ ಮತ್ತು ಫ್ರಾನ್ಸ್ ದೇಶಗಳಲ್ಲಿನ ಕೆಲವು ಶಿಲಾಚಿತ್ರ ತಾಣಗಳಷ್ಟೇ ಸಮಾನ.

ಈ ವೈಶಿಷ್ಟ್ಯದ ಕಾರಣದಿಂದ 2003ರಲ್ಲಿ ಯುನೆಸ್ಕೊ ಭೀಮಬೆಟ್ಕಾ ಶಿಲಾಶ್ರಯಗಳನ್ನು ವಿಶ್ವ ಪಾರಂಪರಿಕ ತಾಣವೆಂದು ಘೋಷಿಸಿತು. ಇದು ಕೇವಲ ಭಾರತೀಯ ಇತಿಹಾಸದ ಗೌರವವಲ್ಲ; ಮಾನವಕುಲದ ಸಂಯುಕ್ತ ಸ್ಮೃತಿಯ ಗೌರವ.

ಭೀಮಬೆಟ್ಕಾ ಪ್ರವಾಸವೆಂದರೆ ಕೇವಲ ಗುಹೆಗಳನ್ನು ನೋಡುವುದು ಅಲ್ಲ. ಅದು ಕಾಲಯಾನ. ಕಲ್ಲಿನ ಮೇಲೆ ಮೂಡಿದ ಆ ಮಿಡಿಮಿಡಿ ರೇಖೆಗಳು ನಮ್ಮ ಪೂರ್ವಜರ ಉಸಿರಾಟ. ಅವರ ಭಯ, ಅವರ ಹರ್ಷ, ಅವರ ಸಮೂಹಿಕ ಜೀವನ ಇವೆಲ್ಲವೂ ಬಣ್ಣಗಳಲ್ಲಿ ಉಳಿದಿವೆ. ಇತಿಹಾಸದಲ್ಲಿ, ಮಾನವನ ವಿಕಾಸದಲ್ಲಿ, ಕಲೆಯ ಆದಿಯಲ್ಲಿ ಆಸಕ್ತಿ ಇರುವ ಎಲ್ಲರೂ ತಪ್ಪದೆ ಭೇಟಿ ನೀಡಬೇಕಾದ ತಾಣ ಇದು. ❖

ಪಾಲಂನ ಪ್ರಭೇಚಿಯ ಫುಟ್‌ಪಾತ್ ಹೋರಾಟ

12ನೇ ಪುಟದಿಂದ...

'ಪಾದಚಾರಿ ಮಾರ್ಗ ಪಾದಚಾರಿಗಳಿಗೆ. ಇದು ನಿಯಮ. ಈ ವಿಚಾರದಲ್ಲಿ ರಾಜಿಯೇ ಇಲ್ಲ.'

ಕೋಯಿಕ್ಕೋಡ್ ಜಿಲ್ಲೆಯ ಎರಞಿಪಾಲಂನ ಕೊಯೇರಿಯ ಪಾಲಂನಲ್ಲಿ ವಾಸಿಸುವ ಪ್ರಭಾವತಿ ಅಮ್ಮ, ಹೋರಾಟದ ಮನೋಭಾವವನ್ನು ಬಾಲ್ಯದಲ್ಲೇ ಮೈಗೂಡಿಸಿಕೊಂಡವರು. ಎಡ ಚಳವಳಿಯಲ್ಲಿ ಸಕ್ರಿಯರಾಗಿದ್ದ ಸೋದರಮಾವ ಮನೆಗೆ ತರುತ್ತಿದ್ದ ಪತ್ರಿಕೆಗಳು, ನಿಯತಕಾಲಿಕೆಗಳು, ಪುಸ್ತಕಗಳು ಅವರ ಚಿಂತನೆಗೆ ದಿಕ್ಕು ತೋರಿಸಿವೆ. ಅನ್ಯಾಯ ಕಂಡರೆ ಮೌನವಾಗಿರದ ಸ್ವಭಾವ ಅಲ್ಲಿ ಬೆಳೆದದ್ದು.

ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವರು ಸಿಪಿಎಂನ ಮಹಿಳಾ ಘಟಕದ ಕೋಯಿಕ್ಕೋಡ್ ಜಿಲ್ಲಾ ಸಮಿತಿಯಲ್ಲಿ ಸಕ್ರಿಯರಾಗಿದ್ದರು. ಕೆ.ಆರ್.ಗೌರಿ ಅಮ್ಮ ಅವರಿಂದ ಪ್ರೇರಣೆ ಪಡೆದವರು. ರಾಜಕೀಯ ಮತ್ತು ಸಾಮಾಜಿಕ ಹೋರಾಟಗಳು ಅವರ ಜೀವನದ ಅವಿಭಾಜ್ಯ ಅಂಗವಾಗಿದ್ದವು.

ನಿಯಮ ಪಾಲನೆ; ವೈಯಕ್ತಿಕ ನಂಬಿಕೆ

70ರ ದಶಕದಲ್ಲೇ ಕಾರು, ಬೈಕ್ ಓಡಿಸಲು ಕಲಿತವರು ಪ್ರಭಾವತಿ. ಹುಡುಗರ ಜೊತೆ ಕ್ರಿಕೆಟ್, ಫುಟ್ಬಾಲ್ ಆಡಿದವರು. ಆ ಕಾಲಕ್ಕೆ ಅದು ಅಪರೂಪ. ಹಾಸ್ಟೆಲ್ ವಾರ್ಡನ್ ಆಗಿ ಕೋಯಿಕ್ಕೋಡ್, ತಿರುವನಂತಪುರ, ಎರ್ನಾಕುಳಂ ನಗರಗಳಲ್ಲಿ ಕೆಲಸ ಮಾಡುವಾಗ ಲಂಚದ ವಿರುದ್ಧ ಧ್ವನಿ ಎತ್ತಿದವರು.

'ನಾನು ಯಾವಾಗಲೂ ನಿಯಮ ಪಾಲಿಸುತ್ತೇನೆ. ಅದು ದೊಡ್ಡ ಸಾಧನೆ ಅಲ್ಲ. ಆದರೆ ಎಲ್ಲರೂ ಪಾಲಿಸಬೇಕು' ಎಂದು ಅವರು ಹೇಳುತ್ತಾರೆ.

ಒಮ್ಮೆ ಫುಟ್‌ಪಾತ್‌ನಲ್ಲಿ ಬಂದ ಬೈಕ್ ಸವಾರನನ್ನು ತಡೆದಿದ್ದಕ್ಕೆ ಅವಾಚ್ಯ ಶಬ್ದಗಳಿಂದ ನಿಂದನೆ ಎದುರಿಸಿದ್ದರು. ಕೋಪಗೊಂಡ ಪ್ರಭಾವತಿ ಅಮ್ಮ ಮುಷ್ಟಿ ಮಾಡಿ ಹೊಡೆದಿದ್ದರು. ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರಿತು. ಕೊನೆಗೆ ಯುವಕ ಕ್ಷಮೆ ಕೇಳಿದ.

ಪಾದಚಾರಿ ಮಾರ್ಗದಲ್ಲಿ ವಾಹನ ಚಲಾಯಿಸುವುದರ ಬಗ್ಗೆ ಅವರು ಹಲವಾರು ಬಾರಿ ಪೊಲೀಸರಿಗೆ ದೂರು ನೀಡಿದ್ದಾರೆ. ಅವರ ಮೊಬೈಲ್‌ನಲ್ಲಿ ಇಂತಹ ಅನೇಕ ವಿಡಿಯೊಗಳಿವೆ. ಆದರೆ ಫೆಬ್ರುವರಿ 10ರ ಘಟನೆ ಮಾತ್ರ ದೇಶದ ಗಮನ ಸೆಳೆದದ್ದು.

ವಿಡಿಯೊವನ್ನು ಚಿತ್ರೀಕರಿಸಿದ್ದ ಅಫ್ಲಾಹ್ ಎಂಬ ಯುವಕ ತನ್ನ 'ಅಫ್ಲು ಸ್ಟೋರಿಸ್' ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದರು. 'ಇಷ್ಟೊಂದು ದೊಡ್ಡ ಮಟ್ಟದಲ್ಲಿ ಈ ವಿಡಿಯೊ ವೈರಲ್ ಆಗುತ್ತದೆ ಎಂದು ಊಹಿಸಲಿಲ್ಲ' ಎಂದು ಹೇಳುತ್ತಾರೆ.

ದೇಶಾದ್ಯಂತ ಸುದ್ದಿ

ಕೇರಳ ಸಾರಿಗೆ ಸಚಿವ ಕೆ.ಬಿ. ಗಣೇಶ್ ಕುಮಾರ್ ಕರೆ ಮಾಡಿ ಅಭಿನಂದಿಸಿದರು. ಕೇರಳ ಮೋಟಾರು ವಾಹನ ಇಲಾಖೆ ಅಧಿಕಾರಿಗಳು ಮನೆಗೆ ಬಂದು ಸನ್ಮಾನಿಸಿದರು. ಪೊಲೀಸರು ಸಂಚಾರ ನಿಯಮ ಜಾಗೃತಿ ಕಾರ್ಯಕ್ರಮಗಳಲ್ಲಿ ಅವರನ್ನು ಮಾದರಿಯಾಗಿ ಮುಂದಿಟ್ಟರು. ಸ್ಕೂಟರ್ ಸವಾರನ ಪರವಾನಗಿಯನ್ನು ಅಮಾನತು ಮಾಡಿ, ಒಂದು ವಾರ ಸಂಚಾರ ನಿಯಮ ತರಬೇತಿ ಕೇಂದ್ರಕ್ಕೆ ಕಳುಹಿಸಲಾಯಿತು.

ಟೀಕೆಗಳೂ ಬಂದವು. 'ಇದು ಪೊಲೀಸರ ಕೆಲಸ, ನಿಮ್ಮದು ಅಲ್ಲ' ಎಂದೂ ಕೆಲವರು ಹೇಳಿದರು. ಆದರೆ ಪ್ರಭೇಚಿಗೆ ಉತ್ತರ ಸಿದ್ಧ. 'ನಾನು ಪೊಲೀಸ್ ಅಲ್ಲ. ಆದರೆ ನಾಗರಿಕಳು. ಫುಟ್‌ಪಾತ್‌ನಲ್ಲಿ ನಡೆಯುವವರ ಸುರಕ್ಷತೆ ನನ್ನ ಹೊಣೆಗಾರಿಕೆಯೂ ಹೌದು' ಎನ್ನುತ್ತಾರೆ.

ಕೇರಳ ಸರ್ಕಾರದ ಸಾಕ್ಷರತಾ ಕೋರ್ಸ್ ಪೂರ್ಣಗೊಳಿಸಿರುವ ಅವರು ಇಂಗ್ಲಿಷ್ ಅನ್ನು ನಿರರ್ಗಳವಾಗಿ ಮಾತನಾಡುತ್ತಾರೆ. ಪ್ರತಿದಿನ ಪತ್ರಿಕೆ ಓದುತ್ತಾರೆ. ಟಿ.ವಿ.ಯಲ್ಲಿ ದೈನಂದಿನ ಬೆಳವಣಿಗೆ ಗಮನಿಸುತ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯ. ಮೊಬೈಲ್‌ನಲ್ಲಿ ಸಣ್ಣಪುಟ್ಟ ವಿಡಿಯೊ ಎಡಿಟ್ ಮಾಡುವುದೂ ಗೊತ್ತು.

ಸದ್ಯ ಒಂಟಿ ಜೀವನ. ವೃದ್ಧಾಪ್ಯ ವೇತನ, ಪಡಿತರ, ಸಂಬಂಧಿಕರ ಸಹಾಯ–ಇವೇ ಜೀವನಾಧಾರ. ಆದರೂ ಸ್ವಾಭಿಮಾನ ಕಳೆದುಕೊಂಡಿಲ್ಲ. 'ಮನಸ್ಸನ್ನು ಪ್ರಫುಲ್ಲವಾಗಿಟ್ಟುಕೊಳ್ಳಬೇಕು. ಅದೇ ಶಕ್ತಿ' ಎಂದು ಅವರು ನಗುತ್ತಾರೆ.

ಫುಟ್‌ಪಾತ್‌ನ ಅರ್ಥ

ನಗರಗಳಲ್ಲಿ ಫುಟ್‌ಪಾತ್‌ಗಳು ಬಹಳ ಬಾರಿ ಅಲಂಕಾರ ಮಾತ್ರವಾಗಿವೆ. ಕೆಲವೊಮ್ಮೆ ಅಂಗಡಿಗಳ ವಿಸ್ತರಣೆ, ಕೆಲವೊಮ್ಮೆ ವಾಹನಗಳ ಶಾರ್ಟ್‌ಕಟ್. ಆದರೆ ನಡೆದುಕೊಂಡು ಹೋಗುವವರಿಗೆ ಅದು ಸುರಕ್ಷಿತ ದಾರಿ.

ಪ್ರಭಾವತಿ ಅಮ್ಮ ಹೇಳುವ ಮಾತು ಸರಳ– "ನಡೆಯುವವರಿಗೆ ಭಯವಿಲ್ಲದಿರಲಿ."

ಅವರ ಹೋರಾಟ ಕೇವಲ ಒಂದು ಸ್ಕೂಟರ್ ವಿರುದ್ಧದ್ದಲ್ಲ. ಅದು ನಿಯಮ ಉಲ್ಲಂಘನೆಯ ವಿರುದ್ಧದ ನಿಲುವು. ಅದು ಮೌನದ ವಿರುದ್ಧದ ಧೈರ್ಯ. ಅದು 'ಯಾರಾದರೂ ಮಾಡಲಿ' ಎಂಬ ನಿರೀಕ್ಷೆಯ ಬದಲು 'ನಾನು ಮಾಡುತ್ತೇನೆ' ಎನ್ನುವ ನಿರ್ಧಾರ.

ಅಷ್ಟೇನೂ ಸುಸ್ಥಿತಿಯಲ್ಲಿರದ ಮನೆಯಲ್ಲಿ ವಾಸ. ಕೆಲಸ ಮಾಡಲು ಉತ್ಸಾಹ ಇದ್ದರೂ ವಯಸ್ಸಿನ ಕಾರಣ ಅವಕಾಶ ಸಿಗುವುದಿಲ್ಲ. ಆದರೂ ಅವರು ಹೆಮ್ಮೆಯಿಂದ ಹೇಳುತ್ತಾರೆ: 'I'm still young!'. ಮುಷ್ಟಿ ಬಿಗಿದು ಹೆಬ್ಬೆರಳು ತೋರಿಸುತ್ತಾರೆ. ಆ ನಗುವಿನಲ್ಲಿ ಕುಗ್ಗುವಿಕೆ ಇಲ್ಲ. ಆ ಕಣ್ಣಿನಲ್ಲಿ ಭಯವಿಲ್ಲ.

ಫುಟ್‌ಪಾತ್ ಮಧ್ಯೆ ನಿಂತ ಆ ಕ್ಷಣ ಕೇವಲ ವೈರಲ್ ವಿಡಿಯೊ ಅಲ್ಲ. ಅದು ಒಂದು ಪಾಠ–ನಾಗರಿಕ ಜವಾಬ್ದಾರಿ ವಯಸ್ಸು ನೋಡದು. ನಿಯಮ ಪಾಲನೆ ಸರ್ಕಾರದ ಆದೇಶದಿಂದ ಮಾತ್ರ ಸಾಧ್ಯವಲ್ಲ; ಅದು ಪ್ರತಿಯೊಬ್ಬರ ಮನಸ್ಸಿನಲ್ಲಿ ಹುಟ್ಟಬೇಕು.

73ರ ಪ್ರಭೇಚಿ ಅದನ್ನು ತೋರಿಸಿಕೊಟ್ಟಿದ್ದಾರೆ. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣ್ಯದ ಸಂಖ್ಯೆಯ ಅಂಕಿಗಳ ಮೊತ್ತ 10 ಆಗಿರಲಿ ಹಾಗೂ ಗುಣಿಸುವ ಗುಣಕದ ಸಂಖ್ಯೆ ಯಾವಾಗಲೂ 99 ಆಗಿರಲಿ. ಹೀಗಿದ್ದಾಗ ಉತ್ತರ ಯಾವಾಗಲೂ ಬಿಡಿ ಅಂಕಿಗಳ ಗುಣಲಬ್ಧದ ಸಂಖ್ಯೆ ಬಲಭಾಗದಲ್ಲಿ ಹಾಗೂ ಅದರ ವಿಲೋಮ ಸಂಖ್ಯೆ ಎಡಭಾಗದಲ್ಲಿ ಬರುತ್ತದೆ.

ಉದಾ:

1.46 X 99 = 4554 (6X9 = 54)

2.55 X 99 = 5445 (5X9 = 45)

3.37 X 99 = 3663 (7X9 = 63)

4.28 X 99 = 2772 (8X9 = 72)

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಾಟ ಇಲ್ಲಿರುವ ಪದಕ್ಕೆ ಒಂದಕ್ಷರ ಸೇರಿಸಿ ಇನ್ನೊಂದು ಪದ ಮಾಡಿ.

ರವಿಮಾನ + ದ್ದು = ______

ವರ್ಡ್‌ಗೇಮ್

YY-ಇವುಗಳನ್ನು ಬಳಸಿಕೊಂಡು 'ಅತೀಜಾಣ' ಎಂಬರ್ಥ ಬರುವಂತೆ ಮಾಡುವುದು ಹೇಗೆ?

ಉತ್ತರ: ______

ಪದಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ದಟ್ಟಿ	+	ಕತ್ತಿ	+	ಋ	=	
2	ಕೂಳು	+	ಅಸು	+	ವ	=	
3	ಕೋಳಿ	+	ಗೂಡು	+	ಯ	=	
4	ಭಾಮಾ	+	ತೆರ	+	ತ	=	
5	ನೆಲ	+	ಸಮ	+	ಕೆ	=	

ಡಿಶ್ಯಾಗ ಚಿಕ್ಕು ಕೇಶ್ರುಷ್ಟ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಬೆಳೆದ ಬ್ರಷ್!

ಕೂದಲಿಲ್ಲದ ವ್ಯಕ್ತಿಯೊಬ್ಬ ಮಾರುಕಟ್ಟೆಯಿಂದ ಕೂದಲು ಬೆಳೆಸುವ ತೈಲ ತಂದಿದ್ದ. ಅದರಲ್ಲಿ ದಿನವೂ ಒಂದೊಂದು ಚಮಚ ಎಣ್ಣೆಯನ್ನು ಹಚ್ಚಿಕೊಂಡು ಮೆದುವಾದ ಬ್ರಷ್‌ನಿಂದ ತಲೆಯನ್ನು ಸವರುವಂತೆ ಸೂಚಿಸಲಾಗಿತ್ತು. ಅದನ್ನು ದಿನವೂ ಆತ ಅನುಸರಿಸುತ್ತಿದ್ದ. ದಿನ ಉರುಳಿದರೂ ಕೂದಲು ಬೆಳೆಯುವ ಲಕ್ಷಣವಿರಲಿಲ್ಲ. ಆದರೆ ಬ್ರಷ್ ಮಾತ್ರ ಉದ್ದುದ್ದ ಬೆಳೆದಿತ್ತು!



ಜಾನಪದ ಆಟ

ಇಲ್ಲಿ ಕೊಟ್ಟಿರುವ ಅನುಸ್ವಾರ ಹಾಗೂ ಕೊನೆಯಲ್ಲಿನ 'ಟ' ಅಕ್ಷರಗಳಿಗೆ ಕೆಳಗಿನ ಅಕ್ಷರ ಪಟ್ಟಿಯಿಂದ ಆಯ್ದ ಎರಡು ಅಕ್ಷರಗಳನ್ನು ಅನುಸ್ವಾರದ ಹಿಂದೊಂದು ಮುಂದೊಂದು ತುಂಬಿ ಪದ ಪೂರ್ಣ ಮಾಡಿ.

1		ಂ		ಟ
2		ಂ		ಟ
3		ಂ		ಟ
4		ಂ		ಟ
5		ಂ		ಟ
6		ಂ		ಟ
7		ಂ		ಟ
8		ಂ		ಟ
9		ಂ		ಟ
10		ಂ		ಟ

ಅಕ್ಷರ ಪಟ್ಟಿ

ಮೊ	ಪು	ಡಾ	ಡಾ	ಟಾ
ಪಾ	ಪ	ಜ	ಬ	ದ್ಯಾ
ರ	ಮ	ಡಾ	ಗಾ	ಜಾ
ಚೆ	ಕು	ಡಾ	ಟಾ	ತು

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ A, E, I, O, U ಅಕ್ಷರಗಳ ಹಿಂದೊಂದು ಅಕ್ಷರ ಹಾಗೂ ಮುಂದೊಂದು ಅಕ್ಷರ ತುಂಬಿ ಮೂರು ಅಕ್ಷರಗಳ ಪದ ಮಾಡಬೇಕು. ಆದರೆ ನೀವು ತುಂಬುವ ಎಡಭಾಗದ ಎಲ್ಲ ಅಕ್ಷರಗಳೂ ಒಂದೇ ಆಗಿರಬೇಕು ಮತ್ತು ಬಲಭಾಗದ ಅಕ್ಷರಗಳೂ ಒಂದೇಯಾಗಿರಬೇಕು.

1		A	
1		E	
1		I	
1		O	
1		U	

2. ಇಲ್ಲಿ ಕೊಟ್ಟಿರುವ 'ನವ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ನ	ವ		
2	ನ	ವ		
3	ನ	ವ		
4	ನ	ವ		
5	ನ	ವ		

ಅಕ್ಷರ ಪಟ್ಟಿ

ನೀ	ಗ	ರಂ	ತ	ತ್ನ
ರ	ರ	ತ್ರಿ	ಸ	ರಾ

ಮುತ್ತಿನಂತ ಮಾತು

ಭೀತಿ ಶಿಕ್ಷಣಕ್ಕಿಂತ ನೀತಿ ಶಿಕ್ಷಣ ಹಾಗೂ ಪ್ರೀತಿಯಿಂದ ಹೇಳುವ ಶಿಕ್ಷಣ ಮೇಲು

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಜನರಮಾತು 2.ಜಪಾನದೇಶ 3.ಇಟಲಿಜನ 4.ಜಮೀನುಮಾರು 5.ಕುಲಗೌರವ


ಶಬ್ದಾಟ: ಉತ್ತರಾಧಿಕಾರ

ಪದಹುಡುಕಾಟ: ರಾಜಾರಾಮಮೋಹನರಾಯ


ಜಾಣಪದ ಆಟ 1: 1.ಮುರಾರಿ 2.ದಲಾಲಿ 3.ಪರಾರಿ 4.ಬಟಾಟೆ 5.ಬಿಡಾಡಿ 6.ಉಂಡಾಡಿ 7.ಸೇನಾನಿ 8.ರಾಜಾಜಿ 9.ಪೊಟ್ಯಾಟೊ 10.ಕೈಚಾಚಿ

ಜಾಣಪದ ಆಟ 2: 1.ಚಿತ್ರಗೀತೆ 2.ಚಿತ್ರಗುಪ್ತ 3.ಚಿತ್ರಪಟ 4.ಚಿತ್ರಹಿಂಸೆ 5.ಚಿತ್ರಭಾನು

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ತನುಶ್ರೀ ಅರಗಿಣಿನಶೆಟ್ಟಿ
ಬಾಗಲಕೋಟೆ



ಚಿತ್ರಾರ್ಥ್
ತಿಪಟೂರು



ವಿಶ್ವದೀಪ್
ಬೀದರ್



ಲೇಖನ ದೊಗ್ಗಲು ವಿನಾಯಕ
ಬೆಂಗಳೂರು



ವೈಭವ ಲಕ್ಷ್ಮಿ ಹೂಗಾರ್
ಗದಗ



ಯಶ್ವಂತ್ ವಿ.
ಬೆಂಗಳೂರು

ಆನ್‌ಫೀಲ್ಡ್ ಅಂಪೈರ್‌ಗಳಾಗಿ ರಿಚರ್ಡ್ ಇಲಿಂಗ್‌ವರ್ತ್– ಅಲೆಕ್ಸ್ ವಾರ್ಫ್

ನವದೆಹಲಿ (ಪಿಟಿಐ): ಇಂಗ್ಲೆಂಡ್‌ನ ರಿಚರ್ಡ್ ಇಲಿಂಗ್‌ವರ್ತ್ ಮತ್ತು ಅಲೆಕ್ಸ್ ವಾರ್ಫ್ ಅವರು ಭಾನುವಾರ ಅಹಮದಾಬಾದಿನಲ್ಲಿ ನಡೆಯಲಿರುವ ಭಾರತ–ನ್ಯೂಜಿಲೆಂಡ್ ನಡುವಣ ಟಿ20 ವಿಶ್ವಕಪ್ ಫೈನಲ್ ಪಂದ್ಯಕ್ಕೆ ಅಂಪೈರ್‌ಗಳಾಗಿದ್ದಾರೆ.

ಇಲಿಂಗ್‌ವರ್ತ್ ಅವರು 2024ರ ಆವೃತ್ತಿಯ ಫೈನಲ್‌ನಲ್ಲೂ ಫೀಲ್ಡ್ ಅಂಪೈರ್ ಆಗಿದ್ದರು. ಆಗ ಅವರೊಂದಿಗೆ ಕ್ರಿಸ್ ಗಫಾನಿ ಕಾರ್ಯನಿರ್ವಹಿಸಿದ್ದರು. ಇಲಿಂಗ್‌ವರ್ತ್ 2023ರ ವಿಶ್ವಕಪ್ ಫೈನಲ್ ಮತ್ತು 2025ರ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲೂ ಅವರು ಕಾರ್ಯನಿರ್ವಹಿಸಿದ್ದರು. ಅಲ್ಲಾಹುದ್ದೀನ್ ಪಾಲೇಕರ್ ಮೂರನೇ ಮತ್ತು ಅಡ್ರಿಯಾನ್ ಹೋಲ್‌ಸ್ಟಾಕ್ ನಾಲ್ಕನೇ ಅಂಪೈರ್ ಆಗಿದ್ದಾರೆ. ಆ್ಯಂಡಿ ಪೈಕ್ರಾಫ್ಟ್ ಮ್ಯಾಚ್ ರೆಫ್ರಿ ಆಗಿ ಕಾರ್ಯನಿರ್ವಹಿಸುವರು.

‘ಅಭಿಮಾನಿಗಳನ್ನು ಸ್ತಬ್ಧಗೊಳಿಸುತ್ತೇವೆ’



ಅಹಮದಾಬಾದ್: ‘ಭಾರತದ ಕ್ರಿಕೆಟ್ ಅಭಿಮಾನಿಗಳನ್ನು ಮೌನಕ್ಕೆ ತಳ್ಳಲು ನಮ್ಮ ಆಟಗಾರರು ಹಿಂಜರಿಯುವುದಿಲ್ಲ’ ಎಂದು ನ್ಯೂಜಿಲೆಂಡ್ ತಂಡದ ನಾಯಕ ಮಿಚೆಲ್ ಸ್ಯಾಂಟ್ನರ್ ಹೇಳಿದರು. ಆ ಮೂಲಕ ಭಾರತ ತಂಡವನ್ನು ಸೋಲಿಸುವುದಾಗಿ ಸವಾಲೊಡ್ಡಿದರು.

ಟಿ20 ವಿಶ್ವಕಪ್ ಇತಿಹಾಸದಲ್ಲಿ ಕಿವೀಸ್ ಬಳಗವು ಐದು ಬಾರಿ ಸೆಮಿಫೈನಲ್ ಪ್ರವೇಶಿಸಿತ್ತು. ಒಂದು ಸಲ ಫೈನಲ್ ಪ್ರವೇಶಿಸಿ ಆಸ್ಟ್ರೇಲಿಯಾ ಎದುರು ದುಬೈನಲ್ಲಿ ಸೋತಿತ್ತು. ಇದೀಗ ಮತ್ತೊಮ್ಮೆ ಪ್ರಶಸ್ತಿ ಸುತ್ತು ಪ್ರವೇಶಿಸಿದೆ. ‘ನಾವು ತಂಡವಾಗಿ ಆಡುತ್ತೇವೆ. ಟ್ರೋಫಿ ಗೆಲ್ಲುವುದು ನಮ್ಮ ಗುರಿ. ನಾವು ಫೇವರಿಟ್ ತಂಡ ಅಲ್ಲ ಎಂಬುದರ ಅರಿವು ಇದೆ. ಆದರೆ ಪೂರ್ಣಪ್ರಮಾಣದಲ್ಲಿ ಹೋರಾಟ ಮಾಡುತ್ತೇವೆ. ಕೇವಲ ಇಲ್ಲಿಯ ವಾತಾವರಣ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಶರಣಾಗುವುದಿಲ್ಲ’ ಎಂದರು.

ವಿಮಾನ ಪ್ರಯಾಣದರ ‘ಗಗನ’ಕ್ಕೆ

ಅಹಮದಾಬಾದ್ (ಪಿಟಿಐ): ದೇಶದ ಪ್ರಮುಖ ನಗರಗಳಿಂದ ಅಹಮದಾಬಾದಿಗೆ ತೆರಳುವ ವಿಮಾನಗಳ ಪ್ರಯಾಣದರ ಗಗನಕ್ಕೇರಿದೆ. ಈ ನಗರದಲ್ಲಿ ಭಾನುವಾರ ಭಾರತ–ನ್ಯೂಜಿಲೆಂಡ್ ತಂಡಗಳ ನಡುವೆ ಟಿ20 ವಿಶ್ವಕಪ್ ಫೈನಲ್ ನಡೆಯುತ್ತಿದೆ. ಹೀಗಾಗಿ ಭಾರತೀಯ ರೈಲ್ವೆಯು ಹೆಚ್ಚುವರಿ ರೈಲುಗಳ ವ್ಯವಸ್ಥೆ ಮಾಡಿದೆ.

ಮುಂಬೈ–ಅಹಮದಾಬಾದ್ ನಡುವೆ ಮಾಮೂಲಿ ದಿನಗಳಲ್ಲಿ ವಿಮಾನ ಪ್ರಯಾಣದರ ₹3,000 ಇದ್ದರೆ, ಭಾನುವಾರ ₹15,000 ದಿಂದ ₹17,000 ವರೆಗೆ ಏರಿದೆ. ದೆಹಲಿ–ಅಹಮದಾಬಾದ್ ನಡುವಣ ಪ್ರಯಾಣದರ ₹14,000 ಮತ್ತು ಬೆಂಗಳೂರು–ಅಹಮದಾಬಾದ್ ನಡುವೆ ಈ ಮೊತ್ತ ₹13,000 ಇದೆ.

ನಗರದಲ್ಲಿ ಹೋಟೆಲ್ ಕೊಠಡಿಗಳ ದರದಲ್ಲಿಯೂ ವಿಪರೀತ ಏರಿಕೆಯಾಗಿದೆ. ಕೆಲವು ಹೋಟೆಲ್‌ಗಳಲ್ಲಿ ಶೇ 300 ರಿಂದ 400ರಷ್ಟು ಏರಿಕೆಯಾಗಿದೆ ಎಂದು ಉದ್ಯಮದ ಪ್ರತಿನಿಧಿಯೊಬ್ಬರು ತಿಳಿಸಿದ್ದಾರೆ.

ಸಬರಮತಿ ತಟದಲ್ಲಿ ಯಾರು ಸಾಮ್ರಾಟ?

ಅಹಮದಾಬಾದಿನಲ್ಲಿ ಟಿ20 ಕ್ರಿಕೆಟ್ ಫೈನಲ್ ಇಂದು; ಭಾರತ–ನ್ಯೂಜಿಲೆಂಡ್ ಹಣಾಹಣಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಸಂಜು ಸ್ಯಾಮ್ಸನ್

ರಚಿನ್ ರವೀಂದ್ರ

• ಸಿಡ್ನಿ ಕಿರಣ್

ಅಹಮದಾಬಾದ್: ಈ ಸಲದ ಟಿ20 ವಿಶ್ವಕಪ್ ಟೂರ್ನಿಯುದ್ದಕ್ಕೂ ಭಾರತ ತಂಡವು ಒಂದು ‘ಪರಿಪೂರ್ಣ ಪಂದ್ಯ’ದ ಶೋಧದಲ್ಲಿತ್ತು. ಏಳು, ಬೀಳುಗಳ ಹಾದಿಯಲ್ಲಿ ಸಾಗಿ ಫೈನಲ್ ಪ್ರವೇಶಿಸಿರುವ ಸೂರ್ಯಕುಮಾರ್ ಯಾದವ್ ಬಳಗವು ‘ಸುಖಾಂತ್ಯ’ದ ಮೇಲೆ ಕಣ್ಣಿಟ್ಟಿದೆ.

ಸಬರಮತಿ ನದಿ ತಟದಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ‘ಹಾಲಿ ಚಾಂಪಿಯನ್’ ಭಾರತ ತಂಡವು ನ್ಯೂಜಿಲೆಂಡ್ ಎದುರು ಕಣಕ್ಕಿಳಿಯಲಿದೆ. ಎರಡೂವರೆ ವರ್ಷಗಳ ಹಿಂದೆ ಇದೇ ಮೈದಾನದಲ್ಲಿ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಭಾರತ ತಂಡದ ಕನಸು ಭಗ್ನವಾಗಿತ್ತು. ಆ ಕಹಿಯನ್ನು ಮರೆಸಿ ಗೆಲುವಿನ ದಾಖಲೆ ಬರೆಯುವ ತವಕದಲ್ಲಿ ಭಾರತ ತಂಡ ಇದೆ.

ಸುಮಾರು ಒಂದು ತಿಂಗಳ ಅವಧಿಯಲ್ಲಿ ತಂಡಗಳು ವಿಭಿನ್ನ ತಾಣಗಳು ಹಾಗೂ ಹವಾಮಾನಗಳಲ್ಲಿ ಆಡಿ ಈ ಹಂತಕ್ಕೆ ಬಂದಿವೆ. ಪ್ರಯಾಣವನ್ನು ಯಾವ ರೀತಿ ಆರಂಭಿಸಲಾಯಿತು ಎಂಬುದಕ್ಕಿಂತಲೂ ಮುಕ್ತಾಯವನ್ನು ಯಾವ ರೀತಿ ಮಾಡಲಾಗುತ್ತದೆ ಎಂಬುದು ಮುಖ್ಯವಾಗುತ್ತದೆ. ಆದ್ದರಿಂದ ಈ ಪಂದ್ಯದಲ್ಲಿ ಸಣ್ಣ ತಪ್ಪುಗಳನ್ನೆಸಗಿದರೂ ತುಟ್ಟಿಯಾಗಬಹುದು.

ಎರಡು ಸಲದ ಚಾಂಪಿಯನ್ ಭಾರತ ತಂಡವು ಇದೇ ಮೈದಾನದಲ್ಲಿ ಈಚೆಗೆ ನಡೆದಿದ್ದ ಪ್ರಸಕ್ತ ಟೂರ್ನಿಯ ಸೂಪರ್ 8ರ ಹಂತದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಸೋತಿತ್ತು. ನಂತರದ ಎರಡು ಪಂದ್ಯಗಳಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸಿದ ರೀತಿ ಅನನ್ಯವಾಗಿತ್ತು. ಬ್ಯಾಟಿಂಗ್‌ನಲ್ಲಿ ಉತ್ತಮ ಲಯದಲ್ಲಿರುವ ಭಾರತವು ಕಿವೀಸ್ ಬಳಗದ ಮುಂದೆ ಗೆಲ್ಲುವ ನೆಚ್ಚಿನ ತಂಡವಾಗಿದೆ. ಆದರೆ ಟಿ20 ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಉಭಯ ತಂಡಗಳು ಮೂರು ಬಾರಿ ಮುಖಾಮುಖಿಯಾದಾಗಲೂ ಕಿವೀಸ್ ಜಯ ಗಳಿಸಿದೆ. ಆದ್ದರಿಂದ ಆ ಸೋಲಿನ ಸರಪಣಿಯನ್ನು ತುಂಡರಿಸಿ ಗೆಲುವಿನ ಸಂಭ್ರಮ ಆಚರಿಸುವ ಛಲವೂ ಸೂರ್ಯ ಪಡೆಗೆ ಇದೆ.

ಭಾರತಕ್ಕೆ ಈಗ ಎರಡು ದಾಖಲೆ ಬರೆಯುವ ಅವಕಾಶ ಇದೆ. ಸತತ ಎರಡನೇ ಟ್ರೋಫಿ ಮತ್ತು ತವರಿನಂಗಳದಲ್ಲಿ ಗೆದ್ದ ಮೊದಲ ತಂಡವೆಂಬ ಹೆಗ್ಗಳಿಕೆಗೆ ಪಾತ್ರವಾಗುಲಿದೆ. ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ಸೇರುವ ಈ ಕ್ರೀಡಾಂಗಣದಲ್ಲಿ ಅಂತಹ ದಾಖಲೆಯಾಗುವುದು ವಿಶಿಷ್ಟ ಸಾಧನೆಯೂ ಆಗುತ್ತದೆ.

ಸಂಜು ಸ್ಯಾಮ್ಸನ್ ಸೂಪರ್ ಎಂಟರ ಪಂದ್ಯದಲ್ಲಿ ಜಿಂಬಾಬ್ವೆ ಎದುರು ಮತ್ತು ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು. ಅವರು ಲಯಕ್ಕೆ ಮರಳಿರುವುದು ತಂಡದ ಆತ್ಮವಿಶ್ವಾಸವನ್ನು ಇಮ್ಮಡಿಸಿದೆ. ಇಶಾನ್ ಕಿಶನ್ ಉಪಯುಕ್ತ ಕಾಣಿಕೆ ನೀಡುತ್ತಿದ್ದಾರೆ. ಪರಿಸ್ಥಿತಿಗೆ ತಕ್ಕಂತೆ ಸೂರ್ಯಕುಮಾರ್ ಯಾದವ್ ಕೂಡ ತಮ್ಮ ಬ್ಯಾಟಿಂಗ್ ಮಾಡಿದ್ದಾರೆ. ಅಕ್ಷರ್ ಪಟೇಲ್, ಹಾರ್ದಿಕ್ ಪಾಂಡ್ಯ ಮತ್ತು ಶಿವಂ ದುಬೆ ತಂಡಕ್ಕೆ ಅಗತ್ಯವಿದ್ದಾಗ ಆಲ್‌ರೌಂಡ್ ಆಟದ ಮೂಲಕ ನೆರವು ನೀಡಿದ್ದಾರೆ. ತಿಲಕ್ ವರ್ಮಾ ಕ್ರಮಾಂಕ ಬದಲಾದ ನಂತರ ಲಯ ಕಂಡುಕೊಂಡಿದ್ದಾರೆ. ಆದರೆ ಅಭಿಷೇಕ್ ಶರ್ಮಾ ಅವರ ವೈಫಲ್ಯ ಮಾತ್ರ ಮುಂದುವರಿದಿರುವುದು ತಂಡದ ಚಿಂತೆ. ಎಡಗೈ ಬ್ಯಾಟರ್ ಅಭಿಷೇಕ್ ಶರ್ಮಾಗೆ ಫೈನಲ್‌ನಲ್ಲಿ ಲಯಕ್ಕೆ ಮರಳುವ ಮತ್ತೊಂದು ಅವಕಾಶ ಸಿಗಬಹುದು.

ಬೌಲಿಂಗ್ ವಿಭಾಗದಲ್ಲಿಯೂ ಭಾರತಕ್ಕೆ ಇರುವ ಪ್ರಮುಖ ಚಿಂತೆಯೆಂದರೆ ಸ್ಪಿನ್ನರ್ ವರುಣ್ ಚಕ್ರವರ್ತಿ. ಅವರು ಹೆಚ್ಚು ರನ್ ಕೊಡುತ್ತಿದ್ದಾರೆ. ಆದರೆ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಂತಹ ದಿಗ್ಗಜ ವೇಗಿ ಈಗಾಗಲೇ ತಂಡಕ್ಕೆ ಹಲವು ಬಾರಿ ಗೆಲುವಿನತ್ತ ಮುನ್ನಡೆಸಿ ದ್ದಾರೆ. ನ್ಯೂಜಿಲೆಂಡ್ ಎದುರೂ ಅವರು ಪರಿಣಾಮಕಾರಿಯಾಗುವ ನಿರೀಕ್ಷೆ ಇದೆ.

ಆದರೆ ‘ಬ್ಲ್ಯಾಕ್ ಕ್ಯಾಪ್ಸ್’ ಬಳಗವನ್ನು ಯಾವುದೇ ಹಂತದಲ್ಲಿಯೂ ಹಗುರವಾಗಿ ಪರಿಗಣಿಸುವಂತಿಲ್ಲ. ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾದ ಎದುರು ಗೆದ್ದ ರೀತಿಯೇ ಅದಕ್ಕೆ ಸಾಕ್ಷಿ. ಫಿನ್ ಅಲೆನ್ 33 ಎಸೆತಗಳಲ್ಲಿ ಶತಕ ಬಾರಿಸಿದ್ದರು. ಆರಂಭಿಕ ಬ್ಯಾಟರ್ ಟಿಮ್ ಸೀಫರ್ಟ್, ಮಧ್ಯಮ ಕ್ರಮಾಂಕದಲ್ಲಿ ರಚಿನ್ ರವೀಂದ್ರ ಮತ್ತು ಗ್ಲೆನ್ ಫಿಲಿಪ್ಸ್ ಅವರು ಅಮೋಘವಾದ ಲಯದಲ್ಲಿದ್ದಾರೆ. ಮಾರ್ಕ್ ಚಾಪ್‌ಮನ್, ಡ್ಯಾರಿಲ್ ಮಿಚೆಲ್ ಮತ್ತು ನಾಯಕ ಮಿಚೆಲ್ ಸ್ಯಾಂಟ್ನರ್ ಅವರು ಪಂದ್ಯದ ಫಲಿತಾಂಶವನ್ನು ತಮ್ಮ ತಂಡದತ್ತ ವಾಲಿಸುವಂತಹ ಇನಿಂಗ್ಸ್‌ಗಳನ್ನು ಈ ಹಿಂದೆ ಆಡಿದ್ದಾರೆ.

ಆಫ್‌ಸ್ಪಿನ್ ಜೋಡಿ ಫಿಲಿಪ್ಸ್ ಮತ್ತು ಕೋಲಿ ಮೆಕ್‌ಕಾಂಚಿ ಅವರು ಭಾರತದ ಎಡಗೈ ಬ್ಯಾಟರ್‌ಗಳನ್ನು ಕಟ್ಟಿಹಾಕಬಲ್ಲ ಸಮರ್ಥರು. ಇನ್ನೊಂದೆಡೆ ಸ್ಯಾಂಟನರ್ ಮತ್ತು ರಚಿನ್ ಅವರೂ ಸ್ಪಿನ್ ಮೋಡಿ ಮೆರೆಯಬಲ್ಲರು. ಸೂಪರ್ 8ರ ಹಂತದಲ್ಲಿ ಕಿವೀಸ್ ಬಳಗವು ಕೇವಲ ಒಂದು ಪಂದ್ಯ ಗೆದ್ದಿತ್ತು. ಇನ್ನೊಂದು ಪಂದ್ಯ ಮಳೆಗೆ ಆಹುತಿಯಾಗಿ ಒಂದು ಅಂಕ ಗಳಿಸಿತ್ತು. ಸೆಮಿಫೈನಲ್ ಪ್ರವೇಶಿಸಿತ್ತು. ವೈಟ್ ಬಾಲ್ ಕ್ರಿಕೆಟ್‌ನಲ್ಲಿ ಕಿವೀಸ್‌ಗಿಂತಲೂ ಭಾರತವೇ ಹೆಚ್ಚು ಬಲಾಢ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಅದಕ್ಕೆ ತಕ್ಕಂತೆ ಸವಾಲೊಡ್ಡಲು ಸ್ಯಾಂಟನರ್ ಬಳಗ ತಂತ್ರಗಾರಿಕೆ ಹೆಣೆಯುತ್ತಿದೆ.

ಬಲಾಬಲ (ಟಿ20)
ಒಟ್ಟು ಪಂದ್ಯ 30
ಭಾರತ ಗೆಲುವು 18
ನ್ಯೂಜಿಲೆಂಡ್ ಜಯ 11
ಟೈ 1


ಟೂರ್ನಿಯಲ್ಲಿ ಭಾರತದ ಹಾದಿ
ಸೆಮಿಫೈನಲ್
ಇಂಗ್ಲೆಂಡ್ ವಿರುದ್ಧ 7 ರನ್‌ಗಳ ಜಯ
ಸೂಪರ್ ಎಂಟರ ಹಂತ
ವೆಸ್ಟ್ ಇಂಡೀಸ್ ವಿರುದ್ಧ 5 ವಿಕೆಟ್‌ಗಳ ಗೆಲುವು
ಜಿಂಬಾಬ್ವೆ ಎದುರು 72 ರನ್‌ಗಳ ಜಯಭೇರಿ
ದಕ್ಷಿಣ ಆಫ್ರಿಕಾ ವಿರುದ್ಧ 76 ರನ್‌ಗಳ ಸೋಲು
ಗುಂಪು ಹಂತ (ಎ)
ನೆದರ್ಲೆಂಡ್ಸ್ ವಿರುದ್ಧ 17 ರನ್‌ಗಳ ಗೆಲುವು
ಪಾಕಿಸ್ತಾನ ಎದುರು 61 ರನ್‌ಗಳ ಜಯ
ನಮೀಬಿಯಾ ವಿರುದ್ಧ 93 ರನ್‌ಗಳ ಗೆಲುವು
ಅಮೆರಿಕ ಎದುರು 29 ರನ್‌ಗಳ ಜಯ



ಜಸ್‌ಪ್ರೀತ್ ಬೂಮ್ರಾ



ಟಿ20 ವಿಶ್ವಕಪ್ ಟ್ರೋಫಿ ಜೊತೆಗೆ ಭಾರತ ತಂಡದ ಸೂರ್ಯಕುಮಾರ್ ಯಾದವ್
ಎಎಫ್‌ಪಿ ಚಿತ್ರ



ಫಿನ್ ಅಲೆನ್ ತಾಲೀಮು

ಟಿ20 ವಿಶ್ವಕಪ್ ಭಾರತದ ಸಾಧನೆ

ವರ್ಷ	ಸಾಧನೆ	ತಂಡ
2007	ಚಾಂಪಿಯನ್	12
2009	ಏಳನೇ ಸ್ಥಾನ	12
2010	ಆರನೇ ಸ್ಥಾನ	12
2012	ಐದನೇ ಸ್ಥಾನ	12
2014	ರನ್ನರ್ಸ್ ಅಪ್	16
2016	ನಾಲ್ಕನೇ ಸ್ಥಾನ	16
2021	ಆರನೇ ಸ್ಥಾನ	16
2022	ಮೂರನೇ ಸ್ಥಾನ	16
2024	ಚಾಂಪಿಯನ್	20

ಚಾಂಪಿಯನ್ ತಂಡಕ್ಕೆ ₹27.48 ಕೋಟಿ ಬಹುಮಾನ

ಹಾಲಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗುವ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ)ನಿಂದ ಸುಮಾರು ₹27.48 ಕೋಟಿ ಬಹುಮಾನವನ್ನು ಜೇಬಿಗಿಳಿಸಲಿದೆ. ಕಳೆದ ಆವೃತ್ತಿಗಿಂತ ಈ ಬಾರಿ ಬಹುಮಾನ ಮೊತ್ತವನ್ನು ಹೆಚ್ಚಿಸಲಾಗಿದೆ.

ರನ್ನರ್ ಅಪ್ ತಂಡವು ₹14.65 ಕೋಟಿ, ಸೆಮಿಫೈನಲ್‌ನಲ್ಲಿ ಸೋತ ತಂಡಗಳು ತಲಾ ₹7.24 ಕೋಟಿ ಪಡೆಯಲಿವೆ. ಟೂರ್ನಿಯು ಒಟ್ಟು ₹120.37 ಕೋಟಿ ಬಹುಮಾನ ಮೊತ್ತ ಒಳಗೊಂಡಿದೆ.

2024ರಲ್ಲಿ ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ತಂಡವು ಪ್ರಶಸ್ತಿ ಗೆದ್ದಾಗ ₹20.42 ಕೋಟಿ ಬಹುಮಾನ ಪಡೆದಿತ್ತು. ಅದರ ಜೊತೆಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ₹125 ಕೋಟಿ ವಿಶೇಷ ಬಹುಮಾನ ಘೋಷಿಸಿತ್ತು.

ಟಿ20 ವಿಶ್ವಕಪ್: ಈವರೆಗೆ ಪ್ರಶಸ್ತಿ ಗೆದ್ದವರು

ವರ್ಷ	ಚಾಂಪಿಯನ್	ರನ್ನರ್ಸ್ ಅಪ್
2007	ಭಾರತ	ಪಾಕಿಸ್ತಾನ
2009	ಪಾಕಿಸ್ತಾನ	ಶ್ರೀಲಂಕಾ
2010	ಇಂಗ್ಲೆಂಡ್	ಆಸ್ಟ್ರೇಲಿಯಾ
2012	ವೆಸ್ಟ್ ಇಂಡೀಸ್	ಶ್ರೀಲಂಕಾ
2014	ಶ್ರೀಲಂಕಾ	ಭಾರತ
2016	ವೆಸ್ಟ್ ಇಂಡೀಸ್	ಇಂಗ್ಲೆಂಡ್
2021	ಆಸ್ಟ್ರೇಲಿಯಾ	ನ್ಯೂಜಿಲೆಂಡ್
2022	ಇಂಗ್ಲೆಂಡ್	ಪಾಕಿಸ್ತಾನ
2024	ಭಾರತ	ದಕ್ಷಿಣ ಆಫ್ರಿಕಾ

ಆಲ್ ಇಂಗ್ಲೆಂಡ್: ಫೈನಲ್‌ಗೆ ಲಕ್ಷ್ಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಅವರು ಶನಿವಾರ ಕೆನಡಾದ ವಿಕ್ಟರ್ ಲಾಯ್ ಅವರನ್ನು ಮೂರು ಗೇಮ್‌ಗಳ ಪಂದ್ಯದಲ್ಲಿ ಸೋಲಿಸಿ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದರು.

ವಿಶ್ವ ಕ್ರಮಾಂಕದಲ್ಲಿ 12ನೇ ಸ್ಥಾನದಲ್ಲಿರುವ ಸೇನ್ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ 21–16, 18–21, 21–15ರಿಂದ 16ನೇ ರ್‍ಯಾಂಕ್‌ನ ವಿಕ್ಟರ್ ಅವರನ್ನು ಹಿಮ್ಮೆಟ್ಟಿಸಿದರು. 24 ವರ್ಷದ ಸೇನ್, ಭಾನುವಾರ ನಡೆಯುವ ಬಿಡಬ್ಲ್ಯುಎಫ್ ಸೂಪರ್ 1000 ಹಂತದ ಟೂರ್ನಿಯ ಪ್ರಶಸ್ತಿ ಸುತ್ತಿನಲ್ಲಿ 11ನೇ ಕ್ರಮಾಂಕದ ಲಿನ್ ಚುನ್ ಯಿ (ತೈವಾನ್) ಅವರನ್ನು ಎದುರಿಸಲಿದ್ದಾರೆ.

21 ವರ್ಷದ ವಿಕ್ಟರ್ ಅವರು ಕಳೆದ ವರ್ಷ ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು. ಒಂದು ಗಂಟೆ 37 ನಿಮಿಷಗಳ ಸುದೀರ್ಘ ಪಂದ್ಯದಲ್ಲಿ ಭಾರತದ ಆಟಗಾರ ಮೇಲುಗೈ ಸಾಧಿಸಿ, ಎರಡನೇ ಬಾರಿ ಫೈನಲ್ ಪ್ರವೇಶಿಸಿದರು. 2022ರಲ್ಲಿ ಸೇನ್ ರನ್ನರ್ಸ್‌ಅಪ್ ಆಗಿದ್ದರು.



ಗೆಲುವಿನ ಸಂಭ್ರಮದಲ್ಲಿ ಲಕ್ಷ್ಯ ಸೇನ್
ಚಿತ್ರ: ಬ್ಯಾಡ್ಮಿಂಟನ್ ಫೋಟೊ

ಮತ್ತೊಂದು ಸೆಮಿಫೈನಲ್‌ನಲ್ಲಿ ಚುನ್ ಯಿ 21–14, 18–21, 21–16ರಿಂದ ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಕುನ್ಲಾವುಟ್ ವಿಟಿಡ್ಸರ್ನ್ (ಥಾಯ್ಲೆಂಡ್) ಅವರನ್ನು ಸೋಲಿಸಿದರು.

ಪ್ರಕಾಶ್ ಪಡುಕೋಣೆ (1980) ಮತ್ತು ಪುಲ್ಲೇಲ ಗೋಪಿಚಂದ್ (2001) ಹೊರತುಪಡಿಸಿ ಭಾರತದ ಷಟ್ಲರ್‌ಗಳಿಗೆ ಆಲ್ ಇಂಗ್ಲೆಂಡ್ ಪ್ರಶಸ್ತಿ ಒಲಿದಿಲ್ಲ.

ಹಾಕಿ: ಭಾರತಕ್ಕೆ ಉರುಗ್ವೆ ಸವಾಲು

ಹೈದರಾಬಾದ್ (ಪಿಟಿಐ): ಶ್ಯೊರ್ಡ್ ಮರಾಯ್ನೆ ಅವರ ಮಾರ್ಗದರ್ಶನ ದಲ್ಲಿ ಪಳಗುತ್ತಿರುವ ಭಾರತದ ವನಿತೆಯರು ಭಾನುವಾರ ಇಲ್ಲಿ ನಡೆಯುವ ಎಫ್‌ಐಎಚ್ ಮಹಿಳಾ ಹಾಕಿ ವಿಶ್ವಕಪ್‌ನ ಅರ್ಹತಾ ಸುತ್ತಿನ ಪಂದ್ಯದಲ್ಲಿ ಉರುಗ್ವೆ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಆತಿಥೇಯ ಭಾರತ ಸೇರಿ ಒಟ್ಟು ಎಂಟು ತಂಡಗಳು ಅರ್ಹತಾ ಸುತ್ತಿನಲ್ಲಿ ವಿಶ್ವಕಪ್ ಟಿಕೆಟ್‌ಗಾಗಿ ಪೈಪೋಟಿ ನಡೆಸಲಿವೆ. ಎಂಟು ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಇಂಗ್ಲೆಂಡ್, ಕೊರಿಯಾ, ಇಟಲಿ ಮತ್ತು ಆಸ್ಟ್ರಿಯಾ ತಂಡಗಳು ‘ಎ’ ಗುಂಪಿನಲ್ಲಿ ಹಾಗೂ ಭಾರತ, ಸ್ಕಾಟ್ಲೆಂಡ್, ಉರುಗ್ವೆ ಮತ್ತು ವೇಲ್ಸ್ ‘ಬಿ’ ಗುಂಪಿನಲ್ಲಿವೆ.

ಅರ್ಹತಾ ಸುತ್ತಿನಲ್ಲಿ ಮೊದಲ ಮೂರು ಸ್ಥಾನ ಪಡೆದ ತಂಡಗಳು 2026ರ ವಿಶ್ವಕಪ್‌ಗೆ ನೇರ ಪ್ರವೇಶ ಪಡೆಯಲಿವೆ. ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಆತಿಥ್ಯದಲ್ಲಿ ಆಗಸ್ಟ್ 14ರಿಂದ 30ರವರೆಗೆ ಪುರುಷರ ವಿಶ್ವಕಪ್ ಜೊತೆಯಲ್ಲಿಯೇ ಮಹಿಳೆಯರ ಟೂರ್ನಿಯೂ ನಿಗದಿಯಾಗಿದೆ.

ಶಾಟ್‌ಪಟ್: ಸಂಜನಾಗೆ ಸ್ವರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಂಜನಾ ಎಂ. ರೆಡ್ಡಿ ಅವರು ಪಂಜಾಬ್‌ನ ಪಟಿಯಾಲದಲ್ಲಿ ಶನಿವಾರ ಆರಂಭವಾದ ಇಂಡಿಯಾ ಓಪನ್ ಥ್ರೋಸ್ ಸ್ಪರ್ಧೆಯ 18 ವರ್ಷದೊಳಗಿನ ಬಾಲಕಿಯರ ಶಾಟ್ ಪಟ್‌ನಲ್ಲಿ ಸ್ವರ್ಣ ಗೆದ್ದುಕೊಂಡರು.

ಮೈಸೂರಿನ ಸಂಜನಾ, 15.80 ಮೀಟರ್ ಎಸೆದು ಮೊದಲಿಗರಾದರು. ಹರಿಯಾಣದ ಆರತಿ (13.22 ಮೀ.) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.



ಸೀನಿಯರ್ ಮಹಿಳೆಯರ ವಿಭಾಗದಲ್ಲಿ 16.44 ಮೀ. ಎಸೆದ ಯೋಗಿತಾ (ಹರಿಯಾಣ) ಚಿನ್ನ ಗೆದ್ದರು. ಎರಡು ಬಾರಿಯ ಏಷ್ಯನ್ ಗೇಮ್ಸ್ ಚಾಂಪಿಯನ್ ತಜೀಂದರ್‌ಪಾಲ್ ಸಿಂಗ್ ಅವರು ಪುರುಷರ ವಿಭಾಗದಲ್ಲಿ ಸ್ವರ್ಣ (20.51 ಮೀ.) ಜಯಿಸಿದರು.

ಅನ್ನಾಬೆಲ್ ಶತಕ; ಭಾರತಕ್ಕೆ ಸೋಲಿನ ಭೀತಿ

ಪರ್ತ್ (ಪಿಟಿಐ): ಅನುಭವಿ ಅನ್ನಾಬೆಲ್ ಸದರ್‌ಲ್ಯಾಂಡ್ ಅವರ ಅಮೋಘ ಆಲ್‌ರೌಂಡ್ ಆಟದ ಪ್ರದರ್ಶನದಿಂದ ಆಸ್ಟ್ರೇಲಿಯಾ ತಂಡ ಮಹಿಳೆಯರ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ವಿರುದ್ಧ ಬಿಗಿಹಿಡಿತ ಸಾಧಿಸಿತು.

ಹಗಲು–ರಾತ್ರಿ (ಪಿಂಕ್‌ಬಾಲ್ ಟೆಸ್ಟ್) ಪಂದ್ಯದ ಎರಡನೇ ದಿನವಾದ ಶನಿವಾರ ಅನ್ನಾಬೆಲ್ ಅವರು ಕೊನೆಯ ಏಳು ಇನಿಂಗ್ಸ್‌ಗಳಲ್ಲಿ ಮೂರನೇ ಶತಕ ಬಾರಿಸಿದರು. 171 ಎಸೆತಗಳಲ್ಲಿ 129 ರನ್ ಹೊಡೆದು ಆಸ್ಟ್ರೇಲಿಯಾ ತಂಡ 125 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಲು ನೆರವಾದರು. ಅವರ ಆಟದಲ್ಲಿ 17 ಬೌಂಡರಿಗಳಿದ್ದವು.

ಭಾರತದ 198 ರನ್‌ಗಳಿಗೆ ಉತ್ತರವಾಗಿ ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 323 ರನ್ ಹೊಡೆಯಿತು. ದಿನದಾಟ ಮುಗಿದಾಗ ಭಾರತ ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 105 ರನ್ ಗಳಿಸಿದ್ದು ಸೋಲಿನ ಭೀತಿಯಲ್ಲಿದೆ.



ಅನ್ನಾಬೆಲ್ ಸದರ್‌ಲ್ಯಾಂಡ್

ವೇಗದ ಬೌಲರ್ ಅನ್ನಾಬೆಲ್ ಎರಡನೇ ಇನಿಂಗ್ಸ್‌ನಲ್ಲಿ 15 ರನ್ನಿಗೆ 2 ವಿಕೆಟ್ ಪಡೆದು ಬೌಲಿಂಗ್‌ನಲ್ಲೂ ಛಾಪು ಮೂಡಿಸಿದರು. ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ (11) ಮತ್ತು ಜೆಮಿಮಾ ರಾಡ್ರಿಗಸ್ (14) ಅವರ ವಿಕೆಟ್‌ಗಳು ಅನ್ನಾಬೆಲ್ ಪಾಲಾದವು. ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಪಡೆದಿದ್ದರು.

ಶುಕ್ರವಾರ 3 ವಿಕೆಟ್‌ಗೆ 96 ರನ್ ಗಳಿಸಿದ್ದ ಆಸ್ಟ್ರೇಲಿಯಾ ತಂಡವು ಎಲಿಸ್ ಪೆರಿ (76) ಮತ್ತು ಅನ್ನಾಬೆಲ್ ಅವರ ಜೊತೆಯಾಟದ ಕಾರಣ ಅಪಾಯದಿಂದ ಪಾರಾಯಿತು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 128 ರನ್ ಸೇರಿಸಿದರು. ನಂತರ ಅವರು ಬೆತ್ ಮೂನಿ (19) ಜೊತೆ 54 ರನ್ ಸೇರಿಸಿದ್ದರಿಂದ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತು. ಭಾರತ ಕಡೆ ಮಧ್ಯಮ ವೇಗಿ ಸಯಾಲಿ ಸಾತ್ಘರೆ 4 ವಿಕೆಟ್ ಪಡೆದರು.

ಭಾರತದ ಎರಡನೇ ಇನಿಂಗ್ಸ್‌ನಲ್ಲಿ ಪ್ರತಿಕಾ ರಾವಲ್ (ಔಟಾಗದೇ 43) ಬಿಟ್ಟರೆ ಉಳಿದವರು ವಿಫಲರಾದರು.

ಇನ್ನಷ್ಟು ಕ್ರೀಡಾ ಸುದ್ದಿಗಳು 11

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

COMMERCIAL BUILDING FOR IMMEDIATE SALE AT KORAMANGALA CLEAR TITLES, E- KHATA
Site Area 2900 sq ft, Built up 6350 sq ft, Near Sony World Junction, Behind Oasis Mall, having two side roads front and back, reasonable price
CONTACT: 9844005652

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

COMMERCIAL PLOT For Sale at Banashankari 6th Stage,On 100ft Road 50x80, North Facing Contact: 9980775693

BTM Layout

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

Bannerghatta Road

SITE FOR sale: 40/60ft, NF, @Raja Iris Residencial layout,1.5 cr. ,Begur koppa road, Cont: 9035917223

Kanakapura Road

JUDITIAL LAYOUT, 50X80,East Facing 16000/- Banashankari 6th Stage, 2nd Block_50X80,Commercial _Site,11crore Negotioble :9916375577

Basaweshwaranagar

SALE BASAWESHWARNGR 40x60 Site, North Facing, clear titles, Adjacent to Bharath gas. Contact Owner. 9480060249

Devanahalli

SITE SALE BIAAPA Approved E-Khatha Coffee Board Layout, Meesaganahalli, N/E/S Corner 30x80 Rs. 6000/ sft. 9731121679.

J P Nagar

BDA APPROVED Layout JPNagar 5th Phase 2400Sft W/F Site Brokers Excuse Genuine Buyers: 9341273990

JP.NAGAR 1ST Phase, 2,040 SqFt BDA Approved, SE Corner Site Navodaya Layout, beside Banashankari Metro and behind Sobha Dewflower Apartments 16,500/SqFt. 9900955337

JPNAGAR 7TH PHASE AVAILABLE MEASURING 45x40, 2 SITES SOUTH EAST CORNER AND SOUTH WEST CORNER, BBMP E KHATA (11B)- 7022435107

Kempegowda Layout

BDA SITE for Sale Nadaprabhu Kempegowda Layout 40x60 1st block H Sector Near 330, feet PRR Road South Broker Excuse genuine buyers only: 7349549087

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

BDA SITE for Sale 20x30, Site No. 1431, 6th block , Kempegowda layout, Broker Excuse: 7899570235

Nagarabhavi

"NAGARABHAVI BDA Complex near 30x50 Site 40 feet Road Annapooreswari Layout Good location. 9448733456/ 7259675150"

"30X40 EAST FACING BBMP A-Katha Site for sale near Nagarbhavi Ring Road Ready for Construction. 9880031654"



FOR SALE: Three bedroom duplex house with garage in Gardenvillas, Maruthinagar, Nagarabhavi Road. Brokers excuse. 9242197954.

Hosa Road

NEAR HOSA ROAD METRO STATION, Hosur Road: BBMP A Katha 60x75 West Facing site Sale 9,000/-Psft. 8618175917/ 7899023497

R T Nagar

R.T.NAGAR 40X60 East Facing Vacant Site BDA Approved Excellent Location For Sale Call: 9845378269 7829203369

Sanjaynagar

1400SQFT RESIDENTIAL Old House G+1,For Sale in Sanjayanagara Near_Police Station_Rs_30000/- 9845600007 /9844445666

SANJAYNAGAR KEB LAYOUT BDA 1050sft North West corner 40 feet Road E- Khatha, 9341260828 7829203369

Uttarahalli

SALE 1717SFT Site West Facing Poorana Pragna Layout Uttarahalli Contact: 9880425607

Vishweshwariah Layout

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

20X30, 30X40, 40x60, 50x80 VISHWESHWARAIAH LAYOUT, KEMPEGOWDA LAYOUT, NO BROKERAGE CONTACT: 9741893779

"30X40 BDA ONE,TWO BHK 5 UNITS RENTAL HOUSE SALE 5TH BLOCK VISHVESHWARAIAH LAYOUT- 9845143579"

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

RAILWAY LAYOUT 2nd Stage, West South Corner, 1170 Sqft, Near Vidyanikethan School Ullal Road, BDA Katha: 9164089633

Whitefield

"FOR SALE Total_2800 Sqft North_facing_Site Immadihalli Near_White Field, Good location. 9342493875"

Akshaynagar

BANNERAGATTA ROAD Akshaya Nagar 52x72 SEC 14000/, 50X97 SF 12000/-, 45X90 EF 14000/- NEGOTIABLE 9449655947

Rajarajeshwari Nagar

RR.NAGAR BEML 5th Stage 6560.Sqft. West Facing, Vastu Site Sale, Suitable for Apartment. Contact: 9448121223.

FOR SALE
BDA SITE No. 90, BTM 1st Stage, North facing 40×60, 60 ft. Road, Adjacent to JALA BHAVAN, Between Bannerghatta Road to Jayanagar East End Road, Approx 100 mtr. to Bannerghatta Main Road.
Genuine Buyers Call:
Muralidhar: 98453 01599

Industrial & Factory

Tumkur Road

SALE 108 Acres Agriculture Land near Nelamangala Suitable for Warehouse/ Industry/ Residential/ Fantasy Park. 9141326819

10 ACRES for Sale Industrial Land Suitable for Industry/ Warehouse Contact Only Genuine Buyers. 9141326819

House

J P Nagar

FIRST PHASE 1890sft,3BHK OCCC_Flat,3.50cr/1080sft Semi-furnd _2BHK_Flat 7800/-30x40,3BHK,Duplx 2.85cr/20x30,4units 1.50cr/30x40,2BHK,House 1.90cr:9964652358

Uttarahalli

UTTARAHALLI BHARAT HOUSING SOCIETY, OPPOSITE_PARK, 20X40 WEST FACING 3_BHK DUPLEX HOUSE SALE. 9945724472.

General

Out-Station

FOR SALE
BEACH FACING PROPERTY AT KOTA, UDUPI DISTRICT.
92 CENTS, WITH ONE HOUSE 5.98 CRORES, CLEAR TITLES.
DIRECT OWNER
9481801053

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Agricultural Land

Out-Station

AGRICULTURAL LAND For-Sale at Yadgir Dist Naykal Village Near-to Main Road 11.28 Acres. 9880563629 9448473358

DH DECCAN HERALD **Classifieds**
More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS



www.dhclassifieds.com

BOOK NOW

*Conditions apply

Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

DH DECCAN HERALD | ಪ್ರಜಾವಾಣಿ

https://dhclassifieds.com

Book your Ad in 4 Easy Steps --Select Category-- Book ad
1 Select Category 2 Publication & Date 3 Compose Your Ad 4 Payment



ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತ್ವರಿತವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ.
ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

REAL ESTATE SELLING

Flat

Nagarabhavi

SALE DUPLEX Flat 3BHK EF, 2400Sft. 'E' Khatha. Nagarabhavi Circle. Near Teacher's Layout. 2Cr: 9606323666

Sahakarnagar

FOR SALE Luxury 3 BHK Flats available Reputed Builders Eco Design, Ample Space, Vasthu Compliance, Security and Greenery, Tatanagar, Bangalore. Brokers Not Entertained. Contact +91 9980883973

Sarjapur Road

2BHK APARTMENT Nambiar District 25 Sarjpura Road ready by 2030 to be paid in installments, five installments paid. Value 1.5Crores, 9886010995

Farm House/ Land/ Resorts

Hoskote

10 ACRES Land Farm House all Organic Fruits Very Good Location 10Lakh Per Acre Negotiable Pedda Thippasamudram Towards Hoskote: 9945195134

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE BUYING

Commerical

Multiple Locations

REQUIRED 1 2 & 3 BHK P.G Buildings or Service Apartments, Lands, 4000 to 1 Acre in Whitefield, Bellandur, Marathahalli, Mahadevapura, Kundanahalli. For long Lease : Call: 9900399006

Industrial & Factory

Multiple Locations

WANTED AROUND 3500-5000SQFT Industrial Shed or Land for purchase at Bommasandra Industrial_area, Jigani Industrial area and Electronic City, No'brokers. Direct Owners call: 9481773963/ 9845931199.

Sites

Anjanapura

WANTED SITE ANJANAPURA BCCHS_Layout Narayan`Nagar Jayanagar Housing Society, Banashankari 6th`Stage 30x40,40x60. Direct_Registration. Broker_Excuse. Call:9663454878

Multiple Locations

WANTED/ AVAILABLE Residential Sites in Basavanagudi, V.V.Puram, Jayanagar, J.P.Nagar, Kanakapura Road, Hanumanthnagar, Banashankari. Call: 9900399006

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office):: 9036360366

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

A CORPORATE Stay that feels like Home Best Prefered for: Official Guest House / Hostel Just 5 mins from Manyata Tech Park, near Airport Rd Features: Spacious Living- 6 (2 BHK) & 2 (1 BHK) Units 24/7 uninterupted Water Reliable Power Backup Solar Connectivity for all Bathrooms 24/7 Security with dedicated Security House Quiet & Peaceful Ambience ideal for professionals Perfect for Long-Term Corporate Stays Semi-Furnished for Convenient Living Elevator Facility Lavish parking space Note: Direct Leasing by Owner- No Brokers Contact : 9945077600/ 9844138816

COMERCIAL BUILDING available for rent basement plus three suitable for office tutorial diagnostic center super bazar in jayanagar contact 9845010485

Flats

BANNERGHATTA ROAD Prestige Notinghill Near Meenakshi Mall 2.5 BHK Fully Furnished Flat For Rent: 8747036555

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

Accommodation Wanted

Godown

WANTED/ AVAILABLE GODOWN, WAREHOUSE, INDUSTRIAL GODOWN Around Bangalore for Rent/ Lease, P.G building For Sale. Call: 9900399006

JOB OPPORTUNITIES

Teachers/ Professors

LITTLE BLOOM English`High School and Chaitanya`PU College KR.Puram, Bengaluru-36, Ph:9739411881, 9739797756. Required College/School Principal`and English`Hindi Lecturer with`min`5years of`Experience, Receptionist ACADEMIC COORDINATORS and`IN-CHARGE, (Primary and`High School) Experienced, Trained/`Untrained Teachers`to Handle`Nursery to`High School`to Teach`all Subjects, Computer Teacher`and PE Instructor for`2026-27 Qualification: NTT/D.Ed/BA B.Sc/B.Ed/M.Sc. MA/M.Ed.`Email: littlebloomenglish school@gmail.com Walk-in Interview 16th`17th,18th of`March Timings: 10.00am`to`1.00pm

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolr pclayout@gmail.com Requires Experienced Trained Teachers for the Academic year 2026-27 for Kannada (to handle Higher Primary). High School- Ist Language English, Mathematics, Science & SocialScience to handle VIII & IX. STATE & ICSE. Qualification: B.A./B.Sc., B.Ed/ M.A./M.Sc, M.Ed. Only English Medium Candidates need to apply

"PLANET BLOOMINGDALE" Requires Trained/`Untrained Pre-School Teachers, Housekeeping Staff and Lady Security for`Koramangala Branch. Call: 9243127555 / 9243101700

SRI HANUMAN GROUP OF INSTITUTIONS®
C M NATIONAL PUBLIC SCHOOL
Affiliated To CBSE, New Delhi (Affiliation No-830249)
Bandappa Garden, J P Park, Muthyalanagar, B'lore-54.
Ph:080-23374802 website: www.nps-jppark.in

WE ARE HIRING
Join Our Professional Teaching Team
KINDERGARTEN, PRT, TGT, PGT, NON-TEACHING POSTS
Open Position: - English, Kannada, Hindi, Maths, Science, Social Science, Computer Science, Physical Teacher & Office Staff.
WALK IN-INTERVIEW : 9:00 AM - 3:30 PM (MON- FRI) OR Call.: 7676776937, 9845054168, 9900343399, 9880032218 OR Send your Resume to E-mail: nps.principal@gmail.com

TEACHERS & LECTURERS WANTED ST. PHILOMENA'S ENGLISH SCHOOL AND PU COLLEGE, Vidyaranyapura, Bangalore-97, Invite applications from qualified candidates for all the subjects: TEACHERS: Nursery to Grade 10 (ICSE) LECTURERS: PCMB, PCMC (CET/ NEET) CEBA/ Kannada/ Hindi/ English. Requirements: B.A/ M.A/ B.SC/ M.S.C/ B.COM/ M.COM/ B.COM, M.PEd /B.Ed./ M.Ed. or equivalent Relevant teaching experience preferred (3 Years) Strong communication skills. Apply with: Resume Copies of qualifications Experience certificate Last date: [14th.March.2026] Contact: st.philomena.vrp@ gmail.com 9945761253 8050384028

CRESCENT HIGH SCHOOL & PU College#28 Sultan Road Banagalore-02. Qualified Teachers are Required to teach in Pre-Primary, Primary Middle & High`School (All Subjects Including Art`& Craft,Computer & PET (Male &`Female Teachers) and PUC (Commerce-HEBA) Candidates with experience and fluency in English may`apply to Chairman, Enclosing Bio-data`& photostat copies of the testimonials within 15`days by Email: mmacrescent@gmail.c om For`more details Call:9071120120 7019929814.

REQUIRED EXPERIENCED Primary and High School Teachers with B.A / B.Sc, B.Ed / M.A / M.Sc, M.Ed to teach Science, Social Science, Mathemetics, English, Hindi & PE Teacher. Required Librarian, Lab Assistant & Drivers. Walk-in-interview. Contact: Lalith Castle International School, Rajarajeshwari Nagar, Blore-98. Mob: 9620464800 Email: lcis.rrnagar@gmail.com

REPUTED PU COLLEGE @ HESARAGHATTA ROAD REQUIRES PRINCIPAL AND PET, NCC, FACULTY MEMBERS FOR ENGLISH, ACCOUNTANCY, COMPUTER SCIENCE, ECONOMICS, BUSINESS STUDIES, HINDI. CONTACT: 6360291124. Mail: ashakashyap1380@gm ail.com

PREMIER HIGH SCHOOL, SRIRAMPURAM requires Headmistress & Teachers for Primary (English, Social) and High School (Maths, Science) (Ladies Preferred). Contact: 9538836721.

ST FLOWERS ENGLISH SCHOOL ICSE- STATE, Bangalore 9686732171, 080-23399884/ 080-23408832, stflowerenglishschool @gmail.com Required Experience Trained Teachers for the Academic Year 2026-2027 For Primary and High School Kannada, Hindi, English, Social Teacher (MA , B.Ed) Maths, Science (M.Sc , B.Ed) Physical Education (BPEd, MPEd) Computer Science (M.Sc, B.Ed) Nursery Teachers NTT, Basic Degree with B.Ed Trained teachers.

TRIVENI PUBLIC School, (CBSE & ICSE) Bagalagunte invites applications from qualified and experienced teachers for the following subjects: English, Hindi, Mathematics, Science (PCM & CBZ), EVS, and All Subjects (Primary & high school). Contact number 6360291124 Mail ashakashyap1380@gm ail.com

REQUIRES EXPERIENCED Primary and High School Teachers with B.A / B.Sc, B.Ed / M.A / M.Sc, M.Ed to teach Science, English, Mathematics and Sanskrit. English fluency is must. Walk-in-Interview. Contact Max Muller Public School, Mahalakshmi Layout, B'lore-96. Ph: 23376050. E-mail- maxmullerpublicschool .mlayout@gmail.com

HERITAGE PUBLIC SCHOOL Konanakunte, requires: HIGH SCHOOL TEACHERS for`Physics Chemistry Biology PRIMARY TEACHERS for`all subjects`and KG COORDINATOR WhatsApp`or email resume`to Mob:9901733776. Email: heritagepublicschoolkk @gmail.com

VALLABHA INTERNATIONAL School, Somanahalli, Kanakapura Main Road, Bangalore-82 Requires Highschool/ Primary Science, Mathematics, English, Social And Nursery Teachers: 9880439138/ 9591865641

Security & Detectives

JOB VACANCY Company Appointment SECURITY GUARD, SUPERVISOR, Salary Rs. 18,600 to 25,000, P.F., E.S.I., BONUS, FOUR Weekly off J.P.NAGAR, Marathahalli Kundalahalli. 9036374114 9686684009 9600325583 6361106051

Multiple Vacancy

ASHOKANAGAR CO-OPERATIVE BANK LTD.
Bangalore-560 050. Ph: 080-26506213, 26606365, M: 99642 16663

An established Co-operative Bank invites application from qualified and experienced Retired/Voluntary Retired Bank executives for appointment as Branch Manager/Senior Assistant and Junior Assistant on CONTRACT BASIS

I. Required qualifications and experience

1. Branch Manager
- Bachelor's degree in Finance/Masters in Business Administration/CAIIB.
- 5 to 8 yrs of experience in banking or financial services with at least 2 yrs in a Managerial Role.
- Knowledge of Cooperative banking principles, retail banking, and SME lending
- Strong communication, leadership and interpersonal skills
- Ability to manage operations and support business growth
- Proficiency in MS office and banking software systems.
- Will oversee daily branch operations, ensuring RBI compliances, driving business growth and delivering excellent customer service
- Age: Preferably not exceeding 65 years

2 Senior Assistant
Bachelor degree in Finance/ MBA, would be added advantage 3 to 10 years' experience in all aspects of Banking/Financial services.

3. Junior Assistant
Bachelor degree in Finance 2 to 5 years' experience in all aspects of Banking/Financial services.

II Terms of appointment
On Contract basis initially for a period of 2 yrs. extendable based on performance.
II. Remuneration : Remuneration will be consolidated amount based on qualification and experience.

How to Apply:
Eligible Candidates may submit their detailed resume with copies of educational & experience certificates along with a recent photograph within 15 days from the date of advertisement, addressed to the **CEO, Ashokanagar Cooperative Bank Ltd, # 1380/B, 6th Cross, Ashoknagar, Banashankari 1st Stage, 2nd Block, Bangalore-560 050. Email: ho@ashoknagarbank.com**

HRD & Admin

INDIAN RED CROSS SOCIETY
Karnataka State Branch
No. 26, 1st Floor, Red Cross Bhavan, Race Course Road, Bangalore- 560 001
Phone: 22264205 / 22268435
e-mail: ircskar@gmail.com;

REQUIRES
ASST. SECRETARY - 01
Graduate from any recognized university with ten years of vast administrative experience. A retired Gazetted Officer not below the rank of Group B having minimum 5 years of experience in Group A or B category.

NOTE: Salary negotiable depending upon qualification and experience. Application with testimonials should reach the undersigned at the above address on or before 16th March 2026 before 5.00 p.m. with candidate's mobile number, e-mail id.
For all further details and information please visit www.redcrosskarnataka.org

Sd/-
General Secretary

Marketing & Sales

WANTED MARKETING Manager, Tele Marketing and Marketing Executives for reputed Real Estate to sell Plots and Farm Land. Preferably experience candidates. Call: 9845041912

WANTED SALE'S EXECUTIVES experienced in industrial products selling with two wheeler Contact. AMIT INDUSTRIES 9739826852

Accounts & Finance

WANTED ACCOUNTANT Gents only and office Boy for Bright Aluminum Company at Jc Road Contract:98452 59183

RANKA STEELS Whitefield Unit looking to hire male & female candidate for Billing Department. With good basic computer knowledge & Typing Speed. Interested candidates Send Mail akshay@rankasteels.com or 9342248383.

Walk-in

MMET ENGLISH PRIMARY& HIGH SCHOOL
8, Patel Kulappa Road, R.S. Palya, M.S. Nagar Post, Bangalore - 560033.
Ph. 080-25450522, 72596 48179, 93428 54850
Please send your resume to Email: mmetschool@gmail.com

WANTED TEACHERS
Pre-Primary : PUC, NTT / Montessori
Primary: PET, (D.P.Ed)
High School : Maths & Chemistry (B Sc, B Ed) Hindi (BA, B.Ed)

KNSS VIDYAMANDIR ENGLISH PRIMARY & HIGH SCHOOL
Anandapura, T.C. Palya Main Road, Bangalore - 560 036.
Ph. No. 080 - 2545 0522, 70224 77196, 94497 09292
Please send your resume to knssvidyamandirephs@gmail.com
Pre Primary : PUC, NTT / Montessori
Primary : Kannada, English, Hindi (PUC, D Ed)
Computer Teacher

Attractive salary with benefits offered. Walk-in interview on 14.03.2026 (Saturday) 10 AM onwards at MMET School.

General

WANTED for Billing Cashier`& Godown Incharge Qualification PU`or`Bcom Pass With Basic Computer knowledge Location wilson garden siddaiah Road`Near Shanti Nagar`Bus`stand Call:9845351200 9535218502

HIRING OFFICE ASSISTANTS & CLERKS (Textile Export Company) Bommanahalli, Bangalore. Mail: starsilks@gmail.com

MATRIMONIAL

Brides Wanted

Sindhi

Affluent Vegetarian Sindhi Bangalore Business Family Seeks Vegetarian Girl for B.Com., / Inter CA 28 / 5'5" Type-1 diabetic boy.
For more details E-mail:
kg681599@gmail.com.

Grooms Wanted

Hindu

A dedicated **Obstetrician & Gynaecologist,** 28, MBBS DNB, 156 cm, fair, from a respected, education-oriented Tamil family (Udayar Hindu), Chennai. Seeking a groom of parallel professional calibre—preferably in medicine—from a family of similar standing. He should be principled, forward-thinking, and purposeful in his pursuits. Family enquiries only.
Ct: 98410 78080

Kannada

Grooms Wanted
Hindu, 29/5' 2" Beautiful B.A+LLB Study self work Bangalore wanted Handsome smart, Edu, good earn Boy Gujarati, Kannada, P Bengali. Call: 8105076193/ 9038535529

ಒಕ್ಕಲಿಗ ಜಾತಿ, 55 ವರ್ಷ, ಎಂಕಾಂ ಪದವಿ ಚಿಕ್ಕಮಗಳೂರು ಮೂಲ, ಬೆಂಗಳೂರಿನಲ್ಲಿ ಸ್ಥಿರವಾಗಿ ನೆಲೆಸಿದ್ದಾರೆ, ಮದುವೆ ಆಗದೇ ಇರುವ ಹೆಣ್ಣಿಗೆ **ವರ ಬೇಕಾಗಿದೆ,** ಜಾತಿ ಅಭ್ಯಂತರವಿಲ್ಲ ವಿದುರಾ/ ವಿಚ್ಛೇದನ ಆದರೂ ಪರವಾಗಿಲ್ಲ
ವಿವರಗಳ ಜೊತೆ ಫೋಟೋ ಕಳುಹಿಸಿ: 9886277488
ಬ್ರೋಕರ್‌ಗಳು ಬೇಡ

BUSINESS

Business to Business

Hotel & Restaurant

WELL FURNISHED Restaurant with well equipped kitchen & Everything in 1000 Sft area for SALE or RENT in Posh Vijaya Bank Layout, Bannerghatta Road. Lease Agreement Transferable. For Details Call: 9900001954

EDUCATIONAL

Admission

DIRECT PRIVATE Online Secondary, Intermediate, all Bachelors, Masters degrees March/ April, Nov/ Dec Examinations 9341273990

Community Centre (R) - 1956
COMMUNITY CENTRE GROUP OF EDUCATIONAL INSTITUTIONS
Accredited by NAAC
Affiliated to Dr. MANMOHAN SINGH BENGALURU CITY UNIVERSITY,
Approved by AICTE, New Delhi
#2/1, Natabhairava Shri V Vajramuni Road, 9th Cross, 9th Main, 2nd Block, Jayanagar, Bengaluru–560011. Ph: 080 26577851 website: www.cimsbschool.org

Hearty Congratulations


BENGALURU CITY UNIVERSITY RANK HOLDERS

CIMS - PG - MCA (BATCH 2023-25)



Ms. JOSHI ARYA SUHAS | Ms. MEGHANA H | Ms. NANDINI R

CICMS - UG - BCOM (BATCH 2022-25)



Ms. UMEZA | Ms. VAISHNAAVI L

Shri. K M NAGARAJ, Chairman | Shri. CHIKKAIAH, Secretary | Dr. JANARDHAN T G, CIMS, Director | Dr. DHARMENDRA KUMAR T P, CICMS, Principal


TEACHING STAFF

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331




ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು
ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಏರುತಿದೆ ತಾಪ
ಪಾರಾಗೋದು
ಹೇಗಪ್ಪಾ?
ಪುಟ 2



ಭಾನುವಾರ • ಮಾರ್ಚ್ 8, 2026



ಸಾಂಸ್ಕೃತಿಕ ಕಾರ್ಯಕ್ರಮ (ಮಾರ್ಚ್ 8)

ಇಂದು 'ಅಣ್ಣನ ನೆನಪು'

ಪ್ರವರ ಥಿಯೇಟರ್ ತಂಡ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 'ಅಣ್ಣನ ನೆನಪು' ಸಾಕ್ಷ್ಯ ನಾಟಕವನ್ನು ಇಂದು (8ರಂದು) ಸಂಜೆ 6 ಗಂಟೆಗೆ ಪ್ರಸ್ತುತಪಡಿಸಲಿದೆ.

ವಿನ್ಯಾಸ ಮತ್ತು ನಿರ್ದೇಶನ: ಹನು ರಾಮಸಂಜೀವ, ರಂಗರೂಪ: ಕರಣಂ ಪವನ್ ಪ್ರಸಾದ್, ಸಂಗೀತ: ಅಕ್ಷಯ್ ಭೋಂಸ್ಲೆ, ಸ್ಟೇಜ್ ಮ್ಯಾನೇಜರ್: ಸಚಿನ್ ಎಚ್. ಶೆಟ್ಟಿ, ಬೆಳಕು: ರಂಜನ್. ರೇಖಾಚಿತ್ರ: ಹರ್ಷ ಕಾವೇರಿಪುರ. ರಂಗದ ಮೇಲೆ: ಮಹೇಶ್ ಎಸ್.ಪಿ., ನಾಗಶ್ರೀ ಪುಟ್ಟರಾಜು, ಮನ್ವಿತ್ ರಾಜ್ ಆರಾಧ್ಯ, ಅಂಬಿಕಾ ಶೆಟ್ಟಿ, ಋತ್ವಿಕ್ ಕೆ.ಸಿ.

ನಾಟಕದ ಕುರಿತು: ಇದು ತೇಜಸ್ವಿ ಅವರ ಕೃತಿ 'ಅಣ್ಣನ ನೆನಪು' ಆಧಾರಿತ. ಪ್ರತಿ ಅಧ್ಯಾಯವೂ ಹಾಸ್ಯಬುಗ್ಗೆಯನ್ನು ಒಸರುತ್ತದೆ. ಕುವೆಂಪು ಅವರ ವ್ಯಕ್ತಿತ್ವವನ್ನು ತೆರೆದಿಡುತ್ತಾ ಹೋಗುತ್ತದೆ. ಮೇರು ಸಾಹಿತಿಯ ಮಗನಾಗಿ ತಂದೆಯ ಸಾಹಿತ್ಯದ ನೆರಳಿನಿಂದ ದೂರ ಸಾಗಿ ತಮ್ಮದೇ ಆದ ಪ್ರತ್ಯೇಕ ಶೈಲಿಯನ್ನು ಅಳವಡಿಸಿಕೊಂಡು ಹೆಸರಾದ ತೇಜಸ್ವಿ ಅವರ ವ್ಯಕ್ತಿತ್ವವನ್ನೂ ಅನಾವರಣಗೊಳಿಸುತ್ತದೆ. ಎಲ್ಲೂ ತಂದೆಯ ಗುಣಗಾನ ಮಾಡದೆ, ಕುವೆಂಪು ಅವರ ನೈಜ ವ್ಯಕ್ತಿತ್ವವನ್ನು ಸಾಮಾನ್ಯ ಮಗನಂತೆ ಕಟ್ಟಿಕೊಟ್ಟಿದ್ದಾರೆ ತೇಜಸ್ವಿ.

ಸ್ಥಳ: ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಮಲ್ಲತ್ತಹಳ್ಳಿ. ಹೆಚ್ಚಿನ ಮಾಹಿತಿಗೆ: 96868 69676

ದೇಗುಲ ಲೋಕಾರ್ಪಣೆ

ಪಂಚಮುಖಿ ಶಿವಲಿಂಗೇಶ್ವರಸ್ವಾಮಿ ನೂತನ ದೇವಾಲಯ ಲೋಕಾರ್ಪಣೆ. ಅಧ್ಯಕ್ಷತೆ: ರಂಭಾಪುರಿ ಸ್ವಾಮೀಜಿ, ಉಜ್ಜಯನಿ ಸ್ವಾಮೀಜಿ. ಸ್ಥಳ: ಎಲೆಕೊಡಿಗೇಹಳ್ಳಿ, ಮಾಗಡಿ ರಸ್ತೆ. ಬೆಳಿಗ್ಗೆ 11 ಗಂಟೆ.

ಪೌರಾಣಿಕ ಯಕ್ಷಗಾನ ಪ್ರದರ್ಶನ

ಯಕ್ಷಗಾನ ತಪಸ್ಸಂಘ ಇಂದು ಮಧ್ಯಾಹ್ನ 3ರಿಂದ ರಾತ್ರಿ 9ರವರೆಗೆ ಎರಡು ಪೌರಾಣಿಕ ಯಕ್ಷಗಾನ ಪ್ರಸಂಗಗಳನ್ನು ಪ್ರದರ್ಶಿಸಲಿದೆ. ಬಿಷ್ಟಪ್ಪ ವಿರಚಿತ 'ಮಾಗಧವಧೆ' ಹಾಗೂ 'ಭಸ್ಮಾಸುರ ಮೋಹಿನಿ'. ಹಿಮ್ಮೇಳ: ಭಾಗವತರು–ಗಣೇಶ ಯಾಜಿ ಮಾವಿನಕೆರೆ, ನಾಗರಾಜ ಮಗವಳ್ಳಿ. ಮದ್ದಳೆ: ನಾರಾಯಣ ಹೆಬ್ಬಾರ್ ಕಳಚೆ, ರಾಜೇಶ ಸಾಗರ, ಚಂಡೆ: ನಾಗಭೂಷಣ ಕೇಡಲಸರ, ಲಕ್ಷ್ಮಿನಾರಾಯಣ ಸಂಪ.

ಮುಮ್ಮೇಳ: ರಾಮಕೃಷ್ಣ ಭಟ್ಟ, ರಾಘವೇಂದ್ರ ಭಟ್ಟ, ಗಜೇಂದ್ರ, ನಿತಿನ್ ಹೆಗಡೆ, ಸತ್ಯನಾರಾಯಣ ಭಟ್ಟ, ಅಜಿತೇಶ ಹೆಗಡೆ, ಕೃಷ್ಣ ಶಾಸ್ತ್ರಿ.

ಸ್ಥಳ: ಜಯರಾಮ ಸೇವಾ ಮಂಡಳಿ, ಜಿ.ವಿ. ಹಾಲ್, 2ನೇ ಮಹಡಿ, ಜಯನಗರ 8ನೇ ಬ್ಲಾಕ್, ಜೆ.ಎಸ್.ಎಸ್. ಆಡಿಟೋರಿಯಂ ಸಮೀಪ.

ದಾಸರಪದ ಗಾಯನ

ದಿ ಕಲಾಪ್ರೇಮಿ ಫೌಂಡೇಷನ್ ಸಂಜೆ 6.15ಕ್ಕೆ ಸಂಗೀತ ಕಛೇರಿಯನ್ನು ಆಯೋಜಿಸಿದೆ. ಗಾಯನ: ವಿದುಷಿ ಲಕ್ಷ್ಮಿ ನಾಗರಾಜ್. ಮೃದಂಗ: ದೀಪಿಕಾ ಶ್ರೀನಿವಾಸನ್, ವಯೊಲಿನ್: ಸಿ.ವಿ. ಶ್ರುತಿ. ಸ್ಥಳ: ಸೇವಾಸದನ್ ಆಡಿಟೋರಿಯಂ, ಎಂ.ಎಲ್.ಎ. ಕಾಲೇಜು ಎದುರು, 14ನೇ ಅಡ್ಡರಸ್ತೆ, ಮಲ್ಲೇಶ್ವರಂ.





ಸಂಗೀತ ಆರಾಧನೆ

ಗಿರಿನಗರ ಸಂಗೀತ ಸಭಾ ಪುರಂದರದಾಸರು ಮತ್ತು ಶ್ರೀತ್ಯಾಗರಾಜರ 32ನೆಯ ಆರಾಧನಾ ಮಹೋತ್ಸವವನ್ನು ಆಯೋಜಿಸಿದೆ. ಇದರ ಪ್ರಯುಕ್ತ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನೂ ಆಯೋಜಿಸಲಾಗಿದೆ.

ಕೊಳಲು: ಸ್ಮಿತಾ ಶ್ರೀಕಿರಣ್, ಮೃದಂಗ: ದೀಪಿಕಾ ಶ್ರೀನಿವಾಸನ್, ವಯೊಲಿನ್: ಅದಿತಿ ಕೃಷ್ಣಪ್ರಕಾಶ್, ವೀಣೆ: ಯೋಗವಂದನಾ, ಖಂಜಿರಾ: ಲತಾ ರಾಮಾಚಾರ್. ಬೆಳಿಗ್ಗೆ 10.

ಉಭಯಗಾನ ವಿದುಷಿ ಶಾಂತಾ ನರಸಿಂಹನ್ ಅವರಿಗೆ ಸನ್ಮಾನ ಕಾರ್ಯಕ್ರಮ ಬೆಳಿಗ್ಗೆ 11.15. ಹಿರಿಯ ಸಂಗೀತ ವಿದ್ವಾಂಸರು ಮತ್ತು ವಿದುಷಿಯರಿಂದ ಪಂಚರತ್ನ ಕೃತಿಗಳ ಗೋಷ್ಠಿ ಗಾಯನ ಮಧ್ಯಾಹ್ನ 12. ಪ್ರೊ. ನಾಗೇಂದ್ರನಾಥ್ ಅವರಿಂದ ಕೀಬೋರ್ಡ್ ಸಂಜೆ 4. ಲಘು ಶಾಸ್ತ್ರೀಯ ಸಂಗೀತ. ಸಾಧ್ವಿನಿ ಕೊಪ್ಪ ತಂಡದಿಂದ ಸಂಜೆ 4.45. ಕರ್ನಾಟಕ ಶಾಸ್ತ್ರೀಯ ಸಂಗೀತ ವಿಶೇಷ ಕಛೇರಿ. ಗಾಯನ: ಭರತ್ ಸುಂದರ್, ವಯೊಲಿನ್: ಎಚ್.ಎನ್.ಸ್ಮಿತಾ, ಮೃದಂಗ: ತುಮಕೂರು ರವಿಶಂಕರ್, ಘಟಂ: ಎಸ್.ಎನ್. ನಾರಾಯಣಮೂರ್ತಿ ಸಂಜೆ 6.15.

ಸ್ಥಳ: ಅಕ್ಷರಂ ಸಭಾಂಗಣ, ರಾಘವೇಂದ್ರಸ್ವಾಮಿ ಮಠದ ಸಮೀಪ, 8ನೇ ಅಡ್ಡರಸ್ತೆ, 2ನೇ ಹಂತ, ಗಿರಿನಗರ.



ಲಕ್ಷ್ಮಿ ನಾಗರಾಜ್

ಯುಗಳ ಗೀತೆ

ಏಕತ್ವಂ ಹೋಳಿ ಮ್ಯೂಸಿಕ್ ಫೆಸ್ಟ್ ಕರ್ನಾಟಕ ಗಾಯನ ಯುಗಳ ಗೀತೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ವಿದುಷಿ ಸಂಜನಾ ಮೀನಾಕ್ಷಿ ಮತ್ತು ವಿದುಷಿ ವಿಶ್ರುತಿ ಗಿರೀಶ್. ಪಿಟೀಲು: ವೈಭವ್ ರಮಣಿ, ಮೃದಂಗ: ಕೌಶಿಕ್ ಶ್ರೀಧರ್, ಖಂಜಿರಾ: ಸುಮುಖ್. ಕಾರ್ಯಕ್ರಮ ನಡೆಯುವ ಸ್ಥಳ: ಬೆಂಗಳೂರು ಗಾಯನ ಸಮಾಜ, ಬಸವನಗುಡಿ. ಸಂಜೆ 5ರಿಂದ.

ಸಂಗೀತ ಕಾರ್ಯಕ್ರಮ


ಸಪ್ತಕ ಸಂಸ್ಥೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗಾಯನ: ತೇಜಸ್ವಿನಿ ವೆರ್ಣೇಕರ್, ತಬಲಾ: ವಿಜೇತಾ ಹೆಗಡೆ, ಹಾರ್ಮೋನಿಯಂ: ಶ್ರೀರಕ್ಷಾ ಶಾನಭೋಗ, ಸಿತಾರ್ ವಾದನ: ಸಹನಾ ಬ್ಯಾನರ್ಜಿ, ತಬಲಾ: ರೂಪಕ ಕಲ್ಲೂರಕರ್. ಸ್ಥಳ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ. ಸಂಜೆ 5.30.

ಸ್ವರ ಕೈವಲ್ಯಂ

ಕೈವಲ್ಯ ಚಿಂತಾಮಣಿ ಹಾಗೂ ಶ್ರೀ ಸಿದ್ಧೇಶ್ವರಿ ರಾಜರಾಜೇಶ್ವರಿ ದೇವಸ್ಥಾನ 'ಸ್ವರ ಕೈವಲ್ಯಂ' ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ.

ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಮುಮ್ಮಕ್ಕಳಾದ ಎಸ್. ಐಶ್ವರ್ಯಾ ಮತ್ತು ಎಸ್. ಸೌಂದರ್ಯಾ ಅವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸ್ಥಳ: ಮೀನಾಕ್ಷಿ ರಂಗಮಂಚ ಸಭಾಂಗಣ, ದೊಡ್ಡಕಲ್ಲಸಂದ್ರ. ಹೆಚ್ಚಿನ ಮಾಹಿತಿಗೆ: 77952 13707, 7795335303



ಪವನ್ ಕಲ್ಯಾಣ್

ಇದೇ 19ಕ್ಕೆ ಉಸ್ತಾದ್ ಭಗತ್ ಸಿಂಗ್

ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ ಮುಂದೂಡಿಕೆಯಾದ ಬೆನ್ನಲ್ಲೇ ಹಲವು ಚಿತ್ರತಂಡಗಳು ತಮ್ಮ ಸಿನಿಮಾಗಳನ್ನು ಮಾರ್ಚ್ 19ರಂದೇ ಬಿಡುಗಡೆ ಮಾಡುವುದಾಗಿ ಘೋಷಿಸಿವೆ.

ತೆಲುಗಿನ ಖ್ಯಾತ ನಟ ಪವನ್ ಕಲ್ಯಾಣ್ ನಟನೆಯ 'ಉಸ್ತಾದ್ ಭಗತ್ ಸಿಂಗ್' ಸಿನಿಮಾ ಮಾರ್ಚ್ 19ರಂದು ತೆರೆಕಾಣಲಿದೆ. ಹರೀಶ್ ಶಂಕರ್ ನಿರ್ದೇಶನದ ಈ ಸಿನಿಮಾವನ್ನು ಮೈತ್ರಿ ಮೂವಿ ಮೇಕರ್ಸ್ ನಿರ್ಮಾಣ ಮಾಡಿದೆ. ಈ ಹಿಂದೆ ಮಾರ್ಚ್ 26ರಂದು ಸಿನಿಮಾ ಬಿಡುಗಡೆಗೆ ದಿನಾಂಕ ನಿಗದಿಯಾಗಿತ್ತು. ಇದೀಗ ಒಂದು ವಾರದ ಮೊದಲೇ ಸಿನಿಮಾ ತೆರೆಗೆ ಬರಲಿದೆ.

ಸಿನಿಮಾದಲ್ಲಿ ರಾಶಿ ಖನ್ನಾ ಹಾಗೂ ಶ್ರೀಲೀಲಾ ನಾಯಕಿಯರಾಗಿ ನಟಿಸಿದ್ದು, ಓರ್ವ ಐಪಿಎಸ್ ಅಧಿಕಾರಿ ಹಾಗೂ ಆತನ ಮಗಳ ಸುತ್ತ ಸಿನಿಮಾದ ಕಥೆ ಇದೆ. ಮಾರ್ಚ್ 19ರಂದು ಆದಿತ್ಯ ಧಾರ್ ನಿರ್ದೇಶನದ 'ಧುರಂಧರ್–2' ಸಿನಿಮಾವೂ ತೆರೆಕಾಣುತ್ತಿದ್ದು, ಚಿತ್ರಮಂದಿರಗಳಲ್ಲಿ ಸಿನಿಮಾ ಹಬ್ಬವಿರಲಿದೆ.

ಸೂಪರ್ ವುಮನ್: ಯಾಕಾಗಿ?

• ಡಾ. ಜ್ಯೋತಿ ನೀರಜಾ



ಅತಿಯಾದ ದಣಿವು ಯಾವಾಗಲೂ ಬಹಿರಂಗವಾಗಿಯೇ ಕಾಣಿಸಿಕೊಳ್ಳಬೇಕೆಂದಿಲ್ಲ. ದಿನವಿಡೀ ನಗುನಗುತ್ತಿರುವ, ಕುಟುಂಬದ ಸದಸ್ಯರ ಉಪಚಾರದಲ್ಲಿ ತೊಡಗಿರುವ, ಎಲ್ಲರಿಗೂ ಬೇಕಾದುದನ್ನು ಮಾಡುತ್ತಲೇ ವಿವರಿಸಲಾಗದ ನೋವನ್ನು ಅನುಭವಿಸುವ ಮಹಿಳೆಯರಲ್ಲಿ ಈ ದಣಿವು ಅದೃಶ್ಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಮೇಲ್ನೋಟಕ್ಕೆ ಸಮರ್ಥರಂತೆ ಕಾಣುವ ಮತ್ತು ಸಂಯಮದಿಂದ ಇರುವಂತೆ ತೋರುವ ಅನೇಕ ಮಹಿಳೆಯರನ್ನು ನಾನು ನೋಡಿದ್ದೇನೆ. ಆದರೆ, ಅವರೊಡನೆ ಮಾತನಾಡುತ್ತಾ ಹೋದಂತೆಲ್ಲ, ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಅವರು ತೀವ್ರವಾಗಿ ದಣಿದಿರುವುದು ತಿಳಿದುಬರುತ್ತದೆ. ಅದನ್ನು ಅವರು ಸಹ ಒಪ್ಪಿಕೊಳ್ಳುತ್ತಾರೆ. ದೂರದಿಂದ ನೋಡುವವರಿಗೆ ಅವರದು ಯಶಸ್ವಿ ಜೀವನ ಎಂಬಂತೆ ಕಂಡರೂ ಅವರು ಒಳಗೊಳಗೇ ಕೊರಗುತ್ತಿರುತ್ತಾರೆ. ಇದೊಂದು ಅಪರೂಪದ ಸಮಸ್ಯೆಯೇನೂ ಅಲ್ಲ. ಮಹಿಳೆಯರು ಎರಡು ಪೂರ್ಣಾವಧಿ ಪಾತ್ರಗಳನ್ನು ನಿರ್ವಹಿಸಬೇಕೆಂದು ನಿರೀಕ್ಷಿಸುವ ಮತ್ತು ಆ ಕಾರ್ಯಬಾಹುಳ್ಯದ ಭಾರಕ್ಕೆ ಕುಸಿಯದಂತೆ ನೋಡಿಕೊಳ್ಳುವ ಸಲುವಾಗಿ ಆಕೆಯನ್ನು ಹೊಗಳುವ ನಮ್ಮ ಸುತ್ತಮುತ್ತಲಿನ ಪ್ರಪಂಚದ ಸಹಜವಾದ ನಡವಳಿಕೆ ಇದಾಗಿದೆ.

ಆಧುನಿಕ ಮಹಿಳೆಯರು ವೃತ್ತಿಪರವಾಗಿ ಶ್ರೇಷ್ಠತೆಯನ್ನು ತೋರಿಸಬೇಕು, ಕೌಟುಂಬಿಕ ಬದುಕಿನಲ್ಲೂ ಪ್ರಮುಖ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು ಬರಬೇಕು, ಮಹತ್ವಾಕಾಂಕ್ಷಿಗಳಾಗಿರಬೇಕು, ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಇರಬೇಕು, ಮನೆಯವರಿಗೆ ಬೇಕೆಂದಾಗ ಮನೆಯಲ್ಲಿ ಲಭ್ಯವಿರಬೇಕು, ಮನೆಯ ಎಲ್ಲರನ್ನೂ ಅವರು ಪೋಷಿಸಬೇಕು ಮತ್ತು ಕೊನೆಮೊದಲಿಲ್ಲದೆ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರಬೇಕು ಎಂದೆಲ್ಲ ಅಪೇಕ್ಷೆ ಪಡಲಾಗುತ್ತದೆ. ಆದರೆ, ಅದಕ್ಕಾಗಿ ಮಹಿಳೆ ಎದುರಿಸುವ ಮಾನಸಿಕ ಹಾಗೂ ಭಾವನಾತ್ಮಕ ಒತ್ತಡದ ಬಗ್ಗೆ ನಾವು ಹೆಚ್ಚು ಚಿಂತಿಸದೆ ಜಾಣ ಕುರುಡುತನ ಪ್ರದರ್ಶಿಸುತ್ತೇವೆ.

ಸಮಾಜಶಾಸ್ತ್ರಜ್ಞರು ಹೇಳುವಂತೆ, ಉದ್ಯೋಗನಿರತ ಮಹಿಳೆಯರು ಪೂರ್ಣಾವಧಿ ಉದ್ಯೋಗದ ಜೊತೆಗೆ ಸಮಾನವಾದ ಅಥವಾ ಕೆಲವೊಮ್ಮೆ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದ, ಸಂಬಳವಿಲ್ಲದ ಗೃಹಕೃತ್ಯಗಳನ್ನೂ ನಿಭಾಯಿಸುವ 'ಡಬಲ್ ಡ್ಯೂಟಿ'ಯನ್ನು ಮಾಡುತ್ತಿರುತ್ತಾರೆ. ತಮ್ಮನ್ನು ಪ್ರಗತಿಪರರೆಂದು ಭಾವಿಸುವವರ ಮನೆಗಳಲ್ಲಿಯೂ ಈ ವಿಷಯದಲ್ಲಿ ಬದಲಾವಣೆಯೇನೂ ಇರುವುದಿಲ್ಲ.

ಇಂತಹ ಪರಿಶ್ರಮವು ಅಡುಗೆ ಸಿದ್ಧಪಡಿಸುವುದು ಮತ್ತು ಮನೆಯನ್ನು ಶುಚಿಗೊಳಿಸುವುದಕ್ಕಷ್ಟೇ ಸೀಮಿತವಾಗಿ ಇರುವುದಿಲ್ಲ. ಇದು ಕುಟುಂಬದ ಸದಸ್ಯರ ಹುಟ್ಟುಹಬ್ಬಗಳನ್ನು ನೆನಪಿಸಿಕೊಳ್ಳುವುದು, ಹಬ್ಬಗಳನ್ನು ಯೋಜಿಸುವುದು, ದಿನಸಿ ಸಾಮಾನು ಖಾಲಿಯಾಗುವ ಮೊದಲೇ ಭರ್ತಿ ಮಾಡುವುದು, ಮಕ್ಕಳ ಶಾಲಾ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸುವುದು ಹಾಗೂ ವೇಳಾಪಟ್ಟಿಗಳ ಮೇಲೆ ನಿಗಾ ಇರಿಸುವುದು, ಲೋಪ ಇಲ್ಲದಂತೆ ಕೌಟುಂಬಿಕ ಸಂಬಂಧಗಳನ್ನು ನಿರ್ವಹಿಸುವುದು, ವೈದ್ಯರ ಭೇಟಿ ನಿಗದಿಪಡಿಸುವುದು, ಮನೆಯಲ್ಲಿ ಯಾರಾದರೂ ಅಸಮಾಧಾನಗೊಂಡಿದ್ದರೆ ಅವರತ್ತ ಗಮನಹರಿಸುವುದು, ಹಿರಿಯರು ಅವಗಣನೆಗೆ ಒಳಗಾಗದಂತೆ ನೋಡಿಕೊಳ್ಳುವುದು, ಎಲ್ಲರ ರುಚಿಗೆ ತಕ್ಕಂತೆ ಊಟದ ವ್ಯವಸ್ಥೆ ಮಾಡುವುದು ಮತ್ತು ಸಂಘರ್ಷ ತಪ್ಪಿಸಿ ಮನೆಯಲ್ಲಿನ ವಾತಾವರಣವು ಶಾಂತಿಯುತವಾಗಿ ಇರುವಂತೆ ಎಚ್ಚರ ವಹಿಸುವುದು ಎಲ್ಲವನ್ನೂ ಒಳಗೊಂಡಿರುತ್ತದೆ. ಮನೆಯ ಸದಸ್ಯರನ್ನೆಲ್ಲ ಒಟ್ಟಿಗೇ ಹಿಡಿದಿಟ್ಟುಕೊಳ್ಳುವ ಗುರುತರ ಜವಾಬ್ದಾರಿ ಇದಾಗಿದ್ದು, ನಿರಂತರವಾಗಿ ನಡೆಯುತ್ತಲೇ ಇರಬೇಕಾದ ಕಾರ್ಯವಾಗಿರುತ್ತದೆ.



ಮಾನ್ಯತೆಯಾಗಲೀ ಅಗತ್ಯ ಬೆಂಬಲವಾಗಲೀ ದೊರಕದ ಇಂತಹ ಕೆಲಸಗಳ ಭಾರದಿಂದ ನಲುಗುವ ಮಹಿಳೆಯನ್ನು ಆಕೆ ಅತಿಯಾಗಿ ಪ್ರತಿಕ್ರಿಯಿಸುತ್ತಿದ್ದಾಳೆ ಅಥವಾ ತನ್ನ ಪಾತ್ರವನ್ನು ಸಮರ್ಪಕವಾಗಿ ನಿಭಾಯಿಸುತ್ತಿಲ್ಲ ಎಂದೆಲ್ಲ ದೂರಲಾಗುತ್ತದೆ. ನ್ಯಾಯೋಚಿತವಲ್ಲದ ವ್ಯವಸ್ಥೆಯಿಂದಾಗಿ ಇಂತಹ ಸಮಸ್ಯೆಗಳು ಉದ್ಭವಿಸಿವೆ ಎನ್ನುವ ಬದಲು ಅವಳ ಮೇಲೇ ತಪ್ಪು ಹೊರಿಸಲಾಗುತ್ತದೆ.

ಅನೇಕ ಹೆಣ್ಣುಮಕ್ಕಳಿಗೆ ತಮ್ಮ ಸಂಕಟವನ್ನು ಅದುಮಿಟ್ಟುಕೊಳ್ಳಲು ಕಲಿಸಲಾಗಿರುತ್ತದೆ. ವಿಭಿನ್ನ ತಲೆಮಾರಿನವರು ಒಂದೇ ಮನೆಯಲ್ಲಿ ವಾಸಿಸುವ ಕುಟುಂಬಗಳಲ್ಲಿ ಇನ್ನಷ್ಟು ಕಟ್ಟುನಿಟ್ಟಿನ ನಿರೀಕ್ಷೆಗಳು ಇರುತ್ತವೆ. ಆಗ, ತಾವು ಬೇಡಿಕೆ ಇಡುವವರು, ಸ್ವಾರ್ಥಿಗಳು ಅಥವಾ ಅಸಮರ್ಪಕರು ಎಂದು ಗುರುತಿಸಿಕೊಂಡುಬಿಡಬಹುದು ಎನ್ನುವ ಭಯದಿಂದ ಮಹಿಳೆಯರು ಎಲ್ಲವನ್ನೂ ಸಹಿಸಿಕೊಂಡೇ ಮುಂದುವರಿಯುತ್ತಾರೆ. ಅತಿಯಾದ ದಣಿವನ್ನೇ ಸಹಜವೆಂದು ಸ್ವೀಕರಿಸುವುದನ್ನು ಕಲಿಯುತ್ತಾರೆ.

ಆದರೆ ಕಾಲ ಗತಿಸಿದಂತೆ ಆಕೆಯ ಮೇಲಿನ ಇಂತಹ ನಿರಂತರ ಒತ್ತಡವು ಆತಂಕ, ಕಿರಿಕಿರಿ, ನಿದ್ರಾಹೀನತೆ, ನಿಯಮಿತವಾಗಿ ಬರುವ ತಲೆನೋವು, ಜೀರ್ಣಕ್ರಿಯೆಯ ಸಮಸ್ಯೆಗಳು, ಭಾವನಾತ್ಮಕ ಶೂನ್ಯತೆ, ಅಸಮರ್ಥ ಭಾವನೆ ಮೂಡಿಸಿ ಖಿನ್ನತೆ ಆವರಿಸುತ್ತದೆ. ಕೆಲ ಮಹಿಳೆಯರು ದಕ್ಷತೆಯಿಂದ ಕಾರ್ಯನಿರ್ವಹಿಸಿದರೂ, ಆನಂದ ಭಾವದಿಂದ ವಂಚಿತರಾಗಿ ಜೀವನದಿಂದ ವಿಮುಖರಾಗಲು ಆರಂಭಿಸುತ್ತಾರೆ. ಇನ್ನು ಕೆಲವರು ವಿಶ್ರಾಂತಿ ಬಯಸುವುದೇ ತಪ್ಪು ಎಂಬ ಭಾವನೆ ಹೊಂದುತ್ತಾರೆ. ಅನೇಕ ಸಂದರ್ಭಗಳಲ್ಲಿ, ತಮ್ಮ ದೇಹ–ಮನಸ್ಸು ಕುಸಿದುಹೋಗುವವರೆಗೂ ಅವರು ಸಹಾಯವನ್ನು ಬಯಸುವುದಿಲ್ಲ.

'ಸೂಪರ್ ವುಮನ್' ಪರಿಕಲ್ಪನೆಯನ್ನು ಅತಿರೇಕವಾಗಿ ಪಾಲಿಸುವ ಸಂಸ್ಕೃತಿಯಲ್ಲಿ ನಾವು ಬದುಕುತ್ತಿದ್ದೇವೆ. ಮಹಿಳೆಯರ ಮೇಲಿನ ಅತಿಯಾದ ನಿರೀಕ್ಷೆಗಳು ಅವರ ಸಬಲೀಕರಣವಲ್ಲ. ಇದು ಹೊಗಳಿಕೆಯ ಮಾರುವೇಷದಲ್ಲಿರುವ ಮೌನ ದಮನವೇ ಆಗಿದೆ ಮತ್ತು ಅವರ ವಿರುದ್ಧ ಹೆಣೆದಿರುವ ಬಲೆಯಾಗಿರುತ್ತದೆ. ಮಹಿಳೆಯರು ಅಂತಹ ಬಲೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದಾಗ, ಅಸಾಧ್ಯವಾದುದನ್ನು ತಮ್ಮಿಂದ ನಿರೀಕ್ಷಿಸುವ ವ್ಯವಸ್ಥೆಯನ್ನು ಪ್ರಶ್ನಿಸುವ ಬದಲು, ತಮ್ಮ ಮೇಲೇ ತಪ್ಪನ್ನು ಹಾಕಿಕೊಳ್ಳುತ್ತಾರೆ.

ಇನ್ನಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಿ, ಹೆಚ್ಚು ಸಹನಶೀಲರಾಗಿ ಇರಿ ಅಥವಾ ಸ್ವಯಂ ಆರೈಕೆಗೆ ಗಮನಕೊಡಿ ಎಂದು ಹೇಳುವುದು ಇದಕ್ಕೆ ನೀಡುವ ಸಮರ್ಥವಾದ ಉತ್ತರ ಅಲ್ಲ. ಧ್ಯಾನವೂ ಪರಿಹಾರ ಆಗುವುದಿಲ್ಲ. ಕುಟುಂಬಗಳು, ಕೆಲಸದ ಸ್ಥಳಗಳು ಮತ್ತು ಸಮಾಜ— ಈ ಎಲ್ಲವುಗಳ ಒಟ್ಟುಗೂಡಿದ ಪ್ರಯತ್ನದಿಂದಲೇ ನಿಜವಾದ ಬದಲಾವಣೆ ಬರಬೇಕು.

ಮನೆಯಲ್ಲಿ ಸಂಗಾತಿಗಳು ಕೇವಲ 'ಸಹಾಯ' ಮಾಡುವುದಷ್ಟೇ ಅಲ್ಲ, ಗೃಹಕೃತ್ಯ ಹಾಗೂ ಭಾವನಾತ್ಮಕ ಜವಾಬ್ದಾರಿಗಳನ್ನು ಸಮಾನವಾಗಿ ಹಂಚಿಕೊಳ್ಳಬೇಕು. ಇದರರ್ಥ ಕೆಲಸಗಳನ್ನು ಮಾಡುವುದಷ್ಟೇ ಅಲ್ಲ, ಯಾವ ಕೆಲಸ ಮಾಡಬೇಕಿದೆ ಎಂಬುದನ್ನು ಗಮನಿಸಿ, ಮಾನಸಿಕ ಹೊರೆ ಹೊತ್ತುಕೊಳ್ಳಬೇಕು. ಕುಟುಂಬಗಳು ಮಹಿಳೆಯರು ಪಡೆಯುವ ವಿಶ್ರಾಂತಿಯನ್ನು ಐಚ್ಛಿಕ ಎಂದು ಭಾವಿಸುವುದು ಮತ್ತು ಅವರು ಎಲ್ಲರ ಬಗೆಗೆ ಕಾಳಜಿ ಮಾಡಬೇಕಾಗಿರುವುದು ಸಹಜ ಎಂಬಂತೆ ಕಾಣುವುದನ್ನು ನಿಲ್ಲಿಸಬೇಕು. ಕೃತಜ್ಞತೆ ವ್ಯಕ್ತಪಡಿಸುವುದು, ಹೊಗಳುವುದು ನ್ಯಾಯೋಚಿತವಾದ ವರ್ತನೆಗೆ ಪರ್ಯಾಯವಾದವುಗಳಲ್ಲ.

ಕೆಲಸದ ಸ್ಥಳದಲ್ಲಿ ಮಾನಸಿಕ ಸುರಕ್ಷತೆ ಮತ್ತು ಅನುಕೂಲಗಳನ್ನು ಒದಗಿಸುವುದು ಸೌಲಭ್ಯಗಳಲ್ಲ, ಅವು ಮಾನಸಿಕ ಆರೋಗ್ಯ ಕಾಪಾಡುವ ಅಗತ್ಯ ಸಂಗತಿಗಳು ಎಂಬುದನ್ನು ಸಂಸ್ಥೆಗಳು ಗುರುತಿಸಬೇಕು. ಕೆಲಸದ ಸ್ಥಳಗಳು ದಣಿವನ್ನು ನಿರ್ಲಕ್ಷಿಸಿದಾಗ, ಸಮಾಜವು ಅಂತಹವರನ್ನು ಗುರುತಿಸಿ ಗೌರವಿಸಬೇಕು. ಅನ್ಯರ ಮನಸ್ಸಿಗೆ ಗಾಸಿ ಮಾಡುವ ಗುಣಕ್ಕೆ ಎಲ್ಲರೂ ಕಡಿವಾಣ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಇಂತಹ ನಡೆಗಳು ಈಗಾಗಲೇ ಮನೆಯಲ್ಲಿ 'ಎರಡನೇ ಶಿಫ್ಟ್' ಹೊತ್ತುಕೊಂಡಿರುವ ಮಹಿಳೆಯರಿಗೆ ಅತಿಯಾದ ಹಾನಿಯನ್ನು ಉಂಟುಮಾಡುತ್ತವೆ.

ಕೊನೆಗೆ, ಸಮಾಜವಾಗಿ ನಾವು ಮಹಿಳೆಯರಿಂದ ಕೊನೆಮೊದಲು ಇಲ್ಲದ ಸಹನಶೀಲತೆಯನ್ನು ನಿರೀಕ್ಷಿಸುವುದನ್ನು ಮತ್ತು ಅದನ್ನೇ ಮಹಿಳಾ ಶಕ್ತಿ ಎಂದು ಕರೆಯುವುದನ್ನು ನಿಲ್ಲಿಸಬೇಕು. ಮಹಿಳೆಯಾಗಿ ಹುಟ್ಟಿದ ಮಾತ್ರಕ್ಕೆ ಅವರು ಸಹನಶೀಲತೆ ಎನ್ನುವ ಬೆಲೆ ತೆರುವಂತೆ ಆಗಬಾರದು. ತಪ್ಪಿತಸ್ಥ ಭಾವನೆ ಇಲ್ಲದೆ ವಿಶ್ರಾಂತಿ ಪಡೆಯಲು ಹಾಗೂ ಷರತ್ತುಗಳಿಲ್ಲದ ಗೌರವ ಪಡೆಯಲು ಮಹಿಳೆ ಅರ್ಹಳು. ಆರೋಗ್ಯಕರ ಕುಟುಂಬಗಳು ಮತ್ತು ಬಲಿಷ್ಠ ಸಮುದಾಯಗಳನ್ನು ನಾವು ಬಯಸುತ್ತಿದ್ದರೆ, ಎಲ್ಲರ ಬಗ್ಗೆಯೂ ಕಾಳಜಿ ವಹಿಸುವ ಮಹಿಳೆಯರ ಆರೈಕೆಯಿಂದಲೇ ಆ ಕಾರ್ಯವನ್ನು ಆರಂಭಿಸಬೇಕು.

ಲೇಖಕಿ: ಸಹಸಂಸ್ಥಾಪಕಿ, ಎಂ.ಡಿ, ಪೀಪಲ್ ಟ್ರೀ ಹಾಸ್ಪಿಟಲ್ಸ್ ಸಿಇಒ, ಮಾರ್ಗ ಮೈಂಡ್ ಕೇರ್

'ಕರ್ಣ' ಹೊರಬಂದ ನಾಗಾಭರಣ

ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಕರ್ಣ' ಧಾರಾವಾಹಿ ಹೊಸ ತಿರುವನ್ನು ಪಡೆದುಕೊಂಡಿದೆ. ರೋಚಕ ಘಟ್ಟದಲ್ಲಿ ಇರುವಾಗಲೇ ಈ ಧಾರಾವಾಹಿಯ ಪಾತ್ರಧಾರಿಯಲ್ಲಿ ಬದಲಾವಣೆಯಾಗಿದೆ. ಇಷ್ಟು ದಿನ ಕರ್ಣನ ತಂದೆ ರಮೇಶ್ ಪಾತ್ರದಲ್ಲಿ ನಟಿಸುತ್ತಿದ್ದ ಹಿರಿಯ ನಟ ಟಿ.ಎಸ್.ನಾಗಾಭರಣ ಅವರು ಧಾರಾವಾಹಿಯಿಂದ ಹೊರಬಂದಿದ್ದಾರೆ. ಅವರ ಬದಲಿಗೆ ಅಭಿಜಿತ್ ಅವರ ಆಗಮನವಾಗಿದೆ.

ಈ ಕುರಿತು ಜೀ ಕನ್ನಡ ವಾಹಿನಿಯು ಸಾಮಾಜಿಕ ಮಾಧ್ಯಮದಲ್ಲಿ ಪ್ರೋಮೊ ಬಿಡುಗಡೆ ಮಾಡಿದ್ದು, ಅಭಿಜಿತ್ ಅವರನ್ನು ತೋರಿಸಲಾಗಿದೆ. ರಮೇಶ್ ಮತ್ತು ತಾರಾ ಕುತಂತ್ರದಿಂದ ಜೈಲು ಸೇರಿದ್ದ ಕರ್ಣ ಕೊನೆಗೂ ಹೊರಗೆ ಬಂದಿದ್ದಾನೆ.

ಆಸ್ಪತ್ರೆ ಮುಂದೆ ಬಂದಿರುವ ಕರ್ಣ, 'ನನ್ನ ಮೇಲಿನ ದ್ವೇಷಕ್ಕಾಗಿ ಎಲ್ಲರ ಕನಸನ್ನು ಛಿದ್ರ ಮಾಡಿದವರನ್ನು ಸುಮ್ಮನೆ ಬಿಡೋದಿಲ್ಲ' ಎಂದಿದ್ದಾನೆ. ಪ್ರೋಮೊವೊಂದರಲ್ಲಿ ನಿತ್ಯಾ, ನಿಧಿ ಮತ್ತು ಕರ್ಣನ ಫೋಟೊಗೆ ರಮೇಶ್ ಪೂಜೆ ಸಲ್ಲಿಸಿ ಪಿಂಡ ಬಿಡುತ್ತಿದ್ದಾನೆ. ಇನ್ನುಮುಂದೆ ನೀನು ಇರಿಸುವ ಪ್ರತಿಯೊಂದು ಹೆಜ್ಜೆ ಏನಾಗಿರಬೇಕು ಎಂದು ನಾನು ನಿರ್ಧರಿಸುತ್ತೇನೆ ಎನ್ನುತ್ತಾನೆ.

ಆದರೆ ನಾಗಾಭರಣ ಅವರು ಧಾರಾವಾಹಿಯಿಂದ ಯಾಕೆ ಹೊರಬಂದರು ಎಂಬ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.



ಮಲಯಾಳ ಸ್ವಾದದ ಅಚ್ಚುಕಟ್ಟಾದ ಕನ್ನಡ ಚಿತ್ರ!

ನಾವು ನೋಡಿದ ಸಿನಿಮಾ

ಶೇಷ 2016 (ಕನ್ನಡ)

- ನಿರ್ಮಾಣ: ಉಮೇಶ್ ತಿಮ್ಮೇಗೌಡ
- ನಿರ್ದೇಶನ: ಪ್ರದೀಪ್ ಅರಸೀಕೆರೆ
- ತಾರಾಗಣ: ಜಾನ್ ಕೈಪಲ್ಲಿ, ಪ್ರಮೋದ್ ಶೆಟ್ಟಿ, ಅರ್ಚನಾ ಕೊಟ್ಟಿಗೆ ಮತ್ತಿತರರು

ಕಳ್ಳರನ್ನು ಹಿಡಿಯುವ ಪೊಲೀಸರೇ ಕಳ್ಳರಾದರೆ, ಇಡೀ ಇಲಾಖೆಯೇ ಭ್ರಷ್ಟವಾದರೆ ಆಗಬಹುದಾದ ಅನಾಹುತಗಳ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರ 'ಶೇಷ 2016'. ಮಲಯಾಳದಲ್ಲಿ ಪೊಲೀಸ್ ಠಾಣೆಯನ್ನೇ ಕಥಾನಾಯಕನನ್ನಾಗಿಟ್ಟುಕೊಂಡು ಸಿನಿಮಾಗಳು ಬಂದಿವೆ. ಆದರೆ ಕನ್ನಡದ ಮಟ್ಟಿಗೆ ಅಪರೂಪದ ಯತ್ನ. ಕರ್ನಾಟಕ ಮತ್ತು ಕೇರಳ ಗಡಿಯಂಚಿನ ಕಾಲ್ಪನಿಕ ಊರು ಪುಷ್ಪಗಿರಿಯಿಂದ ಕಥೆ ಶುರುವಾಗುತ್ತದೆ. ಶೀರ್ಷಿಕೆ ಗೀತೆ ಮತ್ತು ಅದರ ದೃಶ್ಯಗಳಿಂದಲೇ ಇದು ಮಲಯಾಳ ಸ್ವಾದದ ಕನ್ನಡ ಸಿನಿಮಾ ಎಂಬುದು ಮನದಟ್ಟಾಗಿಬಿಡುತ್ತದೆ. ಇಡೀ ಕಾಡನ್ನು ಕಟ್ಟಿಕೊಡುವ, ಅಲ್ಲಿನ ರಸ್ತೆಗಳನ್ನು ತೋರಿಸುವ ಪ್ರಾರಂಭಿಕ ದೃಶ್ಯವೇ ಗಮನ ಸೆಳೆಯುತ್ತದೆ. ಈ ಚಿತ್ರದ ಶೀರ್ಷಿಕೆ ಗೀತೆ 'ಗರುಡ ಗಮನ' ಚಿತ್ರದ 'ಡೀಮೊನ್' ಗೀತೆಯನ್ನು ನೆನಪಿಸಿದರೂ, ನಡೆಯುವ ಸನ್ನಿವೇಶಗಳಿಗೆ ಆಪ್ತವಾಗಿದೆ.

ಪ್ರಾರಂಭದಲ್ಲಿ ಬರುವ ದೃಶ್ಯಗಳು ಇದು ಮಲಯಾಳದ 'ಅಂಗಮಾಲಿ ಡೈರೀಸ್' ರೀತಿಯ ಚಿತ್ರವಿರಬಹುದಾ ಎಂಬ ಅನುಮಾನ ಹುಟ್ಟುಹಾಕುತ್ತವೆ. ಮುಂದೆ ನಡೆಯುವ ಕಥೆಯ ಕೆಲ ತುಣುಕುಗಳನ್ನು ಮೊದಲೇ ತೋರಿಸಿ, ಗೊಂದಲ ಮೂಡಿಸಿ, ಕುತೂಹಲ ಹುಟ್ಟಿಸುವ ಯತ್ನವನ್ನು ನಿರ್ದೇಶಕರು ಪ್ರಾರಂಭದಲ್ಲಿಯೇ ಮಾಡಿದ್ದಾರೆ. ಹೀಗಾಗಿ ಮುಖ್ಯ ಕಥೆ ತೆರೆದುಕೊಳ್ಳಲು ತುಸು ಸಮಯ ಹಿಡಿಯುತ್ತದೆ.

ಇದು ಪುಷ್ಪಗಿರಿ ಪೊಲೀಸ್ ಠಾಣೆ ಸಂಬಂಧಿತ ಕಥೆ ಎಂಬುದು ಗೊತ್ತಾದ ಬಳಿಕ ಕಥೆ ವೇಗ ಹೆಚ್ಚುತ್ತದೆ. ಇಡೀ ಕಥೆ ಒಂದೇ ರಾತ್ರಿಯಲ್ಲಿ ನಡೆಯುತ್ತದೆ. ಈ ಕಥೆಯ ಜತೆಗೆ ಪೊಲೀಸ್ ಠಾಣೆಯ ಹಿನ್ನೆಲೆ, ಅಲ್ಲಿನ ಅಧಿಕಾರಿ ವರ್ಗದ ಭ್ರಷ್ಟತನವನ್ನು ಪರಿಚಯಿಸುತ್ತ ಹೋದ ರೀತಿ ಚೆನ್ನಾಗಿದೆ. ಠಾಣೆಯ ಒಂದಿಬ್ಬರು ಕಾನ್‌ಸ್ಟೆಬಲ್‌ಗಳನ್ನು ಹೊರತುಪಡಿಸಿ ಮಿಕ್ಕೆಲ್ಲರೂ ಭ್ರಷ್ಟರು. ಯಾವ್ಯಾವುದೋ ಪ್ರಕರಣಕ್ಕೆ ನಿರಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸುವ ಈ ಠಾಣೆಗೆ ಮೈತುಂಬ ವಿರೋಧಿಗಳು. ಇಂಥ ಹೊತ್ತಿನಲ್ಲೊಬ್ಬ ಈ ಠಾಣೆಗೆ ಸವಾಲಾಗುತ್ತಾನೆ. ಆ ಸವಾಲು ಏನು? ಆತ ಯಾರು? ಅದರಿಂದ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರಕಥೆ.

ಚಿತ್ರದ ಮೊದಲಾರ್ಧ ಮುಗಿದಿದ್ದೇ ಗೊತ್ತಾಗುವುದಿಲ್ಲ ಎನ್ನುವಷ್ಟು ಸೊಗಸಾಗಿದೆ. ಕಥೆ ಹಾಗೂ ದೃಶ್ಯಗಳನ್ನು ಕಟ್ಟಿಕೊಟ್ಟ ರೀತಿ ಅಲ್ಲಲ್ಲಿ ಮಲಯಾಳದ 'ನಾಯಟ್ಟು' ಸಿನಿಮಾವನ್ನು ನೆನಪಿಸುತ್ತದೆ. ಆದಾಗ್ಯೂ ಆ ಕಥೆಗೂ ಇದಕ್ಕೂ ನೇರ ಸಂಬಂಧವಿಲ್ಲ. ಚಿತ್ರ ಕನ್ನಡ ಹಾಗೂ ಮಲಯಾಳದಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಂಡಿರುವುದರಿಂದ ಸಾಕಷ್ಟು ಕಡೆ ಕನ್ನಡದ ಜತೆಗೆ ಮಲಯಾಳ ಬೋರ್ಡ್‌ಗಳು ಕಾಣಿಸುತ್ತವೆ. ಗಟ್ಟಿಯಾದ ಕಥೆಗೊಂದು ಅಚ್ಚರಿಯ ಕ್ಲೈಮ್ಯಾಕ್ಸ್ ನೀಡುವಲ್ಲಿ ನಿರ್ದೇಶಕರು ಎಡವಿದ್ದಾರೆ. ಜತೆಗೆ ದ್ವಿತೀಯಾರ್ಧವನ್ನು ಇನ್ನಷ್ಟು ಯೋಚಿಸಿ ಬರೆಯುವ, ಮರ್ಡರ್ ಮಿಸ್ಟ್ರಿಗೆ ಬೇಕಾದ ಕೊಂಡಿಗಳನ್ನು ಬೆಸೆದು ಕುತೂಹಲ ಉಳಿಸಿಕೊಳ್ಳುವ ಅವಕಾಶ ನಿರ್ದೇಶಕರಿಗಿತ್ತು. ಇಷ್ಟಾಗಿಯೂ ನಿರ್ದೇಶಕ ಪ್ರದೀಪ್ ಅರಸೀಕೆರೆ ಅವರ ಮೊದಲ ಸಿನಿಮಾವಿದು ಎಂದು ಎಲ್ಲಿಯೂ ಅನ್ನಿಸುವುದಿಲ್ಲ.

ಇನ್‌ಸ್ಪೆಕ್ಟರ್ ಆಗಿ ಜಾನ್ ಕೈಪಲ್ಲಿ ಪಾತ್ರಕ್ಕೆ ಸೂಕ್ತ ಎನ್ನಿಸುತ್ತಾರೆ. ಆದರೆ ಅವರ ಕನ್ನಡ ಡಬ್ಬಿಂಗ್‌ನಲ್ಲಿ ಇನ್ನಷ್ಟು ಗಮನಹರಿಸುವ ಅವಶ್ಯಕತೆಯಿತ್ತು. ಎಸ್‌ಐ ಆಗಿ ಪ್ರಮೋದ್ ಶೆಟ್ಟಿ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ದೇವರಾಜ್ ಪಾತ್ರ ಅತಿಥಿ ಪಾತ್ರದಂತಿದೆ. ಕಾನ್‌ಸ್ಟೆಬಲ್ ಶ್ರೀಜಿತ್ ರವಿ, ಕೆ.ಎಸ್.ಶ್ರೀಧರ್ ಸೇರಿದಂತೆ ಎಲ್ಲಾ ಕಲಾವಿದರು ಇವರೇ ಇದಕ್ಕೆ ಸೂಕ್ತ ಎನ್ನುವಂತೆ ನಟಿಸಿದ್ದಾರೆ. ಆನಂದ್ ಕುಮಾರ್ ಛಾಯಾಚಿತ್ರಗ್ರಹಣ ಸೊಗಸಾಗಿದೆ. ಪೂರ್ಣಚಂದ್ರ ತೇಜಸ್ವಿ ಅವರ ಹಿನ್ನೆಲೆ ಸಂಗೀತ ಬಹುತೇಕ ದೃಶ್ಯಗಳಿಗೆ ಶಕ್ತಿ ತುಂಬುತ್ತದೆ. ಚಿತ್ರವನ್ನು ಅಚ್ಚುಕಟ್ಟಾಗಿಸುವಲ್ಲಿ ಆಯೂಬ್ ಖಾನ್ ಅವರ ಸಂಕಲನ ಮುಖ್ಯಪಾತ್ರ ವಹಿಸಿದೆ.

ವಿನಾಯಕ ಕೆ.ಎಸ್.



ನೋಡಬಹುದಾದ ಚಿತ್ರ

ವೊಬಲ್ ಸರಣಿಯ ಎ.ಐ ಟಿ.ವಿ

ತಂತ್ರಜ್ಞಾನ

ಇದು ಎ.ಐ ಕಾಲ. ಜಗತ್ತೇ ಡಿಜಿಟಲ್ ಯುಗದತ್ತ ದಾಪುಗಾಲು ಹಾಕುತ್ತಿರುವಾಗ, ಮನೆಯಲ್ಲಿ ಹಳೆಯ ಮಾಡೆಲ್ ಟಿ.ವಿ ಇದ್ದರೆ ಹೇಗೆ? ಇದನ್ನೇ ಗಮನದಲ್ಲಿ ಇಟ್ಟುಕೊಂಡು, ಹೊಸ ಯುಗದ ತಂತ್ರಜ್ಞಾನದ 'ವೊಬಲ್' ಬ್ರ್ಯಾಂಡ್ 'ಎಕ್ಸ್' ಮತ್ತು 'ಕೆ' ಸರಣಿಯ ಗೂಗಲ್ ಟಿ.ವಿಯನ್ನು ಮಾರುಕಟ್ಟೆಗೆ ತಂದಿದೆ. ಸಂಪೂರ್ಣ ಎ.ಐ ಚಾಲಿತ ಕಾರ್ಯಕ್ಷಮತೆಯೊಂದಿಗೆ ಉತ್ತಮ ಆಡಿಯೊ, ವಿಡಿಯೊ ಸಂಯೋಜನೆಯನ್ನು ಇದು ಹೊಂದಿದೆ.

ವೊಬಲ್ ಎಕ್ಸ್ ಟಿ.ವಿ ಸರಣಿ 43, 50, 55 ಇಂಚುಗಳಲ್ಲಿ ಲಭ್ಯ. ಮೆಟಲ್ ಫಿನಿಷ್, ಸ್ಲಿಮ್, ಫ್ರೇಮ್‌ಲೆಸ್ ವಿನ್ಯಾಸವನ್ನು ಹೊಂದಿದ್ದು, ಆಕರ್ಷಕವಾಗಿದೆ. ಮಕ್ಕಳನ್ನು ತಲ್ಲೀನಗೊಳಿಸುವಂತಹ ಗೇಮಿಂಗ್ ಇದರಲ್ಲಿದೆ. ತಡೆರಹಿತ ಗೇಮಿಂಗ್ ಅನುಭವಕ್ಕಾಗಿಯೇ ವೈ-ಫೈ ವ್ಯವಸ್ಥೆಯಿದೆ. ಈ ಟಿ.ವಿ TRU 80W PRO ಸ್ಪೀಕರ್‌ಗಳನ್ನು ಹೊಂದಿದೆ. ಅಲ್ಲದೆ ಡ್ಯುಯಲ್ ವೂಫರ್‌ಗಳು, ಆ್ಯಂಪ್ಲಿಫೈಯರ್‌ಗಳನ್ನು ಒಳಗೊಂಡಿದ್ದು, ಆಧುನಿಕ ವಿನ್ಯಾಸದ ಮನೆಗಳಿಗೆ ಹೇಳಿಮಾಡಿಸಿದಂತಿದೆ.

ವೊಬಲ್ ಎಕ್ಸ್ ಟಿ.ವಿ ಬೆಲೆ ₹ 23,999 ಹಾಗೂ ವೊಬಲ್ ಕೆ ಟಿ.ವಿ ಬೆಲೆ ₹ 10,999ರಿಂದ ಆರಂಭ. ಎರಡೂ ಫ್ಲಿಪ್‌ಕಾರ್ಟ್‌ನಲ್ಲಿ ಲಭ್ಯ.



ಏರುತಿದೆ ತಾಪ ಪಾರಾಗೋದು ಹೇಗಪ್ಪಾ?



ಆರೋಗ್ಯ ಕಾಳಜಿ

ಮಾರ್ಚ್ ಮಾಸಾರಂಭದಲ್ಲೇ ಸೂರ್ಯ ಕೆಂಗಣ್ಣು ಬಿಡಲಾರಂಭಿಸಿದ್ದಾನೆ. ದಿನೇ ದಿನೇ ತಾಪಮಾನ ಏರುತ್ತಿದೆ. ಹಿಂದೆಂದಿಗಿಂತಲೂ ಹೆಚ್ಚು ತಾಪಮಾನ ಈ ಬೇಸಿಗೆಯಲ್ಲಿ ಕಂಡುಬರಲಿದೆ ಎಂದು ಹವಾಮಾನ ಇಲಾಖೆಯೂ ಭವಿಷ್ಯ ನುಡಿದಿದೆ. ಈ ಸಮಯದಲ್ಲಿ ದೇಹವನ್ನು ತಂಪಾಗಿ ಇರಿಸಿಕೊಳ್ಳಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ನಿರ್ಜಲೀಕರಣ (ಡಿಹೈಡ್ರೇಷನ್) ಕಾಡಬಹುದು. ಹಾಗಾಗದಂತೆ ನೋಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳು ಇಲ್ಲಿವೆ:

ಆಹಾರ ಪದ್ಧತಿಯಲ್ಲಿ ಮಾರ್ಪಾಡು ಮಾಡಿಕೊಂಡು ಹೆಚ್ಚು ಹೆಚ್ಚು ದ್ರವಾಹಾರ ಸೇವಿಸಿ. ನಿತ್ಯವೂ ತಾಜಾ ಹಣ್ಣುಗಳನ್ನು ತಿನ್ನುವ ರೂಢಿ ಮಾಡಿಕೊಳ್ಳಬೇಕು.



ಹಣ್ಣುಗಳ ಜ್ಯೂಸ್, ಪಾನಕ, ಮಜ್ಜಿಗೆ, ಸ್ಮೂದಿ, ಮಿಲ್ಕ್‌ಶೇಕ್, ಎಳನೀರು, ರಾಗಿ ಮಾಲ್ಟ್, ಸೂಪ್ ಮುಂತಾದ ದ್ರವಾಹಾರಗಳ ಜೊತೆಗೆ ತರಕಾರಿಗಳ ಸಲಾಡ್, ಸೌತೆಕಾಯಿ, ಕ್ಯಾರೆಟ್, ಸೊಪ್ಪು, ಮೊಳಕೆ ಕಾಳುಗಳು ಊಟದ ಭಾಗವಾಗಬೇಕು.

'ಬೇಸಿಗೆ ಕಾಲದಲ್ಲಿ ಮೂತ್ರದ ಸೋಂಕು, ಶಿಲೀಂಧ್ರಗಳ (ಫಂಗಲ್) ಕಾಟ, ಆಯಾಸ, ನಿಶ್ಶಕ್ತಿ, ಒಣ ಚರ್ಮ, ಕಣ್ಣುಗಳಲ್ಲಿ ಉರಿ, ಮಲಬದ್ಧತೆ, ನಿದ್ರಾಹೀನತೆಯಂತಹ ಆರೋಗ್ಯ ಸಮಸ್ಯೆಗಳು ಕಾಡುವುದು ಸಹಜ. ಚಳಿಗಾಲ ಮುಗಿದು ಬೇಸಿಗೆ ಬರುತ್ತಿದ್ದಂತೆ ಹವಾಮಾನ ಬದಲಾವಣೆಯಿಂದ ಕೆಲವರಿಗೆ ನೆಗಡಿ, ಕೆಮ್ಮು, ಜ್ವರವೂ ಕಾಡಬಹುದು. ಈ ತೊಂದರೆಗಳನ್ನು ನಿವಾರಿಸಿಕೊಳ್ಳಲು ಆರೋಗ್ಯ ಕಾಳಜಿ ಮಾಡಿಕೊಳ್ಳುವುದು ಅಗತ್ಯ' ಎಂದು ಹೇಳುತ್ತಾರೆ ಬೆಂಗಳೂರಿನ ಆಯುರ್ವೇದ ತಜ್ಞೆ ಡಾ. ವಸುಂಧರಾ ಭೂಪತಿ.

'ನಿರ್ಜಲೀಕರಣ ಉಂಟಾಗದಂತೆ ಎಚ್ಚರ ವಹಿಸಬೇಕು. ಬಿಸಿಲ ಧಗೆ ಹೆಚ್ಚಾಗುತ್ತಿದ್ದಂತೆ ಬಾಯಾರಿಕೆಯೂ ಹೆಚ್ಚಾಗುತ್ತದೆ. ಎಳನೀರು ಸೇವನೆ ಒಳ್ಳೆಯದು. ನೀರಿನಂಶ ಹೆಚ್ಚಿರುವ ದ್ರಾಕ್ಷಿ, ಕಲ್ಲಂಗಡಿ, ಕರಬೂಜ, ಕಿತ್ತಳೆ, ದಾಳಿಂಬೆ, ಮೂಸಂಬಿಯಂತಹ ಹಣ್ಣುಗಳನ್ನು ಸೇವಿಸಬೇಕು. ಈ ಹಣ್ಣುಗಳು ದೇಹದ ಉಷ್ಣಾಂಶವನ್ನು ಸಮತೋಲನದಲ್ಲಿ ಇಡಲು ಸಹಕಾರಿ. ಜೊತೆಗೆ ದೇಹಕ್ಕೆ ಹೆಚ್ಚಿನ ಪೋಷಕಾಂಶಗಳನ್ನು ನೀಡುತ್ತವೆ. ನಿಂಬೆಹಣ್ಣಿನ ಪಾನಕವನ್ನೂ ಆಗಾಗ ಕುಡಿಯಬಹುದು. ಇದು ಜೀರ್ಣಶಕ್ತಿಗೂ ಸಹಕಾರಿ ಹಾಗೂ ಬಾಯಾರಿಕೆ ನೀಗಲೂ ಒಳ್ಳೆಯದು' ಎಂದು ಸಲಹೆ ನೀಡುತ್ತಾರೆ ಈ ಆಯುರ್ವೇದ ವೈದ್ಯೆ.

ಇನ್ನೂ ಎರಡು ತಿಂಗಳು ಸುಡುಬಿಸಿಲನ್ನು ಎದುರಿಸಬೇಕು. ಆರೋಗ್ಯದ ಜೊತೆಗೆ ಚರ್ಮದ ಸೌಂದರ್ಯವನ್ನೂ ಕಾಪಾಡಿಕೊಳ್ಳಬೇಕು. ಆದ್ದರಿಂದ ಹೊರಗೆ ಹೋಗುವಾಗ ಕೊಡೆ, ಟೋಪಿಯನ್ನು ಬಳಸುವುದು ಉತ್ತಮ.

ತಮ್ಮನ ಮದುವೆಯಲ್ಲಿ ಮಿಂಚಿದ ಸಾರಾ

ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ ಹಾಗೂ ಸಾನಿಯಾ ಚಂದೋಕ್ ಇತ್ತೀಚೆಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ಸಹೋದರ ಅರ್ಜುನ್ ತೆಂಡೂಲ್ಕರ್ ಮದುವೆಯಲ್ಲಿ ಸಾರಾ ತೆಂಡೂಲ್ಕರ್ ತಿಳಿ ಗುಲಾಬಿ ಬಣ್ಣದ ಸೀರೆಯಲ್ಲಿ ಮಿಂಚಿದ್ದಾರೆ. ಅಷ್ಟೇ ಅಲ್ಲ ಸಾರಾ ಅವರ ಈ ಲುಕ್ ಎಲ್ಲರ ಗಮನ ಸೆಳೆದಿದೆ.

ಮಾರ್ಚ್ 3ರಂದು ಮುಂಬೈನ ಮಹಾಲಕ್ಷ್ಮಿ ರೇಸ್ ಕೋರ್ಸ್‌ನಲ್ಲಿ ನಡೆದ ಮೆಹಂದಿ ಸಮಾರಂಭದಲ್ಲಿ ಲೆಹೆಂಗಾದಲ್ಲಿ ಕಾಣಿಸಿಕೊಂಡಿದ್ದ ಸಾರಾ, ಮದುವೆಯಲ್ಲಿ ಸೀರೆ ಧರಿಸಿದ್ದರು. ಇಡೀ ಕುಟುಂಬದ ಹಲವು ಫೋಟೊಗಳು ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಸಾರಾ ಮುದ್ದಾಗಿ ಫೋಟೊಗೆ ಪೋಸ್ ಕೊಟ್ಟಿದ್ದಾರೆ.

ಸಾರಾ ಭಾರತೀಯ ಸಂಪ್ರದಾಯದಲ್ಲಿ ಕಂಗೊಳಿಸುವಂತೆ ಮಾಡಿದ ಈ ಸೀರೆಯನ್ನು ಡಿಸೈನರ್ ಮನೀಶ್ ಮಲ್ಹೋತ್ರಾ ವಿನ್ಯಾಸ ಮಾಡಿದ್ದರು.

ಅರ್ಜುನ್ ಹಾಗೂ ಸಾನಿಯಾ ಮದುವೆ ಸಮಾರಂಭದಲ್ಲಿ ಕ್ರಿಕೆಟ್ ಲೋಕದ ದಂತಕಥೆ ಎನಿಸಿಕೊಂಡವರು ಉಪಸ್ಥಿತರಿದ್ದರು.

ಸಚಿನ್ ಅವರ ಆಪ್ತ ಸ್ನೇಹಿತರು, ಕ್ರಿಕೆಟಿಗರು ಮತ್ತು ಸಿನಿಮಾ ತಾರೆಯರು ಮೆಹಂದಿ ಸಮಾರಂಭದಲ್ಲಿ ಭಾಗಿಯಾಗಿ ನವಜೋಡಿಗೆ ಶುಭ ಹಾರೈಸಿದರು.



ರಜನಿ, ಕಮಲ್ ಜುಗಲ್‌ಬಂದಿ



ಸಿನಿ ಹನಿ

ಕೆಎಚ್‌Xಆರ್‌ಕೆ ಅರ್ಥಾತ್ 'ಕಮಲ ಹಾಸನ್ ಇನ್‌ಟು ರಜನೀಕಾಂತ್'– ಹೀಗೊಂದು ಬ್ರ್ಯಾಂಡ್ ಈಗ ಸಂಚಲನ ಮೂಡಿಸುತ್ತಿದೆ. 'ತಲೈವರ್ 173' ಎನ್ನುವುದು ಸಿನಿಮಾಗೆ ತಾತ್ಕಾಲಿಕವಾಗಿ ಇಟ್ಟಿರುವ ಶೀರ್ಷಿಕೆ. ಕಮಲ್, ರಜನಿ ಇಬ್ಬರೂ ಒಟ್ಟಾಗಿ ನಟಿಸುತ್ತಿದ್ದಾರೆ. ಈ ಅತ್ಯಪರೂಪದ ಪ್ರಾಜೆಕ್ಟ್‌ನ ಮೇಲೆ ಖುದ್ದು ಕಮಲ್ ಬಂಡವಾಳ ಹೂಡಿದ್ದಾರೆ ಎನ್ನುವುದು ವಿಶೇಷ.

49 ವರ್ಷಗಳ ಹಿಂದೆ ಈ ಇಬ್ಬರೂ ತಾರಾ ನಟರು ಒಟ್ಟಾಗಿ ನಟಿಸಿದ್ದು ಆನಂತರ ಇಂಥ ಒಂದು ಪ್ರಯತ್ನ ಕೈಗೂಡುತ್ತಿರುವುದು ಈಗಲೇ. ವೃತ್ತಿಬದುಕಿನ ಅಂಚಿನಲ್ಲಿ ಇರುವ ಈ ನಟರಿಗೆ ಇದು ನಿರ್ಣಾಯಕ ಸಿನಿಮಾ ಎನ್ನುವ ಅಭಿಪ್ರಾಯವೂ ಇದೆ.

ಕಮಲ್ ಹಾಗೂ ರಜನಿ ಇಬ್ಬರ ಹಾಸ್ಯರಸ ಹಿರಿತೆರೆಯಲ್ಲಿ ಸತ್ಫಲ ಕೊಟ್ಟಿರುವ ಉದಾಹರಣೆಗಳು ಹಲವು ಇವೆ. 'ಮೈಕಲ್ ಮದನ್ ಕಾಮರಾಜನ್', 'ಅಪ್ಪು ರಾಜಾ', 'ಅವ್ವೈ ಷಣ್ಮುಗಿ' ಚಿತ್ರಗಳಲ್ಲಿ ಕಮಲ್ ಟೈಮಿಂಗ್‌ಗೆ ಅವರೇ ಸಾಟಿ. ಇನ್ನು ರಜನಿ ಅವರು 'ಶಿವಾಜಿ' ಚಿತ್ರದಲ್ಲಿ ತೋರಿದ್ದ ಕಾಮಿಕ್ ಟೈಮಿಂಗ್ ನೆನಪು ತಾಜಾ ಆಗಿದೆ. 'ಜೈಲರ್' ಚಿತ್ರದಲ್ಲಿ ಅವರು ಕ್ರೌರ್ಯ ರಸದ ಜೊತೆಜೊತೆಗೇ ಹೊಸಕಾಲದ ಬ್ರೇನ್ಲೆಸ್ ಕಾಮಿಡಿಗೂ ಜೀವ ತುಂಬಿದ್ದರು. ತಾರ್ಕಿಕ ಲೋಪಗಳಿದ್ದರೂ ಆ ಸಿನಿಮಾ ರಜನಿ ವೃತ್ತಿಬದುಕಿಗೆ ಗಳಿಕೆಯ ದೃಷ್ಟಿಯಿಂದ ದೊಡ್ಡ ಯಶಸ್ಸಿನ ಅಧ್ಯಾಯವಾಯಿತು. ಇದೇ ಕಾರಣಕ್ಕೆ ನೆಲ್ಸನ್ ದಿಲೀಪ್ ಕುಮಾರ್ ಅವರನ್ನು ಈಗ ಈ ಇಬ್ಬರನ್ನೂ ಒಳಗೊಂಡ ಚಿತ್ರ ನಿರ್ದೇಶಿಸಲು ನಿಕ್ಕಿ ಮಾಡಲಾಗಿದೆ.

ಈ ಆಯ್ಕೆಯ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆ ಕೂಡ ನಡೆಯುತ್ತಿದೆ. ನೆಲ್ಸನ್ ಅವರಿಗೆ ಇಬ್ಬರೂ ತಾರಾ ನಟರನ್ನು ಸಂಭಾಳಿಸುವ ಚಾಕಚಕ್ಯತೆ ಇದೆಯೇ ಎನ್ನುವ ವಿಷಯದ ಬಗ್ಗೆ ಪರ, ವಿರೋಧದ ಅಭಿಪ್ರಾಯಗಳು ವ್ಯಕ್ತವಾಗಿವೆ. ಸಿನಿಮಾ ಎರಡೂವರೆ ತಾಸು ರಂಜಿಸಿದರೆ ಸಾಕು, ಅದರಲ್ಲಿ ತರ್ಕ ಹುಡುಕಬಾರದು ಎನ್ನುವುದು ಕೆಲವರ ಪ್ರತಿಕ್ರಿಯೆ. ಇನ್ನು ಕೆಲವರು, ಇಬ್ಬರೂ ಅಪರೂಪಕ್ಕೆ ನಟಿಸುತ್ತಾರೆ ಎಂದಮೇಲೆ ಎಲ್ಲರೂ ಅವಾಕ್ಕಾಗುವಂತಹ ವಸ್ತುವಿಷಯದ ಚಿತ್ರ ಕೊಡಬೇಕು, ನೆಲ್ಸನ್ ಅವರಿಗೆ ಅಂತಹ ಸೂಕ್ಷ್ಮಗಳು ಇಲ್ಲ ಎಂಬ ವಾದ ಮಂಡಿಸಿದ್ದಾರೆ.

ನೆಲ್ಸನ್ ಅವರಿಗೆ ತಮ್ಮದೇ ಆದ ಜಾಣತನವಿದೆ. ಅವರು ಪ್ರಚಾರದ ಮೂಲಕವೂ ಚಿತ್ರಮಂದಿರಕ್ಕೆ ಜನರನ್ನು ಎಳೆತಂದಿರುವುದಕ್ಕೆ ಕೆಲವು ಮಾದರಿಗಳಿವೆ. 'ಡಾಕ್ಟರ್' ತಮಿಳು ಸಿನಿಮಾ ಮಾಡಿದಾಗ ಚಿಕ್ಕ ಚಿಕ್ಕ ಟೀಸರ್‌ಗಳಿಂದ ಜನರನ್ನು ಸೆಳೆದಿದ್ದರು. 'ಜೈಲರ್' ಸಿನಿಮಾದಲ್ಲಿ ಕ್ರೌರ್ಯದ ಕಥೆಯ ನಡುವೆಯೇ ಹಾಸ್ಯವನ್ನು ಇಡುಕಿರಿದಿದ್ದರು. ಪ್ರತಿನಾಯಕನನ್ನು ಕ್ಯಾರಿಕೇಚರ್ ಆಗಿಸಿ, ಆತನಿಂದ ನೃತ್ಯ ಮಾಡಿಸಿ ವಿಲಕ್ಷಣ ಸ್ವರೂಪದ ರಂಜನೆ ನೀಡಿದ್ದರು. 'ಜೈಲರ್ 2' ಚಿತ್ರದ ಪರಿಚಯಾತ್ಮಕ ವಿಡಿಯೊ ಕೂಡ ಹಿಟ್ ಆಗಿದೆ.

ಇದೀಗ ರಜನಿ, ಕಮಲ್ ಅಭಿನಯದ ಚಿತ್ರದ ಒಂದು ಪರಿಚಯಾತ್ಮಕ ವಿಡಿಯೊ ಹರಿದಾಡುತ್ತಿದೆ. ಗ್ಯಾರೇಜ್ ಒಂದಕ್ಕೆ ಕಮಲ್ ಹಾಗೂ ರಜನಿ ರೆಟ್ರೋ ಗೆಟಪ್‌ನಲ್ಲಿ ಪ್ರವೇಶಿಸುತ್ತಾರೆ. ವಿದೇಶಿ ಲಲನೆಯರು ಬಳುಕುತ್ತಾ ಕಾರುಗಳನ್ನು ತೊಳೆಯುತ್ತಾ ಇರುತ್ತಾರೆ. ಈ ಇಬ್ಬರನ್ನೂ ಅವರು ಕಣ್ಣೆವೆ ಇಕ್ಕದೇ ನೋಡುತ್ತಾರೆ. ಒಂದು ಹಳೆಯ ಐಷಾರಾಮಿ ಕಾರಿನ ಡ್ರೈವಿಂಗ್ ಸೀಟ್ ಮೇಲೆ ಕಮಲ್ ಕೂರುತ್ತಾರೆ. ಪಕ್ಕದ ಸೀಟಲ್ಲಿ ರಜನಿ. ಹಿಂದಿನ ಸೀಟಿನಲ್ಲಿ ಸ್ವರ ಸಂಯೋಜಕ ಅನಿರುದ್ಧ್ ರವಿಚಂದ್ರ ಹಾಗೂ ನೆಲ್ಸನ್ ಇಣುಕುತ್ತಾರೆ. ಬಪ್ಪಿ ಲಹರಿ ಶೈಲಿಯ ಸಂಗೀತದಿಂದ ಪ್ರೇರಣೆ ಪಡೆದು ಒಂದು ಬೀಟ್ ಮಾಡಿರುವುದಾಗಿ ಅನಿರುದ್ಧ್ ಹೇಳುತ್ತಾರೆ. ಅದಕ್ಕೂ ಮೊದಲು, ಹೀರೊ ಯಾರೆಂದು ಹೇಳಿ ಎಂದು ಕಮಲ್ ಪ್ರಶ್ನಿಸುತ್ತಾರೆ. ಉತ್ತರ ಬಾರದೇ ಇದ್ದಾಗ ರಜನಿ ಕೂಡ ಅದೇ ಪ್ರಶ್ನೆ ಹಾಕುತ್ತಾರೆ. ನೆಲ್ಸನ್, ಅನಿರುದ್ಧ್ ಪರಸ್ಪರ ಮುಖ ನೋಡಿಕೊಳ್ಳುತ್ತಾರೆ. ಕಮಲ್ ವೇಗವಾಗಿ ಕಾರು ಓಡಿಸಿಕೊಂಡು ಮುಂದೆ ಸಾಗುತ್ತಾರೆ.

ಹೀಗೆ, ಕಮಲ್, ರಜನಿ ಇಬ್ಬರಲ್ಲಿ ನಾಯಕ ಯಾರು ಎಂಬ ಪ್ರಶ್ನೆಯ ಹುಳ ಇಳಿಬಿಟ್ಟು, ನೆಲ್ಸನ್ ಹೊಸ ಚಿತ್ರದ ಕುತೂಹಲವನ್ನು ಉಳಿಸಿದ್ದಾರೆ.

'ಎಬಿಸಿ' ಕುಡಿಯಿರಿ ಫ್ರೆಷ್ ಆಗಿ ಇರಿ

ಎಬಿಸಿ ಜ್ಯೂಸ್ ಎಂದರೆ ಆ್ಯಪಲ್, ಬೀಟ್‌ರೂಟ್ ಮತ್ತು ಕ್ಯಾರೆಟ್ ಅನ್ನು ಬಳಸಿ ತಯಾರಿಸುವ ಅತ್ಯಂತ ಪೌಷ್ಟಿಕ ಪಾನೀಯ. ಸೇಬು ಮತ್ತು ಬೀಟ್‌ರೂಟ್‌ನಲ್ಲಿರುವ ವಿಟಮಿನ್ ಸಿ ಮತ್ತು ಕ್ಯಾರೆಟ್ ನಲ್ಲಿರುವ ಬೀಟಾ- ಕ್ಯಾರೋಟಿನ್ ಅಂಶಗಳು ರೋಗನಿರೋಧಕ ಶಕ್ತಿಯನ್ನು ಬಲಪಡಿಸುವುದಕ್ಕೆ ಸಹಾಯ ಮಾಡುತ್ತವೆ.



ಅಷ್ಟೇ ಅಲ್ಲದೆ ಈ ಪಾನೀಯವು ಚರ್ಮದ ಕಾಂತಿ, ಜೀರ್ಣಕ್ರಿಯೆ ಮತ್ತು ರಕ್ತ ಪರಿಚಲನೆಯನ್ನು ಸುಧಾರಿಸಲು ಕೂಡ ಸಹಾಯ ಮಾಡುತ್ತದೆ. ಎಬಿಸಿ ಪಾನೀಯವನ್ನು ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯುವುದರಿಂದ ಸೋಂಕು ಮತ್ತು ಅನಾರೋಗ್ಯದ ವಿರುದ್ಧ ಹೋರಾಡಲು ಸಾಧ್ಯವಾಗುತ್ತದೆ.

ಮೊದಲ ದಿನ ಎಬಿಸಿ ಜ್ಯೂಸ್ ಹೀಗಿರಲಿ: ಸೇಬು, ಬೀಟ್‌ರೂಟ್, ಕ್ಯಾರೆಟ್ ಅನ್ನು ಚೆನ್ನಾಗಿ ತೊಳೆದು, ಅದಕ್ಕೆ ಅಗತ್ಯವಿರುವಷ್ಟು ನೀರು ಸೇರಿಸಿ ರುಬ್ಬಿಕೊಳ್ಳಿ. ಬಳಿಕ ಒಂದು ಗ್ಲಾಸ್‌ಗೆ ಹಾಕಿ ಕುಡಿಯಿರಿ.

ಶುಂಠಿ ಸೇರಿಸಿ ರುಚಿ ಹೆಚ್ಚಿಸಿ: ಸೇಬು, ಬೀಟ್‌ರೂಟ್, ಕ್ಯಾರೆಟ್ ಜ್ಯೂಸ್‌ಗೆ ಒಂದು ತುಂಡು ಶುಂಠಿ ಸೇರಿಸಿ. ಇದು ಪಾನೀಯದ ರುಚಿಯನ್ನು ಹೆಚ್ಚಿಸುತ್ತದೆ. ಜೊತೆಗೆ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ.

ಎಬಿಸಿಗೆ ನಿಂಬೆ ರಸ, ಜೇನುತುಪ್ಪ ಸೇರಿಸಿ: ರುಬ್ಬಿದ ಎಬಿಸಿ ಪಾನೀಯಕ್ಕೆ ಒಂದು ಚಮಚ ಜೇನುತುಪ್ಪ ಮತ್ತು ನಿಂಬೆ ರಸವನ್ನು ಹಾಕಿ. ಇದು ಜ್ಯೂಸ್ ರುಚಿಯನ್ನು ಹೆಚ್ಚಿಸುತ್ತದೆ. ಜೊತೆಗೆ ಹೆಚ್ಚುವರಿ ವಿಟಮಿನ್ ಸಿ ಅನ್ನು ಒದಗಿಸುತ್ತದೆ.

ಮಸಾಲೆಯುಕ್ತ/ ಖಾರ ಸೇರಿಸಿ: ಈ ಜ್ಯೂಸ್‌ಗೆ ಒಂದು ಚಿಟಿಕೆ ಕಪ್ಪು ಉಪ್ಪು ಅಥವಾ ಕರಿ ಮೆಣಸನ್ನು ಸೇರಿಸುವು ದರಿಂದ ರುಚಿ ಹೆಚ್ಚಾಗುತ್ತದೆ.

ಜ್ಯೂಸ್‌ಗೆ ನೆನೆಸಿದ ಖರ್ಜೂರ ಉತ್ತಮ ಆಯ್ಕೆ: ಸೇಬು, ಬೀಟ್‌ರೂಟ್ ಹಾಗೂ ಕ್ಯಾರೆಟ್ ಮಿಶ್ರಣಕ್ಕೆ ಜೇನುತುಪ್ಪ ಅಥವಾ ನೆನೆಸಿದ ಖರ್ಜೂರವನ್ನು ಸೇರಿಸಬಹುದು. ಇದು ವಿಶೇಷವಾಗಿ ಮಕ್ಕಳಿಗೆ ಇಷ್ಟವಾಗುತ್ತದೆ.

ಎಬಿಸಿ ಜ್ಯೂಸ್‌ಗೆ ಪುದೀನ ಎಲೆಗಳು, ಸೌತೆಕಾಯಿ, ನೆಲ್ಲಿಕಾಯಿ ಸೇರಿಸಿ. ಇದು ದೇಹಕ್ಕೆ ಅತ್ಯಂತ ಅಗತ್ಯವಾದ ಪೌಷ್ಟಿಕಾಂಶವನ್ನು ಒದಗಿಸುತ್ತದೆ.

ಬರಲಿದ್ದಾರೆ ಕೃಷ್ಣ–ರುಕ್ಕು



ನಿರ್ದೇಶಕ ಎಸ್. ನಾರಾಯಣ್ ಹಾಗೂ ಮೌನ ಗುಡ್ಡೆಮನೆ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಕೃಷ್ಣ ರುಕ್ಕು' ಧಾರಾವಾಹಿ ಜೀ ಕನ್ನಡದಲ್ಲಿ ಇದೇ 9ರಿಂದ ಸಂಜೆ 6.30ಕ್ಕೆ ಆರಂಭವಾಗಲಿದೆ.

ಪ್ರೀತಿ, ಪ್ರತೀಕಾರ ಮತ್ತು ವಿಧಿಯಾಟದ ಸುತ್ತ ನಡೆಯುವ ಕಥೆ ಹೊತ್ತ ಈ ಧಾರಾವಾಹಿಯಲ್ಲಿ ಕುಟುಂಬದ ಒಗ್ಗಟ್ಟು, ಜವಾಬ್ದಾರಿ, ಪ್ರೀತಿ ಜೊತೆಗೆ ಅನಿರೀಕ್ಷಿತ ತಿರುವುಗಳು ಇರಲಿವೆ ಎಂದಿದೆ ಚಿತ್ರತಂಡ. ಅಣ್ಣನ ಅಕಾಲಿಕ ನಿಧನದ ನಂತರ ಇಡೀ ಕುಟುಂಬದ ಜವಾಬ್ದಾರಿಯನ್ನು ತನ್ನ ಹೆಗಲಮೇಲೆ ಹಾಕಿಕೊಂಡ 'ರುಕ್ಕು' ಏನೆಲ್ಲಾ ಸವಾಲುಗಳನ್ನು ಎದುರಿಸುತ್ತಾಳೆ ಎಂಬುದೇ ಕಥೆ. ಅಕ್ಷಯ್ ನಾಯಕ್ 'ಕೃಷ್ಣ'ನ ಪಾತ್ರ ನಿರ್ವಹಿಸಿದ್ದಾರೆ. ನಿರ್ದೇಶಕ, ನಿರ್ಮಾಪಕ ಎಸ್.ನಾರಾಯಣ್ 'ಸೂರ್ಯಪ್ರಕಾಶ್' ಎಂಬ ಮಹತ್ವದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸುಚಿತ್ರಾ, ನವೀನ ಸಜ್ಜು ತಾರಾಬಳಗದಲ್ಲಿದ್ದಾರೆ. ಧೃತಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ದಿಲೀಪ್ ರಾಜ್ ಹಾಗೂ ಶ್ರೀ ವಿದ್ಯಾ ಈ ಧಾರಾವಾಹಿ ನಿರ್ಮಿಸಿದ್ದಾರೆ.

ಡೂಮ್ ಸ್ಕ್ರೋಲಿಂಗ್‌ನಿಂದ ಬಳಲುತ್ತಿದ್ದೀರಾ?

• ಸುಭಾಷ್ ಎಚ್.ಜೆ.

ಮೊಬೈಲ್ ಫೋನ್ ಎಂಬುದು ಇಂದು ಬರೀ ಸಂಪರ್ಕ ಸಾಧನವಾಗಿ ಉಳಿದಿಲ್ಲ. ಬದಲಿಗೆ, ಮೊಬೈಲ್ ಇಲ್ಲದೆ ನಾವು ಬದುಕುವುದಕ್ಕೇ ಸಾಧ್ಯವಿಲ್ಲ ಎಂಬಂತೆ ಅದು ನಮ್ಮನ್ನು ಬದಲಾಯಿಸಿಬಿಟ್ಟಿದೆ.

ಇತ್ತೀಚಿನ ಸಂಶೋಧನೆಗಳ ಪ್ರಕಾರ, ಡೂಮ್ ಸ್ಕ್ರೋಲಿಂಗ್ (ಅತಿಯಾದ ವಿಡಿಯೊ ವೀಕ್ಷಣೆ) ಅಭ್ಯಾಸದಿಂದ ಮೆದುಳಿನ ಕಾರ್ಯವೈಖರಿಯೇ ಬದಲಾಗಿದೆ. ಹೀಗಾಗಿ, ಇಂದಿನ ಪೀಳಿಗೆಯಲ್ಲಿ ಹಲವರು ಉತ್ಸಾಹವಿಲ್ಲದೆ ಬಳಲಿದಂತೆ ಕಾಣುತ್ತಾರೆ.

ಸ್ಮಾರ್ಟ್‌ಫೋನ್ ಯುಗದ ಆರಂಭಕ್ಕೂ ಮುನ್ನ ಜನರ ನಡುವೆ ಸಂಪರ್ಕ ಉತ್ತಮವಾಗಿತ್ತು. ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ಒಬ್ಬರಿಗೊಬ್ಬರು ಸಾಂತ್ವನ ಹೇಳಿಕೊಳ್ಳುವ ವಾತಾವರಣವಿತ್ತು. ಈಗ ಎಲ್ಲರೂ ಅವರವರ ಮೊಬೈಲ್‌ನಲ್ಲಿ ಮುಳುಗಿರುತ್ತಾರೆ. ಕನಿಷ್ಠ ಸಂವಹನವನ್ನೂ ನಡೆಸುತ್ತಿಲ್ಲ.

ಒಮ್ಮೆ ಸ್ಕ್ರೀನ್‌ಸ್ಕ್ರೋಲಿಂಗ್ ಆರಂಭಿಸಿದರೆ, ಅದರಿಂದ ಹೊರಬರುವ ಸೂಚನೆಯೇ ಇರುವುದಿಲ್ಲ. ಸ್ಕ್ರೀನ್‌ಸ್ಕ್ರೋಲಿಂಗ್ ಮೆದುಳನ್ನು ಒಂದು ಯಂತ್ರದಂತೆ ಮಾಡುತ್ತದೆ. ಈ ಅಭ್ಯಾಸವನ್ನು ಬಿಡುವುದು ಎಲ್ಲ ವ್ಯಸನಕ್ಕಿಂತಲೂ ಹೆಚ್ಚು ಕಷ್ಟ ಎನ್ನುತ್ತಾರೆ ತಜ್ಞರು.

ಈ ರೀತಿಯ ಅವಲಂಬನೆಗೆ ಮುಖ್ಯ ಕಾರಣವೆಂದರೆ, ಮೆದುಳಿನಲ್ಲಿ ಬಿಡುಗಡೆಯಾಗುವ ರಾಸಾಯನಿಕ ಅಂಶವಾದ ಡೊಪಮೈನ್). ವರ್ಣರಂಜಿತ ಚಿತ್ರ ಅಥವಾ ಮನರಂಜನೆಯ ರೀಲ್ಸ್ ವೀಕ್ಷಿಸಿದಾಗ ಮೆದುಳಿನಲ್ಲಿ ಡೊಪಮೈನ್ ಬಿಡುಗಡೆಯಾಗುತ್ತದೆ. ಅನೇಕ ಚಟುವಟಿಕೆಗಳಿಗೆ ಕೊನೆ ಎಂಬುದಿರುತ್ತದೆ. ಆದರೆ ಈ ಸ್ಕ್ರೋಲಿಂಗ್ ಮಾಡುವ ಅಭ್ಯಾಸಕ್ಕೆ ಕೊನೆ ಎಂಬುದೇ ಇರುವುದಿಲ್ಲ. ಇದರಿಂದ ದೀರ್ಘಕಾಲದ ಆಯಾಸ ಮತ್ತು ಎಲ್ಲ ಕೆಲಸಗಳಲ್ಲೂ ಆಸಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ.


ಈಗ ಜೀವನಶೈಲಿಯೇ ಬದಲಾಗಿದೆ. ಇನ್ನೊಬ್ಬರ ಜೀವನದ ಆಗುಹೋಗುಗಳು ಸಾಮಾಜಿಕ ತಾಲತಾಣಗಳಲ್ಲಿ ಲಭ್ಯವಿರುತ್ತವೆ. ಇದರಿಂದ ಇನ್ನೊಬ್ಬರ ಜೀವನವನ್ನು ಅನುಕರಣೆ ಮಾಡುವುದು ಸುಲಭವಾಗಿದೆ. ಒಂಟಿತನವನ್ನು ನಿಭಾಯಿಸುವ ಸಾಮರ್ಥ್ಯ ಇಲ್ಲದಂತಾಗಿದೆ. ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಮೊಬೈಲ್ ಮೊರೆ ಹೋಗುತ್ತೇವೆ. ಇದೇ ದೊಡ್ಡ ಸಮಸ್ಯೆಯಾಗಿದೆ.

ಮೊಬೈಲ್ ಸ್ಕ್ರೀನ್ ಸ್ಕ್ರೋಲಿಂಗ್‌ನಿಂದ ದೂರವಿರಲು ಹೀಗೆ ಮಾಡಿ: ಅತಿ ಮುಖ್ಯವಲ್ಲದ ಅನಗತ್ಯ ಆ್ಯಪ್‌ಗಳ ನೋಟಿಫಿಕೇಶನ್ ಆಫ್ ಮಾಡಿ.

ಫೋನ್ ಬಳಸದೇ ಇರುವ ಸಮಯವನ್ನು ನಿಗದಿ ಮಾಡಿಕೊಳ್ಳಿ. ಉದ್ಯಾನಕ್ಕೆ, ದಿನಸಿ ಅಂಗಡಿಗೆ ಅಥವಾ ದೇವಸ್ಥಾನಕ್ಕೆ ಹೋಗುವಾಗ ಫೋನ್ ಒಯ್ಯಬೇಡಿ. ನಿಮ್ಮ ಸುತ್ತ-ಮುತ್ತಲಿನ ಪರಿಸರವನ್ನು ಗಮನಿಸುವುದನ್ನು ಮತ್ತೆ ಕಲಿಯಲು ಆರಂಭಿಸಿ.

ಫೋನ್ ಬಳಸುವಾಗ ಅದು ನಿಮಗೆ ಸಂತೋಷ ನೀಡುತ್ತಿದೆಯೇ ಅಥವಾ ಕಿರಿಕಿರಿ ಉಂಟುಮಾಡುತ್ತಿದೆಯೇ ಎಂದು ಗಮನಿಸಿ. ಹೆಚ್ಚಾಗಿ ಅದು ಕಿರಿಕಿರಿಯನ್ನೇ ಉಂಟು ಮಾಡುತ್ತಿರುತ್ತದೆ. ಆರಂಭದಲ್ಲಿ ಕಷ್ಟವೆನಿಸಿದರೂ ದೀರ್ಘಕಾಲದಲ್ಲಿ ಇದು ನಿದ್ರೆ, ಮಾನಸಿಕ ಆರೋಗ್ಯ ಮತ್ತು ಏಕಾಗ್ರತೆಯನ್ನು ಸುಧಾರಿಸುತ್ತದೆ.

ಲೇಖಕ ಆಪ್ತಸಮಾಲೋಚಕ, ವಾಸವಿ ಆಸ್ಪತ್ರೆ



ನಿಜಜೀವನದಲ್ಲೂ ಒಂದಾದ 'ಅಮೃತಧಾರೆ' ಜೋಡಿ



ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಅಮೃತಧಾರೆ' ಧಾರಾವಾಹಿಯ ಮೂಲಕ ಖ್ಯಾತಿ ಪಡೆದುಕೊಂಡಿರುವ ರಾಣವ್ ಗೌಡ ಹಾಗೂ ಭಾರ್ಗವಿ ಎಲ್‌ಎಲ್‌ಬಿ ಧಾರಾವಾಹಿಯ ಮೂಲಕ ಜನಪ್ರಿಯರಾಗಿರುವ ರಾಧಾ ಭಗವತಿ ಸದ್ದಿಲ್ಲದೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಈ ಸಂಬಂಧ ಫೋಟೊವನ್ನು ಹಂಚಿಕೊಂಡಿರುವ ಈ ಜೋಡಿ 'ಕೊನೆಗೂ' ಎಂದು ಬರೆದುಕೊಂಡಿದೆ.

ಈ ಫೋಟೊ ನೋಡಿದ ಅಭಿಮಾನಿಗಳು ನವ ಜೋಡಿಗೆ ಅಭಿನಂದನೆ ಸಲ್ಲಿಸುತ್ತಿದ್ದಾರೆ. ಜೊತೆಗೆ 'ನಿಮ್ಮಿಬ್ಬರದು ಒಳ್ಳೆಯ ಜೋಡಿ' ಎಂದು ಕಾಮೆಂಟ್ ಮೂಲಕ ಶುಭ ಹಾರೈಸುತ್ತಿದ್ದಾರೆ. 'ಅಮೃತಧಾರೆ' ಧಾರಾವಾಹಿಯಲ್ಲಿ ಜಯದೇವ್ ದಿವಾನ್ ಪಾತ್ರದಲ್ಲಿ ರಾಣವ್ ಗೌಡ ನಟಿಸುತ್ತಿದ್ದಾರೆ. ಮಲ್ಲಿ ಪಾತ್ರದಲ್ಲಿ ರಾಧಾ ಭಗವತಿ ಅವರು ಈ ಮೊದಲು ನಟಿಸಿದ್ದರು. ಬಳಿಕ ಅವರು ಈ ಧಾರಾವಾಹಿಯಿಂದ ಹೊರಬಂದು, ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಭಾರ್ಗವಿ ಎಲ್‌ಎಲ್‌ಬಿ'ಯ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ.

ಮುಕ್ತಾಯದ ಹಂತದಲ್ಲಿ ಎರಡು ಧಾರಾವಾಹಿ

ಕನ್ನಡ ಕಿರುತೆರೆಯಲ್ಲಿ ಪ್ರಸಾರವಾಗುತ್ತಿರುವ ಎರಡು ಜನಪ್ರಿಯ ಧಾರಾವಾಹಿಗಳು ಮುಕ್ತಾಯದ ಹಂತದಲ್ಲಿವೆ. ಒಂದು, ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಪುಟ್ಟಕ್ಕನ ಮಕ್ಕಳು'. ಮತ್ತೊಂದು, ಕಲರ್ಸ್ ಕನ್ನಡದಲ್ಲಿ ಪ್ರಸಾರ ಕಾಣುತ್ತಿರುವ 'ಯಜಮಾನ'.

ಈಗ ಪುಟ್ಟಕ್ಕನ ಮಕ್ಕಳು ಧಾರಾವಾಹಿ ತನ್ನ ಅಂತಿಮ ಸಂಚಿಕೆಗಳನ್ನು ಪ್ರಸಾರ ಮಾಡುತ್ತಿದೆ. ಈ ಬಗ್ಗೆ ಜೀ ಕನ್ನಡ ಸಾಮಾಜಿಕ ಮಾಧ್ಯಮದಲ್ಲಿ ಪ್ರೋಮೊ ಹಂಚಿಕೊಳ್ಳುವ ಮೂಲಕ ಅಧಿಕೃತವಾಗಿ ಮಾಹಿತಿ ಹೊರಗೆಡಹಿದೆ.

ಇತ್ತೀಚೆಗೆ ಈ ಧಾರಾವಾಹಿ ಸಾವಿರ ಸಂಚಿಕೆಗಳನ್ನು ಪೂರೈಸಿದ ಖುಷಿಯನ್ನು ಹಂಚಿಕೊಂಡಿತ್ತು. ಆ ಬೆನ್ನಲ್ಲೇ ಧಾರಾವಾಹಿ ಮುಕ್ತಾಯದ ಬಗ್ಗೆ ನಟ–ನಟಿಯರು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿದ್ದರು. ಅದರ ಜೊತೆಗೆ ಧಾರಾವಾಹಿ ಬಗ್ಗೆ ಭಾವುಕರಾಗಿ ಬರೆದುಕೊಂಡಿದ್ದರು.

'ಯಜಮಾನ' ಧಾರಾವಾಹಿ ಸಹ ಇನ್ನು ಕೆಲವೇ ದಿನಗಳಲ್ಲಿ ಅಂತ್ಯ ಕಾಣಲಿದೆ. ಈ ಧಾರಾವಾಹಿ ಮೂಲಕ ಮಧುಶ್ರೀ ಭೈರಪ್ಪ ಅವರು ನಟಿಯಾಗಿ ಕಿರುತೆರೆ ಲೋಕಕ್ಕೆ ಕಾಲಿಟ್ಟಿದ್ದರು. ಝಾನ್ಸಿ ಪಾತ್ರದಲ್ಲಿ ನಟಿಸಿ ಜನಪ್ರಿಯತೆ ಪಡೆದುಕೊಂಡರು. ಬಳಿಕ ಜನ ಮೆಚ್ಚಿದ 'ಸ್ಟೈಲ್ ಐಕಾನ್' ಪ್ರಶಸ್ತಿ ಕೂಡ ತೆಗೆದುಕೊಂಡರು. ರಾಘವೇಂದ್ರ ಪಾತ್ರದಲ್ಲಿ ಹರ್ಷ ಬಿ.ಎಸ್. ಅವರು ನಟಿಸುತ್ತಿದ್ದಾರೆ.



ಕಿವಿ ಸೋರುವಿಕೆ: ನಿರ್ಲಕ್ಷ್ಯ ಬೇಡ

ಕಿವಿಯಲ್ಲಿ ನೀರು ತುಂಬಿದಂತೆ ಇರುವುದು ಅಥವಾ ಪದೇಪದೇ ಕಿವಿಯಲ್ಲಿ ಸೋರುವಿಕೆ ಆಗುತ್ತಿದ್ದರೆ ಅದು ಶೀತದ ಲಕ್ಷಣ ಎಂದು ಅನೇಕರು ಭಾವಿಸುತ್ತಾರೆ. ಆದರೆ ಈ ರೀತಿಯ ಕಿವಿ ಸೋರುವಿಕೆಯು ಮೂಳೆಯನ್ನು ತಿನ್ನುವ ಕಾಯಿಲೆಗೆ ದಾರಿಮಾಡಿಕೊಡಬಹುದು ಮತ್ತು ಶಾಶ್ವತ ಶ್ರವಣದೋಷ ಅಥವಾ ಮೆದುಳಿನ ಸೋಂಕಿಗೆ ಕಾರಣವಾಗಬಹುದು ಎನ್ನುತ್ತಾರೆ ಬೆಂಗಳೂರಿನ ವಾಸವಿ ಆಸ್ಪತ್ರೆಯ ಹಿರಿಯ ಇಎನ್‌ಟಿ ತಜ್ಞರಾದ ಡಾ. ಯಶಸ್ವಿ ಶ್ರೀಕಾಕುಳ.

ಇತ್ತೀಚಿನ ದಿನಗಳಲ್ಲಿ ಕಿವಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಸ್ವಯಂಕೃತ ತಪ್ಪುಗಳಿಂದಲೇ ಉಂಟಾಗುತ್ತವೆ. ಕಿವಿಯಲ್ಲಿ ಗಾಯ ಆದಾಗ ಅಥವಾ ನೀರು ಹೋದಾಗ ಇಯರ್ ಬಡ್ಸ್, ಕೀಲಿ ಕೈ, ಸೇಫ್ಟಿ ಪಿನ್‌ನಂತಹ ವಸ್ತುಗಳನ್ನು ಬಳಸುವುದರಿಂದ ಕಿವಿಯೊಳಗೆ ಗಾಯವಾಗುತ್ತದೆ. ಇದು ಶಿಲೀಂಧ್ರ ಸೋಂಕು ಅಥವಾ ನೋವಿನ ಗುಳ್ಳೆಗಳಿಗೆ ದಾರಿ ಮಾಡಿಕೊಡುತ್ತದೆ. ಈ ರೀತಿಯ ವಸ್ತುಗಳನ್ನು ಕಿವಿಯೊಳಗೆ ಹಾಕುವುದರಿಂದ ಕಿವಿಯ ತಮಟೆಗೆ ಹಾನಿ ಉಂಟಾಗುವ ಅಥವಾ ತೂತಾಗುವ ಸಂಭವ ಇರುತ್ತದೆ ಎನ್ನುತ್ತಾರೆ ತಜ್ಞರು. ದೀರ್ಘಕಾಲದ ಕಿವಿ ಸೋಂಕನ್ನು ವೈದ್ಯಕೀಯವಾಗಿ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದ್ದು, ಸುರಕ್ಷಿತ ಕಿವಿ ಮತ್ತು ಅಸುರಕ್ಷಿತ ಕಿವಿ ಎಂದು ಹೇಳಲಾಗುತ್ತದೆ. ಸುರಕ್ಷಿತ ಕಿವಿ ಎಂದರೆ ಇದರಲ್ಲಿ ಕಿವಿ ತಮಟೆಯ ಮಧ್ಯಭಾಗದಲ್ಲಿ ತೂತವಿದ್ದು, ಶೀತವಾದಾಗ ಅಥವಾ ಈಜಾಡುವಾಗ ಮಾತ್ರ ಕಿವಿ ಸೋರುತ್ತದೆ. ಎರಡನೆಯದು, ಅಸುರಕ್ಷಿತ ಕಿವಿ. ಇದು ಅತ್ಯಂತ ಅಪಾಯಕಾರಿ ಆಗಿರುತ್ತದೆ. ಇಲ್ಲಿ 'ಕೊಲೆಸ್ಟಿಯಟೋಮಾ' ಎಂಬ ಚರ್ಮದ ಅಸಹಜ ಬೆಳವಣಿಗೆಯಾಗುತ್ತದೆ. ಇದು ಕ್ಯಾನ್ಸರ್ ಅಲ್ಲದಿದ್ದರೂ ಮೂಳೆಯನ್ನು ತಿನ್ನುವ ಲಕ್ಷಣಗಳನ್ನು ಹೊಂದಿರುತ್ತದೆ. ಕಿವಿಯ ಒಳಗಿನ ಸೂಕ್ಷ್ಮ ಮೂಳೆಗಳನ್ನು ಇದು ತಿನ್ನಲು ಪ್ರಾರಂಭಿಸುತ್ತದೆ ಮತ್ತು ಮೆದುಳನ್ನು ಬೇರ್ಪಡಿಸುವ ತೆಳುವಾದ ಮೂಳೆಯ ಪದರವೂ ಇದಕ್ಕೆ ಗುರಿಯಾಗಬಹುದು ಎನ್ನುತ್ತಾರೆ ಡಾ. ಶ್ರೀಕಾಕುಳ.

ಒಂದು ವೇಳೆ ಕಿವಿ ಸೋರುತ್ತಿದ್ದಲ್ಲಿ, ಕೆಟ್ಟ ವಾಸನೆ ಅಥವಾ ರಕ್ತದ ಅಂಶ ಕಂಡುಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. ವೈದ್ಯರ ಸಲಹೆಯ ಮೇರೆಗೆ ಕೂಡಲೇ ಸಿ.ಟಿ. ಅಥವಾ ಎಂಆರ್‌ಐ ಸ್ಕ್ಯಾನ್‌ಗೆ ಒಳಪಟ್ಟು, ಅಗತ್ಯವಿದ್ದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದು ಉತ್ತಮ. ವೈದ್ಯರ ಸಲಹೆ ಇಲ್ಲದೆ, ಅಂಗಡಿಗಳಲ್ಲಿ ಸಿಗುವ ಇಯರ್ ಡ್ರಾಪ್ಸ್‌ಗಳನ್ನು ಬಳಸಲೇಬಾರದು ಎಂದು ಎಚ್ಚರಿಸುತ್ತಾರೆ ಡಾ. ಶ್ರೀಕಾಕುಳ.



ಚಿಕಿತ್ಸೆ ವಿಳಂಬವಾದರೆ...

ಅಸುರಕ್ಷಿತ ಕಿವಿ ಸೋಂಕಿಗೆ ಚಿಕಿತ್ಸೆ ವಿಳಂಬವಾದರೆ ಯಾವೆಲ್ಲಾ ಸಮಸ್ಯೆಗಳು ಎದುರಾಗಬಹುದು?

ಮುಖದ ಪಾರ್ಶ್ವವಾಯು, ಮೆದುಳಿನ ಸೋಂಕು (ಇದು ಪ್ರಾಣಾಪಾಯವನ್ನೂ ಉಂಟು ಮಾಡಬಹುದು), ಶಾಶ್ವತ ಕಿವುಡುತನ.